ಗುರುವಾರ, ಫೆಬ್ರುವರಿ 6, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 37 | ಪುಟ 16

www.prajavani.net

prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ
ಗಂಗಾ ನದಿ ಸ್ವಚ್ಛತೆಯ ಸವಾಲುಗಳು ಮತ್ತು ನಿರ್ವಹಣೆಯ ಕ್ರಮಗಳು

ಆಳ-ಅಗಲ
ಅಮೆರಿಕ ದುಬಾರಿ ಕನಸು
ಉದ್ಯೋಗದಾತರ ಹೊಣೆ ತಗ್ಗಿಸಿದ 'ಸುಪ್ರೀಂ' 12
ವಾಪಸಾದ 104 ಭಾರತೀಯರು 12

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
78,271	23,696	₹88,780 (ಬೆಂಗಳೂರು)	₹1,01,000 (ಬೆಂಗಳೂರು)	87.43

ಕರ್ನಾಟಕ ಸೇರಿ ಬಿಜೆಪಿಯೇತರ ರಾಜ್ಯಗಳ ಉನ್ನತ ಶಿಕ್ಷಣ ಸಚಿವರ ಸಮಾವೇಶದಲ್ಲಿ ನಿರ್ಣಯ

ಯುಜಿಸಿ ನಿಯಮಕ್ಕೆ 6 ರಾಜ್ಯ ಸಡ್ಡು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉನ್ನತ ಶಿಕ್ಷಣದ ಮೇಲೆ ರಾಜ್ಯಗಳು ಹೊಂದಿರುವ ಅಧಿಕಾರವನ್ನು ಮೊಟಕುಗೊಳಿಸಲು ಹೊರಟಿರುವ ಕೇಂದ್ರ ಸರ್ಕಾರದ ನೀತಿ ವಿರುದ್ಧ ಆರು ರಾಜ್ಯ ಸರ್ಕಾರಗಳು ಒಗ್ಗಟ್ಟು ಪ್ರದರ್ಶಿಸಿದ್ದು, ವಿಶ್ವ-ವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ರೂಪಿಸಿರುವ ಕರಡು ನಿಯಮಗಳನ್ನು ತಿರಸ್ಕರಿಸಲು ಒಮ್ಮತದ ನಿರ್ಣಯ ಕೈಗೊಂಡಿವೆ.

ನಗರದಲ್ಲಿ ಬುಧವಾರ ನಡೆದ ವಿವಿಧ ರಾಜ್ಯಗಳ ಉನ್ನತ ಶಿಕ್ಷಣ ಸಚಿವರ ಸಮಾವೇಶದಲ್ಲಿ ಕರ್ನಾಟಕವೂ ಸೇರಿ ಆರು ರಾಜ್ಯಗಳ ಸಚಿವರು ಭಾಗವಹಿಸಿದ್ದರು. ವಿಶ್ವವಿದ್ಯಾಲಯಗಳ ಕುಲಪತಿ ನೇಮಕಾತಿಯೂ ಒಳಗೊಂಡಂತೆ ಯುಜಿಸಿ ಬಿಡುಗಡೆ ಮಾಡಿರುವ ಎಲ್ಲ ಕರಡು ನಿಯಮಗಳನ್ನು ತಕ್ಷಣವೇ ಹಿಂಪಡೆಯಬೇಕು. ರಾಜ್ಯ ಸರ್ಕಾರಗಳ ಜತೆ ಸಮಾಲೋಚನೆ ನಡೆಸಬೇಕು ಎಂದು ಆಗ್ರಹಿಸಿದರು.

ಕರ್ನಾಟಕದ ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್ ಅಧ್ಯಕ್ಷತೆಯಲ್ಲಿ ನಡೆದ ಸಮಾವೇಶದಲ್ಲಿ ಹಿಮಾಚಲ ಪ್ರದೇಶದ ರೋಹಿತ್ ಠಾಕೂರ್, ಜಾರ್ಖಂಡ್‌ನ ಸುದಿವ್ಯಕುಮಾರ್, ತೆಲಂಗಾಣದ ಶ್ರೀಧರ್ ಬಾಬು, ತಮಿಳುನಾಡಿನ ಗೋವಿ ಸಿಝಿಯಾನ್, ಕೇರಳದ ಆರ್. ಬಿಂದು ಭಾಗವಹಿಸಿದ್ದರು.

ನಂತರ ಜಂಟಿ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಸಚಿವರು, 'ವಿಶ್ವವಿದ್ಯಾಲಯ ಕುಲಪತಿಗಳ ನೇಮಕ ಅಧಿಕಾರವನ್ನು ಆಯಾ ರಾಜ್ಯದ ರಾಜ್ಯಪಾಲರಿಗೆ ನೀಡಲಾಗಿದೆ. ಪ್ರಸ್ತುತ ಕುಲಪತಿಗಳ ನೇಮಕಾತಿಗೆ ರಾಜ್ಯ ಸರ್ಕಾರಗಳೇ ಶೋಧನಾ ಸಮಿತಿ ರಚಿಸುತ್ತಿದ್ದವು. ಕುಲಾಧಿಪತಿಯೂ ಆದ ರಾಜ್ಯಪಾಲರು ಸಮಿತಿಯ ಸದಸ್ಯರನ್ನೂ ಶಿಫಾರಸು ಮಾಡುವ ಅಧಿಕಾರ ಹೊಂದಿದ್ದರು. ಹೊಸ ನಿಯಮಗಳ ಪ್ರಕಾರ ರಾಜ್ಯಪಾಲರು ಸೂಚಿಸುವ ವ್ಯಕ್ತಿಯೇ ಶೋಧನಾ ಸಮಿತಿಯ ಅಧ್ಯಕ್ಷರಾಗುತ್ತಾರೆ. ವಿದ್ವಾಂಸರಿಗಷ್ಟೇ ಸೀಮಿತವಾಗಿದ್ದ ಹುದ್ದೆಗಳಲ್ಲಿ ಬೇರೆ ರಾಜ್ಯದವರಿಗೂ ಅವಕಾಶ ಮಾಡಿಕೊಡಲಾಗಿದೆ ಎಂದರು.

7ನೇ ಪುಟ ನೋಡಿ

ಕೇರಳ: 20ಕ್ಕೆ ಎರಡನೇ ಸಮಾವೇಶ

ವಿಧಾನಸಭಾ ಚುನಾವಣೆ ಮತ್ತಿತರ ಕಾರಣಗಳಿಂದ ಮೊದಲ ಸಮಾವೇಶದಲ್ಲಿ ದೆಹಲಿ ಸೇರಿದಂತೆ ಹಲವು ರಾಜ್ಯಗಳ ಉನ್ನತ ಶಿಕ್ಷಣ ಸಚಿವರು ಭಾಗಿಯಾಗಲು ಸಾಧ್ಯವಾಗಿಲ್ಲ. ಹಾಗಾಗಿ, ಕೇರಳದಲ್ಲಿ ಇದೇ ಫೆ.20ರಂದು ಎರಡನೇ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಸಚಿವ ಸುಧಾಕರ್ ಮಾಹಿತಿ ನೀಡಿದರು.

ಕರಡು ನಿಯಮಗಳಿಗೆ ಬಿಜೆಪಿಯೇತರ ಹಾಗೂ ಎನ್‌ಡಿಎ ಮೈತ್ರಿಕೂಟದ ಮಿತ್ರ ಪಕ್ಷಗಳಾದ ಟಿಡಿಪಿ, ಜೆಡಿಯು, ಎಲ್‌ಜೆಪಿ ಸಹ ವಿರೋಧ ವ್ಯಕ್ತಪಡಿಸಿವೆ. ಪಶ್ಚಿಮ ಬಂಗಾಳ ಸರ್ಕಾರ ತಜ್ಞರ ಸಮಿತಿ ರಚಿಸಿದೆ. ಕರಡು ನಿಯಮಗಳನ್ನೇ ಯುಜಿಸಿ ಅಧಿಕೃತಗೊಳಿಸಿದರೆ ಮುಂದಿನ ನಡೆ ಏನು ಎನ್ನುವ ಕುರಿತು ಕೇರಳ ಸಮಾವೇಶದಲ್ಲಿ ನಿರ್ಧಾರ ತೆಗೆದುಕೊಳ್ಳಲಾಗುವುದು. ಕಾನೂನು ಹೋರಾಟದ ಬಗ್ಗೆಯೂ ಚರ್ಚೆ ನಡೆಸಲಾಗುವುದು ಎಂದರು.

ಅಧ್ಯಾಪಕರ ವೇತನ, ಪಿಂಚಣಿ, ಅಭಿವೃದ್ಧಿ ಸೇರಿದಂತೆ ರಾಜ್ಯಗಳು ಉನ್ನತ ಶಿಕ್ಷಣಕ್ಕೆ ದೊಡ್ಡ ಮೊತ್ತದ ಹಣ ವೆಚ್ಚ ಮಾಡುತ್ತಿವೆ. ಆದರೆ, ನಿಯಂತ್ರಣಕ್ಕೆ ಅಧಿಕಾರ ಇಲ್ಲ ಎಂದರೆ ಹೇಗೆ?
ಎಂ.ಸಿ. ಸುಧಾಕರ್, ಕರ್ನಾಟಕದ ಸಚಿವ

ಯುಜಿಸಿ ಕರಡು ನಿಯಮಗಳು ಒಕ್ಕೂಟ ವ್ಯವಸ್ಥೆಯನ್ನು ದುರ್ಬಲಗೊಳಿಸುತ್ತವೆ. ಶಿಕ್ಷಣದಲ್ಲಿ ರಾಜ್ಯಗಳ ಸ್ವಾಯತ್ತೆ ಮತ್ತು ಸ್ವಾತಂತ್ರ್ಯಕ್ಕೆ ಧಕ್ಕೆಯಾಗುತ್ತದೆ
ಶ್ರೀಧರ್ ಬಾಬು, ತೆಲಂಗಾಣ ಮಾಹಿತಿ ತಂತ್ರಜ್ಞಾನ ಸಚಿವ

ಪ್ರಮುಖ ನಿರ್ಣಯಗಳು

- ವಿಶ್ವವಿದ್ಯಾಲಯಗಳ ಕುಲಪತಿ ನೇಮಕದಲ್ಲಿ ರಾಜ್ಯ ಸರ್ಕಾರಗಳ ಪಾತ್ರವೇ ಪ್ರಮುಖವಾಗಿರಬೇಕು
- ಕುಲಪತಿ ಆಯ್ಕೆಗೆ ಸಮಿತಿ ರಚಿಸುವ ಅಧಿಕಾರ ಈಗ ಇರುವಂತೆಯೇ ಮುಂದುವರಿಯಬೇಕು
- ಶೈಕ್ಷಣಿಕ ವಲಯದ ಹೊರಗಿನವರನ್ನು ಕುಲಪತಿ ಸ್ಥಾನಕ್ಕೆ ಪರಿಗಣಿಸಬಾರದು
- ಕುಲಪತಿ ಅರ್ಹತೆಗಳು, ಅವಧಿಯ ಬದಲಾವಣೆಯಿಂದ ಶಿಕ್ಷಣದ ಗುಣಮಟ್ಟಕ್ಕೆ ಅಡ್ಡಿಯಾಗಬಾರದು
- ಈಗಿರುವ ಶಿಕ್ಷಕರ ಕಾರ್ಯಕ್ಷಮತೆ ಮೌಲ್ಯಮಾಪನ ಮತ್ತು ಶೈಕ್ಷಣಿಕ ಸೂಚಕ (ಎಪಿಐ) ವ್ಯವಸ್ಥೆ ತೆಗೆದುಹಾಕಬಾರದು
- ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಉಪ ನಿಮಯಗಳನ್ನು ಮರು ಪರಿಶೀಲಿಸಬೇಕು
- ಯುಜಿಸಿ ಮಾರ್ಗಸೂಚಿ ಅನುಸರಿಸದಿದ್ದರೆ ಕೈಗೊಳ್ಳುವ ಕ್ರಮಗಳು ಪ್ರಜಾಸತ್ತಾತ್ಮಕ-ವಾಗಿ ಇರಬೇಕು
- ಸರ್ಕಾರಿ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಕಡೆಗಣಿಸಿ, ಖಾಸಗಿ ಸಂಸ್ಥೆಗಳಿಗೆ ಉತ್ತೇಜನ ನೀಡುವ ನಿಯಮಗಳನ್ನು ಕೈಬಿಡಬೇಕು

ರಂಗ ಕಲರವ

ಬೆಂಗಳೂರಿನ ಕಲಾ ಗ್ರಾಮದಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಯೋಜಿಸಿದ್ದ ಭಾರತ ರಂಗ ಮಹೋತ್ಸವ ಹಾಗೂ ಅಂತರರಾಷ್ಟ್ರೀಯ ನಾಟಕೋತ್ಸವದಲ್ಲಿ ಕೃತಕವಾಗಿ ನಿರ್ಮಿಸಿರುವ ಹಕ್ಕಿಗಳ ನೋಡಿ ಪ್ರೇಕ್ಷಕರು ಸಂಭ್ರಮಿಸಿದರು

ಚಿತ್ರ: ಎಂ.ಎಸ್.ಮಂಜುನಾಥ್

ದೆಹಲಿ ವಿಧಾನಸಭೆ ಮತದಾನೋತ್ತರ ಸಮೀಕ್ಷೆಗಳ ಭವಿಷ್ಯ

'ಬಿಜೆಪಿಗೆ ಸರಳ ಬಹುಮತ'

ನವದೆಹಲಿ (ಪಿಟಿಐ): ದೇಶದ ಗಮನ ಸೆಳೆದಿರುವ ದೆಹಲಿ ವಿಧಾನಸಭೆ ಚುನಾವಣೆಯ ಮತದಾನ ಬುಧವಾರ ಮುಕ್ತಾಯಗೊಂಡಿದ್ದು, ಈ ಬಾರಿ ಬಿಜೆಪಿ ಸರಳ ಬಹುಮತದ ಗಡಿ ದಾಟಿ ಅಧಿಕಾರಕ್ಕೇರಲಿದ್ದರೆ, ಆಡಳಿತಾರೂಢ ಎಎಪಿ ಎರಡನೇ ಸ್ಥಾನಕ್ಕೆ ಕುಸಿಯಲಿದೆ ಎಂದು ಬಹುತೇಕ ಮತದಾನೋತ್ತರ ಸಮೀಕ್ಷೆಗಳು ಭವಿಷ್ಯ ನುಡಿದಿವೆ.

ಎರಡು ಚುನಾವಣೋತ್ತರ ಸಮೀಕ್ಷೆಗಳು ಮಾತ್ರ ಆಮ್ ಆದ್ಮಿ ಪಕ್ಷ (ಎಎಪಿ) ವಿಜಯಶಾಲಿಯಾಗಿ, ಮತ್ತೆ ಅಧಿಕಾರದ ಗದ್ದುಗೆ ಏರಲಿದೆ ಎಂದಿವೆ.

'ಇಂಡಿಯಾ' ಮೈತ್ರಿಕೂಟದ ಅಂಗಪಕ್ಷವೂ ಆಗಿರುವ ಕಾಂಗ್ರೆಸ್ ಉತ್ತಮ ಸಾಧನೆ ಮಾಡುವಲ್ಲಿ ಮತ್ತೆ ವಿಫಲಗೊಳ್ಳಲಿದೆ. ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಸರ್ಕಾರ ರಚಿಸಲು ಎಎಪಿ ಮತ್ತು ಬಿಜೆಪಿ ನಡುವೆ ತೀವ್ರ ಹಣಾಹಣಿ ಇರುವುದನ್ನು ಬಹುತೇಕ ಸಮೀಕ್ಷೆಗಳು ಹೇಳಿವೆ.

ಫೆಬ್ರುವರಿ 8ರಂದು ಮತ ಎಣಿಕೆ ನಡೆಯಲಿದ್ದು, ಫಲಿತಾಂಶ ನಿಚ್ಚಳವಾಗಲಿದೆ. 1.55 ಕೋಟಿ ಅರ್ಹ ಮತದಾರರಿದ್ದಾರೆ.

ರಾತ್ರಿ 11.30ಕ್ಕೆ ಲಭ್ಯವಾದ ಮಾಹಿತಿ ಪ್ರಕಾರ ಶೇ 60.42ರಷ್ಟು ಮತದಾನವಾಗಿತ್ತು.

ಮತದಾನೋತ್ತರ ಸಮೀಕ್ಷೆ

ಸಂಸ್ಥೆ	ಬಿಜೆಪಿ+	ಎಎಪಿ	ಕಾಂಗ್ರೆಸ್	ಇತರರು
ಮ್ಯಾಟ್ರಿಜ್	35-40	32-37	0-1	
ಪೀಪಲ್ಸ್ ಪಲ್ಸ್	51-60	10-19	0	
ಪೀಪಲ್ಸ್ ಇನ್‌ಸೈಟ್	40-44	25-29	0-1	
ಪಿ–ಮಾರ್ಕ್	39-49	21-31	0-1	
ಜೆವಿಸಿ	39-45	22-31	0-2	
ಪೋಲ್ ಡೈರಿ	42-50	18-25	0-2	0-1
ಚಾಣಕ್ಯ ಸ್ಟ್ರಾಟಜೀಸ್	39-44	25-28	2-3	
ವೀ ಪ್ರಿಸೈಡ್	18-23	46-52	0-1	
ಮೈಂಡ್ ಬ್ರಿಂಕ್ ಮೀಡಿಯಾ	21-25	44-49	0-1	
ಡಿವಿ ರಿಸರ್ಚ್	36-44	26-34	0	

ನೀರಿನ ದರ ಲೀಟರ್‌ಗೆ 0.8–1.50 ಪೈಸೆ ಹೆಚ್ಚಳ?

ಬೆಂಗಳೂರು: ಕುಡಿಯುವ ನೀರಿನ ದರ ಹೆಚ್ಚಳಕ್ಕೆ ನಾಲ್ಕು ಆಯ್ಕೆಗಳಿರುವ ಪ್ರಸ್ತಾವವನ್ನು ಸರ್ಕಾರದ ಮುಂದಿಟ್ಟಿರುವ ಬೆಂಗಳೂರು ಜಲಮಂಡಳಿಯು, ಪ್ರತಿ ಲೀಟರ್‌ಗೆ 0.8 ಪೈಸೆಯಿಂದ 1.50 ಪೈಸೆ ಹೆಚ್ಚಿಸುವ ಪ್ರಸ್ತಾವ ಹೆಚ್ಚು ಸೂಕ್ತ ಎಂಬ ಅಭಿಪ್ರಾಯವನ್ನೂ ನೀಡಿದೆ. ಈ ಆಯ್ಕೆಗೆ ಸರ್ಕಾರ ಅನುಮೋದನೆ ನೀಡುವ ಸಾಧ್ಯತೆಯಿದೆ. 4

ನರೇಂದ್ರ ಸ್ವಾಮಿ ಕೆಎಸ್‌ಪಿಸಿಬಿ ಅಧ್ಯಕ್ಷ

ಬೆಂಗಳೂರು: ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷರಾಗಿ ಮಳವಳ್ಳಿ ಶಾಸಕ ಪಿ.ಎಂ. ನರೇಂದ್ರ ಸ್ವಾಮಿ ಅವರನ್ನು ಸರ್ಕಾರ ನಾಮನಿರ್ದೇಶನ ಮಾಡಿದೆ.



ಈ ಬಗ್ಗೆ ಫೆಬ್ರುವರಿ 5 ರಂದು ಅಧಿಸೂಚನೆ ಹೊರಡಿಸಲಾಗಿದೆ. ತಕ್ಷಣದಿಂದ ಆದೇಶ ಜಾರಿಯಾಗಲಿದ್ದು, ಮುಂದಿನ ಮೂರು ವರ್ಷದವರೆಗೆ ಅಧ್ಯಕ್ಷರ ಅವಧಿ ಇರಲಿದೆ. ಮಂಡ್ಯ ಜಿಲ್ಲೆಯ ಮಳವಳ್ಳಿ ಕ್ಷೇತ್ರದ ನರೇಂದ್ರ ಸ್ವಾಮಿ ಅವರು, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷರಾಗಿ ಬುಧವಾರ ರಾತ್ರಿ 9 ಗಂಟೆಗೆ ಅಧಿಕಾರ ಸ್ವೀಕರಿಸಿದರು. ಹಿಂದಿನ ಅಧ್ಯಕ್ಷರಾಗಿದ್ದ ಶಾಂತ್ ತಮ್ಮಯ್ಯ ಅವರ ಅವಧಿ 2024 ರ ನವೆಂಬರ್‌ನಲ್ಲಿ ಅಂತ್ಯಗೊಂಡಿತ್ತು.

ವಿಜಯೇಂದ್ರ ಇಳಿಸಲು ಪಟ್ಟು: ಬೊಮ್ಮಾಯಿ ಜತೆಗೆ ಯತ್ನಾಳ ಬಣ ರಣತಂತ್ರ

ಬಿಜೆಪಿ ಭಿನ್ನರಿಗೆ ಸಿಗದ ವರಿಷ್ಠರು

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ವಿರುದ್ಧ ಸಮರ ಸಾರಿರುವ ಪಕ್ಷದ ಭಿನ್ನಮತೀಯ ನಾಯಕರು ಬುಧವಾರ ಇಲ್ಲಿ ಸಭೆ ಸೇರಿ ಮುಂದಿನ ಹೋರಾಟದ ರಣತಂತ್ರ ರೂಪಿಸಿದರು. ಪಕ್ಷದ ವರಿಷ್ಠರನ್ನು ಭೇಟಿ ಮಾಡುವ ಮಹದಾಸೆಗೆ ಫಲ ಸಿಗಲಿಲ್ಲ.

ಶಾಸಕ ಬಸನಗೌಡ ಪಾಟೀಲ ಯತ್ನಾಳ ನೇತೃತ್ವದಲ್ಲಿ ಶಾಸಕ ರಮೇಶ ಜಾರಕಿಹೊಳಿ, ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರ, ಮಾಜಿ ಶಾಸಕ ಕುಮಾರ್ ಬಂಗಾರಪ್ಪ ಮತ್ತಿತರ ನಾಯಕರು ಕರ್ನಾಟಕ ಭವನದಲ್ಲಿ ಸಭೆ ಸೇರಿ ಸಮಾಲೋಚನೆ ನಡೆಸಿದರು. ಬಳಿಕ, ಈ ನಾಯಕರು ಸಂಸದ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡಿ ಚರ್ಚಿಸಿದರು.

ಬೊಮ್ಮಾಯಿ ಅವರು ತಟಸ್ಥ ಬಣದಲ್ಲಿ ಈವರೆಗೆ ಗುರುತಿಸಿಕೊಂಡಿದ್ದರು. ವಿಜಯೇಂದ್ರ ಅವರನ್ನು ಅಧ್ಯಕ್ಷರನ್ನಾಗಿ ಮುಂದುವರಿಸುವುದಕ್ಕೆ ವಿರೋಧ ವ್ಯಕ್ತಪಡಿಸಿದ್ದಾರೆ.

11ನೇ ಪುಟ ನೋಡಿ

ಬಿವೈವಿ ಪರ ಇಬ್ಬರು ಪೇಮೆಂಟ್ ಸ್ವಾಮೀಜಿಗಳು: ಯತ್ನಾಳ

'ಬಿ.ಎಸ್.ಯಡಿಯೂರಪ್ಪ ಪರವಾಗಿ ಎಲ್ಲ ಲಿಂಗಾಯತರು ಇಲ್ಲ. ಯಡಿಯೂರಪ್ಪ ಆ ಗೌರವ ಉಳಿಸಿಕೊಂಡಿಲ್ಲ. ಬಿ.ವೈ. ವಿಜಯೇಂದ್ರ ಜತೆಗೆ ಇಬ್ಬರು ಮೂವರು ಪೇಮೆಂಟ್ ಸ್ವಾಮೀಜಿಗಳಿದ್ದಾರೆ ಅಷ್ಟೇ' ಎಂದು ಬಸನಗೌಡ ಪಾಟೀಲ ಯತ್ನಾಳ ವ್ಯಂಗ್ಯವಾಗಿ ಹೇಳಿದರು.

ಬುಧವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು ಯಡಿಯೂರಪ್ಪ ಹಾಗೂ ವಿಜಯೇಂದ್ರ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು. ವಿಜಯೇಂದ್ರ ಅವರನ್ನು ಅಧ್ಯಕ್ಷ ಸ್ಥಾನದಲ್ಲಿ ಮುಂದುವರಿಸುವುದಕ್ಕೆ ನಮ್ಮ ತೀವ್ರ ವಿರೋಧ ಇದೆ ಎಂದು ಅವರು ಪುನರುಚ್ಚರಿಸಿದರು.

'ವಿಜಯೇಂದ್ರ ಕರ್ಮಕಾಂಡ ಬಹಳ ಇದೆ. ಅವರು ಹಲವು ಹಲ್ಕಾ ಕೆಲಸ ಮಾಡಿದ್ದಾರೆ. ಯಡಿಯೂರಪ್ಪ ಸಹಿಯನ್ನೇ ವಿಜಯೇಂದ್ರ ನಕಲಿ ಮಾಡಿದ್ದಾರೆ. ಈ ಪ್ರಕರಣದ ಬಗ್ಗೆ ತನಿಖೆ ನಡೆಸಲು ಸಿದ್ದರಾಮಯ್ಯ ಅವರಿಗೆ ಏನು ಧಾಡಿ' ಎಂದು ಅವರು ಪ್ರಶ್ನಿಸಿದರು.

11ನೇ ಪುಟ ನೋಡಿ

ಯಡಿಯೂರಪ್ಪ ಹೊಸ ನಾಟಕ ಕಂಪನಿ ತೆಗೆದಿದ್ದಾರೆ. ಹುಷಾರಿಲ್ಲ ಎಂದು ನಾಟಕ ಮಾಡುತ್ತಿದ್ದಾರೆ. ಅನಾರೋಗ್ಯದಿಂದ ಬಳಲುತ್ತಿರುವವರು ಸಿದ್ದರಾಮಯ್ಯ ಅವರನ್ನು ಮಂಗಳವಾರ ಭೇಟಿ ಮಾಡಿದ್ದು ಹೇಗೆ? ಎಲ್ಲರನ್ನೂ ಕರೆಸಿಕೊಂಡು ಅನುಕಂಪ ಗಿಟ್ಟಿಸಿಕೊಳ್ಳಲು ಯತ್ನಿಸುತ್ತಿದ್ದಾರೆ. ಅವರಿಗೆ ಹೆಚ್ಚಿನ ಸಂಖ್ಯೆಯ ಮೊಮ್ಮಕ್ಕಳು ಇದ್ದಾರೆ. ಅವರೊಂದಿಗೆ ಆಟ ಆಡುತ್ತಾ ಕುಳಿತರೆ ನೂರು ವರ್ಷ ಬದುಕಬಹುದು. ಅವರು ಬಾಯಿ ಮುಚ್ಚಿ ಕುಳಿತುಕೊಂಡು ಮಕ್ಕಳನ್ನು, ಮೊಮ್ಮಕ್ಕಳನ್ನು ಸಂಭಾಳಿಸಲಿ.
ಬಸನಗೌಡ ಪಾಟೀಲ ಯತ್ನಾಳ, ಭಿನ್ನಮತೀಯ ನಾಯಕ

ನಮಗೆ ರಾಷ್ಟ್ರ ನಾಯಕರು ಒಳ್ಳೆಯ ಸುದ್ದಿ ಕೊಡಲಿದ್ದಾರೆ ಹಾಗೂ ನಮ್ಮ ಹೋರಾಟಕ್ಕೆ ಜಯ ಸಿಗಲಿದೆ. ಫೆ.10ರ ಬಳಿಕ ಉತ್ತಮ ಸುದ್ದಿ ಕೊಡುತ್ತೇವೆ
ಜಿ.ಎಂ. ಸಿದ್ದೇಶ್ವರ, ಮಾಜಿ ಸಂಸದ

ಒಂದು ಕಾಲದಲ್ಲಿ ಜೆಸಿಬಿ, ಬಸ್ ಡ್ರೈವರ್ ಆಗಿದ್ದ ಶಾಸಕ ಬಸನಗೌಡ ಪಾಟೀಲ ಯತ್ನಾಳ ಸಕ್ಕರೆ ಕಾರ್ಖಾನೆ ಮಾಲೀಕ ಆಗಿದ್ದು ಹೇಗೆ?
ಎಂ.ಪಿ.ರೇಣುಕಾಚಾರ್ಯ
ಮಾಜಿ ಸಚಿವ

ಆರ್‌ಎಸ್‌ಎಸ್ ನಾಯಕರ ಬಳಿ ನಾನು ಹೋಗಿಲ್ಲ. ಅಂತಹ ವ್ಯವಸ್ಥೆ ಆರ್‌ಎಸ್‌ಎಸ್‌ನಲ್ಲಿ ಇಲ್ಲ. ರಾಜ್ಯಾಧ್ಯಕ್ಷರ ವಿಚಾರದಲ್ಲಿ ಪಕ್ಷದ ಹಿರಿಯ ನಾಯಕರು ಎಲ್ಲವನ್ನೂ ತೀರ್ಮಾನಿಸುತ್ತಾರೆ
ಆರ್. ಅಶೋಕ, ವಿರೋಧ ಪಕ್ಷದ ನಾಯಕ

ಗಂಗಾ ನದಿಗೆ ಆರತಿ ಬೆಳಗಿ, ಸೂರ್ಯನಿಗೆ ಅರ್ಘ್ಯ ಅರ್ಪಣೆ

ತ್ರಿವೇಣಿ ಸಂಗಮದಲ್ಲಿ ಮೋದಿ ಪುಣ್ಯ ಸ್ನಾನ

ಪ್ರಜಾವಾಣಿ ವಾರ್ತೆ/ಪಿಟಿಐ

ಲಖನೌ: ಪ್ರಧಾನಿ ನರೇಂದ್ರ ಮೋದಿ ಅವರು ಪ್ರಯಾಗರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭ ಮೇಳದ ಅಂಗವಾಗಿ ತ್ರಿವೇಣಿ ಸಂಗಮದಲ್ಲಿ ಬುಧವಾರ ಪವಿತ್ರ ಸ್ನಾನ ಮಾಡಿದರು. ಕೈಯಲ್ಲಿ ರುದ್ರಾಕ್ಷಿ ಜಪಮಾಲೆ ಹಿಡಿದ ಪ್ರಧಾನಿ ಮೋದಿ ಅವರು ವೈದಿಕರ ಮಂತ್ರಘೋಷಗಳ ಮಧ್ಯೆ ಗಂಗಾ ನದಿಗೆ ಆರತಿ ಬೆಳಗಿ, ಸೂರ್ಯನಿಗೆ ಅರ್ಘ್ಯ ಅರ್ಪಿಸಿದರು.

ಸೀರೆ, ಹಾಲು ಹಾಗೂ ಹೂವುಗಳನ್ನು ಗಂಗಾ ನದಿಗೆ ಅರ್ಪಿಸಿ ಮೋದಿ ಅವರು ಪೂಜೆ ಸಲ್ಲಿಸಿದರು. ಪ್ರಧಾನಿ ಅವರು ಪವಿತ್ರ ಸ್ನಾನ ಮಾಡಲು ಹಾಗೂ ಪೂಜೆ ಸಲ್ಲಿಸಲು ತ್ರಿವೇಣಿ ಸಂಗಮದ ಬಳಿ ವಿಶೇಷ ವ್ಯವಸ್ಥೆ ಮಾಡಲಾಗಿತ್ತು. ಹೆಚ್ಚಿನ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು.

ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಪ್ರಧಾನಿ ಮೋದಿ ಅವರೊಂದಿಗೆ ಜೊತೆಗೂಡಿದ್ದರು. ದೋಣಿಯ ಮೂಲಕ ಅವರು ಸಂಗಮ ಸ್ಥಳಕ್ಕೆ ಬಂದರು. ಈ ವೇಳೆ ನದಿಯ ತಟಗಳಲ್ಲಿ ನಿಂತಿದ್ದ ಭಕ್ತರತ್ತ ಮೋದಿ ಅವರು ಕೈಬೀಸಿದರು.

ಒಟ್ಟು ಎರಡು ತಾಸುಗಳವರೆಗೆ ಅವರು ಪ್ರಯಾಗರಾಜ್‌ನಲ್ಲಿದ್ದರು. ಆದರೆ, ಮಹಾಕುಂಭ ಮೇಳದಲ್ಲಿದ್ದ ಸಂತರನ್ನು ಮೋದಿ ಅವರು ಭೇಟಿಯಾಗಲಿಲ್ಲ. ಸಂತರನ್ನು ಭೇಟಿಯಾಗಲಿದ್ದಾರೆ ಎನ್ನಲಾಗಿತ್ತು. ಲೇಟೆ ಹನುಮಾನ್ ಮಂದಿರ ಹಾಗೂ ನದಿ ತೀರದಲ್ಲಿರುವ 'ಅಕ್ಷಯ್‌ವಟ್'ಗೂ ಮೋದಿ ಅವರು ಭೇಟಿ ನೀಡಲಿಲ್ಲ. ಮೋದಿ ಅವರು ಬರಬಹುದು ಎಂದು ಭಕ್ತರು ನೂರಾರು ಸಂಖ್ಯೆಯಲ್ಲಿ ಇಲ್ಲಿ ಸೇರಿದ್ದರು.

ಹಿಂದೂ ಕ್ಯಾಲೆಂಡರ್‌ನ 'ಮಾಘ' ಮಾಸದಲ್ಲಿ ಆಚರಿಸಲಾಗುವ 'ಗುಪ್ತ ನವರಾತ್ರಿ'ಯ 'ಅಷ್ಟಮಿ' ದಿನವಾಗಿದ್ದರಿಂದ ಮೋದಿ ಅವರು ಮಹಾಕುಂಭ ಮೇಳದಲ್ಲಿ ಬುಧವಾರ ಭಾಗವಹಿಸಿದರು. (ಫೆ.5)

ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ತ್ರಿವೇಣಿ ಸಂಗಮದಲ್ಲಿ ಪವಿತ್ರ ಸ್ನಾನ ಮಾಡಿದರು —ಪಿಟಿಐ ಚಿತ್ರ

ತ್ರಿವೇಣಿ ಸಂಗಮದಲ್ಲಿ ಪವಿತ್ರ ಸ್ನಾನ ಮಾಡುವುದು ಎಂದರೆ, ಅದೊಂದು ಅಧ್ಯಾತ್ಮದ ಅನುಭೂತಿ. ಕೋಟಿ ಕೋಟಿ ಜನರಂತೆ ನಾನು ಕೂಡ ಪವಿತ್ರ ಸ್ನಾನ ಮಾಡಿದೆ. ನನ್ನೊಳಗೆ ಭಕ್ತಿ-ಭಾವ ತುಂಬಿಕೊಂಡಿತು. ಗಂಗಾ ಮಾತೆಯು ಎಲ್ಲರಿಗೂ ಶಾಂತಿ, ಜ್ಞಾನ, ಉತ್ತಮ ಆರೋಗ್ಯ ಮತ್ತು ಸೌಹಾರ್ದವನ್ನು ಕರುಣಿಸಲಿ
ನರೇಂದ್ರ ಮೋದಿ, ಪ್ರಧಾನಿ
('ಎಕ್ಸ್'ನಲ್ಲಿನ ಪೋಸ್ಟ್)

ಒಳಪುಟಗಳಲ್ಲಿ

ಮೀಟರ್ ಬಡ್ಡಿ ಕಿರುಕುಳ: 20 ಜನರ ಬಂಧನ 11
'ಟಿಪ್ಪು ದಿನ ಕಬಾಬ್ ತಿನ್ನುವ ಹಿಂದೂ ಹುಲಿ' 11

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಸಾರ್ವಜನಿಕ ಸಭೆ: ಸಂಚಾರದಲ್ಲಿ ಮಾರ್ಪಾಡು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸದಾಶಿವನಗರ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯ ಅರಮನೆ ಮೈದಾನದ ತ್ರಿಪುರ ವಾಸಿನಿಯಲ್ಲಿ ಫೆಬ್ರುವರಿ 6ರಂದು ಸಂಜೆ 4ರಿಂದ ರಾತ್ರಿ 11 ಗಂಟೆವರೆಗೆ ವಿವಿಧ ಕಾರ್ಯಕ್ರಮಗಳು ನಡೆಯುತ್ತಿವೆ. ಈ ಕಾರಣದಿಂದ ಅರಮನೆ ಮೈದಾನದ ಸುತ್ತಮುತ್ತ ವಾಹನ ಸಂಚಾರದಲ್ಲಿ ಮಾರ್ಪಾಡು ಮಾಡಲಾಗಿದೆ.

‘ವಿವಿಧ ಕಾರ್ಯಕ್ರಮಕ್ಕೆ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಬರುವ ನಿರೀಕ್ಷೆ ಇದೆ. ಅರಮನೆ ಮೈದಾನದ ಸುತ್ತಮುತ್ತಲಿನ ರಸ್ತೆಗಳಲ್ಲಿ ವಾಹನಗಳ ದಟ್ಟಣೆ ಉಂಟಾಗುವ ಸಾಧ್ಯತೆ ಇದೆ. ಸ್ಥಳೀಯರಿಗೆ ತೊಂದರೆಯಾಗಬಾರದೆಂಬ ಕಾರಣಕ್ಕೆ ಪರ್ಯಾಯ ಮಾರ್ಗಗಳ ವ್ಯವಸ್ಥೆ ಮಾಡಲಾಗಿದೆ’ ಎಂದು ಸಂಚಾರ ವಿಭಾಗದ ಪೊಲೀಸರು ತಿಳಿಸಿದರು.

ವಾಹನ ನಿಲುಗಡೆ ನಿಷೇಧಿಸಿದ ಸ್ಥಳಗಳು: ಪ್ಯಾಲೆಸ್ ರಸ್ತೆ, ಎಂ.ವಿ. ಜಯರಾಮ ರಸ್ತೆ, ಜಯಮಹಲ್ ರಸ್ತೆ, ಸರ್ ಸಿ.ವಿ. ರಾಮನ್ ರಸ್ತೆ, ಬಳ್ಳಾರಿ ರಸ್ತೆ, ರಮಣಮಹರ್ಷಿ ರಸ್ತೆ, ನಂದಿದುರ್ಗ ರಸ್ತೆ, ತರಳಬಾಳು ರಸ್ತೆಯಲ್ಲಿ ವಾಹನಗಳ ನಿಲುಗಡೆ ನಿಷೇಧಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ವಾಹನಗಳ ಸಂಚಾರಕ್ಕೆ ವ್ಯವಸ್ಥೆ

- **ಬಸ್‌ಗಳಲ್ಲಿ ಬರುವವರು:** ವಿಂಡ್ಸರ್ ಮ್ಯಾನರ್ ಜಂಕ್ಷನ್-ಬಿಡಿಎ ಅಪ್‌ರ್‍ಯಾಂಪ್-ರಮಣಮಹರ್ಷಿ ರಸ್ತೆ, ಪಿ.ಜಿ. ಹಳ್ಳಿ ಬಸ್ ತಂಗುದಾಣ, ಕಾವೇರಿ ಜಂಕ್ಷನ್, ಮೇಕ್ರಿ ವೃತ್ತದಿಂದ ತಿರುವು ಪಡೆದು ಅರಮನೆ ಮೈದಾನ ಗೇಟ್ ಸಂಖ್ಯೆ-1 ಶ್ರೀಕೃಷ್ಣ ವಿಹಾರ, ಗೇಟ್ ಸಂಖ್ಯೆ-4 ಗಾಯತ್ರಿ ವಿಹಾರ್, ಗೇಟ್ ಸಂಖ್ಯೆ-5 ಕಿಂಗ್ಸ್ ಕೋರ್ಟ್‌ಗಳಲ್ಲಿ ವಾಹನಗಳನ್ನು ನಿಲುಗಡೆ ಮಾಡಿ ಕಾರ್ಯಕ್ರಮದ ಸ್ಥಳಕ್ಕೆ ತಲುಪಬಹುದು.
- **ಬಳ್ಳಾರಿ ರಸ್ತೆ ಹೆಬ್ಬಾಳ ಕಡೆಯಿಂದ ಬರುವವರು:** ಮೇಕ್ರಿ ವೃತ್ತದ ಸರ್ವೀಸ್ ರಸ್ತೆಯಲ್ಲಿ ಎಡತಿರುವು ಪಡೆದು, ಜಯಮಹಲ್ ರಸ್ತೆಯ ಮೂಲಕ ಸರ್ಕಸ್ ಮೈದಾನ ಸೇರಬಹುದು.
- **ಯಶವಂತಪುರ ಕಡೆಯಿಂದ ಬರುವವರು:** ಸರ್ ಸಿ.ವಿ. ರಾಮನ್ ರಸ್ತೆಯ ಬಿಇಎಲ್ ವೃತ್ತ, ಸದಾಶಿವನಗರ ಪೊಲೀಸ್ ಠಾಣೆ, ಮೇಕ್ರಿ ವೃತ್ತದಿಂದ ಬಲ ತಿರುವು ಪಡೆದು ಮೇಕ್ರಿ ವೃತ್ತ-ಜಯಮಹಲ್ ರಸ್ತೆಯ ಮೂಲಕ ಸರ್ಕಸ್ ಮೈದಾನಕ್ಕೆ ಹೋಗಬಹುದು.
- **ಕಂಟೋನ್ಮೆಂಟ್ (ದಂಡು) ರೈಲ್ವೆ ನಿಲ್ದಾಣದ ಕಡೆಯಿಂದ ಬರುವವರು:** ಜಯಮಹಲ್ ರಸ್ತೆ, ಟಿ.ವಿ. ಟವರ್ ರಸ್ತೆಯ ಮೂಲಕ ಸರ್ಕಸ್ ಮೈದಾನಕ್ಕೆ ಸೇರಬಹುದು.

ಲೋಕಾಯುಕ್ತ ಕಚೇರಿಗೆ ಮುತ್ತಿಗೆ

ಆಸ್ತಿ ವಿವರಗಳನ್ನು ಘೋಷಿಸಲು ಕೆಆರ್‌ಎಸ್ ಕಾರ್ಯಕರ್ತರ ಒತ್ತಾಯ

ಪ್ರಜಾವಾಣಿ ವಾರ್ತೆ

ಲೋಕಾಯುಕ್ತ ಕಚೇರಿ ಮುಂಭಾಗದಲ್ಲಿ ಕೆಆರ್‌ಎಸ್ ಪಕ್ಷದ ಕಾರ್ಯಕರ್ತರು ಬುಧವಾರ ಪ್ರತಿಭಟನೆ ನಡೆಸಿದರು

ಬೆಂಗಳೂರು: ಲೋಕಾಯುಕ್ತ ಮತ್ತು ಉಪ ಲೋಕಾಯುಕ್ತರು ತಮ್ಮ ಆಸ್ತಿ ವಿವರಗಳನ್ನು ಘೋಷಿಸಬೇಕು ಎಂದು ಆಗ್ರಹಿಸಿ ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಪಕ್ಷದ ಕಾರ್ಯಕರ್ತರು ಲೋಕಾಯುಕ್ತ ಕಚೇರಿಗೆ ಬುಧವಾರ ಮುತ್ತಿಗೆ ಹಾಕಿದರು.

‘ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು ಪ್ರತಿವರ್ಷ ತಮ್ಮ ಕುಟುಂಬದ ಆಸ್ತಿ ವಿವರಗಳನ್ನು ಇಲಾಖೆಯ ಮುಖ್ಯಸ್ಥರಿಗೆ ಸಲ್ಲಿಸಬೇಕು. ಎಲ್ಲ ಜನಪ್ರತಿನಿಧಿಗಳು ಪ್ರತಿವರ್ಷ ಲೋಕಾಯುಕ್ತರಿಗೆ ಆಸ್ತಿ ವಿವರಗಳನ್ನು ಕಡ್ಡಾಯವಾಗಿ ಸಲ್ಲಿಸುತ್ತಾರೆ. ಆದರೆ, ಈ ವಿವರಗಳನ್ನು ಪಡೆದುಕೊಳ್ಳುವ ಲೋಕಾಯುಕ್ತರು ಹಾಗೂ ಉಪ ಲೋಕಾಯುಕ್ತರು ತಮ್ಮ ಆಸ್ತಿ ವಿವರಗಳನ್ನು ಘೋಷಿಸದೇ ಇರುವುದರಿಂದ ಲೋಕಾಯುಕ್ತ ಸಂಸ್ಥೆಯನ್ನು ಅನುಮಾನದಿಂದ ನೋಡುವಂತಾಗಿದೆ’ ಎಂದು ಪ್ರತಿಭಟನಕಾರರು ದೂರಿದರು.

‘ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳು ತಮ್ಮ ಆಸ್ತಿ ವಿವರಗಳನ್ನು ಘೋಷಿಸಿ, ಸಂಬಂಧಿಸಿದ ಜಾಲತಾಣಗಳಲ್ಲಿ ಪ್ರಕಟಿಸುತ್ತಾರೆ. ಆದರೆ ಈ ಬಗ್ಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯಲ್ಲಿ ಯಾವುದೇ ನಿಯಮಗಳು ಇಲ್ಲ ಎಂಬ ಕಾರಣಕ್ಕೆ ಲೋಕಾಯುಕ್ತರು ಹಾಗೂ ಉಪ ಲೋಕಾಯುಕ್ತರು ತಮ್ಮ ಆಸ್ತಿ ವಿವರಗಳನ್ನು ಘೋಷಿಸುತ್ತಿಲ್ಲ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ಪ್ರತಿಭಟನನಿರತ ಕೆಆರ್‌ಎಸ್ ಪಕ್ಷದ ಕಾರ್ಯಕರ್ತರು ಲೋಕಾಯುಕ್ತರ ವಿರುದ್ಧ ಘೋಷಣೆ ಕೂಗಿದರು. ಈ ಸಂದರ್ಭದಲ್ಲಿ ಪ್ರತಿಭಟನಕಾರರನ್ನು ಪೊಲೀಸರು ವಿಧಾನಸೌಧ ಪೊಲೀಸ್ ಠಾಣೆಗೆ ಎಳೆದುಕೊಂಡು ಹೋದರು. ನಂತರ ಬಿಡುಗಡೆಗೊಳಿಸಿದರು’ ಎಂದು ಕೆಆರ್‌ಎಸ್ ಪಕ್ಷದ ಸಂಘಟನಾ ಕಾರ್ಯದರ್ಶಿ ಎಲ್. ಜೀವನ್ ಹೇಳಿದರು.

‘ಪ್ರತಿಭಟನೆಯ ನಂತರ ಲಂಚ ಪ್ರಕರಣಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ಕಚೇರಿಗೆ ದೂರು ನೀಡಲು ಬಂದಿದ್ದ ಕೆಆರ್‌ಎಸ್ ಪಕ್ಷದ ಕಾರ್ಯಕರ್ತರ ವಿರುದ್ಧ ವಿಧಾನಸೌಧ ಠಾಣೆಯ ಪೊಲೀಸರು ಲೋಕಾಯುಕ್ತರ ಕರ್ತವ್ಯಕ್ಕೆ ಅಡ್ಡಿಪಡಿಸಿ, ಹಲ್ಲೆ ನಡೆಸಿದ್ದಾರೆ. ಕಾನೂನುಬಾಹಿರ ಸಭೆ, ಗುಂಪು ಸೇರಿದ್ದಾರೆ ಎಂದು ಆರೋಪಿಸಿ ಪ್ರಕರಣ ದಾಖಲಿಸಿದ್ದಾರೆ’ ಎಂದು ತಿಳಿಸಿದರು.

ಕೆಆರ್‌ಎಸ್ ಪಕ್ಷದ ರಾಜ್ಯ ಸಂಘಟನಾ ಕಾರ್ಯದರ್ಶಿಗಳಾದ ರಘು ನಂದನ, ಕುಮಾರ, ಅಮಿತ್, ನಿರ್ಮಲಾ, ವತ್ಸಲಾ, ಹಾಶೀಮ್ ಪಾಷಾ, ಶ್ರೀನಿವಾಸ್ ಉಪಸ್ಥಿತರಿದ್ದರು.

ಪೊಲೀಸರಿಗೆ ₹200 ಆಹಾರ ಭತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಬ್ಬ,ವಿಶೇಷ ಹಾಗೂ ಚುನಾವಣಾ ಸಂದರ್ಭಗಳಲ್ಲಿ ಬಂದೋಬಸ್ತ್ ಕರ್ತವ್ಯ ನಿರ್ವಹಿಸುವ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗೆ ₹200 ರಂತೆ ಆಹಾರ ಭತ್ಯೆ ಪಾವತಿಸಲು ಮಂಜೂರಾತಿ ನೀಡಿ ಆದೇಶ ಹೊರಡಿಸಲಾಗಿದೆ.

ಈ ಸಂದರ್ಭಗಳಲ್ಲಿ ಉತ್ತಮ ಗುಣಮಟ್ಟದ ಆಹಾರ ಪೂರೈಸಬೇಕು ಎಂದು ಪೊಲೀಸ್ ಮಹಾ ನಿರ್ದೇಶಕರು ಸುತ್ತೋಲೆಯಲ್ಲಿ ತಿಳಿಸಿದ್ದಾರೆ.

ಏರೋ ಇಂಡಿಯಾ: ಸಂಚಾರ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಏರೋ ಇಂಡಿಯಾ ವೈಮಾನಿಕ ಪ್ರದರ್ಶನ ಕಾರ್ಯಕ್ರಮಕ್ಕೆ ಅನುಕೂಲ ಕಲ್ಪಿಸುವುದಕ್ಕಾಗಿ ಫೆಬ್ರುವರಿ 11ರಿಂದ 14ರವರೆಗೆ ಹಲವು ರಸ್ತೆಗಳಲ್ಲಿ ಭಾರಿ ವಾಹನಗಳ ಸಂಚಾರಕ್ಕೆ ನಿರ್ಬಂಧ ವಿಧಿಸಲಾಗಿದೆ.

‘ಪ್ರಧಾನ ಮಂತ್ರಿ, ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಗಣ್ಯರು, ರಕ್ಷಣಾ ಪಡೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿ, ಸಾರ್ವಜನಿಕರು ಹಾಗೂ ತುರ್ತು ಸೇವಾ ಸಿಬ್ಬಂದಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಇವರೆಲ್ಲರ ಅನುಕೂಲಕ್ಕಾಗಿ ನಿತ್ಯವೂ ಬೆಳಿಗ್ಗೆ 5 ಗಂಟೆಯಿಂದ ರಾತ್ರಿ 10 ಗಂಟೆಯವರೆಗೆ ಕೆಲವು ರಸ್ತೆಗಳಲ್ಲಿ ಭಾರಿ ವಾಹನಗಳ ಸಂಚಾರಕ್ಕೆ ನಿರ್ಬಂಧ ವಿಧಿಸಲಾಗಿದೆ. ವಾಹನ ನಿಲುಗಡೆಯನ್ನೂ ನಿಷೇಧಿಸಲಾಗಿದೆ’ ಎಂದು ಸಂಚಾರ ವಿಭಾಗದ ಪೊಲೀಸರು ತಿಳಿಸಿದ್ದಾರೆ.

‘ನಿರ್ಬಂಧಿತ ರಸ್ತೆಗಳಲ್ಲಿ ಲಾರಿ, ಟ್ರಕ್, ಖಾಸಗಿ ಬಸ್‌ಗಳು, ಸರಕು ಸಾಗಣೆ ವಾಹನಗಳು ಹಾಗೂ ಟ್ರ್ಯಾಕ್ಟರ್‌ಗಳು ಸಂಚರಿಸುವಂತಿಲ್ಲ. ನಿಯಮ ಮೀರಿದರೆ, ಪ್ರಕರಣ ದಾಖಲಿಸಲಾಗುವುದು’ ಎಂದು ಹೇಳಿದ್ದಾರೆ.

ಎಲ್ಲೆಲ್ಲಿ ಸಂಚಾರ ನಿರ್ಬಂಧ

ಬೆಂಗಳೂರು-ಬಳ್ಳಾರಿ ರಸ್ತೆ, ಮೇಖ್ರಿ ವೃತ್ತದಿಂದ-ಎಂವಿಐಟಿ ಕ್ರಾಸ್‌ವರೆಗೆ, ಈ ರಸ್ತೆಯ ಎರಡೂ ದಿಕ್ಕಿನಲ್ಲಿ ಸಂಚಾರ ನಿಷೇಧಿಸಲಾಗಿದೆ.

- ಗೊರಗುಂಟೆಪಾಳ್ಯ-ಹೆಣ್ಣೂರು ಕ್ರಾಸ್
- ನಾಗವಾರ ಜಂಕ್ಷನ್-ಥಣಿಸಂದ್ರ-ಬಾಗಲೂರು ಮುಖ್ಯರಸ್ತೆ-ರೇವಾ ಕಾಲೇಜಿನ ಜಂಕ್ಷನ್
- ಹೆಸರಘಟ್ಟ-ಚಿಕ್ಕಬಾಣಾವರ

ಎಲ್ಲೆಲ್ಲಿ ವಾಹನ ನಿಲುಗಡೆ ನಿಷೇಧ

- ನಾಗೇನಹಳ್ಳಿ ಗೇಟ್‌ನಿಂದ ಬಳ್ಳಾರಿ ರಸ್ತೆಯನ್ನು ಸೇರುವ ಫೋರ್ಡ್ ಶೋರೂಂವರೆಗೆ
- ಮೇಖ್ರಿ ವೃತ್ತದಿಂದ ದೇವನಹಳ್ಳಿ ವರೆಗಿನ ಪ್ರಮುಖ ರಸ್ತೆ
- ಬಾಗಲೂರು ಕ್ರಾಸ್ ಜಂಕ್ಷನ್‌ನಿಂದ ಬಾಗಲೂರು ಮುಖ್ಯರಸ್ತೆಯ ಸಾತನೂರುವರೆಗೆ
- ನಾಗವಾರ ಜಂಕ್ಷನ್‌ನಿಂದ ಥಣಿಸಂದ್ರ ಮುಖ್ಯರಸ್ತೆ ಮಾರ್ಗವಾಗಿ ರೇವಾ ಕಾಲೇಜಿನವರೆಗೆ
- ಎಫ್‌ಟಿಐ ಜಂಕ್ಷನ್‌ನಿಂದ ಹೆಣ್ಣೂರು ಕ್ರಾಸ್‌ವರೆಗೆ
- ಹೆಣ್ಣೂರು ಜಂಕ್ಷನ್‌ನಿಂದ ಬೇಗೂರು ಬ್ಯಾಕ್ ಗೇಟ್‌ವರೆಗೆ
- ನಾಗೇನಹಳ್ಳಿ ಗೇಟ್ ಜಂಕ್ಷನ್‌ನಿಂದ ಯಲಹಂಕ ವೃತ್ತದವರೆಗೆ
- ಕೋಗಿಲು ಕ್ರಾಸ್ ಜಂಕ್ಷನ್‌ನಿಂದ ಕಣ್ಣೂರು ಜಂಕ್ಷನ್‌ವರೆಗೆ

ವಾಹನ ನಿಲುಗಡೆಗೆ ಅವಕಾಶ

‘ಪಾಸ್ ಹೊಂದಿರದ ಸಾರ್ವಜನಿಕರು, ತಮ್ಮ ವಾಹನಗಳನ್ನು ಜಿಕೆವಿಕೆ ಆವರಣ ಹಾಗೂ ಜಕ್ಕೂರಿನಲ್ಲಿ ನಿಲುಗಡೆ ಮಾಡಬಹುದು. ಪಾರ್ಕಿಂಗ್ ಜಾಗದಿಂದ ವೈಮಾನಿಕ ಪ್ರದರ್ಶನ ಸ್ಥಳಕ್ಕೆ ಹೋಗಲು ಬಿಎಂಟಿಸಿ ಬಸ್ ವ್ಯವಸ್ಥೆ ಮಾಡಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಮಲ್ಯ ಅರ್ಜಿ ಬ್ಯಾಂಕ್‌ಗಳಿಗೆ ನೋಟಿಸ್

ಬೆಂಗಳೂರು: ‘ಕಿಂಗ್‌ಫಿಶರ್ ಏರ್‌ಲೈನ್ಸ್‌ಗೆ ಸಂಬಂಧಿಸಿದ ಸಾಲ ವಸೂಲಾತಿ ಪ್ರಕ್ರಿಯೆಗೆ ತಡೆ ನೀಡಬೇಕು’ ಎಂದು ಕೋರಿ ಉದ್ಯಮಿ ವಿಜಯ್ ಮಲ್ಯ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ಸಾಲ ವಸೂಲಾತಿ ನ್ಯಾಯಮಂಡಳಿ ವಸೂಲಿ ಅಧಿಕಾರಿ ಹಾಗೂ ಭಾರತೀಯ ಸ್ಟೇಟ್ ಬ್ಯಾಂಕ್ ಸೇರಿ ಒಟ್ಟು 10 ಬ್ಯಾಂಕ್‌ಗಳಿಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ, ಯುನೈಟೆಡ್ ಕಿಂಗ್ಡಮ್‌ನಲ್ಲಿನ ಹರ್ಟ್‌ಫೋರ್ಡ್ ಶೈರ್ ಕೌಂಟಿಯ ಕ್ವಿನ್ ಹೂ ಲೇನ್‌ನಲ್ಲಿರುವ ಲೇಡಿವಾಕ್ ನಿವಾಸಿಯಾಗಿರುವ 70 ವರ್ಷದ ಉದ್ಯಮಿ ವಿಜಯ್ ಮಲ್ಯ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಆರ್.ದೇವದಾಸ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಮಲ್ಯ ಪರ ಪದಾಂಕಿತ ಹಿರಿಯ ವಕೀಲ ಸಜನ್ ಪೂವಯ್ಯ ವಾದ ಆಲಿಸಿದ ನ್ಯಾಯಪೀಠ ಪ್ರತಿವಾದಿಗಳಾದ, ಚೆನ್ನೈನ ಸಾಲ ವಸೂಲಾತಿ ನ್ಯಾಯಮಂಡಳಿಯ ವಸೂಲಿ ಅಧಿಕಾರಿಗಳು, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಬ್ಯಾಂಕ್ ಆಫ್ ಬರೋಡಾ, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ದಿ ಫೆಡರಲ್ ಬ್ಯಾಂಕ್ ಲಿಮಿಟೆಡ್, ಐಡಿಬಿಐ ಬ್ಯಾಂಕ್ ಲಿಮಿಟೆಡ್, ಇಂಡಿಯನ್ ಓವರ್‌ಸೀಸ್ ಬ್ಯಾಂಕ್, ಜಮ್ಮು ಅಂಡ್ ಕಾಶ್ಮೀರ್ ಬ್ಯಾಂಕ್ ಲಿಮಿಟೆಡ್, ಪಂಜಾಬ್ ಅಂಡ್ ಸಿಂಧ್ ಬ್ಯಾಂಕ್, ಪಂಜಾಬ್ ನ್ಯಾಷನಲ್ ಬ್ಯಾಂಕ್, ಯುಕೊ ಬ್ಯಾಂಕ್, ಜೆ.ಎಂ.ಫೈನಾನ್ಶಿಯಲ್ ಅಸೆಟ್ ರಿ-ಕನಸ್ಟ್ರಕ್ಷನ್ ಕಂಪನಿ ಪ್ರೈ.ಲಿಮಿಟೆಡ್ ಹಾಗೂ ಯುಬಿಎಚ್‌ಎಲ್‌ನ ಅಧಿಕೃತ ಲಿಕ್ವಿಡೇಟರ್‌ಗೆ ತುರ್ತು ನೋಟಿಸ್ ಜಾರಿಗೊಳಿಸಲು ಆದೇಶಿಸಿತು. ವಿಚಾರಣೆಯನ್ನು ಇದೇ 19ಕ್ಕೆ ಮುಂದೂಡಲಾಗಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ (ಕ್ಯೂಎ/ಕ್ಯೂಸಿ) ವಿಭಾಗ,
ಯಲಹಂಕ ವಲಯ, ರೂಂ ನಂ. 101, ಅನೆಕ್ಸ್-3 ಕಟ್ಟಡ, ಬಿಬಿಎಂಪಿ,
ಎನ್.ಆರ್. ಚೌಕ, ಬೆಂಗಳೂರು – 560002.

ಸಂಖ್ಯೆ: ಕಾಅ(ಕ್ಯೂಎ/ಕ್ಯೂಸಿ)/ಯಲಹಂಕ/ಟೆಂಡರ್/81/2024–25 ದಿನಾಂಕ: 05–02–2025

ಟೆಂಡರ್ ರದ್ದುಪಡಿಸುವಿಕೆ

ವಿಷಯ: ಕಾರ್ಯಪಾಲಕ ಅಭಿಯಂತರರು (ಗುಣಮಟ್ಟ ಭರವಸೆ / ಗುಣಮಟ್ಟ ನಿಯಂತ್ರಣ – ಯಲಹಂಕ) ವತಿಯಿಂದ (PMC) ಅನ್ನು ನೇಮಿಸುವ ಸಂಬಂಧ ಆಹ್ವಾನಿಸಿರುವ ಟೆಂಡರ್‌ನ್ನು ರದ್ದುಪಡಿಸುವ ಬಗ್ಗೆ.

ಉಲ್ಲೇಖ: ಈ ಕಛೇರಿ ಟೆಂಡರ್ ಅಧಿಸೂಚನೆ ಸಂಖ್ಯೆ: ಕಾಅ(ಕ್ಯೂಎ/ಕ್ಯೂಸಿ)/ಯಲಹಂಕ/ಟೆಂಡರ್/81/2024–25, ದಿನಾಂಕ: 01–02–2025.

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಸದರಿ ಟೆಂಡರ್‌ನ್ನು ತಾಂತ್ರಿಕ ಕಾರಣಗಳಿಂದ ರದ್ದುಪಡಿಸಲಾಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು (ಕ್ಯೂಎ/ಕ್ಯೂಸಿ) ವಿಭಾಗ,
ಯಲಹಂಕ ವಲಯ, ಬಿಬಿಎಂಪಿ.

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ

ಖಾದಿ ಗ್ರಾಮೋದ್ಯೋಗ ವಿಭಾಗ
ಉಪ ನಿರ್ದೇಶಕರು (ಖಾಗ್ರಾ) ರವರ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ
ಮೊದಲನೆ ಮಹಡಿ, KSTIDCL ಗಾರ್ಮೆಂಟ್ ತರಬೇತಿ ಕಟ್ಟಡ
ಬಾಂಬೆ ರೇಯನ್ ಫ್ಯಾಕ್ಟರಿ ಬಳಿ, KIADB APPARAL PARK, ದೊಡ್ಡಬಳ್ಳಾಪುರ – 561203

ಸಂಖ್ಯೆ: ಉನಿ(ಖಾಗ್ರಾ)/ಬೆಂಗ್ರಾಜಿಪಂ/ವಿ.ಸು.ಉ/2024–25 ದಿನಾಂಕ: 05.02.2025

ಟೆಂಡರ್ ಪ್ರಕಟಣೆ

2024–25 ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಗ್ರಾಮೀಣ ಭಾಗದ ಅರ್ಹ ವಿವಿಧ ವೃತ್ತಿಪರ ಕುಶಲಕರ್ಮಿಗಳಿಗೆ ಉಚಿತವಾಗಿ ವಿದ್ಯುತ್‌ಚಾಲಿತ ಹಾಗೂ ಸುಧಾರಿತ ಉಪಕರಣಗಳನ್ನು ಸರಬರಾಜು ಮಾಡುವ ನೊಂದಾಯಿತ ಅರ್ಹ ಮತ್ತು ಈ ಕ್ಷೇತ್ರದಲ್ಲಿ ಪರಿಣಿತಿ ಹೊಂದಿರುವ ನುರಿತ ಸಂಸ್ಥೆಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಟೆಂಡರ್ ಡಾಕ್ಯುಮೆಂಟ್‌ಗಳನ್ನು Government of Karnataka e-procurement portal website: https://www.kppp.karnataka.gov.in ಮುಖಾಂತರ (IC/2024-25/IND0094/CALL-2) ಡೌನ್‌ಲೋಡ್ ಮಾಡಿಕೊಳ್ಳಬಹುದು. ಆನ್‌ಲೈನ್ ಮೂಲಕ ಭರ್ತಿಮಾಡಿದ ಅರ್ಜಿಗಳನ್ನು ಸಲ್ಲಿಸಲು ಕೊನೆಯ **ದಿನಾಂಕ 12.02.2025 ಸಂಜೆ 5.00 ಗಂಟೆಯವರೆಗೆ.** ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಅಥವಾ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಪಡೆಯಬಹುದು.

ಸಹಿ/–
ಉಪನಿರ್ದೇಶಕರು (ಖಾಗ್ರಾ) (ಪ್ರಭಾರ)
ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್

ವಾಸಸಂಇ/ಸಿಪಿ/ಎಎಎ/4842/2024–25

ಬಿಜಿಎಸ್‌ಇ ಪ್ರಾಪರ್ಟೀಸ್ ಆ್ಯಂಡ್ ಸೆಕ್ಯುರಿಟೀಸ್ ಲಿಮಿಟೆಡ್

(ಮುಂಚಿನ ಹೆಸರು: ಬೆಂಗಳೂರು ಸ್ಟಾಕ್ ಎಕ್ಸ್‌ಚೇಂಜ್ ಲಿಮಿಟೆಡ್)
CIN No.U70102KA1937PLC001292
ಸ್ಟಾಕ್ ಎಕ್ಸ್‌ಚೇಂಜ್ ಟವರ್ಸ್, ನಂ. 51, 1ನೇ ಕ್ರಾಸ್, ಜೆ. ಸಿ. ರಸ್ತೆ,
ಬೆಂಗಳೂರು 560027 ಫೋನ್: 080–41575566
ಇಮೇಲ್: ed_secretary@bgse.co.in;

ಸದಸ್ಯರಿಗೆ ಸೂಚನೆ

ಅಂಚೆ ಮತಪತ್ರ ಸೂಚನೆಯಲ್ಲಿ ಹೇಳಿರುವಂತಹ ವಿಶೇಷ ವ್ಯವಹಾರ / ಸಾಮಾನ್ಯ ನಿರ್ಣಯಕ್ಕೆ ಸಂಬಂಧಿಸಿದಂತೆ ಕಂಪನಿಗಳ ಕಾಯಿದೆ, 2013 ರ ಕಲಮು 110 ಮತ್ತು ಇತರ ಅನ್ವಯವಾಗುವ ನಿಬಂಧನೆಗಳ ಅಡಿಯಲ್ಲಿ ಇ–ಮತದಾನ/ಅಂಚೆ ಮತಪತ್ರಗಳ ಮೂಲಕ ಕಂಪನಿಯ ಷೇರುದಾರರ ಅನುಮೋದನೆ/ಒಪ್ಪಿಗೆಯನ್ನು ಕೋರುತ್ತ ಇಮೇಲ್‌ಗಳನ್ನು ನೋಂದಾಯಿಸಿಕೊಂಡಿರುವವರಿಗೆ ಇಮೇಲ್‌ಗಳ ಮೂಲಕ ಮತ್ತು ಇಮೇಲ್‌ಗಳನ್ನು ನೋಂದಾಯಿಸಿಕೊಂಡಿಲ್ಲದವರಿಗೆ ಅಂಚೆ ಮತಪತ್ರ ನಮೂನೆಗಳು ಹಾಗೂ ಅಂಚೆಶುಲ್ಕವನ್ನು ಪಾವತಿಸಿರುವ ನಮ್ಮ ವಿಳಾಸವುಳ್ಳ ಲಕೋಟೆಗಳ ಸಹಿತವಾಗಿ ಸ್ಪೀಡ್ ಪೋಸ್ಟ್ ಮೂಲಕ ಅಂಚೆ ಮತದಾನದ ಸೂಚನೆಯನ್ನು ಕಳುಹಿಸುವುದನ್ನು ಕಂಪನಿಯು ಫೆಬ್ರವರಿ 05, 2025 ರಂದು ಪೂರ್ಣಗೊಳಿಸಿದೆ ಎಂದು ಕಂಪನಿಯ ಸದಸ್ಯರಿಗೆ ಈ ಮೂಲಕ ತಿಳಿಸಲಾಗಿದೆ. ಅಂಚೆ ಮತದಾನವನ್ನು ನ್ಯಾಯಯುತವಾಗಿ ಮತ್ತು ಪಾರದರ್ಶಕವಾಗಿ ನಡೆಸಲು ಮಂಡಳಿಯು ಶ್ರೀ ವಿ ಜಯಗೋಪಾಲ್ (ಸಿಪಿ ಸಂ. 5389), ಇವರನ್ನು ಸೂಕ್ಷ್ಮ ಪರಿಶೀಲಕರಾಗಿ ನೇಮಿಸಿಕೊಂಡಿದೆ. ಕಂಪನಿಯ ಸದಸ್ಯರೆಲ್ಲರೂ ದಯವಿಟ್ಟು ಗಮನಿಸಬೇಕು: ಕಂಪನಿಯು ರಿಮೋಟ್ ಇ–ವೋಟಿಂಗ್‌ಗಾಗಿ ಸಿಡಿಎಸ್‌ಎಲ್‌ನ ಸೇವೆಗಳನ್ನು ನಿಯೋಜಿಸಿಕೊಂಡಿದೆ. ಶುಕ್ರವಾರ ಮಾರ್ಚ್ 07, 2025 ಸಂಜೆ 5.00 ಗಂಟೆ ಅಥವಾ ಅದಕ್ಕೂ ಮೊದಲು ವಿಧ್ಯುಕ್ತವಾಗಿ ಭರ್ತಿ ಮಾಡಿ ಸಹಿ ಮಾಡಿದ ಅಂಚೆ ಮತಪತ್ರವನ್ನು ಸೂಕ್ಷ್ಮ ಪರಿಶೀಲಕರಿಗೆ ಹಿಂದಿರುಗಿಸುವ ಮೂಲಕ ಸದಸ್ಯರು ತಮ್ಮ ಸಮ್ಮತಿ ಅಥವಾ ಅಸಮ್ಮತಿಯನ್ನು ತಿಳಿಸಬೇಕು ಎಂದು ಈ ಮೂಲಕ ವಿನಂತಿಸುತ್ತಿದ್ದೇವೆ. ಶುಕ್ರವಾರ ಮಾರ್ಚ್ 07, 2025 ರ ನಂತರ ಸದಸ್ಯರಿಂದ ಅಂಚೆ ಮತಪತ್ರ ನಮೂನೆಗಳು ಬಂದರೆ ಕಟ್ಟುನಿಟ್ಟಾಗಿ ಅಂತಹ ಸದಸ್ಯರಿಂದ ಯಾವುದೇ ಉತ್ತರ ಸ್ವೀಕಾರವಾಗಲಿಲ್ಲ ಎಂದು ಪರಿಗಣಿಸಲಾಗುತ್ತದೆ. ಜನವರಿ 31, 2025 ರಂದು ಸದಸ್ಯರ ರಿಜಿಸ್ಟರ್/ಡಿಪಾಸಿಟರಿಗಳ ದಾಖಲಾತಿಯಲ್ಲಿ ಸದಸ್ಯರ ಹೆಸರಿನಲ್ಲಿ ನೋಂದಾಯಿಸಲಾದ ಷೇರುಗಳಿಗೆ ಪಾವತಿಸಿರುವ ಮೌಲ್ಯದ ಆಧಾರದ ಮೇಲೆ ಮತದಾನದ ಹಕ್ಕುಗಳನ್ನು ಲೆಕ್ಕಹಾಕಲಾಗುತ್ತದೆ. ಯಾವುದೇ ಸದಸ್ಯರಿಗೆ ಅಂಚೆ ಮತಪತ್ರ ನಮೂನೆಗಳು ಲಭಿಸಿರದಿದ್ದರೆ ಮತ್ತು ಅದರ ನಕಲುಗಳನ್ನು ಪಡೆಯಲು ಬಯಸುತ್ತಿದ್ದರೆ ಅಥವಾ ಅಂಚೆ ಮತಪತ್ರ ಪ್ರಕ್ರಿಯೆಗೆ ಸಂಬಂಧಿಸಿದಂತೆ ಕುಂದುಕೊರತೆಗಳಿವೆ ಎಂದು ದೂರನ್ನು ನೀಡಲು ಬಯಸುತ್ತಿದ್ದರೆ ಅಂತಹವರು ದಯವಿಟ್ಟು ಸಂಪರ್ಕಿಸಿ: ಕಂಪನಿಯ ರಿಜಿಸ್ಟ್ರಾರ್ ಮೆ. ಬಿಜಿಎಸ್‌ಇ ಫೈನಾನ್ಷಿಯಲ್ ಲಿಮಿಟೆಡ್, ಸ್ಟಾಕ್ ಎಕ್ಸ್‌ಚೇಂಜ್ ಟವರ್ಸ್, ನಂ. 51, 1 ನೇ ಕ್ರಾಸ್, ಜೆ.ಸಿ. ರಸ್ತೆ, ಬೆಂಗಳೂರು – 560027, ಫೋನ್: 080–41329661, ಇಮೇಲ್: vp-rta@bfsl.co.in.

ಅಂಚೆ ಮತದಾನದ ಫಲಿತಾಂಶಗಳನ್ನು ಸೋಮವಾರ, ಮಾರ್ಚ್ 10, 2025 ರಂದು ಕಂಪನಿಯ ನೋಂದಾಯಿತ ಕಛೇರಿಯಲ್ಲಿ ಪ್ರಕಟಿಸಲಾಗುವುದು.

ಇ–ಮತದಾನ ಗುರುವಾರ, 06–02–2025 ರಂದು ಬೆಳಗ್ಗೆ 09.00 ಕ್ಕೆ ಪ್ರಾರಂಭವಾಗಿ ಶುಕ್ರವಾರ, 07–03–2025 ರಂದು ಸಂಜೆ 05.00 ಕ್ಕೆ ಮುಕ್ತಾಯಗೊಳ್ಳುತ್ತದೆ.

ನಿರ್ದೇಶಕರ ಮಂಡಲಿಯ ಆದೇಶದ ಮೇರೆಗೆ
ಬಿಜಿಎಸ್‌ಇ ಪ್ರಾಪರ್ಟೀಸ್ ಆ್ಯಂಡ್ ಸೆಕ್ಯುರಿಟೀಸ್ ಲಿಮಿಟೆಡ್ ಪರವಾಗಿ
ಸಹಿ/– (ವಿನೋದ್ ಗೌತಮಚಂದ್ ಜೈನ್)
ಕಾರ್ಯನಿರ್ವಾಹಕ ನಿರ್ದೇಶಕರು DIN: 00248275

ಸ್ಥಳ: ಬೆಂಗಳೂರು
ದಿನಾಂಕ: 04.02.2025

ಇನ್ಶೂರನ್ಸ್ ಒಂಬಡ್ಸಮನ್ ಪರಿಷತ್, ಮುಂಬೈ
ಇನ್ಶೂರನ್ಸ್ ಒಂಬಡ್ಸಮನ್ ಖಾಲಿ ಹುದ್ದೆಗಳು

CIO – Council for Insurance Ombudsmen

ಜಾಹೀರಾತು ಸಂ. 1/2025 ದಿನಾಂಕ: 06–02–2025

ಇನ್ಶೂರನ್ಸ್ ಒಂಬಡ್ಸಮನ್ ಹುದ್ದೆ ನೇಮಕಾತಿಗಾಗಿ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಅಹ್ಮದಾಬಾದ್, ಭುವನೇಶ್ವರ, ದೆಹಲಿ, ಕೋಲ್ಕತಾ, ಲಕ್ನೋ, ನೊಯ್ಡಾ, ಪಾಟ್ನಾ ಮತ್ತು ಪುಣೆಯಲ್ಲಿರುವ ತಲಾ ಒಂದು ಹುದ್ದೆಗೆ, ಆನ್‌ಲೈನ್ ಅರ್ಜಿ ಸಲ್ಲಿಕೆಗೆ ನಿಗದಿಪಡಿಸಲಾಗಿರುವ ಕೊನೆಯ ದಿನಾಂಕದೊಳಗೆ, ಕೆಳಕಂಡ ಅರ್ಹತಾ ಮಾನದಂಡಗಳನ್ನು ಪೂರೈಸಬಲ್ಲ ವ್ಯಕ್ತಿಗಳು ಅರ್ಜಿ ಸಲ್ಲಿಸಬಹುದಾಗಿರುತ್ತದೆ.

ಇನ್ಶೂರನ್ಸ್ ಒಂಬಡ್ಸಮನ್ ನೇಮಕಾತಿಗೆ ಅಗತ್ಯ ಅರ್ಹತೆಗಳು:

ಎ) ಆನ್‌ಲೈನ್ ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಲಾಗಿರುವ ಕೊನೆಯ ದಿನಾಂಕದಂದು, ಅರ್ಜಿದಾರರು 55 (ಐವತ್ತೈದು) ವರ್ಷಕ್ಕಿಂತ ಕಡಿಮೆ ಪ್ರಾಯದವರಾಗಿರಬಾರದು ಆದರೆ 65 (ಅರವತ್ತೈದು) ವರ್ಷ ಪ್ರಾಯ ಮೀರಿರಬಾರದು.

ಬಿ) ಅರ್ಜಿದಾರರು ಆಲ್ ಇಂಡಿಯಾ ಸರ್ವೀಸಸ್ ಅಥವಾ ಯೂನಿಯನ್ ಸಿವಿಲ್ ಸರ್ವೀಸಸ್‌ನ ಸದಸ್ಯ ಆಗಿರಬೇಕು ಅಥವಾ ಆಗಿದ್ದವರಾಗಿರಬೇಕು ಮತ್ತು ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿ ಅಥವಾ ತತ್ಸಮಾನ ಹುದ್ದೆಯನ್ನು ಹೊಂದಿದ್ದವರಾಗಿರಬೇಕು.

ವಿವರಣೆ: ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿ ಅಥವಾ ಕೇಂದ್ರ ಸರ್ಕಾರದಲ್ಲಿ ತತ್ಸಮಾನ ಹುದ್ದೆಗೆ ಮೊದಲ ಬಾರಿ ನೇಮಕಗೊಂಡ ದಿನಾಂಕದಿಂದ ಸೇವಾವಧಿಯನ್ನು ಪರಿಗಣಿಸಲಾಗುತ್ತದೆ.

ಅಥವಾ

ಸಿ) ಅರ್ಜಿದಾರರು ವಿಮಾ ಕ್ಷೇತ್ರದಲ್ಲಿ ಕನಿಷ್ಠ 25 (ಇಪ್ಪತ್ತೈದು) ವರ್ಷ ಸೇವೆ ಸಲ್ಲಿಸಿದವರಾಗಿರಬೇಕು ಮತ್ತು ಮಂಡಳಿ ನಿರ್ದೇಶಕ ಮಟ್ಟಕ್ಕಿಂತ ಒಂದು ಹಂತದ ಕೆಳಗಿನ ಹುದ್ದೆಯನ್ನು ಹೊಂದಿದ್ದವರಾಗಿರಬೇಕು.

ವಿವರಣೆ: ವಿಮಾ ಕ್ಷೇತ್ರದಲ್ಲಿ ಮಂಡಳಿ ನಿರ್ದೇಶಕ ಹುದ್ದೆಯ ತಕ್ಷಣದ ಕೆಳಗಿನ ಹುದ್ದೆಗೆ ನೇಮಕಗೊಂಡ ದಿನಾಂಕ ಅಥವಾ ಮಂಡಳಿಯ ನಿರ್ದೇಶಕ ಮಟ್ಟದ ಹುದ್ದೆಗೆ ಮೊದಲ ಬಾರಿ ನೇಮಕಗೊಂಡ ದಿನಾಂಕ, ಇದರಲ್ಲಿ ಯಾವುದ ಮೊದಲೋ ಆ ದಿನಾಂಕದಿಂದ ಸೇವಾವಧಿಯನ್ನು ಪರಿಗಣಿಸಲಾಗುತ್ತದೆ.

ಕಚೇರಿ ನಿಬಂಧನೆ: ಮೂರು ವರ್ಷ ಅಥವಾ ಅರವತ್ತಾರು ವರ್ಷ ವಯಸ್ಸು ತುಂಬುವವರೆಗೆ, ಇದರಲ್ಲಿ ಯಾವುದು ಮೊದಲೋ ಅದು ಮತ್ತು ಮರುನೇಮಕಾತಿಗೆ ಅರ್ಹರಾಗುವುದಿಲ್ಲ.

ಕಾಲಕಾಲಕ್ಕೆ ತಿದ್ದುಪಡಿಗೆ ಒಳಗಾಗಿರುವ ಇನ್ಶೂರನ್ಸ್ ಒಂಬಡ್ಸಮನ್ ನಿಯಮಗಳು, 2017ರ ನಿಯಮಗಳ ಪ್ರಕಾರ, ಇನ್ಶೂರನ್ಸ್ ಒಂಬಡ್ಸಮನ್ ಹುದ್ದೆಯ ನೇಮಕಾತಿಯ ಅರ್ಹತೆ, ಪ್ರಕ್ರಿಯೆ ಮತ್ತು ಆಯ್ಕೆ ಮಾನದಂಡಗಳು, ಕಚೇರಿ ನಿಬಂಧನೆ ಹಾಗೂ ಕರ್ತವ್ಯಗಳು ಮತ್ತು ಕಾರ್ಯಗಳು ಅನ್ವಯವಾಗುತ್ತದೆ. (https://www.cioins.co.in/OmbudsmanRules2017).

ಈ ಕೆಳಗಿನ ವಿವರಗಳು ನಮ್ಮ https://www.cioins.co.in ವೆಬ್‌ಸೈಟ್‌ನಲ್ಲಿರುವ “ವೆಕನ್ಸೀಸ್ ಫಾರ್ ದಿ ಪೋಸ್ಟ್ ಆಫ್ ಇನ್ಶೂರನ್ಸ್ ಒಂಬಡ್ಸಮನ್–2025” ಶೀರ್ಷಿಕೆ ಅಡಿಯಲ್ಲಿ ಲಭ್ಯವಿರುತ್ತವೆ.

1. **“ನೋಟಿಫಿಕೇಶನ್” ಟ್ಯಾಬ್‌ನಲ್ಲಿ,** ಇನ್ಶೂರನ್ಸ್ ಒಂಬಡ್ಸಮನ್ ಹುದ್ದೆಯ ನೇಮಕಾತಿಗೆ ಸಂಬಂಧಿತ ವಿದ್ಯಾರ್ಹತೆ, ಸಂಭಾವನೆ, ಕಚೇರಿ ನಿಬಂಧನೆ ಮತ್ತು ಇನ್ನಿತರೆ ನಿಬಂಧನೆಗಳು ಲಭ್ಯವಿರುತ್ತದೆ.
2. **“ಆನ್‌ಲೈನ್ ಅಪ್ಲಿಕೇಶನ್ ಫಾರ ದಿ ಪೋಸ್ಟ್ ಆಫ್ ಇನ್ಶೂರನ್ಸ್ ಒಂಬಡ್ಸಮನ್–2025” ಟ್ಯಾಬ್‌ನಲ್ಲಿ** ಆನ್‌ಲೈನ್ ಅರ್ಜಿ ಸಲ್ಲಿಸುವ ಲಿಂಕ್ ದೊರೆಯುತ್ತದೆ.

ಅರ್ಜಿಯನ್ನು **ಆನ್‌ಲೈನ್** ವಿಧಾನದಲ್ಲಿ ಮಾತ್ರ ಸಲ್ಲಿಸತಕ್ಕದ್ದು. ಇನ್ನಿತರೆ ವಿಧಾನದಲ್ಲಿ ಸಲ್ಲಿಕೆಯಾಗುವ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

ಈ ಕುರಿತಂತೆ ಯಾವುದೇ ವಿಚಾರಣೆಗಳಿದ್ದಲ್ಲಿ, query-recruitment@cioins.co.in ವಿಳಾಸಕ್ಕೆ ಅಂತಹವುಗಳನ್ನು ಸಲ್ಲಿಸಬೇಕು.

ಆನ್‌ಲೈನ್ ಅರ್ಜಿ ಸ್ವೀಕರಿಸುವ ಕೊನೆಯ ದಿನಾಂಕ 07–03–2025 ರಂದು 17.30 ಗಂಟೆವರೆಗೆ (ಐಎಸ್‌ಟಿ) ಆಗಿರುತ್ತದೆ.

ಆನ್‌ಲೈನ್ ಅರ್ಜಿ ಅಥವಾ ಇನ್ನಿತರೆ ವಿವರಗಳಿಗಾಗಿ ದಯವಿಟ್ಟು ನಮ್ಮ www.cioins.co.in ವೆಬ್‌ಸೈಟ್‌ಗೆ ಭೇಟಿ ಕೊಡಿ ಅಥವಾ **ಕ್ಯೂಆರ್ ಕೋಡ್** ಸ್ಕ್ಯಾನ್ ಮಾಡಿರಿ.

CBC 15227/12/0005/2425 ಕಾರ್ಯದರ್ಶಿ (ಸಿಐಒ)

ASHA SCHOOL
(CENTRE FOR DIFFERENTLY ABLED CHILDREN), BANGALORE

Applications are invited from eligible candidates for filling up the post of **PRINCIPAL** of ASHA School, C/o HQ Karnataka & Kerala Sub Area, Cubbon Road, Bangalore - 01. Candidates who fulfill the following criteria may apply : -

S. No.	Post	No of Post	Qualification/ Experience	Age Limit	Honorarium per month
(a)	Principal	01	Post Graduate or Graduate plus B.Ed (General) in Special Education with 04 yrs experience or Diploma in Special Education with 06 yrs experience or BRS graduates with 05 yrs experience. M Ed in relevant special education field with 02 yrs experience or B.Ed in Special Education with 04 yrs experience or Diploma in Special Education with 06 yrs experience or BRS Gradauates with 05 yrs experience and with administrative experience of 03 yrs.	35-50 yrs	Rs 45,000

2. Candidates who fulfill the above criteria may forward their applications with Bio Data on email : ashaschoolblr@gmail.com and hard a copy via post by **20 Feb 2025.**
3. Contact address - **OIC, ASHA School**
HQ Karnataka & Kerala Sub Area, Cubbon Road, Bangalore - 560 001.
No : 080-25591999, Ph No : 9065522781

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಾರ್ಯಾಲಯ, ಬಾಗೇಪಲ್ಲಿ

ಶ್ರೀ ಸಾಯಿ ಕಾಂಪ್ಲೆಕ್ಸ್, ಷಾದಿ ಮಹಲ್ ಎದುರು, ಡಿ.ವಿ.ಜಿ.ರಸ್ತೆ, ಬಾಗೇಪಲ್ಲಿ, ಚಿಕ್ಕಬಳ್ಳಾಪುರ ಜಿಲ್ಲೆ.
ದೂರವಾಣಿ ಸಂಖ್ಯೆ:08150–295055, ಇ–ಮೇಲ್:cdpooffice_bagepalli@yahoo.in

ಟೆಂಡರ್ ಪ್ರಕಟಣೆ
ಟೆಂಡರ್ ಸಂಖ್ಯೆ: DWCD/2024-25/SE0416, ದಿನಾಂಕ:29.01.2025.

2024–25ನೇ ಸಾಲಿಗೆ ಬಾಗೇಪಲ್ಲಿ ತಾಲ್ಲೂಕು ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯ 384 ಅಂಗನವಾಡಿ ಕೇಂದ್ರಗಳ ತೂಕದ ಸಾಧನಗಳಾದ 25 ಕೆ.ಜಿ. ಸಾಮರ್ಥ್ಯದ ಸ್ಟ್ರಿಂಗ್ ಬ್ಯಾಲೆನ್ಸ್ ಸ್ಕೂಲ್, ವಯಸ್ಕರ ತೂಕ ಮಾಡುವ 150 ಕೆ.ಜಿ. ಸಾಮರ್ಥ್ಯದ ಡಿಜಿಟಲ್ ತೂಕದ ಸಾಧನ, ವಯಸ್ಕರ ತೂಕ ಮಾಡುವ 120 ಕೆ.ಜಿ. ಸಾಮರ್ಥ್ಯದ ತೂಕದ ಸಾಧನ ಹಾಗೂ ಆಹಾರ ಪದಾರ್ಥಗಳ ತೂಕದ ತಕ್ಕಡಿ ಮತ್ತು ಬಟ್ಟುಗಳು ದುರಸ್ಥಿ ಮಾಡಲು ಕಾನೂನು ಮಾಪನ ಶಾಸ್ತ್ರ ಇಲಾಖೆಯಿಂದ ಪರವಾನಗಿ ಪಡೆದಿರುವ ದುರಸ್ಥಿದಾರರು ಭಾಗವಹಿಸಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್ ಕರೆದಿದ್ದು, ಭಾಗವಹಿಸಲು ಇಚ್ಛಿಸುವ ದುರಸ್ಥಿದಾರರು ಟೆಂಡರ್‌ಗೆ ಸಂಬಂಧಪಟ್ಟ ಮಾಹಿತಿಯನ್ನು **https://kppp.karnataka.gov.in** ವೆಬ್‌ಸೈಟ್‌ನಲ್ಲಿ ಪರಿಶೀಲಿಸುವುದು ಹಾಗೂ ತಮ್ಮ ಅರ್ಜಿಗಳನ್ನು ಅಪ್ಲೋಡ್ ಮಾಡಬಹುದಾಗಿರುತ್ತದೆ. ಅರ್ಜಿ ಸಲ್ಲಿಸಲು **ಕೊನೆಯ ದಿನಾಂಕ: 15.02.2025ರ ಸಂಜೆ 5:00** ಗಂಟೆಯವರೆಗೆ, ಹೆಚ್ಚಿನ ಮಾಹಿತಿಗಾಗಿ **ದೂರವಾಣಿ ಸಂಖ್ಯೆ: 08150–295055** ಅಥವಾ ಶಿಶು ಅಭಿವೃದ್ಧಿ ಯೋಜನಾ ಕಛೇರಿ, ಬಾಗೇಪಲ್ಲಿ ಇಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ.

ಸಹಿ/– ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಬಾಗೇಪಲ್ಲಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:358/ಕೆಎಸ್‌ಎಂ.ಸಿ.ಎ/2024–25

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ

ಎಲ್.ಆರ್.ಡಿ.ಇ. ಕಟ್ಟಡ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು–560 052. ದೂರವಾಣಿ ಸಂಖ್ಯೆ: 22263479

ಸಂಖ್ಯೆ: STRRPA/TP/CLU/168/2024-25 ದಿನಾಂಕ: 04.02.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **“ವ್ಯವಸಾಯ”** ವಲಯದಿಂದ **“ವಸತಿ”** ಭೂಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತವೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ ಸಂ.	ಅರ್ಜಿದಾರರ ಹೆಸರು ಮತ್ತು ವಿಳಾಸ	ತಾಲ್ಲೂಕು	ಹೋಬಳಿ	ಗ್ರಾಮ	ಸರ್ವೆ ನಂ.	ವಿಸ್ತೀರ್ಣ ಎ–ಗುಂ	ಅನುಮೋದಿತ ಮಹಾ ಯೋಜನೆಯಂತೆ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	**ಶ್ರೀ ಅರಸೇಗೌಡ** ಬಿನ್ ಲೇಟ್ ಚನ್ನಪ್ಪ, ದೊಡ್ಡಬೆಳವಂಗಲ, ದೊಡ್ಡಬೆಳವಂಗಲ ಹೋಬಳಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.	ದೊಡ್ಡಬಳ್ಳಾಪುರ	ದೊಡ್ಡ ಬೆಳವಂಗಲ	ದೊಡ್ಡ ಬೆಳವಂಗಲ	119/3 120/2 122/7	2-27½ 1-00 1-28	ವ್ಯವಸಾಯ	ವಸತಿ

ಷರಾ: ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನಿನ ಪರಿಸರದಲ್ಲಿ ವಸತಿ ಬಡಾವಣೆಗಳು ಬಂದಿದ್ದು/ ಬರುತ್ತಿದ್ದು, ಜಮೀನಿನಲ್ಲಿ ಯೋಜಿತ ಬೆಳವಣಿಗೆಯ ವಿನ್ಯಾಸವನ್ನು ಅಭಿವೃದ್ಧಿಪಡಿಸಿ ಸಾರ್ವಜನಿಕರಿಗೆ ಕಡಿಮೆ ವೆಚ್ಚದಲ್ಲಿ ನಿವೇಶನಗಳನ್ನು ನೀಡುವ ಉದ್ದೇಶವನ್ನು ಹೊಂದಿರುತ್ತೇವೆ ಆದ್ದರಿಂದ ಸಾರ್ವಜನಿಕ ಹಿತಾಸಕ್ತಿ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **‘ವ್ಯವಸಾಯ ವಲಯ’** ದಿಂದ **‘ವಸತಿ’** ವಲಯಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ಸಾರ್ವಜನಿಕ ಹಿತಾಸಕ್ತಿ ಅಂಶವಾಗಿ ತಿಳಿಸಿರುತ್ತಾರೆ.

ಸಹಿ/–
ಸದಸ್ಯ ಕಾರ್ಯದರ್ಶಿಗಳು (ಅ.ಪ್ರ) ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು.

ವಾಸಾಸಂಇ/ವಾಪ್ರ/ಎಎಎ/4834/2024–25

ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರ

ಡಿ.ದೇವರಾಜ ಅರಸು ಬಡಾವಣೆ, ಟಮಕ ಕೋಲಾರ –563103. ದೂರವಾಣಿ ಸಂಖ್ಯೆ:08152–243142,
ಇಮೇಲ್:kudakolar@gmail.com.

ಸಂಖ್ಯೆ: ಕೋನಪ್ರಾಕೋ:ಭೂಉಬ:ಪ:ಪ್ರಕಟಣೆ:69:2024–25 ದಿನಾಂಕ: 04.02.2025

“ಸಾರ್ವಜನಿಕ ಪ್ರಕಟಣೆ”

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ಕಾಯ್ದೆ–1961ರ ಕಲಂ–14(ಎ) ರನ್ವಯ ಈ ಕೆಳಕಂಡ ಭೂಮಾಲೀಕರು ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆ(ಪ–1) (ಅಂತಿಮ)ರಲ್ಲಿ ಕೃಷಿ ವಲಯದಲ್ಲಿ ಕಾಯ್ದಿರಿಸಿರುವ ಜಮೀನನ್ನು ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಮಾಡುವ ಸಂಬಂಧ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. **ಹಾಗೂ** ಸದರಿ ಜಮೀನುಗಳಲ್ಲಿ **ವಾಣಿಜ್ಯ (ಹೋಟೇಲ್/ರೂಂಗಳು/ಮಳಿಗೆಗಳು)**ಉದ್ದೇಶಕ್ಕೆ ಅಭಿವೃದ್ಧಿಪಡಿಸಿ ಸ್ಥಳೀಯರಿಗೆ ಉದ್ಯೋಗಾವಕಾಶ ಕಲ್ಪಿಸುವ ಸಾರ್ವಜನಿಕ ಹಿತಾಸಕ್ತಿ ಹೊಂದಿರುವುದಾಗಿ ತಿಳಿಸಿರುತ್ತಾರೆ. ಆದುದರಿಂದ, ಅರ್ಜಿದಾರರ ಮನವಿಯಂತೆ, ಭೂ ಉಪಯೋಗ ಮಾಡುವ ಸಂಬಂಧ ಸಾರ್ವಜನಿಕರಿಂದ ಸಲಹೆ/ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿದೆ. ಈ ಸಂಬಂಧ ಸಲಹೆ/ಆಕ್ಷೇಪಣೆಗಳಿದಲ್ಲಿ ಈ ಪ್ರತಿಕಾ ಪ್ರಕಟಣೆಯಾದ 15 (ಹದಿನೈದು) ದಿನದೊಳಗೆ ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಕೋಲಾರ ಇವರಿಗೆ “ಲಿಖಿತ ರೂಪದಲ್ಲಿ ಖುದ್ದಾಗಿ, ಅಥವಾ ನೋಂದಾಯಿತ ಸ್ವೀಕೃತ ಅಂಚೆ” ಮೂಲಕ ಸಲ್ಲಿಸಲು ಕೋರಲಾಗಿದೆ. ನಿಗಧಿತ ದಿನಾಂಕದ ನಂತರ ಬಂದ ಆಕ್ಷೇಪಣಾ ಅರ್ಜಿಗಳನ್ನು ಈ ಕಛೇರಿಯಲ್ಲಿ ಪರಿಗಣಿಸಲಾಗುವುದಿಲ್ಲ.

ಕ್ರ ಸಂ	ಅರ್ಜಿದಾರರ ಹೆಸರು	ಹೋಬಳಿ	ಗ್ರಾಮ	ಸ.ನಂ	ವಿಸ್ತೀರ್ಣ ಎ–ಗುಂ	ಚೆಕ್ಕುಬಂಧಿ: ಉತ್ತರ	ಚೆಕ್ಕುಬಂಧಿ: ದಕ್ಷಿಣ	ಚೆಕ್ಕುಬಂಧಿ: ಪೂರ್ವ	ಚೆಕ್ಕುಬಂಧಿ: ಪಶ್ಚಿಮ	ಮಹಾ ಯೋಜನೆ ಕಾಯ್ದಿರಿಸಿರುವ ಭೂ ಉಪ ಯೋಗ	ಭೂ ಉಪ ಯೋಗ ಬದಲಾವಣೆಗೆ ಕೋರಿರುವ ಉದ್ದೇಶ
1	ಬಿ.ಸಿ.ಭರತ್ ಭೂಷಣ್ ಬಿನ್ ಬಿ.ಎಂ.ಚನ್ನಪ್ಪ ಮತ್ತು ಗೀತಾ ಭೂಷಣ್ ಕೋಂ ಬಿ.ಸಿ ಭರತ್ ಭೂಷಣ್	ವಕ್ಕಲೇರಿ	ಚೌಡದೇನ ಹಳ್ಳಿ	45/3 ಮತ್ತು 45/6	01–25.12 ಮತ್ತು 01–07 ಒಟ್ಟು 02ಎ–32.12	ರಾಷ್ಟ್ರೀಯ ಹೆದ್ದಾರಿ	ಲಾ.ಹಿ–2	ಲಾ.ಸ.ನಂ:4 ಮತ್ತು ಲಾ.ಸ.ನಂ:46	ಲಾ.ಸ. ನಂ:37	ಕೃಷಿ 14(ಎ)	ವಾಣಿಜ್ಯ (ಹೋಟೇಲ್/ ರೂಂಗಳು/ ಮಳಿಗೆಗಳು)

ಸಹಿ/– ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:439/ಕೆಎಸ್‌ಎಂಸಿಎ/2024–25

ನೈಋತ್ಯ ರೈಲ್ವೆ

ಇ–ಟೆಂಡರು ಸೂಚನೆ ಸಂ. 40 UBL 2024-25
ದಿನಾಂಕ: 31.01.2025

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರ.ಸಂ.	ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
1	ಹುಬ್ಬಳ್ಳಿ ವಿಭಾಗ: **ದಕ್ಷಿಣ ಹುಬ್ಬಳ್ಳಿ – ಕರಜಗಿ (ಎಸ್‌ಯುಬಿಎಲ್–ಕೆಜೆಜಿ) ವಿಭಾಗ:** 12.8 ಕಿಮೀ. ಉದ್ದಕ್ಕೆ ಪ್ರೀಕಾಸ್ಟ್ ಆರ್‌ಸಿಸಿ ಬೌಂಡರಿ ಗೋಡೆಯ ನಿರ್ಮಾಣ ಕಾಮಗಾರಿಗಳು. (ಎರಡು ಪ್ಯಾಕೆಟ್ ಸಿಸ್ಟಮ್).	ರೂ. 15,77,05,924.00
2	ಹುಬ್ಬಳ್ಳಿ ವಿಭಾಗ: ವರಿಷ್ಠ ವಿಭಾಗೀಯ ಇಂಜಿನಿಯರ್ / ಕೇಂದ್ರೀಯ / ಹುಬ್ಬಳ್ಳಿ ವ್ಯಾಪ್ತಿ ಪ್ರದೇಶದಲ್ಲಿರುವ ಕುಸುಗಲ್ ಡಿಪೋನಲ್ಲಿ ಬಾಲಾಸ್ಟ್‌ಗಳ ಪೂರೈಕೆ (**ಸೂಚನೆ: ಬಾಲಾಸ್ಟ್ ಪ್ರಮಾಣ ಪತ್ರ**)	ರೂ. 5,46,19,688.00
3	ಹುಬ್ಬಳ್ಳಿ ವಿಭಾಗ: **ಗದಗ – ಹೊಟಗಿ (ಜಿಡಿಜಿ – ಹೆಚ್‌ಜಿ) ವಿಭಾಗ:** ಬಾಕ್ಸ್ ಪುಶಿಂಗ್ ಮಾದರಿಯಲ್ಲಿ ಇಂಡಿ ರೋಡ್ – ಲಾಹ್ಯಾನ್ (ಐಡಿಆರ್–ಎಲ್‌ಹೆಚ್‌ಎನ್) ನಡುವೆ ಕಿಮೀ. 243/7–8 ರಲ್ಲಿ ಎಲ್‌ಸಿ ಸಂ. 110 ಗೆ ಬದಲಾಗಿ ನಿಯಮಿತ ಎತ್ತರದ ಸಬ್‌ವೇಯ ನಿರ್ಮಾಣ ಕಾರ್ಯ (ಎರಡು ಪ್ಯಾಕೆಟ್ ಸಿಸ್ಟಮ್).	ರೂ. 9,98,28,063.00

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ:
03.03.2025, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಇಂಜಿನಿಯರ್/ಸಂಯೋಜನೆ
ಹುಬ್ಬಳ್ಳಿ

PUB/760/AAMO/PRB/SWR/2024-25

South Western Railway - SWR | @SWRRLY | SWRRLY

PUBLIC NOTICE

The General Public are hereby informed that my client **Smt. UMA V.,** aged about 49 years, W/o Srinivas M., R/at No. 14, Kalpavruksha Nilaya, 5th Cross, Maruthi layout, Bhuvaneshwarinagar, Dasarahalli Main Road, Hebbal Kempapura, Bangalore – 560 024 has intended to purchase, **Residential Property bearing Site No. 459, Katha No. 400/399/459, situated at “COFFEE BOARD LAYOUT”, Kempapura Village, Yelahanka Hobli, Bangalore North Taluk, Bengaluru,** morefully described in the Schedule hereunder for valuable consideration from **Smt. UMA K.,** Aged about 50 years, W/o Late Bhaskar @ Bhaskar Raju. Any person/s objecting for the proposed purchase or having any right in the Schedule Property may lodge their objections and/ or claims to the undersigned along with the supporting documentary evidences within 07 (Seven) days from the date of this publication, and any objections or claims received thereafter will not be taken for consideration and my client will proceed to purchase the Schedule Property as if there are no claimant/s or objections from any person/s.

SCHEDULE PROPERTY

All that piece and parcel of property bearing **Residential Property bearing Site No. 459, Katha No. 400/399/459, situated at “COFFEE BOARD LAYOUT”, Kempapura Village, Yelahanka Hobli, Bangalore North Taluk, Bengaluru, layout formed by “The Coffee Board, Employees Co-operative Housing Society Limited” in Land bearing Sy. Nos. 10/3, 10/4, 11/1, 11/2, 12/2, 12/6, 13/1, 13/4, 13/5, 14/1, 14/2, 15/1, 15/2, 15/4, 16/1, 16/2, 17/1A, 17/1B & 18/2, 18/3 of Kempapura Village, Yelahanka Hobli, Bangalore North Taluk, Bengaluru, approved by Bangalore Development Authority vide letter No. BDA/TDM/DDE/1264 dated 09/11/1992, measuring East to West: 9.14 Meters or 30 Feet & North to South: 15.23 Meters or 50 Feet, in all measuring 139.21 Square Meters or 1500 Square Feet, presently within the jurisdiction of BBMP Ward No.7- Byatarayanapura** and bounded by: **East by :** Site No. 458, **West by :** Site No.460, **North by :** Road, **South by** : Site No. 450.

Dt:05/02/2025
Bangalore

RAGHAVENDRA .C, Advocate
No. 109, 1st Floor, SSI Area, 5th Block,
Rajajinagar, Bangalore – 560 010.
Mob: 9845089883, Email: rag2012hu@gmail.com

‘ಕುವೆಂಪು ಸಾಹಿತ್ಯ ದರ್ಶನ’ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ರಹಮತ್ ತರೀಕೆರೆ

ಚಿಂತನೆ ನಡೆಸುವುದು ಕೊಲೆಗೆ ಆಹ್ವಾನಿಸಿದಂತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಚಾರವಾದ ಎಂಬ ಶಬ್ದವನ್ನೇ ಅಶ್ಲೀಲ ಮಾಡಲಾಗಿದೆ. ಚಿಂತನೆ, ವಿಚಾರ, ವಿಮರ್ಶೆ ಮಾಡುವುದು ಎಂದರೆ ಕೊಲೆಗೆ ಆಹ್ವಾನ ನೀಡಿದಂತೆ ಎಂಬ ಸನ್ನಿವೇಶ ಸೃಷ್ಟಿಯಾಗಿದೆ ಎಂದು ಸಂಸ್ಕೃತಿ ಚಿಂತಕ ರಹಮತ್ ತರೀಕೆರೆ ಕಳವಳ ವ್ಯಕ್ತಪಡಿಸಿದರು.

ಬೆಂಗಳೂರು ನಗರ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ವಿಭಾಗ ಹಮ್ಮಿಕೊಂಡಿದ್ದ ‘ಕುವೆಂಪು ಸಾಹಿತ್ಯ ದರ್ಶನ’ ಕುರಿತ ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಬುಧವಾರ ಅವರು ಮಾತನಾಡಿದರು.

> **ನವ್ಯದ ಕಾಲದಲ್ಲಿ ಕುವೆಂಪು ಅವರ ಸಾಹಿತ್ಯವನ್ನು ಕಡೆಗಣಿಸುವ ಪ್ರಯತ್ನ ನಡೆದರೂ ಅವರ ಸಾಹಿತ್ಯದ ಘನತೆ ಮತ್ತು ಮೌಲ್ಯ ಕುಗ್ಗಿಸಲು ಆಗಲಿಲ್ಲ**
> **ತಾರಕೇಶ್ವರ ವಿ.ಬಿ.,** ಪ್ರಾಧ್ಯಾಪಕ, ಇಂಗ್ಲಿಷ್ ಮತ್ತು ವಿದೇಶಿ ಭಾಷೆಗಳ ವಿಶ್ವವಿದ್ಯಾಲಯ

> **ಕನ್ನಡದಲ್ಲಿ ದರ್ಶನ, ಚಿಂತನ, ವರ್ಣನಾ ಕ್ರಮದಲ್ಲಿ ಆಧುನಿಕ ವಿಮರ್ಶೆಯು ರಾಷ್ಟ್ರಕವಿ ಕುವೆಂಪು ಅವರಿಂದ ಆರಂಭವಾಯಿತು**
> **ಎಸ್.ಆರ್. ವಿಜಯಶಂಕರ್** ವಿಮರ್ಶಕ

> **ವೈಜ್ಞಾನಿಕ ಮನೋಭಾವ, ವೈಚಾರಿಕ ದೃಷ್ಟಿಕೋನ, ಅಧ್ಯಾತ್ಮ ಸಮ್ಮಿಲನದ ಸರ್ವೋದಯ, ಸಮನ್ವಯ ಜೀವನ ತತ್ವಗಳು ಕುವೆಂಪು ನೀಡಿದ ಬೆಳಕು**
> **ಲಿಂಗರಾಜ ಗಾಂಧಿ, ಕುಲಪತಿ** ಬೆಂಗಳೂರು ನಗರ ವಿಶ್ವವಿದ್ಯಾಲಯ

> **ಭಾರತದ ಸಂವಿಧಾನವನ್ನು ಅರ್ಥ ಮಾಡಿಕೊಳ್ಳಲು ಮಾನಸಿಕ ಸಿದ್ಧತೆಯನ್ನು ಕುವೆಂಪು ಸಾಹಿತ್ಯವು ನೀಡಿದೆ**
> **ಕೆ.ವೈ. ನಾರಾಯಣಸ್ವಾಮಿ** ಪ್ರಾಧ್ಯಾಪಕ, ಬೆಂಗಳೂರು ಸರ್ಕಾರಿ ಕಲಾ ಕಾಲೇಜು

‘ಸಮಾಜವನ್ನು ವಿಮೋಚನಾ ಸಮಾಜವನ್ನಾಗಿ ಮಾಡಲು ಬುದ್ಧ, ಚಾರ್ವಾಕ, ಶರಣರು, ಕುವೆಂಪು, ಪೆರಿಯಾರ್, ಅಂಬೇಡ್ಕರ್ ಸಹಿತ ಚಿಂತನೆ ನಡೆಸಿದ ದೊಡ್ಡ ಪರಂಪರೆಯೇ ನಮಗಿದೆ. ಪ್ರತಿಗಾಮಿಗಳು ಆಗಲೂ ಇದ್ದರು. ಆದರೆ, ಬರಹಗಾರರು, ಚಿಂತಕರು ಪೊಲೀಸ್ ರಕ್ಷಣೆಯಲ್ಲಿ ಬದುಕಬೇಕಾದ ಪರಿಸ್ಥಿತಿ ಆಗ ಇರಲಿಲ್ಲ’ ಎಂದು ತಿಳಿಸಿದರು.

‘ಸಮಾಜದಲ್ಲಿ ಸ್ಥಾಪಿತ ಹಿತಾಸಕ್ತಿ ಇದೆ. ಅದರ ವಿರುದ್ಧ ಸಮಾನತೆಗಾಗಿ ಹೋರಾಟ ನಡೆಸುವುದು, ದಮನಿತರ ಪರವಾಗಿ ಅನುಭೂತಿ, ಪ್ರೀತಿಯೊಂದಿಗೆ ಒಳಗೊಳ್ಳುವುದು, ವಿಮೋಚಿತ ಸಮಾಜವನ್ನು ನಿರ್ಮಾಣ ಮಾಡುವುದು ಬುದ್ಧನಿಂದ ಹಿಡಿದು ಕುವೆಂಪುವರೆಗೆ ಎಲ್ಲ ಕ್ರಾಂತಿಕಾರಿಗಳ ಲಕ್ಷಣವಾಗಿತ್ತು. ಸಮಾಜದಲ್ಲಿ ಕೆಲವು ಕೊರತೆಗಳಿವೆ. ಅದನ್ನು ಸರಿಪಡಿಸಬೇಕು ಎಂಬುದು ಅವರ ಚಿಂತನೆಯಾಗಿತ್ತು. 20ನೇ ಶತಮಾನವು ಇಂಥ ಚಿಂತನೆಗಳಿಂದ ಝಗಮಗಿಸಿತ್ತು. 21ನೇ ಶತಮಾನದಲ್ಲಿ ಮಹಾಜ್ಞಾನವಿರೋಧಿ ಸಮಾಜವಾಗಿ ಭಾರತ ರೂಪುಗೊಳ್ಳುತ್ತಿದೆ’ ಎಂದು ಬೇಸರಿಸಿದರು.

ಕಾಲೇಜುಗಳಲ್ಲಿ ಅಧ್ಯಾಪಕರಿಗೆ ವಿದ್ಯಾರ್ಥಿಗಳೇ ಶತ್ರುಗಳಾಗಿದ್ದಾರೆ. ತರಗತಿಗಳು ಗೂಢಚಾರ ತಾಣಗಳಾಗಿವೆ. ರಾಜಕಾರಣಿಗಳು ಧಾರ್ಮಿಕ ನಾಯಕರಂತೆ ಮಾತನಾಡುತ್ತಿದ್ದಾರೆ. ಧಾರ್ಮಿಕ ಗುರುಗಳು ರಾಜಕೀಯ ಹೇಳಿಕೆ ನೀಡುತ್ತಿದ್ದಾರೆ ಎಂದರು.

ಉದ್ಘಾಟನೆ: ವಿಚಾರ ಸಂಕಿರಣವನ್ನು ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಲಿಂಗರಾಜ ಗಾಂಧಿ ಉದ್ಘಾಟಿಸಿದರು. ಕಲಾನಿಕಾಯದ ಡೀನ್ ಜ್ಯೋತಿ ವೆಂಕಟೇಶ್ ಅಧ್ಯಕ್ಷತೆ ವಹಿಸಿದ್ದರು. ಕುಲಸಚಿವ ಟಿ. ಜವರೇಗೌಡ, ಕನ್ನಡ ಅಧ್ಯಯನ ವಿಭಾಗದ ಮುಖ್ಯಸ್ಥ ತಾಂಡವಗೌಡ, ಸಿಂಡಿಕೇಟ್ ಸದಸ್ಯೆ ಆಯೇಷಾ ಫರ್ಝಾನ, ಪ್ರಾಧ್ಯಾಪಕರಾದ ಗೀತಾ ವಸಂತ, ಮೇಟಿ ಮಲ್ಲಿಕಾರ್ಜುನ ಭಾಗವಹಿಸಿದ್ದರು.

‘ಕುವೆಂಪು ಸಾಹಿತ್ಯ ದರ್ಶನ’ ಕುರಿತ ಎರಡು ದಿನಗಳ ರಾಷ್ಟ್ರೀಯ ವಿಚಾರಸಂಕಿರಣದ ಉದ್ಘಾಟನಾ ಸಮಾಂಭದಲ್ಲಿ ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಲಿಂಗರಾಜ ಗಾಂಧಿ ಅವರು ಕುವೆಂಪು ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ಕನ್ನಡ ಅಧ್ಯಯನ ವಿಭಾಗದ ಮುಖ್ಯಸ್ಥ ಬಿ.ಎನ್. ತಾಂಡವಗೌಡ, ಕಲಾ ನಿಕಾಯದ ಡೀನ್ ಜ್ಯೋತಿ ವೆಂಕಟೇಶ್, ಬೆಂಗಳೂರು ಸರ್ಕಾರಿ ಕಲಾ ಕಾಲೇಜು ಪ್ರಾಧ್ಯಾಪಕ ಕೆ.ವೈ. ನಾರಾಯಣಸ್ವಾಮಿ ಮತ್ತು ಕುಲಸಚಿವ (ಆಡಳಿತ) ಟಿ. ಜವರೇಗೌಡ ಉಪಸ್ಥಿತರಿದ್ದರು

ಪ್ರಜಾವಾಣಿ ಚಿತ್ರ

ಶೇಖ್ ಹಸೀನಾ ತಂದೆ ನಿವಾಸ ಧ್ವಂಸಕ್ಕೆ ಯತ್ನ

ಢಾಕಾ(ಎಎಫ್‌ಪಿ): ಪದಚ್ಯುತ ಪ್ರಧಾನಿ ಶೇಖ್ ಹಸೀನಾ ಅವರ ತಂದೆ ಶೇಖ್ ಮುಜಿಬುರ್ ರೆಹಮಾನ್ ಅವರ ನಿವಾಸವನ್ನು ಪ್ರತಿಭಟನಕಾರರು ಬುಧವಾರ ಧ್ವಂಸಗೊಳಿಸಲು ಯತ್ನಿಸಿದ್ದಾರೆ.

ಸದ್ಯ ಈ ಕಟ್ಟಡವನ್ನು ವಸ್ತು ಸಂಗ್ರಹಾಲಯವನ್ನಾಗಿ ಮಾಡಲಾಗಿದೆ.

ಶೇಖ್ ಹಸೀನಾ ಅವರು ಫೇಸ್‌ಬುಕ್ ಮೂಲಕ ತಮ್ಮ ಬೆಂಬಲಿಗರನ್ನು ಉದ್ದೇಶಿಸಿ ಮಾತನಾಡುತ್ತಿದ್ದರು. ಇದನ್ನು ಪ್ರತಿಭಟಿಸಿ, ತಾರತಮ್ಯ ವಿರೋಧಿ ವಿದ್ಯಾರ್ಥಿಗಳ ಚಳವಳಿ (ಎಡಿಎಸ್‌ಎಂ) ಸಂಚಾಲಕ ಹಸ್ನತ್ ಅಬ್ದುಲ್ಲಾ ಅವರು ಪ್ರತಿಭಟನೆಗೆ ಕರೆ ನೀಡಿದ್ದಾರೆ.

ಆಗ, ಸುತ್ತಿಗೆಗಳೊಂದಿಗೆ ಕಟ್ಟಡದತ್ತ ನುಗ್ಗಿದ ಪ್ರತಿಭಟನಕಾರರು, ಅದನ್ನು ಧ್ವಂಸಗೊಳಿಸಲು ಯತ್ನಿಸಿದ್ದಾರೆ. ಕೆಲವರು ಕಟ್ಟಡಕ್ಕೆ ಬೆಂಕಿ ಹಚ್ಚಿದ್ದಾರೆ.

ಕೊಲೆ ಪ್ರಕರಣ: ಮೂವರಿಗೆ ಏಳು ವರ್ಷ ಜೈಲು ಶಿಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋರಮಂಗಲದ ರಾಜೇಂದ್ರನಗರದ ನಿವಾಸಿ ಜಾವೀದ್ ಅವರ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರು ಅಪರಾಧಿಗಳಿಗೆ ಇಲ್ಲಿನ ಸಿಸಿಎಚ್ 64ನೇ ನ್ಯಾಯಾಲಯವು ಏಳು ವರ್ಷ ಜೈಲು ಶಿಕ್ಷೆ ವಿಧಿಸಿದೆ.

ಅಜಿತ್ ಕುಮಾರ್, ಅಜಿತ್ ಕೌರ್, ರಾಹುಲ್ ರಾಜ್ ಶಿಕ್ಷೆಗೆ ಒಳಗಾದವರು.

ಅಪರಾಧಿಗಳಿಗೆ ಶಿಕ್ಷೆಯ ಜತೆಗೆ ₹50 ಸಾವಿರ ದಂಡ ವಿಧಿಸಲಾಗಿದೆ. ಆ ಹಣವನ್ನು ಕೊಲೆಯಾದ ವ್ಯಕ್ತಿಯ ಪೋಷಕರಿಗೆ ನೀಡುವಂತೆ ನ್ಯಾಯಾಧೀಶ ಈರಪ್ಪನ್ ಪಿ.ನಾಯಕ್ ಆದೇಶಿಸಿದ್ದಾರೆ.

2018ರ ಮೇ 19ರಂದು ರಾತ್ರಿ 7.45ರ ಸುಮಾರಿಗೆ ರಾಜೇಂದ್ರನಗರದ ಆರನೇ ಅಡ್ಡರಸ್ತೆಯಲ್ಲಿರುವ ಅಫ್ರೋಜ್ ಮೊಬೈಲ್ ಮಳಿಗೆ ಎದುರಿಗಿದ್ದ ಹೋಟೆಲ್‌ನಲ್ಲಿ ಟೀ ಕುಡಿಯಲು ಸ್ನೇಹಿತರ ಜತೆಗೆ ಜಾವೀದ್ ತೆರಳಿದ್ದರು. ಅದೇ ಸಮಯದಲ್ಲಿ ಟೀ ಕುಡಿಯಲು ಅಪರಾಧಿಗಳೂ ಬಂದಿದ್ದರು. ಸಿಗರೇಟ್ ಸೇದುತ್ತಿದ್ದ ಅಪರಾಧಿಗಳ ಪೈಕಿ ಅಜಿತ್‌ಕುಮಾರ್ ಎಂಬಾತ ಜಾವೀದ್ ಮುಖಕ್ಕೆ ಹೊಗೆ ಬಿಟ್ಟಿದ್ದ. ಸ್ವಲ್ಪ ದೂರಕ್ಕೆ ತೆರಳಿ, ಸಿಗರೇಟ್ ಸೇದುವಂತೆ ಜಾವೀದ್ ಹೇಳಿದ್ದರು. ಇದರಿಂದ ಕುಪಿತಗೊಂಡಿದ್ದ ಅಪರಾಧಿಗಳು, ಜಾವೀದ್ ಮೇಲೆ ಹಲ್ಲೆ ನಡೆಸಿ ತೆರಳಿದ್ದರು.

ಘಟನೆ ನಡೆದ ಕೆಲವು ದಿನಗಳ ಬಳಿಕ ಜಾವೀದ್ ಅವರು ರಾಜೇಂದ್ರನಗರದ ಮದೀನಾ ಮಸೀದಿಯಲ್ಲಿ ಪ್ರಾರ್ಥನೆ ಮುಗಿಸಿಕೊಂಡು ರಾತ್ರಿ 10.30ರ ಸುಮಾರಿಗೆ ಆಡುಗೋಡಿ ಪೊಲೀಸ್ ಠಾಣಾ ವ್ಯಾಪ್ತಿಯ ರಸ್ತೆಯಲ್ಲಿ ನಡೆದು ತೆರಳುತ್ತಿದ್ದರು. ಆ ಸಂದರ್ಭದಲ್ಲಿ ಬೈಕ್‌ನಲ್ಲಿ ಬಂದಿದ್ದ ಅಪರಾಧಿಗಳು, ಜಾವೀದ್‌ಗೆ ಚಾಕುವಿನಿಂದ ಇರಿದು ಕೊಲೆ ಮಾಡಿದ್ದರು. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ್ದ ಪೊಲೀಸರು ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ನ್ಯಾಯಾಲಯದಲ್ಲಿ ವಾದ–ಪ್ರತಿವಾದ ಆಲಿಸಿ ಶಿಕ್ಷೆ ವಿಧಿಸಿ ಆದೇಶಿಸಿದೆ.

ಸರ್ಕಾರಿ ವಕೀಲ ಶರಣಗೌಡ ವಿ. ಪಾಟೀಲ್ ಪ್ರಾಸಿಕ್ಯೂಷನ್ ಪರ ವಾದ ಮಂಡಿಸಿದ್ದರು.

ಬಂಜಾರ ವಿಶ್ವಕೋಶ, ವಿಶ್ವ ಸಮ್ಮೇಳನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಂಜಾರ ಸಂಸ್ಕೃತಿ, ಆಚರಣೆ, ಸಾಹಿತ್ಯ, ಜೀವನ ವಿಧಾನ ಸೇರಿ ಸಮಗ್ರ ಮಾಹಿತಿ ಒಳಗೊಂಡ ಬಂಜಾರ ವಿಶ್ವಕೋಶವನ್ನು ರಚಿಸಲಾಗುವುದು. ಮುಂದಿನ ವರ್ಷ ಬಂಜಾರ ವಿಶ್ವ ಸಮ್ಮೇಳನ ನಡೆಸಲು ನಿರ್ಧರಿಸಲಾಗಿದೆ’ ಎಂದು ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ ಅಧ್ಯಕ್ಷ ಎ.ಆರ್. ಗೋವಿಂದಸ್ವಾಮಿ ತಿಳಿಸಿದರು.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ವಿಶ್ವಕೋಶ ರಚನೆ ಸಂಬಂಧ ಸಾಹಿತಿಗಳಾದ ಬರಗೂರು ರಾಮಚಂದ್ರಪ್ಪ, ನಾಗಣ್ಣ, ಶ್ರೀದೇವಿ, ಸಣ್ಣರಾಮ ಹಾಗೂ ಕಾ.ತ. ಚಿಕ್ಕಣ್ಣ ಅವರನ್ನು ಒಳಗೊಂಡ ಸಲಹಾ ಸಮಿತಿ ರಚಿಸಲಾಗಿದೆ. ಈಗಾಗಲೇ ಈ ಸಲಹಾ ಸಮಿತಿಯು ಒಂದು ಸಭೆ ನಡೆಸಿದೆ. ಬೃಹತ್ ವಿಶ್ವಕೋಶ ಹೊರತರಲು ಅಂದಾಜು ₹ 8 ಕೋಟಿ ಅಗತ್ಯವಿದೆ. ಇದು ಐದು ವರ್ಷಗಳ ಯೋಜನೆ ಆಗಿದೆ. ಇದಕ್ಕೆ ಅಗತ್ಯ ಅನುದಾನ ಒದಗಿಸುವಂತೆ ರಾಜ್ಯ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗುವುದು’ ಎಂದು ಹೇಳಿದರು.

‘ಈ ವರ್ಷ ರಾಜ್ಯ ಮಟ್ಟದ ಬಂಜಾರ ಸಂಸ್ಕೃತಿ ಉತ್ಸವ ನಡೆಸಲಾಗುವುದು. ಮುಂದಿನ ವರ್ಷ ಬಂಜಾರ ವಿಶ್ವ ಸಮ್ಮೇಳನ ಆಯೋಜಿಸಲು ಮುಂದಾಗಿದ್ದೇವೆ. ಇದಕ್ಕೆ ಹೆಚ್ಚಿನ ಅನುದಾನ ಅಗತ್ಯವಿದೆ. ಈ ಬಾರಿಯ ಬಜೆಟ್‌ನಲ್ಲಿ ₹ 2.40 ಕೋಟಿ ಅನುದಾನ ಒದಗಿಸುವಂತೆ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದ್ದೇವೆ. ಬಂಜಾರ ಡಿಜಿಟಲ್ ಪದಕೋಶ ಹೊರತರಲು ಕೂಡ ಯೋಜನೆ ರೂಪಿಸಿದ್ದೇವೆ’ ಎಂದರು.

ರಾಜ್ಯ ಸರ್ಕಾರಕ್ಕೆ 'ನಾಲ್ಕು ಆಯ್ಕೆ'ಗಳ ಪ್ರಸ್ತಾವ ಸಲ್ಲಿಸಿದ ಬೆಂಗಳೂರು ಜಲಮಂಡಳಿ

ನೀರಿನ ದರ ಲೀಟರ್‌ಗೆ 0.8–1.50 ಪೈಸೆ ಹೆಚ್ಚಳ?

ಪ್ರಸ್ತುತ ಜಾರಿಯಲ್ಲಿರುವ ದರ

ಯಾವುದು	ಪ್ರತಿ ಸಾವಿರ ಲೀಟರ್‌ಗೆ ದರ (₹ಗಳಲ್ಲಿ)
ಗೃಹಬಳಕೆ	7ರಿಂದ 45
ಗೃಹ ಬಳಕೆ (ಗಗನ ಚುಂಬಿ ಕಟ್ಟಡಗಳು)	22 (ದೊಡ್ಡ ಪ್ರಮಾಣದಲ್ಲಿ)
ಗೃಹಯೇತರ ಬಳಕೆ	50ರಿಂದ 87
ಕೈಗಾರಿಕೆಗಳು	90
ಒಳಚರಂಡಿ	ನೀರಿನ ದರದ ಶೇ 25
ತಿಂಗಳಿಗೆ ಆದಾಯ (₹ ಕೋಟಿಗಳಲ್ಲಿ)	119.60
ವಾರ್ಷಿಕ ಆದಾಯ (₹ ಕೋಟಿಗಳಲ್ಲಿ)	1,435.20

ಜಲಮಂಡಳಿ ಸಲ್ಲಿಸಿರುವ ಪ್ರಸ್ತಾವದಲ್ಲಿರುವ 'ಆಯ್ಕೆ-4'

ಯಾವುದಕ್ಕೆ	ಪ್ರಸ್ತಾಪಿತ ಹೆಚ್ಚಳ (ಪ್ರತಿ ಲೀಟರ್‌ಗೆ)	ಪ್ರತಿ 1,000 ಲೀಟರ್‌ಗೆ ಪರಿಷ್ಕೃತ ದರ
ಗೃಹಬಳಕೆ	0.8 ಪೈಸೆಯಿಂದ 1.50 ಪೈಸೆ	₹15ರಿಂದ 60
ಗೃಹ ಬಳಕೆ (ಗಗನ ಚುಂಬಿ ಕಟ್ಟಡಗಳು)	1.80 ಪೈಸೆಯಿಂದ 3.80 ಪೈಸೆ	₹40ರಿಂದ 60
ಗೃಹಯೇತರ ಬಳಕೆ	1 ಪೈಸೆಯಿಂದ 1.50 ಪೈಸೆ	₹65ರಿಂದ ₹100
ಕೈಗಾರಿಕೆಗಳು	1 ಪೈಸೆ	₹100
ಒಳಚರಂಡಿ	ನೀರಿನ ದರದ ಶೇ 60	
ತಿಂಗಳಿಗೆ ಆದಾಯ (₹ ಕೋಟಿಗಳಲ್ಲಿ) 207.29		
ವಾರ್ಷಿಕ ಆದಾಯ (₹ ಕೋಟಿಗಳಲ್ಲಿ) 2,487.48		

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುಡಿಯುವ ನೀರಿನ ದರ ಹೆಚ್ಚಳಕ್ಕೆ ನಾಲ್ಕು ಆಯ್ಕೆಗಳಿರುವ ಪ್ರಸ್ತಾವವನ್ನು ಸರ್ಕಾರದ ಮುಂದಿಟ್ಟಿರುವ ಬೆಂಗಳೂರು ಜಲಮಂಡಳಿಯು, ಪ್ರತಿ ಲೀಟರ್‌ಗೆ 0.8 ಪೈಸೆಯಿಂದ 1.50 ಪೈಸೆ ಹೆಚ್ಚಿಸುವ ಪ್ರಸ್ತಾವ ಹೆಚ್ಚು ಸೂಕ್ತ ಎಂಬ ಅಭಿಪ್ರಾಯವನ್ನೂ ನೀಡಿದೆ. ಈ ಆಯ್ಕೆಗೆ ರಾಜ್ಯ ಸರ್ಕಾರ ಅನುಮೋದನೆ ನೀಡುವ ಸಾಧ್ಯತೆಯಿದೆ.

ಸದ್ಯದ ನೀರಿನ ದರದಿಂದ ತಿಂಗಳಿಗೆ ₹119.60 ಕೋಟಿಯಂತೆ ವಾರ್ಷಿಕ ₹1,435.20 ಕೋಟಿ ಸಂಗ್ರಹ ವಾಗುತ್ತಿದೆ. ಮಂಡಳಿಗೆ ವರ್ಷಕ್ಕೆ ಸದ್ಯ ₹1 ಸಾವಿರ ಕೋಟಿ ನಷ್ಟವಾಗುತ್ತಿದೆ. ರಾಜ್ಯ ಸರ್ಕಾರ ನಾಲ್ಕನೇ ಆಯ್ಕೆಗೆ ಅನುಮೋದನೆ ನೀಡಿದರೆ ತಿಂಗಳಿಗೆ ₹207.29 ಕೋಟಿಯಂತೆ ವಾರ್ಷಿಕ ಒಟ್ಟು ₹2,487.48 ಕೋಟಿ ಸಂಗ್ರಹ ವಾಗಲಿದೆ ಎಂದು ಪ್ರಸ್ತಾವದಲ್ಲಿ ಮಂಡಳಿ ಹೇಳಿದೆ. ಇದರಿಂದ ವಾರ್ಷಿಕ ₹1,052.28 ಕೋಟಿ ಹೆಚ್ಚುವರಿ ಸಂಗ್ರಹ ಆಗಲಿದೆ.

ಮಂಡಳಿಯ ಅಧಿಕಾರಿಗಳ ಜೊತೆ ಇತ್ತೀಚೆಗೆ ಸಭೆ ನಡೆಸಿದ್ದ ಬೆಂಗಳೂರು ಅಭಿವೃದ್ಧಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, 'ಕುಡಿಯುವ ನೀರಿನ ದರ ಹೆಚ್ಚಿಸಲು ನಿರ್ಧರಿಸಲಾಗಿದೆ. ದರ ಹೆಚ್ಚಳ ಪ್ರಮಾಣವನ್ನು ಅಧಿಕಾರಿಗಳು ನೀಡುವ ವರದಿ ಆಧಾರದಲ್ಲಿ ತೀರ್ಮಾನಿಸ ಲಾಗುವುದು' ಎಂದು ಹೇಳಿದ್ದರು.

ಮಂಡಳಿಯು ಸರ್ಕಾರಕ್ಕೆ ಸಲ್ಲಿಸಿದ್ದ ಪ್ರಸ್ತಾವವನ್ನು ಅನುಮೋದನೆಗಾಗಿ ಜಲಸಂಪನ್ಮೂಲ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ ಗುಪ್ತ ಅವರು ಡಿ.ಕೆ. ಶಿವಕುಮಾರ್ ಅವರಿಗೆ ಸಲ್ಲಿಸಿದ್ದಾರೆ.

'ಮಂಡಳಿಯ ಸದ್ಯದ ತಿಂಗಳ ವೆಚ್ಚ ಪರಿಗಣಿಸಿದರೆ, ನೀರಿನ ದರವನ್ನು ಪ್ರತಿ ಲೀಟರ್‌ಗೆ 0.8 ಪೈಸೆಯಿಂದ 1.50 ಪೈಸೆ ಹೆಚ್ಚಿಸುವುದು ಹೆಚ್ಚು ಸೂಕ್ತವಾಗಿದೆ. ನೀರಿನ ದರ ಹೆಚ್ಚಳವು ಹೊಸ ಯೋಜನೆಗಳಿಗೆ ಅಗತ್ಯವಾದ ಹಣಕಾಸು ನೆರವು ನೀಡಲು, ಸ್ಮಾರ್ಟ್ ಮೀಟರ್ ಅಳವಡಿಸಲು, ನೀರು ಪೂರೈಕೆಯ ಹಳೆ ಕೊಳವೆಗಳನ್ನು ಬದಲಿಸಲು, ಹೊಸತಾಗಿ ಕೊಳಚೆ ನೀರು ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲು, ಮೂಲಸೌಕರ್ಯಗಳನ್ನು ಉನ್ನತೀಕರಿಸಲು, ಲೆಕ್ಕಕ್ಕೆ ಸಿಗದ ನೀರಿನ ಪ್ರಮಾಣ ನಿಯಂತ್ರಿಸಲು (ಯುಎಫ್‌ಡಬ್ಲ್ಯು) ನೆರವಾಗಲಿದೆ' ಎಂದು ಪ್ರಸ್ತಾವದಲ್ಲಿ ಉಲ್ಲೇಖಿಸಲಾಗಿದೆ.

'ಮಂಡಳಿಯ ನಿರ್ವಹಣಾ ವೆಚ್ಚವನ್ನು ಸರಿದೂಗಿಸಲು ಪ್ರತಿ ವರ್ಷ ಅಕ್ಟೋಬರ್ ತಿಂಗಳಿನಲ್ಲಿ ನೀರಿನ ದರವನ್ನು ಶೇ 3ರಷ್ಟು ಹೆಚ್ಚಿಸುವಂತೆ ನಿವೃತ್ತ ಮುಖ್ಯ ಕಾರ್ಯದರ್ಶಿ ಟಿ.ಎಂ. ವಿಜಯಭಾಸ್ಕರ್ ಅಧ್ಯಕ್ಷತೆಯ ಆಡಳಿತ ಸುಧಾರಣಾ ಆಯೋಗವು ಸರ್ಕಾರಕ್ಕೆ ಶಿಫಾರಸು ಮಾಡಿತ್ತು. ಈ ಶಿಫಾರಸನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ' ಎಂದೂ ಪ್ರಸ್ತಾವದಲ್ಲಿ ವಿವರಿಸಲಾಗಿದೆ.

'ಆರ್ಥಿಕ ಸ್ಥಿರತೆಯನ್ನು ಕಾಯ್ದುಕೊಳ್ಳುವ ಜೊತೆಗೆ ಹೆಚ್ಚುತ್ತಿರುವ ನಿರ್ವಹಣಾ ವೆಚ್ಚವನ್ನು ಭರಿಸಲು ನೀರಿನ ದರ ಹೆಚ್ಚಿಸಬೇಕಾದ ಅನಿವಾರ್ಯ ಇದೆ. ಮುಂಬೈ ಮತ್ತು ಚೆನ್ನೈ ನಗರ ಸೇರಿದಂತೆ ಇತರ ನಗರಗಳಲ್ಲಿನ ಕುಡಿಯುವ ನೀರಿನ ದರಕ್ಕೆ ಹೋಲಿಸಿದರೆ ಬೆಂಗಳೂರಿನಲ್ಲಿ ವಿಧಿಸುವ ನೀರಿನ ದರವು ಅತಿ ಕಡಿಮೆ ಇದೆ. ನೀರು ಸರಬರಾಜು ಅಗತ್ಯ ಸೇವೆಯಾಗಿದ್ದು, ಅದನ್ನು ಸಮರ್ಪಕವಾಗಿ ನಿರ್ವಹಿಸಲು ನೀರಿನ ದರವನ್ನು ಹೆಚ್ಚಿಸಲೇಬೇಕಿದೆ' ಎಂದೂ ಮಂಡಳಿಯು ಸಮರ್ಥನೆ ನೀಡಿದೆ.

ಮುಖ್ಯಾಂಶಗಳು

- ಜಲಮಂಡಳಿ ಪ್ರಸ್ತಾವಕ್ಕೆ ರಾಜ್ಯ ಸರ್ಕಾರದಿಂದ ಅನುಮೋದನೆ ಸಾಧ್ಯತೆ
- ಸದ್ಯದ ದರದಿಂದ ವಾರ್ಷಿಕ ₹1,000 ಕೋಟಿ ನಷ್ಟ
- ಹೊಸ ಪ್ರಸ್ತಾವದಿಂದ ವಾರ್ಷಿಕ ಹೆಚ್ಚುವರಿ ₹1,052 ಕೋಟಿ ಸಂಗ್ರಹ

ನೀರಿನ ದರ ಏರಿಕೆಗೆ ಜಲಮಂಡಳಿ ಅಧಿಕಾರಿಗಳಿಂದ ಪ್ರಸ್ತಾವ ಸಲ್ಲಿಕೆ ಆಗಿದೆ. ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ಚರ್ಚಿಸಿ ತೀರ್ಮಾನಿಸಲಾಗುವುದು

ಡಿ.ಕೆ. ಶಿವಕುಮಾರ್
ಉಪ ಮುಖ್ಯಮಂತ್ರಿ ಹಾಗೂ ಬೆಂಗಳೂರು ಅಭಿವೃದ್ಧಿ ಸಚಿವ

ಸುದ್ದಿ 2 ನಿಮಿಷ

'ನ್ಯಾಕ್ ಲಂಚ: ದಾಖಲೆ ನೀಡಿದರೆ ಕ್ರಮ'

ಬೆಂಗಳೂರು: ರಾಷ್ಟ್ರೀಯ ಮೌಲ್ಯಮಾಪನ ಮತ್ತು ಮಾನ್ಯತಾ ಮಂಡಳಿ (ನ್ಯಾಕ್) ಪರಿಶೀಲನಾ ಸಮಿತಿಯ ಭ್ರಷ್ಟಾಚಾರ ಪ್ರಕರಣದಲ್ಲಿ ರಾಜ್ಯದ ಅಧ್ಯಾಪಕರು ಮತ್ತು ಸಿಬ್ಬಂದಿ ಭಾಗಿಯಾಗಿರುವುದಕ್ಕೆ ಸಾಕ್ಷ್ಯ ನೀಡಿದರೆ ಅವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ದಾವಣಗೆರೆ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಗಾಯತ್ರಿ ದೇವರಾಜ, ಬೆಂಗಳೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಐಕ್ಯುಎಸಿ-ನ್ಯಾಕ್ ನಿರ್ದೇಶಕ ಎಂ.ಹನುಮಂತಪ್ಪ ಲಂಚಕ್ಕೆ ಬೇಡಿಕೆ ಇಟ್ಟಿದ್ದ ವಿಷಯ ಕುರಿತು ರಾಜ್ಯ ಸರ್ಕಾರಕ್ಕೆ ಸಿಬಿಐ ಅಧಿಕೃತ ಮಾಹಿತಿ ನೀಡಿಲ್ಲ ಎಂದರು.

ಆಂಧ್ರಪ್ರದೇಶದ ಗುಂಟೂರಿನಲ್ಲಿರುವ ಕೋನೇರು ಲಕ್ಷ್ಮಯ್ಯ ಎಜುಕೇಷನ್ ಫೌಂಡೇಷನ್ (ಕೆಎಲ್‌ಇಎಫ್) ನ್ಯಾಕ್‌ನಿಂದ 'ಎ' ಪ್ಲಸ್ ಗ್ರೇಡ್ ಪಡೆಯಲು ಲಂಚ ನೀಡಿದ ಆರೋಪ ಕೇಳಿಬಂದಿತ್ತು. ಸಿಬಿಐ ಪ್ರಕರಣ ದಾಖಲಿಸಿಕೊಂಡು, ತನಿಖೆ ನಡೆಸುತ್ತಿದೆ.

ವಿಶ್ವವಿದ್ಯಾಲಯದಲ್ಲಿನ ಮೂಲಸೌಕರ್ಯಗಳು, ಸಂಶೋಧನೆ, ವೈಜ್ಞಾನಿಕ ಉಪಕರಣಗಳು, ಬೋಧನೆ, ಸಂಶೋಧನೆಗಳಿಗೆ ಪೇಟೆಂಟ್ ಬಂದಿರುವುದು, ಅಂತರರಾಷ್ಟ್ರೀಯ ಮಟ್ಟದಲ್ಲಿ ಸಂಶೋಧನಾ ಪ್ರಬಂಧಗಳ ಮಂಡನೆ, ಕಲಿಕೆ, ಬೋಧನೆ ಮತ್ತು ಸಂಶೋಧನಾ ಚಟುವಟಿಕೆಗಳಿಗೆ ತಂತ್ರಜ್ಞಾನದ ಅಳವಡಿಕೆ ಸೇರಿದಂತೆ ಅಂಶಗಳನ್ನು ಆಧರಿಸಿ ನ್ಯಾಕ್ ಸಮಿತಿಯು ಅಂಕ ಮತ್ತು ಗ್ರೇಡ್‌ಗಳನ್ನು ನೀಡುತ್ತದೆ.

'ಗ್ರೇಟರ್ ಬೆಂಗಳೂರು ಮಸೂದೆ' ಸಾರ್ವಜನಿಕರಿಂದ ಸಲಹೆ ಸ್ವೀಕಾರ

ಬೆಂಗಳೂರು: 'ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ– 2024'ರಂತೆ 'ಗ್ರೇಟರ್ ಬೆಂಗಳೂರು ಪ್ರಾಧಿಕಾರ' ರಚನೆ ಕುರಿತಂತೆ ನಗರದಲ್ಲಿ ಐದು ಸ್ಥಳಗಳಲ್ಲಿ ಫೆಬ್ರುವರಿ 10ರಿಂದ ಮೂರು ದಿನ ಸಾರ್ವಜನಿಕರು, ಸಂಘ-ಸಂಸ್ಥೆಗಳಿಂದ ಸಲಹೆಗಳನ್ನು ಸ್ವೀಕರಿಸಲಾಗುತ್ತದೆ.

ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ 2024ರ ಪರಿಶೀಲಿಸಿ, ವರದಿ ಸಲ್ಲಿಸಲು ವಿಧಾನ ಮಂಡಲದ ಜಂಟಿ ಪರಿಶೀಲನಾ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯ ಅಧ್ಯಕ್ಷ ರಿಜ್ವಾನ್ ಅರ್ಷದ್ ಅವರ ನೇತೃತ್ವದಲ್ಲಿ ನಗರದಲ್ಲಿ ಸಭೆ ನಡೆಸಿ, ಸಾರ್ವಜನಿಕರಿಂದ ಸಲಹೆ ಪಡೆಯಲಾಗುತ್ತದೆ ಎಂದು ಬಿಬಿಎಂಪಿ ಪ್ರಕಟಣೆ ತಿಳಿಸಿದೆ.

ಎಲ್ಲೆಲ್ಲಿ ಸಭೆ: ಪೂರ್ವ ವಲಯದ ವಸಂತನಗರದ ತಿಮ್ಮಯ್ಯ ರಸ್ತೆಯಲ್ಲಿರುವ ಬಂಜಾರ ಭವನದಲ್ಲಿ ಫೆ.10ರಂದು ಬೆಳಿಗ್ಗೆ 11ರಿಂದ ಮಧ್ಯಾಹ್ನ 1ರವರೆಗೆ ಸಭೆ ನಡೆಯಲಿದೆ.

ಮಹದೇವಪುರ ವಲಯದ ಕೆ.ಆರ್. ಪುರದ ಟಿ.ಸಿ. ಪಾಳ್ಯದ ಹತ್ತಿರವಿರುವ ಕೇಂಬ್ರಿಡ್ಜ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಫೆ.10ರಂದು ಮಧ್ಯಾಹ್ನ 3ರಿಂದ ಸಂಜೆ 5ರವರೆಗೆ ಸಭೆ ಆಯೋಜಿಸಲಾಗಿದೆ.

ದಕ್ಷಿಣ ಹಾಗೂ ಬೊಮ್ಮನಹಳ್ಳಿ ವಲಯಗಳ ವ್ಯಾಪ್ತಿಯ ಜಂಟಿ ಸಭೆ ಜೆ.ಪಿ. ನಗರ ಒಂದನೇ ಹಂತದಲ್ಲಿರುವ ಆರ್.ವಿ. ಡೆಂಟಲ್ ಕಾಲೇಜಿನಲ್ಲಿ ಫೆ.11ರಂದು ಬೆಳಿಗ್ಗೆ 11ರಿಂದ ಮಧ್ಯಾಹ್ನ 1ರವರೆಗೆ ನಡೆಯಲಿದೆ.

ರಾಜರಾಜೇಶ್ವರಿ ನಗರ ಹಾಗೂ ಪಶ್ಚಿಮ ವಲಯಗಳ ವ್ಯಾಪ್ತಿಯ ಜಂಟಿ ಸಭೆಯನ್ನು ಬೆಂಗಳೂರು ವಿಶ್ವವಿದ್ಯಾಲಯ ಜ್ಞಾನಭಾರತಿ ಕ್ಯಾಂಪಸ್‌ನಲ್ಲಿರುವ ಡಾ.ಎಚ್.ನರಸಿಂಹಯ್ಯ ಸಭಾಂಗಣದಲ್ಲಿ ಫೆ.11ರಂದು ಮಧ್ಯಾಹ್ನ 3ರಿಂದ ಸಂಜೆ 5ರವರೆಗೆ ಆಯೋಜಿಸಲಾಗಿದೆ.

ಯಲಹಂಕ ಹಾಗೂ ದಾಸರಹಳ್ಳಿ ವಲಯಗಳ ವ್ಯಾಪ್ತಿಯ ಜಂಟಿ ಸಭೆ ಯಲಹಂಕ ಉಪನಗರದಲ್ಲಿರುವ ಡಾ.ಬಿ.ಆರ್. ಅಂಬೇಡ್ಕರ್ ಸಮುದಾಯ ಭವನದಲ್ಲಿ ಫೆ.12ರಂದು ಬೆಳಿಗ್ಗೆ 11ರಿಂದ ಮಧ್ಯಾಹ್ನ 1ರವರೆಗೆ ನಡೆಯಲಿದೆ.

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರಕಾರದ ಅಧೀನಕ್ಕೆ ಒಳಪಟ್ಟಿದೆ)
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಕೃಭಾಜನಿನಿ, ಐಬಿಸಿ, ನಿಮಪೋ ವಿಭಾಗ, ರಾಂಪೂರ (ಪ.ಅ)
ತಾ: ಸಿಂದಗಿ, ಜಿ: ವಿಜಯಪುರ. ದೂರವಾಣಿ ಸಂಖ್ಯೆ: 08488-224328, ಇ-ಮೇಲ್:kbjnleerampur@gmail.com
ಸಂಖ್ಯೆ:ಕೃಭಾಜನಿನಿ/ಐಬಿಸಿ/ನಿಮಪೋ/ವಿರಾಂ/ಟಿಬಿ-2/2024-25/2525 ದಿನಾಂಕ:04.02.2025

ಇ- ಟೆಂಡರ್ ಪ್ರಕಟಣೆ 2ನೇ ಕರೆ (ಕೆ.ಪಿ.ಪಿ.ಪಿ. ಪೋರ್ಟಲ್ ಮುಖಾಂತರ ಮಾತ್ರ)

ಉಲ್ಲೇಖ: ಈ ಕಛೇರಿ ಟೆಂಡರ್ ಪ್ರಕಟಣೆ ಸಂ: 2088 ದಿನಾಂಕ: 13.12.2024
ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಪರವಾಗಿ ಕಾರ್ಯಪಾಲಕ ಅಭಿಯಂತರರು ಕೃಭಾಜನಿನಿ ಐಬಿಸಿ ನಿಮಪೋ ವಿಭಾಗ, ರಾಂಪೂರ (ಪ.ಅ) ತಾ: ಸಿಂದಗಿ ಇವರು ಕರ್ನಾಟಕ ಸರ್ಕಾರದ ಕೆ.ಪಿ.ಪಿ.ಪಿ. ಪೋರ್ಟಲ್‌ನಲ್ಲಿ ಈ ಕೆಳಗೆ ಕಾಣಿಸಿದ ಕಾಮಗಾರಿಗಳಿಗೆ ಶೇಕಡಾವಾರು ಟೆಂಡರ್ ಅಹ್ವಾನಿಸಲಾಗಿದೆ.

ಕ್ರಸಂ	ಕಾಮಗಾರಿಗಳ ಹೆಸರು	ಟೆಂಡರ್ ಪದ್ಧತಿ	ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ	ಗುತ್ತಿಗೆದಾರರ ಅರ್ಹತೆ	ಇ-ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೇ
1	Repairs to Sub Division No- 33, Rampur Division Office Clearance of Jungle and Repairs CE, SE EE quartets KBJNL Rampur Camp for Year 2024-25 (Indent No.1296/call2)	ಏಕ-ಲಕೋಟೆ	* ರೂ: 25.42 * ಇ.ಎಂ.ಡಿ ಮೊತ್ತ ರೂ: 25,500.00*	ಕೆ.ಪಿ.ಡಬ್ಲ್ಯೂ.ಡಿ. ಯಲ್ಲಿ ನೋಂದಾಯಿತ ಕ್ಲಾಸ್ 4 & 3ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರ ನೋಂದಣಿ ಮಾಡಲಾದ ಅರ್ಹ ಗುತ್ತಿಗೆದಾರರಿಂದ	DTS, ನೋಡುವ/ ಸಲ್ಲಿಸುವ ದಿನಾಂಕ: 05.02.2025 ರಿಂದ 19.02.2025 ರ ಸಂಜೆ 5.30 ರ ವರೆಗೆ ಹಾಗೂ ಬಿಡ್ಡನ್ನು ದಿನಾಂಕ : 21.02.2025 ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು.
2	Repairs to Sub Division No.18 JeratagiOffice for Year 2024-25 (Indent No 1300 /call-2)	ಏಕ-ಲಕೋಟೆ	ರೂ: 21.05 * ಇ.ಎಂ.ಡಿ ಮೊತ್ತ ರೂ: 25,000.00		

ಗುತ್ತಿಗೆದಾರರು ದಾಖಲೆಗಳನ್ನು ಇ-ಟೆಂಡರಿಂಗ್ ಮೂಲಕ (http://kppp.karnataka.gov.in) ಅಂತರ್ಜಾಲದಲ್ಲಿ "ಶೆಡ್ಯೂಲ್-ಬಿ" ಮತ್ತು ತಾಂತ್ರಿಕ ವಿವರಗಳನ್ನು ಪಡೆಯಬಹುದಾಗಿದೆ. ಬಿಡ್ಡನ್ನು ತೆರೆಯುವ ಸ್ಥಳ ಕಾರ್ಯಪಾಲಕ ಅಭಿಯಂತರರು ಕೃಭಾಜನಿನಿ ಐಬಿಸಿ ನಿಮಪೋ ವಿಭಾಗ ರಾಂಪೂರ (ಪಿಎ) ತಾ: ಸಿಂದಗಿ ಇವರ ಕಚೇರಿಯಲ್ಲಿ. ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿದಾರರ ಕಾರ್ಯಾಲಯಕ್ಕೆ ಸಂಪರ್ಕಿಸಬಹುದಾಗಿದೆ. ಮತ್ತು ಷರತ್ತುಬದ್ಧ ಟೆಂಡರಗಳನ್ನು ತಿರಸ್ಕರಿಸಲಾಗುವುದು. ಯಾವುದೇ ಕಾಮಗಾರಿಗಳ ಟೆಂಡರನ್ನು ಒಪ್ಪುವ ಅಥವಾ ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಅಧಿಕಾರ ಸಕ್ಷಮ ಪ್ರಾಧಿಕಾರಕ್ಕೆ ಇರುತ್ತದೆ.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಐಬಿಸಿ ನಿಮಪೋ ವಿಭಾಗ, ರಾಂಪೂರ(ಪಅ)
ವಾಸಾಸಂಇ/ವಿಜಯಪುರ/663/ಕೆಎಸ್‌ಎಂಸಿಎ/2024-25

ಭಾರತರಂಗ ಮಹೋತ್ಸವದಲ್ಲಿ ಹಂಸಲೇಖ ಅಭಿಮತ

'ವೈವಿಧ್ಯತೆಯೇ ಭಾರತೀಯ ಸಂಸ್ಕೃತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭಾರತೀಯ ಸಂಸ್ಕೃತಿ ಎಂದರೆ ವೈದಿಕ ಸಂಸ್ಕೃತಿಯೊಂದೇ ಅಲ್ಲ. ಬುಡಕಟ್ಟು ಸಹಿತ ಎಲ್ಲ ಸಮುದಾಯಗಳ ಸಂಸ್ಕೃತಿ ಸೇರಿರುವುದೇ ಭಾರತೀಯ ಸಂಸ್ಕೃತಿ' ಎಂದು ಸಂಗೀತ ನಿರ್ದೇಶಕ ಹಂಸಲೇಖ ಹೇಳಿದರು.

ಕೇಂದ್ರ ಸರ್ಕಾರದ ಸಂಸ್ಕೃತಿ ಸಚಿವಾಲಯ, ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ರಾಷ್ಟ್ರೀಯ ನಾಟಕ ಶಾಲೆ ಹಾಗೂ ಕರ್ನಾಟಕ ನಾಟಕ ಅಕಾಡೆಮಿ ಜಂಟಿಯಾಗಿ ಹಮ್ಮಿಕೊಂಡಿರುವ 'ಭಾರತ ರಂಗ ಮಹೋತ್ಸವ' ಅಂತರರಾಷ್ಟ್ರೀಯ ನಾಟಕೋತ್ಸವದಲ್ಲಿ ಐದನೇ ದಿನದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬಹುಸಂಸ್ಕೃತಿಯೇ ದೇಶದ ಸಂಸ್ಕೃತಿಯಾಗಿದೆ. ಯಾವುದೇ ದೇಶದ ಶ್ರೀಮಂತಿಕೆಯನ್ನು ಆರ್ಥಿಕ ಮಾನದಂಡದಲ್ಲಿ ನೋಡದೇ ಕಲೆ, ಸಂಸ್ಕೃತಿಯ ಶ್ರೀಮಂತಿಕೆಯ ಆಧಾರದಲ್ಲಿ ಅಳೆಯಬೇಕು. ಅಂಥ ಕಲಾ ಸಂಸ್ಕೃತಿಗಳನ್ನು ಬಿಂಬಿಸುವ ಕಾರ್ಯ ರಂಗಮಹೋತ್ಸವದಲ್ಲಿ ನಡೆಯುತ್ತಿದೆ ಎಂದು ಶ್ಲಾಘಿಸಿದರು.

ಉತ್ಸವ ಗೌರವವನ್ನು ಸ್ವೀಕರಿಸಿದ ರಂಗಭೂಮಿ ಕಲಾವಿದ 'ಮುಖ್ಯಮಂತ್ರಿ' ಚಂದ್ರು ಮಾತನಾಡಿ, 'ಭಾರತ ರಂಗ ಮಹೋತ್ಸವವು ಭಾರತೀಯ ರಂಗಭೂಮಿಗೆ ಹೊಸ ದಿಕ್ಕನ್ನು ತೋರಿಸುತ್ತಿದೆ. ಐದು ವೇದಿಕೆಗಳಲ್ಲಿ ವಿಭಿನ್ನ ರಂಗ ಪ್ರಯೋಗಗಳನ್ನು ಮಾಡುವ ಮೂಲಕ ವೈವಿಧ್ಯವನ್ನು ಕಟ್ಟಿಕೊಡುತ್ತಿದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ ಅಧ್ಯಕ್ಷತೆ ವಹಿಸಿ ಮಾತನಾಡಿ, '1,800ಕ್ಕೂ ಅಧಿಕ ಕಲಾವಿದರು ಈ ರಂಗಮಹೋತ್ಸವದಲ್ಲಿ ಭಾಗವಹಿಸುತ್ತಿದ್ದಾರೆ. ರಂಗಭೂಮಿಯನ್ನು ರಂಗ ದಿಗ್ಗಜರು ಕಟ್ಟಿಹೋಗಿದ್ದು, ಕರ್ನಾಟಕದ ರಂಗಭೂಮಿಯು ಭಾರತೀಯ ರಂಗಭೂಮಿಗೆ ಮಾರ್ಗದರ್ಶನ ಮಾಡುವಷ್ಟು ಬೆಳೆದು ನಿಂತಿದೆ' ಎಂದು ಹೇಳಿದರು.

ಚಿತ್ರ ನಿರ್ದೇಶಕ ಬಿ.ಸುರೇಶ್ ಉಪಸ್ಥಿತರಿದ್ದರು. ಜೋಗತಿ ನೃತ್ಯ, ಬಂಜಾರ ನೃತ್ಯ, 'ರೋಮಿಯೊ ಆ್ಯಂಡ್ ಜೂಲಿಯಟ್' ನಾಟಕ ಸಹಿತ ವಿವಿಧ ರಂಗಪ್ರಸ್ತುತಿಗಳು ಬುಧವಾರ ನಡೆದವು.

ಭಾರತ ರಂಗ ಮಹೋತ್ಸವ ಹಾಗೂ ಅಂತರರಾಷ್ಟ್ರೀಯ ನಾಟಕೋತ್ಸವ ಕಾರ್ಯಕ್ರಮದಲ್ಲಿ 'ಮುಖ್ಯಮಂತ್ರಿ' ಚಂದ್ರು ಅವರಿಗೆ ಉತ್ಸವ ಗೌರವ ನೀಡಿ ಗೌರವಿಸಲಾಯಿತು. ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ, ರಿಜಿಸ್ಟ್ರಾರ್ ನಿರ್ಮಲಾ ಮಠಪತಿ, ಚಿತ್ರ ನಿರ್ದೇಶಕ ಬಿ.ಸುರೇಶ್ ಮತ್ತು ರಂಗಕರ್ಮಿ ಶಶಿಧರ್ ಭಾರಿಘಾಟ್ ಉಪಸ್ಥಿತರಿದ್ದರು
ಪ್ರಜಾವಾಣಿ ಚಿತ್ರ

ಪ್ರಯಾಗರಾಜ್‌ನ ತ್ರಿವೇಣಿ ಸಂಗಮದಲ್ಲಿ ಶ್ರೀ ಶ್ರೀ ರವಿಶಂಕರ್ ಗುರೂಜಿ ಮಂಗಳವಾರ ಪುಣ್ಯ ಸ್ನಾನ ಮಾಡಿದರು

ಕುಂಭದಲ್ಲಿ ಆರ್ಟ್ ಆಫ್ ಲಿವಿಂಗ್ ಧ್ಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್ಟ್ ಆಫ್ ಲಿವಿಂಗ್ ಆಯೋಜಿಸಿದ್ದ 'ಮಹಾಕುಂಭದಿಂದ ಗುರು ದೇವರೊಡನೆ ಧ್ಯಾನ ಮಾಡಿ' ಕಾರ್ಯಕ್ರಮದಲ್ಲಿ 180 ದೇಶಗಳ ಭಕ್ತರಿಗೆ ಶ್ರೀ ಶ್ರೀ ರವಿಶಂಕರ ಗುರೂಜಿ ಸತ್ಸಂಗ ನಡೆಸಿಕೊಟ್ಟರು.

ಸತ್ಸಂಗದಲ್ಲಿ ತೀರ್ಥಯಾತ್ರಿಗಳೊಡನೆ ಸಂತರೂ ಭಕ್ತಿ ಸಂಗೀತದಲ್ಲಿ ಮತ್ತು ಜ್ಞಾನದಲ್ಲಿ ಪಾಲ್ಗೊಂಡರು. 'ಇಲ್ಲಿ ಹರಿಯುತ್ತಿರುವ ಗಂಗೆಯು ಜ್ಞಾನದ ಪ್ರತೀಕವಾದರೆ, ಯಮುನೆಯು ಭಕ್ತಿಯ ಪ್ರತೀಕ ಮತ್ತು ಅಗೋಚರವಾಗಿರುವ ಸರಸ್ವತಿಯು ಕರ್ಮದ ಪ್ರತೀಕ. ಗಂಗಾ, ಯಮುನಾ ಮತ್ತು ಸರಸ್ವತಿಯ ಸಂಗಮವು ಇಡ, ಪಿಂಗಳ ಮತ್ತು ಸುಷುಮ್ನ ಶಕ್ತಿ ನಾಡಿಗಳನ್ನು ಪ್ರತಿನಿಧಿಸುತ್ತವೆ' ಎಂದು ಗುರೂಜಿ ತಿಳಿಸಿದರು.

ಆರ್ಟ್ ಆಫ್ ಲಿವಿಂಗ್‌ನ ಶಿಬಿರದಲ್ಲಿ ಪ್ರತಿನಿತ್ಯ ಹೊತ್ತಿಗೆ ಒಂದು ಟನ್ ಖಿಚಡಿಯಂತೆ ದಿನಕ್ಕೆ ಎರಡು ಬಾರಿ ಸಿದ್ಧಪಡಿಸಿ, ಸುಮಾರು 30 ಸಾವಿರ ಭಕ್ತರಿಗೆ ಹಂಚುತ್ತಿದೆ. ಶ್ರೀ ಶ್ರೀ ತತ್ವದ ಎಂಟು ತಜ್ಞ ನಾಡಿ ವೈದ್ಯರು 5,000 ಜನರಿಗೆ ನಾಡಿ ಪರೀಕ್ಷೆಯನ್ನು ನಡೆಸಿ, ಆಯುರ್ವೇದೀಯ ಸಲಹೆಗಳನ್ನು ನೀಡಿದರು ಎಂದು ಆರ್ಟ್ ಆಫ್ ಲಿವಿಂಗ್ ಪ್ರಕಟಣೆ ತಿಳಿಸಿದೆ.

ರಾಜ್ಯದಲ್ಲಿ ಮಲೇಷ್ಯಾ ಪ್ರವಾಸಿ ಕೇಂದ್ರಕ್ಕೆ ಪ್ರಸ್ತಾವ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭಾರತದಿಂದ 2024ರಲ್ಲಿ 10 ಲಕ್ಷ ಮಂದಿ ಮಲೇಷ್ಯಾಗೆ ಪ್ರವಾಸ ಬಂದಿದ್ದರು. ಇದರಲ್ಲಿ ದಕ್ಷಿಣ ಭಾರತೀಯರ ಸಂಖ್ಯೆಯೇ ಹೆಚ್ಚು. ಕರ್ನಾಟಕದಿಂದಲೂ ಲಕ್ಷಾಂತರ ಮಂದಿ ಭೇಟಿ ನೀಡಿದ್ದಾರೆ. ಹೀಗಾಗಿ ಇಲ್ಲೂ ಮಾಹಿತಿ ಕೇಂದ್ರ ಆರಂಭಿಸುವ ಪ್ರಸ್ತಾವ ಇದೆ' ಎಂದು ಮಲೇಷ್ಯಾ ಪ್ರವಾಸೋದ್ಯಮ ಇಲಾಖೆಯ ಮಹಾನಿರ್ದೇಶಕ ಡಾಟುಕ್ ಮನೋಹರನ್ ಪೆರಿಯಸಾಮಿ ಹೇಳಿದರು.

ಮಲೇಷ್ಯಾ ಪ್ರವಾಸೋದ್ಯಮ ಇಲಾಖೆಯ ವತಿಯಿಂದ ನಗರದಲ್ಲಿ ಬುಧವಾರ ಆಯೋಜಿಸಲಾಗಿದ್ದ 'ವಿಸಿಟ್ ಮಲೇಷ್ಯಾ2026' ಶೃಂಗದಲ್ಲಿ ಅವರು ಮಾತನಾಡಿದರು. ಭಾರತ ಮತ್ತು ಮಲೇಷ್ಯಾದ ಪ್ರವಾಸಿ ಸೇವಾ ಸಂಸ್ಥೆಗಳು, ಪ್ರವಾಸಿ ರಾಯಭಾರಿಗಳು ಶೃಂಗದಲ್ಲಿ ಭಾಗಿಯಾಗಿದ್ದರು.

'ಬೆಂಗಳೂರು ಮತ್ತು ಕೊಚ್ಚಿಯಿಂದ ಮಲೇಷ್ಯಾದ ವಿವಿಧೆಡೆಗೆ ಪ್ರತಿದಿನ ನೇರ ವಿಮಾನಸೇವೆ ಆರಂಭವಾಗಿದೆ. ಜತೆಗೆ ಭಾರತೀಯರ ಪ್ರವಾಸಿಗರಿಗೆ ವೀಸಾ ವಿನಾಯಿತಿ ನೀಡಲಾಗಿದೆ. ಹೀಗಾಗಿಯೇ ಭಾರತೀಯ ಪ್ರವಾಸಿಗರ ಸಂಖ್ಯೆಯಲ್ಲಿ ಭಾರಿ ಏರಿಕೆಯಾಗಿದೆ. 2025ರಲ್ಲಿ 15 ಲಕ್ಷ ಭಾರತೀಯರು ನಮ್ಮಲ್ಲಿಗೆ ಭೇಟಿ ನೀಡುವ ನಿರೀಕ್ಷೆ ಇದೆ' ಎಂದರು.

ಮಲೇಷ್ಯಾ ಪ್ರವಾಸೋದ್ಯಮ ಇಲಾಖೆಯ ಚೆನ್ನೈ ನಿರ್ದೇಶಕ ಹಿಷಾಮುದ್ದೀನ್ ಮುಸ್ತಫಾ, 'ದಕ್ಷಿಣ ಭಾರತದ ಪ್ರವಾಸಿಗರನ್ನು ಗಮನದಲ್ಲಿ ಇರಿಸಿಕೊಂಡೇ ವಿಶೇಷ ಪ್ಯಾಕೇಜ್‌ಗಳನ್ನು ರೂಪಿಸಲಾಗಿದೆ' ಎಂದರು.

ಸ್ಯಾಮ್ಸಂಗ್ ಎಸ್25 ಸರಣಿ: ರಿಲಯನ್ಸ್ ಡಿಜಿಟಲ್‌ನಲ್ಲಿ ಲಭ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಿಲಯನ್ಸ್ ಡಿಜಿಟಲ್ ಮಳಿಗೆಗಳಲ್ಲಿ ಸ್ಯಾಮ್ಸಂಗ್ ಗ್ಯಾಲಕ್ಸಿ ಎಸ್25 ಸರಣಿಯ ಫೋನ್‌ಗಳನ್ನು ಗ್ರಾಹಕರು ಆನ್‌ಲೈನ್‌ನಲ್ಲಿ ಬುಕಿಂಗ್ ಮಾಡಿದ 30 ನಿಮಿಷದೊಳಗೆ ಅವರ ಮನೆ ಬಾಗಿಲಿಗೆ ತಲುಪಿಸಲಾಗುತ್ತದೆ ಎಂದು ರಿಲಯನ್ಸ್ ಕಂಪನಿ ತಿಳಿಸಿದೆ.

ಈ ಸರಣಿಯ ಫೋನ್‌ಗಳು ಮಂಗಳವಾರ ಮಾರುಕಟ್ಟೆಗೆ ಬಿಡುಗಡೆಯಾಗಿವೆ. ಗ್ರಾಹಕರು www.reliancedigital.in ಮೂಲಕ ಬುಕಿಂಗ್ ಮಾಡಬಹುದು. ಬುಕಿಂಗ್ ಮಾಡಿದ ದಿನವೇ ಗ್ರಾಹಕರಿಗೆ ತಲುಪಿಸಲಾಗುವುದು. ದೇಶದಾದ್ಯಂತ ಇರುವ 650ಕ್ಕೂ ಹೆಚ್ಚು ಮಳಿಗೆಗಳಲ್ಲಿ ಈ ಸೌಲಭ್ಯ ಲಭ್ಯವಿದೆ ಎಂದು ಹೇಳಿದೆ.

ಗ್ರಾಹಕರು ರಿಲಯನ್ಸ್ ಡಿಜಿಟಲ್‌ನ ವೆಬ್‌ಸೈಟ್‌ಗೆ ಭೇಟಿ ತ್ವರಿತವಾಗಿ ವಿತರಣೆ ಮಾಡುವ ಆಯ್ಕೆ ನಮೂದಿಸಬೇಕು. ಈ ಸೇವೆಯು ಗ್ರಾಹಕರಿಗೆ ಹತ್ತಿರ ಇರುವ ಮಳಿಗೆಗಳಲ್ಲಿ ದೊರೆಯಲಿದೆ ಎಂದು ಹೇಳಿದೆ.

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ
ನಿರ್ಮಾಣ ಮತ್ತು ನಿರ್ವಹಣೆ ವಿಭಾಗ
इसरो isro
ಎಲ್‌ಪಿಎಸ್‌ಸಿ ಕ್ಯಾಂಪಸ್, 80 ಅಡಿ ರಸ್ತೆ, ಹೆಚ್‌ಎಎಲ್ 2ನೇ ಹಂತ, ಬೆಂಗಳೂರು-560 008. ದೂ.: 080-25037203/080-25037214
04.02.2025

ಇ-ಟೆಂಡರ್ ಪ್ರಕಟಣೆ

ಭಾರತದ ರಾಷ್ಟ್ರಪತಿಯವರ ಪರವಾಗಿ ಕೆಳಕಂಡ ಕಾಮಗಾರಿಗಳಿಗೆ ಐಟಂ ದರ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಕಾಮಗಾರಿಯ ಹೆಸರು ಮತ್ತು ಎನ್‌ಐಟಿ ಸಂಖ್ಯೆ ಮತ್ತು ದಿನಾಂಕ	ಅಂದಾಜು ಮೊತ್ತ	ಇಎಂಡಿ	ಪೂರ್ಣಗೊಳಿಸಲು ಕಾಲಾವಧಿ
1	ನಿರ್ವಹಣಾ ಕಾರ್ಯಗಳು–ಬೆಂಗಳೂರಿನ ಎಲ್‌ಪಿಎಸ್‌ಸಿ(ಬಿ) ಕ್ಯಾಂಪಸ್‌ನ ಹಳೆಯ ಇಬಿಡಬ್ಲ್ಯೂ, ಪಿಎಂಎಸ್‌ಡಿ ಕ್ಲೀನ್ ರೂಮ್ ಮತ್ತು ಇನ್‌ಸ್ಟ್ರುಮೆಂಟೇಶನ್/ಕೆಮಿಕಲ್ ಅನಾಲಿಸಿಸ್ ಸೌಲಭ್ಯಗಳಲ್ಲಿ ರೂಫ್ ವಾಟರ್ ಪ್ರೂಫಿಂಗ್ ಕಾಮಗಾರಿಗಳು. ಎನ್‌ಐಟಿ ಸಂ.: ಎಲ್‌ಪಿಎಸ್‌ಸಿ(ಬಿ)/ಸಿಎಂಡಿ/03/3005/ಸಿ/ಎಂಐ/025/2024-25 ದಿನಾಂಕ: 04.02.2025	ರೂ. 16.52 ಲಕ್ಷಗಳು	ರೂ. 33,040/-	01 ತಿಂಗಳು
2	ಬೆಂಗಳೂರಿನ ಎಲ್‌ಪಿಎಸ್‌ಸಿ(ಬಿ) ಕ್ಯಾಂಪಸ್‌ನ ಹೆಚ್‌ಇಪಿ ಸೌಲಭ್ಯಗಳಲ್ಲಿ ಕ್ಲೀನ್ ರೂಮ್ ಫ್ಲೋರಿಂಗ್ ಒದಗಿಸುವುದು. ಎನ್‌ಐಟಿ ಸಂ.:ಎಲ್‌ಪಿಎಸ್‌ಸಿ(ಬಿ)/ಸಿಎಂಡಿ/02/2016/ಸಿ/ಎಂಐ/026/2024-25 ದಿನಾಂಕ: 04.02.2025	ರೂ. 10.07 ಲಕ್ಷಗಳು	ರೂ. 20,140/-	15 ದಿನಗಳು
3	ಬೆಂಗಳೂರಿನ ಎಲ್‌ಪಿಎಸ್‌ಸಿ(ಬಿ) ಕ್ಯಾಂಪಸ್‌ನಲ್ಲಿ ವೈಬ್ರೇಷನ್ ಟೆಸ್ಟ್ ಸೌಲಭ್ಯ ಮತ್ತು ಕಾಂಪೋಸಿಟ್ ಬಿಲ್ಡಿಂಗ್ ನಡುವೆ ರಸ್ತೆ ಕಾಮಗಾರಿಗಳು. ಎನ್‌ಐಟಿ ಸಂ.:ಎಲ್‌ಪಿಎಸ್‌ಸಿ(ಬಿ)/ಸಿಎಂಡಿ/02/2018/ಸಿ/ಎಂಐ/028/2024-25 ದಿನಾಂಕ: 04.02.2025	ರೂ. 22.77 ಲಕ್ಷಗಳು	ರೂ. 45,540/-	02 ತಿಂಗಳು
4	ಮಾರಾಟದ ಅವಧಿ: 04.02.2025 ರಿಂದ 11.02.2025			

ಆಸಕ್ತಿಯುಳ್ಳ ಟೆಂಡರ್‌ದಾರರು www.tenderwizard.com/ISRO ಅನ್ನು ಪರಿವೀಕ್ಷಿಸಿ. ಜೊತೆಗೆ ಅರ್ಹತಾ ಅಗತ್ಯತೆ ಮತ್ತು ಇತರೆ ವಿವರಗಳಿಗೆ ಸಂಪೂರ್ಣ ವಿವರವಿರುವ ಟೆಂಡರ್ ಪ್ರಕಟಣೆಯನ್ನು ವೆಬ್‌ಸೈಟ್: www.isro.gov.in, www.ipsc.gov.in ಗೆ ಭೇಟಿನೀಡಿ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/- ಮುಖ್ಯಸ್ಥರು, ಸಿಎಂಡಿ, ಎಲ್‌ಪಿಎಸ್‌ಸಿ(ಬಿ)

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE
I, **SRI. SHASHI KUMAR .V,** Son of Venkataswamy Reddy, Aged about 40 years, Residing at Muttagatti, Village, Kasaba Hobli, Anekal Taluk, Bangalore Urban District, the owner of property which is more fully described in the schedule below, the same having been acquired by me under the Sale Deed Executed by Sri.Ramaiah and Others (Group I Vendors) and Narayanamma & Others (Group II Vendors) dated 26.02.2024, Registered as Document No.ANK-1-12974/2023-24, in the Sub-Registrar Basavanagudi (Anekal). The said Sri.Ramaiah who in turn had purchased from one Sri.Chikkanna under a Sale Deed dated 23.03.1978, Registered as Document No.2426/1977-78, Book I, Vol.1276, Page 191 to 193 in the Office of Sub-Registrar, Anekal., The original of the said sale deed dated 23.03.1978 is lost and could not be traced inspite of our best efforts. A police complaint is also lodged in this regard. If anybody finds the said document, the same may be returned to me.
SCHEDULE
All that piece and parcel of residentially converted land bearing Survey No.61/7 (earlier part of Survey No.61/2) measuring 18.04 Guntas (18 ¼ Guntas), Survey no.62/2 measuring 1 Acre, Survey No.61/2 measuring 17 Guntas and Survey No.61/5 measuring 0.01.08 Guntas totally ad measuring 1 Acre and 36.75 Guntas all situated at **Hompalaghatta Village, Kasaba Hobli, Anekal Taluk, Bangalore Urban District** together with all rights, appurtenances whatsoever underneath or above the surface is bounded on :
East by : Survey No.62/4 and 61/5 and M. P. Road;
West by : Land bearing Survey No.62/3 & 61/3
North By : Land bearing Survey No.63/2.
South By : Singasandra Road
SRI. SHASHI KUMAR .V,
Muttagatti, Village, Kasaba Hobli, Anekal Taluk, Bangalore Urban Dist, Mobile :

Janatha Education Society®
VIVEKANANDA EDUCATIONAL INSTITUTIONS
Dr. Rajkumar Road, Next to Orion Mall, Rajajinagar, Bengaluru - 560055.
TENDER NOTIFICATION
Sealed tenders are invited from reputed Manufacturers/Authorised distributors for the supply of Factory Integrated i7 Desktop Computers (Business Model) for following Institutes of JES.
1. VIVEKANANDA INSTITUTE OF TECHNOLOGY - VKIT
Gudimavu, Kumbalagodu, Bengaluru - 560074. Ph. No - 7625013435 | Email.: vkitprincipal@gmail.com
2. VIVEKANANDA INSTITUTE OF MANAGEMENT - VIM
Dr. Rajkumar Road, Next to Orion Mall, Rajajinagar, Bengaluru - 560055. | Ph. No. 9513953480/82.

Sl No.	Name of Work	Estimated cost Rs.	E.M.D Rs.	Cost of Tender Document Rs. (Non Refundable)
1.	Supply of Dell/Acer/HP/Lenova Computers (90 nos.) - VKIT	75 Lakhs	75,000/-	2000/-
2.	Supply of Dell/Acer/HP/Lenova Computers (30 nos.) - VIM	25 Lakhs	25,000/-	2000/-
E.M.D by way of DD payable in favor of Secretary, Janatha Education Society, Bengaluru.				

Note: Separate tenders to be submitted for SL.No: 1 (VKIT) & SL.No: 2 (VIM)
Tender documents will be issued from **06/02/2025 to 11/02/2025** during office hours on all working days **(9:30am to 4:00pm)** at JES office, Rajajinagar. The completed tenders will be received up to **12:00 Noon on 18/02/2025** and will be opened on the same day at **1:00pm or on 19/02/2025 at 11am.**
The Management reserves the right to accept or reject any or all tenders without assigning any reason.
Sd/- Sri H. C. Balakrishna, Hon. President
Sd/- Sri H. G. Balagopal, Secretary

ಹೆಸರು ಬದಲಾವಣೆ
ಬೆಂಗಳೂರು-560019, ಎನ್‌ಆರ್ ಕಾಲೋನಿ, 3ನೇ ಅಡ್ಡರಸ್ತೆ, 7ನೇ ಸಂಖ್ಯೆಯ ಮನೆಯಲ್ಲಿ ವಾಸವಾಗಿರುವ ಜ್ಯೋತಿ ರಾವ್ ರವರ ಮಗಳಾದ ಸುಮಾರು 25 ವರ್ಷ ವಯಸ್ಸುಳ್ಳ **ಅಶ್ವಿನಿ ರಾವ್**, ಆದ ನಾನು ಈ ಪ್ರಮಾಣ ಪತ್ರದ ಮೂಲಕ ಪ್ರಮಾಣೀಕರಿಸುವುದೇನಂದರೆ, ನನ್ನ ಹೆಸರು "ಅಶ್ವಿನಿ .ಪಿ" ಯಿಂದ "ಅಶ್ವಿನಿ ರಾವ್" ಎಂಬ ಹೆಸರಿಗೆ ಬದಲಾಯಿಸಿಕೊಂಡು ಮತ್ತು ಇನ್ನುಮುಂದೆ "ಅಶ್ವಿನಿ ರಾವ್" ಎಂದು ವ್ಯವಹರಿಸುವುದಾಗಿ ನಾನು ಈ ಮೂಲಕ ವಕೀಲರು ಮತ್ತು ನೋಟರಿಯುವರಾದ ಎಂ. ಪ್ರಭಾಕರ್ ಸಮಕ್ಷಮದಲ್ಲಿ ದಿನಾಂಕ 04.02.2025 ರಂದು ಪ್ರಮಾಣೀಕರಿಸಿ ದೃಢೀಕರಿಸುತ್ತಿದ್ದೇನೆ. ಮತ್ತು ನಾನು ಈಗಾಗಲೇ ಸರ್ಕಾರದ ಇಲಾಖೆಗಳಿಂದ ನೀಡಿರುವ ಎಲ್ಲಾ ಶೈಕ್ಷಣಿಕ ಪ್ರಮಾಣಪತ್ರಗಳು ಮತ್ತು ಗುರುತಿನ ಚೀಟಿಗಳು/ದಾಖಲೆಗಳಲ್ಲಿ ನನ್ನ ಹೊಸ ಹೆಸರಾದ "ಅಶ್ವಿನಿ ರಾವ್" ಎಂದು ಬದಲಾಯಿಸಿಕೊಂಡಿದ್ದೇನೆ.

I, BABU RAJ. M, S/o Muthukrishnanaraj, residing at 07, Gayatri Nilaya, Veeragal Street, Vidyanagar T.Dasarahalli, Bangalore-57 have changed my father name as Muthukrishnan, Vide affidavit dated 05/02/2025 before Notary V.Anjanappa Bangalore

REAL ESTATE SELLING

Commerical

J P Nagar

J.P.NAGAR 80X120
Commerical Site 100ft. Ring Road and 20x30 Duplex old house East,1,35,00,000/-, Murali:9845232711

PERSONAL

Change of Name

I, NAGARAJA
NATARAJA POOJARI, Residing at 3-273, Behinf Govt Hospital Varamballi Brahmavar, Udupi. have changed my name as NAGARAJA, vide affidavit dated 05/02/2025 before Notary V.Anjanappa, Bangalore

I, FATHIMA Zohara aged 23 Years D/o Gulam Hussain Assadi R/at#7-78, Assadi Manzil, Talipady Village, Talipady Kinnigoli Post, Mangalore Taluk, Dakshina Kannada District 574150, Karnataka State, have changed my name to Fathima Zohara Assadi vide affidavit dated 28/01/2025 before notary Meer Hassan, Bangalore

CHANGE OF NAME
I, **H. Viswanath,** residing at No. 22/66, Hosakote Taluk, Baburao Layout, Samethanahalli, Bangalore Rural-560067, have changed my minor daughter's name from **G.V. Jayashree** to **G.V. SAHASRA,** vide affidavit dated: 18-04-2022, before Notary H.B. Veerabhadra Gowda, Kudligi, Henceforth she shall be called **G.V. SAHASRA** only

I, DEYA CHINMAY I
D/o.Irudayaraj F R/a#463 6th`Cross 10th`Main Road Viveknagar, Bengaluru 560047 Declared that in my Baptism Certificate my Name recorded as DEYA CHINMAY I. And now have changed`my name from DEYA CHINMAY I to DIYA I. vide`affidavit dated:4.2.2025 sworn before`Notary S.I.Balaguru Bangalore

Lost

LOST
I, **Mohammed Raza,** Residing at # 55/5, Muniswamy Garden, Neelasandra, Shanthinagar, Bengaluru-560047, have lost the property documents of the above property **(Document No. MMH-1-09210-2012-13)** while shifting residence. Finders please contact: **9663871472**

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

DH DECCAN HERALD Classifieds — More value, more impact ಪ್ರಜಾವಾಣಿ
PUBLIC NOTICE
BOOK YOUR PUBLIC NOTICE ADS IN DH ALL + PRAJAVANI BENGALURU CITY, ON ALL DAYS
www.dhclassifieds.com
@ 550/-* PER SQCM
BOOK NOW
*Conditions apply
For more details contact:
+91 9886213331 | +91 9845114560
+91 9731810277 | 080- 45557163/164

ಬಿಟ್‌ಕಾಯಿನ್ ಹಗರಣ: ನಾಳೆ ವಿಚಾರಣೆಗೆ ಹಾಜರಾಗಲು ಸೂಚನೆ

ನಲಪಾಡ್‌ಗೆ ಮತ್ತೆ ಎಸ್‌ಐಟಿ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಟ್ ಕಾಯಿನ್ ಹಗರಣದ ತನಿಖೆ ನಡೆಸುತ್ತಿರುವ ಸಿಐಡಿಯ ವಿಶೇಷ ತನಿಖಾ ದಳದ (ಎಸ್‌ಐಟಿ) ತನಿಖಾಧಿಕಾರಿಗಳು, ಯುವ ಕಾಂಗ್ರೆಸ್ ಸಮಿತಿಯ ರಾಜ್ಯ ಘಟಕದ ಅಧ್ಯಕ್ಷ ಮೊಹಮ್ಮದ್ ನಲಪಾಡ್ ಅವರಿಗೆ ಫೆಬ್ರುವರಿ 7ರಂದು ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ಜಾರಿ ಮಾಡಿದ್ದಾರೆ.

ಪ್ರಕರಣದ ಸಂಬಂಧ ಇನ್ನೂ ಹೆಚ್ಚಿನ ವಿಚಾರಣೆ ಅಗತ್ಯವಿದ್ದು ಸಿಐಡಿ ಕಚೇರಿಗೆ ಬರುವಂತೆ ನೋಟಿಸ್‌ನಲ್ಲಿ ಉಲ್ಲೇಖಿಸಲಾಗಿದೆ.

ಮೊಹಮ್ಮದ್ ನಲಪಾಡ್

ಮೊಹಮ್ಮದ್ ನಲಪಾಡ್ ಅವರಿಗೆ ಜೂನ್‌ನಲ್ಲಿ ಮೊದಲ ಬಾರಿಗೆ ಎಸ್‌ಐಟಿ ನೋಟಿಸ್ ಜಾರಿ ಮಾಡಿತ್ತು. ಜೂನ್ 12ರಂದು ವಿಚಾರಣೆಗೆ ಹಾಜರಾಗಿದ್ದ ನಲಪಾಡ್ ಅವರು ತನಿಖಾಧಿಕಾರಿಗಳು ಕೇಳಿದ್ದ ಕೆಲವು ಪ್ರಶ್ನೆಗಳಿಗೆ ಲಿಖಿತ ಹಾಗೂ ಮೌಖಿಕವಾಗಿ ಉತ್ತರ ನೀಡಿದ್ದರು. ಇದೀಗ ಎರಡನೇ ಬಾರಿಗೆ ನೋಟಿಸ್ ಜಾರಿ ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಬಿಟ್‌ಕಾಯಿನ್ ಹಗರಣದ ಆರೋಪಿ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ, ನಲಪಾಡ್ ಆಪ್ತ ಎನ್ನಲಾಗಿದೆ. ತನಿಖೆ ವೇಳೆ ಲಭಿಸಿದ ಮಾಹಿತಿ ಆಧರಿಸಿ ನಲಪಾಡ್ ಅವರಿಗೆ ವಿಚಾರಣೆಗೆ ಬರುವಂತೆ ಸೂಚಿಸಲಾಗಿದೆ ಎಂಬುದು ಗೊತ್ತಾಗಿದೆ.

'ಗೇಮ್ ಆ್ಯಪ್‌ಗಳನ್ನು ಹ್ಯಾಕ್ ಮಾಡಿದ್ದ ಪ್ರಕರಣದಲ್ಲಿ ಶ್ರೀಕಿ ಜತೆಗೆ ನಲಪಾಡ್ ಅವರಿಗೆ ವ್ಯಾವಹಾರಿಕ ನಂಟಿತ್ತು ಎಂಬ ಅನುಮಾನವಿದೆ. ಇದಕ್ಕೆ ಸಂಬಂಧಿಸಿದಂತೆ ಕೆಲವು ದಾಖಲೆಗಳು ಸಿಕ್ಕಿವೆ. ವಿಚಾರಣೆಯ ಬಳಿಕ ಮೊಹಮ್ಮದ್ ನಲಪಾಡ್ ಅವರನ್ನೂ ಈ ಪ್ರಕರಣದಲ್ಲಿ ಆರೋಪಿಯಾಗಿ ಪರಿಗಣಿಸಬಹುದೇ ಅಥವಾ ಬೇಡವೇ ಎಂಬುದನ್ನು ಪರಿಶೀಲಿಸಲಾಗುವುದು' ಎಂದು ಎಸ್‌ಐಟಿ ಮೂಲಗಳು ಹೇಳಿವೆ.

ಆರೋಪಿಗಳು ಡಾರ್ಕ್‌ವೆಬ್ ಮೂಲಕ ವಿದೇಶಗಳಿಂದ ಮಾದಕ ವಸ್ತುಗಳನ್ನು ತರಿಸುತ್ತಿದ್ದರು. ಅದಕ್ಕಾಗಿ ಕ್ರಿಪ್ಟೊ ಕರೆನ್ಸಿ ಮತ್ತು ಬಿಟ್‌ಕಾಯಿನ್ ಮೂಲಕ ಹಣಕಾಸಿನ ವ್ಯವಹಾರ ನಡೆಸುತ್ತಿದ್ದರು. ಜತೆಗೆ, ತನಿಖೆಯಲ್ಲಿ ರಾಬಿನ್ ಖಂಡೇಲ್‌ವಾಲ ಜತೆ ಸೇರಿಕೊಂಡು ಕೆಲವು ಗೇಮ್ ಆ್ಯಪ್‌ಗಳನ್ನು ಹ್ಯಾಕ್ ಮಾಡಿ, ಅವುಗಳ ಮಾಲೀಕರಿಂದ ಹಣ ವಸೂಲಿ ಮಾಡಿದ್ದರು ಎಂಬುದು ಎಸ್‌ಐಟಿ ತನಿಖೆಯಿಂದ ಗೊತ್ತಾಗಿತ್ತು.

₹1.75 ಕೋಟಿ ಮೌಲ್ಯದ ಕಳಪೆ ಗುಣಮಟ್ಟದ ವಸ್ತುಗಳ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿಷ್ಠಿತ ಕಂಪನಿಯ ಹೆಸರು ಬಳಸಿಕೊಂಡು ಕಳಪೆ ಗುಣಮಟ್ಟದ ಗೃಹ ಬಳಕೆ ವಸ್ತುಗಳನ್ನು ತಯಾರಿಸುತ್ತಿದ್ದ ಮೂರು ಗೋದಾಮುಗಳ ಮೇಲೆ ಕೇಂದ್ರ ಅಪರಾಧ ವಿಭಾಗದ(ಸಿಸಿಬಿ) ಪೊಲೀಸರು ದಾಳಿ ನಡೆಸಿ, ₹1.75 ಕೋಟಿ ಮೌಲ್ಯದ ಉತ್ಪನ್ನಗಳನ್ನು ಜಪ್ತಿ ಮಾಡಿಕೊಂಡಿದ್ದಾರೆ.

ಕಂಪನಿಯೊಂದರ ಪ್ರತಿನಿಧಿಗೆ ಬಂದ ಮಾಹಿತಿ ಆಧರಿಸಿ, ಕಾಟನ್‌ಪೇಟೆ, ಮಾಚೋಹಳ್ಳಿ, ಕಾಚೋಹಳ್ಳಿ ಗ್ರಾಮದಲ್ಲಿರುವ ಗೋದಾಮುಗಳ ಮೇಲೆ ದಾಳಿ ನಡೆಸಲಾಯಿತು. ಗೋದಾಮುಗಳಲ್ಲಿ ಕಳಪೆ ಗುಣಮಟ್ಟದ ಗೃಹ ಬಳಕೆ ವಸ್ತುಗಳನ್ನು ತಯಾರಿಕೆ ಹಾಗೂ ದಾಸ್ತಾನು ಮಾಡಿಕೊಂಡಿರುವುದು ಪತ್ತೆಯಾಗಿದೆ ಎಂದು ಮೂಲಗಳು ತಿಳಿಸಿವೆ.

ಸಿಸಿಬಿ ಪೊಲೀಸರು ವಶಕ್ಕೆ ಪಡೆದುಕೊಂಡ ವಸ್ತುಗಳು

ರಾಜಸ್ಥಾನದ ಆರೋಪಿ ದಲಪತ್ ಸಿಂಗ್‌ನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ ಎಂದು ಸಿಸಿಬಿ ಪೊಲೀಸರು ಹೇಳಿದರು.

ಗೋದ್ರೇಜ್ ಕನ್ಸ್ಯೂಮರ್ ಪ್ರಾಡಕ್ಟ್, ಪ್ರಾಕ್ಟರ್ ಆ್ಯಂಡ್ ಗ್ಯಾಂಬಲ್ ಸಂಸ್ಥೆ, ಗ್ರೂಪ್ ಕರಮ್‌ಚಂದ್ ಲಿಮಿಟೆಡ್ ಸೇರಿದಂತೆ ವಿವಿಧ ಕಂಪನಿಗಳ ಲೈಜೋಲ್, ಹಾರ್ಪಿಕ್, ಟೈಡ್ ಪೌಡರ್, ಆಲ್‌ಔಟ್, ಏರಿಯಲ್, ಗುಡ್‌ನೈಟ್ ಸೇರಿದಂತೆ ವಿವಿಧ ಬ್ರ್ಯಾಂಡ್‌ಗಳ ಗೃಹ ಬಳಕೆ ಉತ್ಪನ್ನಗಳನ್ನು ನಕಲಿಯಾಗಿ ತಯಾರಿಸಿ ಗೋದಾಮಿನಲ್ಲಿ ದಾಸ್ತಾನು ಮಾಡಿಕೊಳ್ಳಲಾಗಿತ್ತು ಎಂದು ಸಿಸಿಬಿ ಪೊಲೀಸರು ತಿಳಿಸಿದ್ದಾರೆ.

'ಕಳಪೆ ಗುಣಮಟ್ಟದ ವಸ್ತುಗಳನ್ನು ತಯಾರಿಸಲು ಬೇಕಾದ ಕಚ್ಚಾ ವಸ್ತುಗಳನ್ನು ಗುಜರಾತ್‌ನಿಂದ ಆರೋಪಿ ತರಿಸಿಕೊಳ್ಳುತ್ತಿದ್ದ. ಬೆಂಗಳೂರಿನಲ್ಲಿ ತಯಾರಿಸಿ ಆಂಧ್ರಪ್ರದೇಶ, ಕೇರಳ, ತಮಿಳುನಾಡು ಹಾಗೂ ರಾಜ್ಯದ ಹುಬ್ಬಳ್ಳಿಗೆ ಪ್ರತಿಷ್ಠಿತ ಕಂಪನಿಗಳ ಬ್ರ್ಯಾಂಡ್ ಹೆಸರಿನಲ್ಲಿ ಪೂರೈಸುತ್ತಿದ್ದ' ಎಂದು ಮೂಲಗಳು ಹೇಳಿವೆ.

ಅಪರಾಧ ಸುದ್ದಿ

ಕುಂಭಮೇಳದ ಪ್ಯಾಕೇಜ್ ಹೆಸರಿನಲ್ಲಿ ವಂಚನೆ

ಬೆಂಗಳೂರು: ಕುಂಭಮೇಳಕ್ಕೆ ಸುಲಭದ ಪ್ಯಾಕೇಜ್ ನೀಡುವುದಾಗಿ ನಂಬಿಸಿ ಟ್ರಾವೆಲ್ಸ್ ಏಜೆನ್ಸಿಯೊಂದು ವಂಚನೆ ಮಾಡಿದ್ದು, ಈ ಬಗ್ಗೆ ಜ್ಞಾನಭಾರತಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜ್ಞಾನಭಾರತೀಯ ನಿವಾಸಿ ಪ್ರದೀಪ್ ಎಂಬವವರು ನೀಡಿದ ದೂರಿನ ಮೇರೆಗೆ ತಮಿಳುನಾಡಿನ ಸುಬ್ರಹ್ಮಣ್ಯ ಟೂರ್ಸ್‌ನ ರಾಕೇಶ್ ಎಂಬ ಆರೋಪಿ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

'ಉತ್ತರ ಪ್ರದೇಶದ ಪ್ರಯಾಗ್ ರಾಜ್‌ನಲ್ಲಿ ನಡೆಯುತ್ತಿರುವ ಕುಂಭಮೇಳಕ್ಕೆ ತೆರಳುವ ಉದ್ದೇಶದಿಂದ ಪ್ರದೀಪ್ ಅವರು ಆನ್‌ಲೈನ್‌ನಲ್ಲಿ ವಿಶೇಷ ಪ್ಯಾಕೇಜ್‌ಗಳನ್ನು ಹುಡುಕಾಡುತ್ತಿದ್ದರು. ನಂತರ ಆರೋಪಿ ರಾಕೇಶ್ ಪ್ರದೀಪ್ ಅವರಿಗೆ ಕರೆ ಮಾಡಿ ಕಡಿಮೆ ಖರ್ಚಿನಲ್ಲಿ ಪ್ರಯಾಗ್ ರಾಜ್‌ನಲ್ಲಿ ನಡೆಯುತ್ತಿರುವ ಕುಂಭಮೇಳಕ್ಕೆ ಕರೆದುಕೊಂಡು ಹೋಗಿ ಯಾವುದೇ ತೊಂದರೆ ಆಗದಂತೆ ಪ್ರವಾಸ ಮುಗಿಸಿಕೊಂಡು ಕರೆದುಕೊಂಡು ಬರುತ್ತೇವೆ ಎಂಬ ಭರವಸೆ ನೀಡಿದ್ದ' ಎಂದು ಪೊಲೀಸರು ತಿಳಿಸಿದರು.

'ಪ್ರದೀಪ್ ಹಂತ–ಹಂತವಾಗಿ ಆರೋಪಿ ರಾಕೇಶ್‌ಗೆ ₹64 ಸಾವಿರ ಆನ್‌ಲೈನ್ ಮೂಲಕ ಪಾವತಿಸಿದ್ದರು. ಹಣ ಪಡೆದ ನಂತರ ಆರೋಪಿ ಸಂಪರ್ಕಕ್ಕೆ ಸಿಗದ ಕಾರಣ ಪ್ರದೀಪ್ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ' ಎಂದು ಪೊಲೀಸರು ಹೇಳಿದರು.

4,313 ಪ್ರಕರಣ, ₹21 ಲಕ್ಷ ದಂಡ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೂರ್ವ ವಿಭಾಗದ ಸಂಚಾರ ಪೊಲೀಸರು ಕಾರ್ಯಾಚರಣೆ ನಡೆಸಿ, ಸಂಚಾರ ನಿಯಮ ಉಲ್ಲಂಘಿಸಿದ ವಾಹನ ಸವಾರರು ಹಾಗೂ ಚಾಲಕರ ವಿರುದ್ಧ 4,313 ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಜನವರಿ 27ರಿಂದ ಫೆಬ್ರುವರಿ 4ರವರೆಗೆ ನಡೆದ ವಿಶೇಷ ಕಾರ್ಯಾಚರಣೆಯಲ್ಲಿ ಏಕಮುಖ ರಸ್ತೆಯಲ್ಲಿ ವಿರುದ್ಧ ದಿಕ್ಕಿನಿಂದ ಸಂಚಾರ, ನಿರ್ಬಂಧಿತ ರಸ್ತೆಯಲ್ಲಿ ವಾಹನ ಸಂಚಾರ, ಪಾದಚಾರಿ ಮಾರ್ಗದಲ್ಲಿ ವಾಹನ ನಿಲುಗಡೆ ಹಾಗೂ ಸಂಚಾರ, ಹೆಲ್ಮೆಟ್ ರಹಿತ ಪ್ರಯಾಣ, ಚಾಲನೆ ಮಾಡುವ ಸಂದರ್ಭದಲ್ಲಿ ಮೊಬೈಲ್ ಬಳಕೆ, ಮೂವರು ಕುಳಿತು ದ್ವಿಚಕ್ರ ವಾಹನದಲ್ಲಿ ಸಂಚಾರ ಮಾಡುತ್ತಿದ್ದವರನ್ನು ಪತ್ತೆಹಚ್ಚಿ ಭಾರತೀಯ ಮೋಟಾರು ವಾಹನ(ಐಎಂವಿ) ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಸಂಚಾರ ಪೂರ್ವ ವಿಭಾಗದ ಡಿಸಿಪಿ ಸಾಹಿಲ್ ಬಾಗ್ಲಾ ಅವರು ತಿಳಿಸಿದ್ದಾರೆ.

ಸಂಚಾರ ನಿಯಮ ಉಲ್ಲಂಘಿಸಿದವರಿಂದ ₹21 ಲಕ್ಷ ದಂಡ ಸಂಗ್ರಹ ಮಾಡಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

311 ಬಾರಿ ನಿಯಮ ಉಲ್ಲಂಘನೆ: ₹1.61 ಲಕ್ಷ ದಂಡ ಪಾವತಿ

ಮೂರು ವರ್ಷಗಳಲ್ಲಿ 311 ಬಾರಿ ಸಂಚಾರ ನಿಯಮ ಉಲ್ಲಂಘಿಸಿದ್ದ ದ್ವಿಚಕ್ರ ವಾಹನ ಮಾಲೀಕರೊಬ್ಬರು ಪೊಲೀಸರಿಗೆ ₹1.61 ಲಕ್ಷ ದಂಡ ಪಾವತಿಸಿ, ವಾಹನವನ್ನು ಬಿಡಿಸಿಕೊಂಡಿದ್ದಾರೆ.

ಸಾಮಾಜಿಕ ಮಾಧ್ಯಮ 'ಎಕ್ಸ್' ಖಾತೆಯಲ್ಲಿ ಬಂದಿದ್ದ ದೂರು ಆಧರಿಸಿ ಕಾರ್ಯಾಚರಣೆ ನಡೆಸಿದ್ದ ಸಿಟಿ ಮಾರುಕಟ್ಟೆ ಸಂಚಾರ ಠಾಣೆಯ ಪೊಲೀಸರು ಕೆಎ 05 ಜೆಎಕ್ಸ್ 1344 ನೋಂದಣಿ ಸಂಖ್ಯೆಯ ದ್ವಿಚಕ್ರ ವಾಹನವನ್ನು ಪತ್ತೆ ಹಚ್ಚಿದ್ದರು. ದುಬಾರಿ ಮೊತ್ತದ ದಂಡ ಪಾವತಿಸಲು ಬಾಕಿ ಉಳಿಸಿಕೊಂಡಿದ್ದ ಮಾಲೀಕನಿಗೆ ನೋಟಿಸ್ ಜಾರಿ ಮಾಡಿದ್ದರು. ವಾಹನದ ಮಾಲೀಕ ಕಲಾಸಿಪಾಳ್ಯದ ಪೆರಿಸ್ವಾಮಿ ಅವರು ದಂಡ ಪಾವತಿಸಿ ರಶೀದಿ ಪಡೆದು ದ್ವಿಚಕ್ರ ವಾಹನವನ್ನು ಬಿಡಿಸಿಕೊಂಡಿದ್ದಾರೆ. ದಾಖಲೆಗಳ ಪರಿಶೀಲನೆ ವೇಳೆ 2023ರ ಮಾರ್ಚ್‌ನಿಂದ ಇದುವರೆಗೂ 311 ಬಾರಿ ಸಂಚಾರ ನಿಯಮ ಉಲ್ಲಂಘಿಸಿದ್ದು, ಪತ್ತೆಯಾಗಿತ್ತು. ಇನ್ನು ಮುಂದೆ ಸಂಚಾರ ನಿಯಮಗಳನ್ನು ಪಾಲಿಸುವಂತೆ ಪೆರಿಸ್ವಾಮಿ ಅವರಿಗೆ ತಿಳಿಸಲಾಗಿದೆ ಎಂದು ಸಂಚಾರ ವಿಭಾಗದ ಪೊಲೀಸರು ಹೇಳಿದರು.

ಕಾವೇರಿ 2.0 ತಂತ್ರಾಂಶ ಸುಸ್ಥಿತಿಗೆ: ಕೃಷ್ಣಬೈರೇಗೌಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳೆದ ಒಂದು ವಾರದಿಂದ ತಾಂತ್ರಿಕ ಸಮಸ್ಯೆಗೆ ಒಳಗಾಗಿದ್ದ ಕಾವೇರಿ 2.0 ತಂತ್ರಾಂಶವನ್ನು ಸರಿಪಡಿಸಲಾಗಿದ್ದು, ತಂತ್ರಾಂಶವು ಎಂದಿನಂತೆ ಕಾರ್ಯ ನಿರ್ವಹಿಸುತ್ತಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದ್ದಾರೆ.

ತಾಂತ್ರಿಕ ಸಮಸ್ಯೆ ಕಾರಣಕ್ಕೆ ಆಸ್ತಿ ನೋಂದಣಿ ಪ್ರಕ್ರಿಯೆ ಮತ್ತು ಇ.ಸಿ/ಸಿ.ಸಿ ಸೇವೆಗಳ ಮೇಲೂ ಪರಿಣಾಮ ಉಂಟಾಗಿತ್ತು. ಇದರಿಂದ ಆದಾಯ ಸಂಗ್ರಹವೂ ಕಡಿಮೆ ಆಗಿತ್ತು. ಮುಂದೆ ಈ ರೀತಿಯ ತಾಂತ್ರಿಕ ಸಮಸ್ಯೆಗಳಿಂದ ಆಗಬಹುದಾದ ಆಪಾಯ ತಪ್ಪಿಸಲು ಭದ್ರತಾ ಕ್ರಮಗಳನ್ನು ಜಾರಿಗೆ ತರಲಾಗಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಫೆ.1ರಂದು ತಾಂತ್ರಿಕ ಸಮಸ್ಯೆ ಕಾರಣ ನೋಂದಣಿಗಳ ಪ್ರಮಾಣ 556ಕ್ಕೆ ಇಳಿದಿತ್ತು. ಇ.ಸಿ (ಋಣಭಾರ ಪ್ರಮಾಣ ಪತ್ರ) 1,649 ಮತ್ತು ಸಿ.ಸಿ (ದೃಢೀಕರಣ ಪತ್ರ) 405 ನೀಡಲಾಗಿದ್ದು, ₹15.19 ಕೋಟಿ ಸಂಗ್ರಹ ಆಗಿತ್ತು. ಫೆ.3ರಂದು ತುರ್ತು ಕ್ರಮಗಳನ್ನು ತೆಗೆದುಕೊಂಡಿದ್ದರಿಂದ ಸ್ವಲ್ಪ ಮಟ್ಟಿನ ಸುಧಾರಣೆ ಆದರೂ ಫೆ.4ರಂದು ಮತ್ತೊಮ್ಮೆ ಕಡಿಮೆ ಆಗಲಾರಂಭಿಸಿತು. ಫೆ.5ರಂದು 7,225 ನೋಂದಣಿಗಳಾಗಿದ್ದು ₹62.59 ಕೋಟಿ ಸಂಗ್ರಹ ಆಗಿದೆ ಎಂದಿದ್ದಾರೆ.

ನರ್ಸಿಂಗ್ ವಿದ್ಯಾರ್ಥಿನಿ ಆತ್ಮಹತ್ಯೆ

ಹಾರೋಹಳ್ಳಿ: ತಾಲ್ಲೂಕಿನ ದೇವರ ಕಗ್ಗಲಹಳ್ಳಿಯಲ್ಲಿರುವ ನರ್ಸಿಂಗ್ ಕಾಲೇಜಿನ ಹಾಸ್ಟೆಲ್‌ನಲ್ಲಿ ಕೇರಳ ಮೂಲದ ಬಿ.ಎಸ್ಸಿ ನರ್ಸಿಂಗ್ ವಿದ್ಯಾರ್ಥಿನಿ ಅನಾಮಿಕ ವಿನೀತ್ (19) ಮಂಗಳವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಅನಾಮಿಕ ವಿನೀತ್

ಪುತ್ರಿ ಸಾವಿಗೆ ಕಾಲೇಜಿನ ಆಡಳಿತ ಮಂಡಳಿ ಕಿರುಕುಳವೇ ಕಾರಣ ಎಂದು ಆರೋಪಿಸಿ ಪೋಷಕರು ನೀಡಿದ ದೂರಿನ ಮೇರೆಗೆ ಕಾಲೇಜಿನ ಪ್ರಾಚಾರ್ಯ ಮತ್ತು ಆಡಳಿತ ಮಂಡಳಿ ಸಿಬ್ಬಂದಿ ವಿರುದ್ಧ ಹಾರೋಹಳ್ಳಿ ಪೊಲೀಸ್ ಠಾಣೆಯಲ್ಲಿ ಬುಧವಾರ ಪ್ರಕರಣ ದಾಖಲಾಗಿದೆ.

ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿ, ಆಡಳಿತ ಮಂಡಳಿ ವಿರುದ್ಧ ಕಾಲೇಜು ಆವರಣದಲ್ಲಿ ಮಧ್ಯಾಹ್ನ ಪ್ರತಿಭಟನೆ ನಡೆಸಿದ್ದರು.

ಪ್ರಥಮ ವರ್ಷದ ವಿದ್ಯಾರ್ಥಿನಿ ಅನಾಮಿಕ ಕೇರಳದ ಕಣ್ಣೂರು ಜಿಲ್ಲೆಯ ಮುಜ್ಹಪ್ಪಿಲನಗದ ಗ್ರಾಮದವರು.

ಮರಣಪತ್ರ: ಅನಾಮಿಕ ಬರೆದಿರುವ ಮರಣಪತ್ರ ಸ್ಥಳದಲ್ಲಿ ಸಿಕ್ಕಿದೆ. ಅದರಲ್ಲಿ, 'ನನ್ನ ಸಾವಿಗೆ ನಾನೇ ಕಾರಣ. ಬೇರಾರು ಅಲ್ಲ' ಎಂದು ಬರೆದಿದ್ದಾರೆ.

ಪತ್ನಿಯ ಕೊಲೆ ಮಾಡಿದ ಪತಿಯ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪತ್ನಿಗೆ ನಿದ್ರೆ ಮಾತ್ರೆ ನೀಡಿ, ಕತ್ತು ಹಿಸುಕಿ ಕೊಲೆ ಮಾಡಿ, ಸಹಜ ಸಾವು ಎಂದು ಬಿಂಬಿಸಿದ್ದ ಪತಿಯನ್ನು ವೈಯಾಲಿಕಾವಲ್ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಮಲ್ಲೇಶ್ವರದ 18 ಅಡ್ಡರಸ್ತೆಯ ನಿವಾಸಿ ಚೇತನಾ (42) ಕೊಲೆಯಾದವರು. ಆರೋಪಿ ಶರತ್ ಉತ್ತಂಗಿ (43) ಎಂಬಾತನನ್ನು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಪೊಲೀಸರು ತಿಳಿಸಿದರು.

'ದಾವಣಗೆರೆ ಜಿಲ್ಲೆಯವರಾದ ಶರತ್ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ. ಪತ್ನಿ ಚೇತನಾ ಖಾಸಗಿ ಕಾಲೇಜಿನ ಉಪನ್ಯಾಸಕಿಯಾಗಿ ಕಾರ್ಯನಿರ್ವಹಿಸುತ್ತಿದ್ದರು. ಇಬ್ಬರು 15 ವರ್ಷಗಳ ಹಿಂದೆ ಪ್ರೇಮ ವಿವಾಹವಾಗಿದ್ದರು. ದಂಪತಿಗೆ ಹೆಣ್ಣು ಮಗುವಿದೆ. ಕಳೆದ ಒಂದು ವರ್ಷದಿಂದ ಮಲ್ಲೇಶ್ವರದ 18ನೇ ಅಡ್ಡರಸ್ತೆಯ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು. ಫೆಬ್ರುವರಿ 3ರಂದು ಚೇತನಾ ಹಾಗೂ ಶರತ್ ಮಧ್ಯೆ ಹಣಕಾಸಿನ ವಿಚಾರಕ್ಕೆ ಸಂಬಂಧಿಸಿದಂತೆ ಗಲಾಟೆ ನಡೆದಿತ್ತು. ನಂತರ ಚೇತನಾ ಅವರಿಗೆ ಸುಸ್ತು, ತಲೆ ಸುತ್ತು ಬಂದಿದೆ ಎಂದು ಪತಿ ಶರತ್‌ಗೆ ತಿಳಿಸಿದ್ದರು. ಪತ್ನಿಗೆ ಜ್ವರದ ಮಾತ್ರೆ ಎಂದು ನಂಬಿಸಿ ನಿದ್ರೆ ಮಾತ್ರೆ ನೀಡಿ, ಗಾಢ ನಿದ್ರೆಗೆ ಜಾರಿದ ಬಳಿಕ ಕತ್ತು ಹಿಸುಕಿ ಕೊಲೆ ಮಾಡಿರುವುದು ತನಿಖೆ ವೇಳೆ ಗೊತ್ತಾಗಿದೆ' ಎಂದು ಪೊಲೀಸರು ಹೇಳಿದರು.

'ಮಧ್ಯ ರಾತ್ರಿ 2.30ಕ್ಕೆ ಪಕ್ಕದಲ್ಲಿ ಮಲಗಿದ್ದ ಹೆಂಡತಿಯು ಮಂಚದಿಂದ ಕೆಳಗೆ ಬಿದ್ದಿದ್ದಳು. ಕೂಡಲೇ ಮಗಳನ್ನು ಎಬ್ಬಿಸಿ, ನೆಲಮಹಡಿಯಲ್ಲಿ ವಾಸವಿದ್ದವರ ಸಹಾಯದಿಂದ ಖಾಸಗಿ ಆಸ್ಪತ್ರೆಗೆ ಕರೆದೊಯ್ದಿದ್ದೆ. ಮಾರ್ಗ ಮಧ್ಯದಲ್ಲಿ ಪತ್ನಿ ಸಾವಿಗೀಡಾಗಿದ್ದಾಗಿ ವೈದ್ಯರು ಹೇಳಿರುವುದಾಗಿ ಸಂಬಂಧಿಕರ ಮುಂದೆ ಶರತ್ ಸುಳ್ಳು ಹೇಳಿದ್ದ. ಮೃತದೇಹವನ್ನು ಪರಿಶೀಲಿಸಿದಾಗ ಕುತ್ತಿಗೆ ಹಾಗೂ ಕೆನ್ನೆಯಲ್ಲಿ ತರಚಿದ ಗಾಯವಿರುವುದನ್ನು ಗಮನಿಸಿದ್ದರು. ಚೇತನಾಳನ್ನು ಕುತ್ತಿಗೆ ಹಿಸುಕಿ ಹತ್ಯೆ ಮಾಡಿರುವುದಾಗಿ ಶಂಕೆ ವ್ಯಕ್ತಪಡಿಸಿ ದೂರು ನೀಡಲಾಗಿತ್ತು. ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ವಿಚಾರಣೆಗೊಳಪಡಿಸಿದಾಗ ಹತ್ಯೆ ಮಾಡಿರುವುದಾಗಿ ತಿಳಿಸಿದ್ದಾನೆ' ಎಂದು ಪೊಲೀಸರು ತಿಳಿಸಿದ್ದಾರೆ.

ನಗರದಲ್ಲಿ ಇಂದು

ಸಖಿ ಸಾರಥಿ–ಸ್ವಾವಲಂಬನೆಯೆಡೆಗೆ ಮೊದಲ ಹೆಜ್ಜೆ: ಲಘು, ಭಾರಿ ವಾಹನ ಚಾಲನಾ ತರಬೇತಿ, ವಿವಿಧ ಉತ್ಪನ್ನಗಳ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳ, ಆರೋಗ್ಯ ಶಿಬಿರ ಮತ್ತು ಸಿರಿಧಾನ್ಯ ಮೇಳ ಉದ್ಘಾಟನಾ ಕಾರ್ಯಕ್ರಮ, ಉದ್ಘಾಟನೆ: ಉಮಾ ಮಹಾದೇವನ್, ಉಪಸ್ಥಿತಿ: ಕೆ.ಎಸ್. ಲತಾ ಕುಮಾರಿ, ಆಯೋಜನೆ ಹಾಗೂ ಸ್ಥಳ: ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ, ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಳಿಗ್ಗೆ 10

ಭಾರತ ರಂಗ ಮಹೋತ್ಸವ: ಉತ್ಸವ ಗೌರವ: ಬಿ. ಜಯಶ್ರೀ, ನಾಟಕ ಪ್ರದರ್ಶನ: 'ಪಾಕುಡುರಾಲ್ಲು', ತಂಡ: ನಿಭಾ ಥಿಯೇಟರ್ ಎನ್ಸೆಂಬಲ್, ಆಯೋಜನೆ: ಕರ್ನಾಟಕ ನಾಟಕ ಅಕಾಡೆಮಿ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 5

ಬಿ.ಜಯಶ್ರೀ

ಗವಿಗಂಗಾಧರೇಶ್ವರ ಬ್ರಹ್ಮರಥೋತ್ಸವ: ಬೆಳಿಗ್ಗೆ 10.30ಕ್ಕೆ ಅಭಿಷೇಕ, ಸಂಜೆ 6.30ಕ್ಕೆ ಅಂಕುರಾರ್ಪಣಾ, ಆಯೋಜನೆ ಮತ್ತು ಸ್ಥಳ: ಗವಿಗಂಗಾಧರೇಶ್ವರ ದೇವಸ್ಥಾನ, ಗವಿಪುರ ಗುಟ್ಟಹಳ್ಳಿ, ಹನುಮಂತನಗರ

ಮಲ್ಲೇಪುರಂ ಜಿ. ವೆಂಕಟೇಶ ಅವರು ಸಂಪಾದಿಸಿರುವ 'ದೇವುಡು ಕಥಾಲೋಕ' ಪುಸ್ತಕ ಬಿಡುಗಡೆ ಹಾಗೂ ಕೆ.ಜಿ. ಲಕ್ಷ್ಮೀನಾರಾಯಣಪ್ಪ ಅವರಿಗೆ ಅಭಿನಂದನೆ: ಪುಸ್ತಕ ಬಿಡುಗಡೆ: ವೈ.ಎಸ್. ಸಿದ್ದೇಗೌಡ, ಅಧ್ಯಕ್ಷತೆ: ಕೆ.ಈ. ರಾಧಾಕೃಷ್ಣ, ಕೃತಿ ಬಗ್ಗೆ ಮಾತು: ಎನ್.ಎಸ್. ಶ್ರೀಧರಮೂರ್ತಿ, ಆಯೋಜನೆ: ಸಪ್ನ ಬುಕ್ ಹೌಸ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ.ರಸ್ತೆ, ಸಂಜೆ 5.30

ಮಲ್ಲೇಪುರಂ ಜಿ.ವೆಂಕಟೇಶ

ಡಾ.ಎಂ.ಎ. ಜಯಚಂದ್ರ ದತ್ತಿ ಉಪನ್ಯಾಸ: 'ಮಹಾಕವಿ ಚಂದ್ರಸಾಗರವರ್ಣಿಯ ಜೀವನ ಮತ್ತು ಕೃತಿಗಳು': ಎಸ್. ಗಂಗಾಂಬಿಕೆ ಗೋವರ್ಧನ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ: ಬಿ.ಎಂ.ಶ್ರೀ. ಪ್ರತಿಷ್ಠಾನ, ಸ್ಥಳ: ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ. ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 5

60ನೇ ನಾದಜ್ಯೋತಿ ಸಂಗೀತ ಸಂಭ್ರಮ, ವಜ್ರ ಮಹೋತ್ಸವದ ಸಂಭ್ರಮ: ಗಾಯನ: ಆರ್.ಎ. ರಮಾಮಣಿ, ಪಿಟೀಲು: ಟಿ.ಎಸ್. ಕೃಷ್ಣಮೂರ್ತಿ, ಮೃದಂಗ: ಎನ್.ಜಿ.ರವಿ, ಮೋರ್ಸಿಂಗ್: ಭಾರದ್ವಾಜ್ ಆರ್. ಸಾತವಳ್ಳಿ, ಆಯೋಜನೆ: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮ ಮಂದಿರ, ಮಲ್ಲೇಶ್ವರ, ಸಂಜೆ 6

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಸಸಿಯೊಂದಕ್ಕೆ ₹3,108 ವೆಚ್ಚ

ಕೆ–ರೈಡ್ ಯೋಜನೆಗಾಗಿ ತೆರವಾದ ಮರಗಳಿಗೆ ಪರ್ಯಾಯ ಸಸಿ ನಾಟಿ

• ಆರ್. ಮಂಜುನಾಥ್

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ಎರಡು ವಲಯಗಳಲ್ಲಿ 34 ಸಾವಿರ ಸಸಿಗಳನ್ನು ನೆಟ್ಟು ಪೋಷಿಸಲು ಪ್ರತಿ ಸಸಿಗೆ ₹3,108 ವೆಚ್ಚ ಮಾಡಲು ಅರಣ್ಯ ವಿಭಾಗ ಮತ್ತೆ ಮುಂದಾಗಿದೆ.

ಕರ್ನಾಟಕ ರೈಲು ಮೂಲಸೌಕರ್ಯ ಅಭಿವೃದ್ಧಿ ಎಂಟರ್‌ಪ್ರೈಸಸ್ (ಕೆ–ರೈಡ್) ಯೋಜನೆಯಿಂದ ಮರಗಳು ತೆರವಾಗಿರುವುದಕ್ಕೆ ಪರ್ಯಾಯವಾಗಿ ಸಸಿಗಳನ್ನು ನೆಟ್ಟು, ಪೋಷಿಸುವ ಕಾರ್ಯವನ್ನು ಬಿಬಿಎಂಪಿಗೆ ವಹಿಸಲಾಗಿದೆ. ಹಣ ಪಡೆದುಕೊಂಡಿರುವ ಬಿಬಿಎಂಪಿ ಅರಣ್ಯ ವಿಭಾಗ, ಸಸಿ ನೆಡುವ ಪ್ರಕ್ರಿಯೆ ಆರಂಭಿಸಿದೆ.

ಮಹದೇವಪುರ ಹಾಗೂ ಬೊಮ್ಮನಹಳ್ಳಿ ವಲಯಗಳಲ್ಲಿ ಸಸಿ ನೆಟ್ಟು, ಐದು ವರ್ಷ ಅವುಗಳನ್ನು ನಿರ್ವಹಣೆ ಮಾಡಲು ಅರಣ್ಯ ವಿಭಾಗದಿಂದ ಟೆಂಡರ್ ಕರೆಯಲಾಗಿದೆ. ಎರಡು ವಲಯಗಳಲ್ಲೇ ಸಸಿ ನೆಡುವ ಕಾರ್ಯ ಕೈಗೊಳ್ಳಬೇಕಾಗಿದ್ದರೂ, ಒಂಬತ್ತು ಭಾಗ ಮಾಡಲಾಗಿದೆ. ಮಹದೇವಪುರ ವಲಯದಲ್ಲಿ ನಾಲ್ಕು ಹಾಗೂ ಬೊಮ್ಮನಹಳ್ಳಿ ವಲಯದಲ್ಲಿ ಐದು ಭಾಗಗಳಲ್ಲಿ ಸಸಿ ನೆಡಲು ಪ್ರತ್ಯೇಕ ಯೋಜನೆ ರೂಪಿಸಲಾಗಿದೆ.

‘ಒಂದು ಸಸಿಗೆ ₹3 ಸಾವಿರದಷ್ಟು ವೆಚ್ಚ ಮಾಡುವ ಅಗತ್ಯವಿಲ್ಲ. ಎಂತಹದ್ದೇ ಸಸಿಯಾದರೂ, ಆರು ಅಡಿ ಬೆಳೆದಿದ್ದರೂ ಗರಿಷ್ಠ ₹200ಕ್ಕೆ ಸಿಗುತ್ತದೆ. ನಿರ್ವಹಣೆ ಮಾಡಲೆಂದು ಸಾವಿರಾರು ರೂಪಾಯಿ ವ್ಯಯ ಮಾಡುತ್ತಿರುವುದು ದುಂದುವೆಚ್ಚವೇ ಸರಿ. ಬಿಬಿಎಂಪಿ ಈವರೆಗೆ ಲಕ್ಷಾಂತರ ಸಸಿ ನೆಟ್ಟಿದೆ ಎಂದು ಹೇಳಿಕೊಳ್ಳುತ್ತಿದೆ. ಆದರೆ, ವಾಸ್ತವದಲ್ಲಿ ಅವುಗಳನ್ನು ಉಳಿಸಿಕೊಂಡಿಲ್ಲ. ವೆಚ್ಚ ಮಾಡಲೆಂದೇ ಸಸಿ ನೆಡುವ ಯೋಜನೆ ರೂಪಿಸುತ್ತಿದ್ದಾರೆ’ ಎಂದು ಪರಿಸರ ಕಾರ್ಯಕರ್ತ ವಿಜಯ್ ದೂರುತ್ತಾರೆ.

ಇದೇ ಮೊದಲಲ್ಲ: ಬಿಬಿಎಂಪಿ ಅರಣ್ಯ ಇಲಾಖೆ ಪ್ರತಿ ಸಸಿಗೆ ₹3 ಸಾವಿರಕ್ಕೂ ಹೆಚ್ಚು ವೆಚ್ಚ ಮಾಡುತ್ತಿರುವುದು ಇದೇ ಮೊದಲಲ್ಲ. ದಾಬಸ್‌ಪೇಟೆ ಮತ್ತು ದೊಡ್ಡಬೆಳವಂಗಲ ನಡುವೆ ನಗರದ ಹೊರವಲಯದಲ್ಲಿ ನಿರ್ಮಾಣವಾಗುವ ಸ್ಯಾಟಲೈಟ್ ಟೌನ್ ವರ್ತುಲ ರಸ್ತೆಯ (ಎಸ್‌ಟಿಆರ್‌ಆರ್) ಎರಡೂ ಬದಿಯಲ್ಲಿ 10,900 ಗಿಡಗಳನ್ನು ನೆಡಲು ₹3.4 ಕೋಟಿ ವೆಚ್ಚ ಮಾಡಲು 2024ರ ಜುಲೈನಲ್ಲಿ ಟೆಂಡರ್ ಕರೆದು, ಕಾರ್ಯಾದೇಶ ನೀಡಲಾಗಿತ್ತು. ಈ ವರ್ಷ ಬೇಸಿಗೆ ಆರಂಭವಾಗುತ್ತಿದ್ದರೂ ಆ ಸಸಿಗಳನ್ನು ನೆಟ್ಟಿರುವ ಕುರುಹುಗಳಿಲ್ಲ, ಜಿ–ಟ್ಯಾಗ್ ಕೂಡ ಅಳವಡಿಸಿಲ್ಲ.

ಬಿಬಿಎಂಪಿಯ ವಲಯಗಳಲ್ಲಿ 1,13,500 ಸಸಿಗಳನ್ನು ನೆಡಲು 27 ಕಾಮಗಾರಿಗಳನ್ನಾಗಿ ವಿಭಾಗಿಸಿ 2024ರಲ್ಲಿ ಕೆಲಸ ಆರಂಭಿಸಲಾಗಿದೆ. ಇದಕ್ಕಾಗಿ ₹21.36 ಕೋಟಿ ವೆಚ್ಚ ಮಾಡಲಾಗುತ್ತಿದ್ದು, ಈ ಯೋಜನೆಯಲ್ಲಿ ಪ್ರತಿ ಸಸಿಗೆ ₹1,881 ವೆಚ್ಚವಾಗುತ್ತಿದೆ. ಸಸಿ ನೆಟ್ಟು, ಪೋಷಿಸಲು ದುಬಾರಿ ಮೊತ್ತವನ್ನು ವೆಚ್ಚ ಮಾಡುತ್ತಿರುವುದಕ್ಕೆ ಸಾರ್ವಜನಿಕರಿಂದ ಟೀಕೆ ವ್ಯಕ್ತವಾಗಿದ್ದರೂ, ಅರಣ್ಯ ವಿಭಾಗದಿಂದ ಕಾಮಗಾರಿ ಮುಂದುವರಿಸಲಾಗಿದೆ.

ಸಸಿಗಳಿಗೆ ದುಂದು ವೆಚ್ಚದ ಬಗ್ಗೆ ಪ್ರತಿಕ್ರಿಯೆಗೆ ಅರಣ್ಯ ವಿಭಾಗದ ಉಪ ಸಂರಕ್ಷಣಾಧಿಕಾರಿ ಸ್ವಾಮಿ ಅವರನ್ನು ಸಂಪರ್ಕಿಸಲು ಪ್ರಯತ್ನಿಸಿದಾಗ ಅವರು ಕರೆ ಸ್ವೀಕರಿಸಲಿಲ್ಲ.

ಅಂಕಿ ಅಂಶಗಳು

₹10.59 ಕೋಟಿ ಮಹದೇವಪುರ, ಬೊಮ್ಮನಹಳ್ಳಿ ವಲಯದಲ್ಲಿ ನೆಡುವ ಸಸಿಗಳ ವೆಚ್ಚ	34,100 ಎರಡು ವಲಯದಲ್ಲಿ ನೆಡುವ ಸಸಿಗಳ ಸಂಖ್ಯೆ
₹4.87 ಕೋಟಿ ಮಹದೇವಪುರ ವಲಯದಲ್ಲಿ ನೆಡುವ ಸಸಿಗಳ ವೆಚ್ಚ	15,700 ಮಹದೇವಪುರ ವಲಯದಲ್ಲಿ ನೆಡುವ ಸಸಿಗಳು
₹5.71 ಕೋಟಿ ಬೊಮ್ಮನಹಳ್ಳಿ ವಲಯದಲ್ಲಿ ನೆಡುವ ಸಸಿಗಳ ವೆಚ್ಚ	18,400 ಬೊಮ್ಮನಹಳ್ಳಿ ವಲಯದಲ್ಲಿ ನೆಡುವ ಸಸಿಗಳು

ಮುಖ್ಯಾಂಶಗಳು

- ಪ್ರತಿ ಸಸಿಗೆ ₹3 ಸಾವಿರಕ್ಕೂ ಹೆಚ್ಚು ವೆಚ್ಚ ಮಾಡುತ್ತಿರುವ ಮೂರನೇ ಯೋಜನೆ
- ಪರಿಸರ ಕಾರ್ಯಕರ್ತರ ವಿರೋಧಕ್ಕೂ ಮಣಿಯದ ಅರಣ್ಯ ವಿಭಾಗ
- ಸಸಿ ನೆಟ್ಟ ಜಿ–ಟ್ಯಾಗ್ ಮಾಹಿತಿ ಸಾರ್ವಜನಿಕರಿಗೆ ಲಭ್ಯವಿಲ್ಲ

ಎಸ್‌ಸಿ, ಎಸ್‌ಟಿ ಮೀಸಲಾತಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ವಕೀಲರ ಸಂಘದ ಚುನಾವಣೆ

ಬೆಂಗಳೂರು: ಬೆಂಗಳೂರು ವಕೀಲರ ಸಂಘದ 2025–28ನೇ ಸಾಲಿನ ಪದಾಧಿಕಾರಿಗಳ ಆಯ್ಕೆಗೆ ನಡೆಯುತ್ತಿರುವ ಚುನಾವಣೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಕೀಲರಿಗೆ ಶೇಕಡ 18ರಷ್ಟು ಮೀಸಲಾತಿ ನೀಡಬೇಕು ಎಂದು ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ವಕೀಲರ ಸಂಘ ಒತ್ತಾಯಿಸಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಎಂ. ಮುನಿಯಪ್ಪ, ಖಜಾಂಚಿ ಟಿ.ಎಲ್. ನಾಗರಾಜ್, ‘ಬೆಂಗಳೂರು ವಕೀಲರ ಸಂಘವು ಸರ್ಕಾರದಿಂದ ಆರ್ಥಿಕ ಸೌಲಭ್ಯಗಳನ್ನು ಪಡೆಯುತ್ತಾ ಬಂದಿದೆ. ಈ ಸಂಘದ 2025–28ನೇ ಸಾಲಿನ ಅವಧಿ ಪದಾಧಿಕಾರಿಗಳ ಆಯ್ಕೆಗೆ ನಡೆಯುತ್ತಿರುವ ಚುನಾವಣೆಯಲ್ಲಿ ಮಹಿಳೆಯರಿಗೆ ಶೇ 30ರಷ್ಟು ಮೀಸಲಾತಿ ನೀಡುವಂತೆ ಸುಪ್ರೀಂ ಕೋರ್ಟ್ ನಿರ್ದೇಶಿಸಿದೆ. ಅದರಂತೆಯೇ ಸಂವಿಧಾನದ ಪ್ರಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಕೀಲರಿಗೆ ಶೇ 18ರಷ್ಟು ಮೀಸಲಾತಿ ಕಲ್ಪಿಸಬೇಕು’ ಎಂದು ಆಗ್ರಹಿಸಿದರು.

‘ಬೆಂಗಳೂರು ವಕೀಲರ ಸಂಘದಲ್ಲಿ 25 ಸಾವಿರಕ್ಕೂ ಹೆಚ್ಚು ವಕೀಲರು ಸದಸ್ಯರಿದ್ದಾರೆ. ಅದರಲ್ಲಿ 7 ಸಾವಿರದಿಂದ 8ಸಾವಿರದವರೆಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವೃತ್ತಿಪರ ವಕೀಲರು ಸದಸ್ಯರಿದ್ದಾರೆ. ಈಗ ನಡೆಯುತ್ತಿರುವ ಸಂಘದ ಚುನಾವಣೆಯಲ್ಲಿ ಯಾವುದೇ ಮೀಸಲಾತಿ ಕಲ್ಪಿಸಿಲ್ಲ. ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಕೀಲರ ಸಂಘವು ಮೀಸಲಾತಿ ಕಲ್ಪಿಸುವಂತೆ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿತ್ತು. ಬೆಂಗಳೂರು ವಕೀಲರ ಸಂಘದ ಚುನಾವಣೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ ವಕೀಲರಿಗೆ ಮೀಸಲಾತಿ ಕಲ್ಪಿಸುವಂತೆ ಹೈಕೋರ್ಟ್ ಸೂಚಿಸಿದೆ’ ಎಂದರು.

ಮುಡಾ ವಿರುದ್ಧ ಅಸಮಾಧಾನ

ಬೆಂಗಳೂರು: ‘ಮೂರು ದಶಕಗಳವರೆಗೆ ಯಾವುದೇ ಕಪ್ಪು ಚುಕ್ಕೆ ಇಲ್ಲದೆ ದೇಶಕ್ಕಾಗಿ ಸೇವೆ ಸಲ್ಲಿಸಿದ ನಿವೃತ್ತ ರಕ್ಷಣಾ ಸಿಬ್ಬಂದಿಗೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಕನಿಷ್ಠ ಗೌರವವನ್ನೂ ನೀಡದೆ ನಡೆಸಿಕೊಂಡಿದೆ’ ಎಂದು ಹೈಕೋರ್ಟ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

‘ನಿವೃತ್ತ ಸೇನಾ ನೌಕರರ ವರ್ಗದಲ್ಲಿ ನನಗೆ ರಿಯಾಯಿತಿ ದರದಲ್ಲಿ ಮಂಜೂರಾದ ನಿವೇಶನಕ್ಕೆ ಮುಡಾ ಕ್ರಯಪತ್ರ ನೀಡುತ್ತಿಲ್ಲ’ ಎಂದು ಆಕ್ಷೇಪಿಸಿ ಬೆಂಗಳೂರಿನ ನಿವೃತ್ತ ಲೆಫ್ಟಿನೆಂಟ್ ಜನರಲ್ ಬಿಎನ್‌ಬಿಎಂ ಪ್ರಸಾದ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಾನ್ಯ ಮಾಡಿದೆ.

‘ಅರ್ಜಿದಾರರಿಗೆ ಹಂಚಿಕೆ ಆಗಿರುವ ನಿವೇಶನದ ಕ್ರಯಪತ್ರ ಮಾಡಿ ಕೊಡಬೇಕು’ ಎಂದು ಪ್ರಾಧಿಕಾರಕ್ಕೆ ಆದೇಶಿರುವ ನ್ಯಾಯಪೀಠ, ‘ನಿವೇಶನವನ್ನು ಅರ್ಜಿದಾರರ ಸುಪರ್ದಿಗೆ ಒಪ್ಪಿಸಬೇಕು ಇಲ್ಲವೇ ಸಮಾನ ವಿಸ್ತೀರ್ಣ ಮತ್ತು ಮೌಲ್ಯದ ಪರ್ಯಾಯ ನಿವೇಶನವನ್ನು 8 ವಾರಗಳಲ್ಲಿ ಹಂಚಿಕೆ ಮಾಡಬೇಕು’ ಎಂದು ಆದೇಶಿಸಿದೆ.

‘ಅರ್ಜಿದಾರರು ದೇಶಕ್ಕಾಗಿ ಮೂರು ದಶಕಗಳ ಕಾಲ ಸುದೀರ್ಘವಾಗಿ ಸೇವೆ ಸಲ್ಲಿಸಿದ್ದಾರೆ, ಗಡಿಯಲ್ಲಿ ದೇಶವನ್ನು ಕಾದಿದ್ದಾರೆ. ಕಷ್ಟದ ಪರಿಸ್ಥಿತಿಗಳಲ್ಲಿ ದೇಶ ರಕ್ಷಿಸುವ ನಮ್ಮ ರಕ್ಷಣಾ ಸಿಬ್ಬಂದಿಯನ್ನು ರಾಜ್ಯ ಸರ್ಕಾರ ಮತ್ತು ಅದರ ಸಂಸ್ಥೆಗಳು ಕನಿಷ್ಠ ಗೌರವದಿಂದ ನಡೆಸಿಕೊಳ್ಳಬೇಕು. ಆದರೆ, ಮುಡಾ ಅವರನ್ನು ಹೀನಾಯವಾಗಿ ನಡೆಸಿಕೊಂಡಿದೆ. ಸೇವೆಯಲ್ಲಿದ್ದಾಗ ಅವರು ಗಳಿಸಿರುವ ಗೌರವವನ್ನು ಅರ್ಥಮಾಡಿಕೊಳ್ಳುವಲ್ಲಿ ಮುಡಾ ಅಧಿಕಾರಿಗಳು ವಿಫಲರಾಗಿದ್ದಾರೆ’ ಎಂದು ನ್ಯಾಯಪೀಠ ಕಿಡಿ ಕಾರಿದೆ.

ಶ್ರೀಚನ್ನರಾಯ ಸ್ವಾಮಿ ಬ್ರಹ್ಮ ರಥೋತ್ಸವ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ರಥಸಪ್ತಮಿ ಪ್ರಯುಕ್ತ ವರ್ತೂರಿನಲ್ಲಿ ಶ್ರೀಭೂನಿಳಾ ಸಮೇತ ಶ್ರೀಚನ್ನರಾಯಸ್ವಾಮಿ ಬ್ರಹ್ಮರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ದೇವಾಲಯದಲ್ಲಿ ಚನ್ನರಾಯ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿ ನಂತರ ಬೀದಿಗಳಲ್ಲಿ ಮೂರ್ತಿಯನ್ನು ಮೆರವಣಿಗೆ ಮಾಡಲಾಯಿತು.

ವರ್ತೂರಿನ ಪ್ರಮುಖ ಬೀದಿಗಳಲ್ಲಿ ಬ್ರಹ್ಮರಥೋತ್ಸವ ಸಾಗಿತು. ಈ ಉತ್ಸವದಲ್ಲಿ ತಮಟೆ, ಪೂಜಾಕುಣಿತ, ನಾದಸ್ವರ, ಚಿಂಗಾರಿ ಮೇಳ, ಚಂಡಿ ಮೇಳ, ಚಟ್ಟಿಮೇಳ, ವೀರಗಾಸೆ, ಗಾರುಡಿಗೊಂಬೆ, ಡೊಳ್ಳು ಕುಣಿತವು ನೆರೆದಿದ್ದ ಭಕ್ತರ ಗಮನಸೆಳೆಯಿತು.

ಶಾಸಕಿ ಮಂಜುಳಾ ಲಿಂಬಾವಳಿ, ಮಾಜಿ ಶಾಸಕ ಅರವಿಂದ ಲಿಂಬಾವಳಿ, ಮುಖಂಡರಾದ ಶ್ರೀಧರ್ ರೆಡ್ಡಿ, ಮನೋಹರ್ ರೆಡ್ಡಿ, ವರ್ತೂರು ಶ್ರೀಧರ್, ಮಹೇಂದ್ರಮೋದಿ, ಎಲ್. ರಾಜೇಶ್ ಭಾಗವಹಿಸಿದ್ದರು.

ಶ್ರೀ ಚನ್ನರಾಯಸ್ವಾಮಿ ಬ್ರಹ್ಮರಥೋತ್ಸವ

ನಿರ್ದೇಶಕರ ಸಂಘದ ಕಡೆಗಣನೆ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಳೆದ ಎರಡು ವರ್ಷಗಳಲ್ಲಿ ನಿರ್ದೇಶಕರ ಸಂಘವನ್ನು ಕರ್ನಾಟಕ ಚಲನಚಿತ್ರ ಅಕಾಡೆಮಿಯು ಸಂಪೂರ್ಣವಾಗಿ ನಿರ್ಲಕ್ಷಿಸಿದೆ. ಅಕಾಡೆಮಿಯು ಸರಿಯಾದ ರೀತಿಯಲ್ಲಿ ಚಿತ್ರರಂಗವನ್ನು ನಡೆಸಿಕೊಳ್ಳದೇ ಇದ್ದರೆ ಬೆಂಗಳೂರು ಚಿತ್ರೋತ್ಸವದ ಉದ್ಘಾಟನಾ ದಿನದಂದು ಕಪ್ಪುಬಟ್ಟೆ ಪ್ರದರ್ಶನ ಮಾಡಬೇಕಾಗುತ್ತದೆ’ ಎಂದು ಕರ್ನಾಟಕ ಚಲನಚಿತ್ರ ನಿರ್ದೇಶಕರ ಸಂಘದ ಅಧ್ಯಕ್ಷ ಎನ್ನಾರ್ ಕೆ.ವಿಶ್ವನಾಥ್ ಎಚ್ಚರಿಕೆ ನೀಡಿದ್ದಾರೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಅಕಾಡೆಮಿಯ ಪದನಿಮಿತ್ತ ಸದಸ್ಯರಾಗಿ ನಿರ್ದೇಶಕರ ಸಂಘವಿದೆ. ಎರಡು ವರ್ಷಗಳಲ್ಲಿ ಅಕಾಡೆಮಿಯು ನಡೆಸಿದ ಸಭೆಗಳಿಗೆ ನಮ್ಮನ್ನು ಕರೆದೇ ಇಲ್ಲ. ಕೇಳಿದ ಮಾಹಿತಿಯನ್ನು ರಿಜಿಸ್ಟ್ರಾರ್ ನೀಡುತ್ತಿಲ್ಲ. ಬೆಂಗಳೂರು ಅಂತರ ರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ಸರ್ಕಾರ ₹9 ಕೋಟಿ ನೀಡುತ್ತಿದೆ. ನಾಗತಿಹಳ್ಳಿ ಚಂದ್ರಶೇಖರ ಅವರು ಅಕಾಡೆಮಿ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ₹2.70 ಲಕ್ಷಕ್ಕೆ ಚಿತ್ರೋತ್ಸವ ಆಗಿತ್ತು. ಚಿತ್ರರಂಗಕ್ಕೆ ಮೂಲ ನಿರ್ದೇಶಕ. ಚಿತ್ರೋತ್ಸವನ್ನು ನಿರ್ದೇಶಕರು ಮಾಡಬೇಕು. ಸರ್ಕಾರ ನಮಗೆ ಚಿತ್ರೋತ್ಸವ ನಡೆಸುವ ಜವಾಬ್ದಾರಿ ನೀಡಿದರೆ, ₹3–4 ಕೋಟಿಯಲ್ಲಿ ಅದ್ಭುತವಾಗಿ ಆಯೋಜಿಸುತ್ತೇವೆ. ಅಕಾಡೆಮಿ ₹9 ಕೋಟಿ ತೆಗೆದುಕೊಂಡು ಚಲನಚಿತ್ರ ರಂಗಕ್ಕೆ ಏನು ಕೊಡುಗೆ ಕೊಟ್ಟಿದೆ? ಚಿತ್ರರಂಗವಿದ್ದರಷ್ಟೇ ಅಕಾಡೆಮಿ. ಅಲ್ಲಿ ಬರುವ ಆದಾಯವನ್ನು ಪ್ರಶ್ನಿಸುವ ವ್ಯಕ್ತಿಗಳು ಅಲ್ಲಿಗೆ ಹೋಗುವಂತಿಲ್ಲ ಎಂಬ ಪರಿಸ್ಥಿತಿ ಇದೆ. ನಮಗೆ ಅಲ್ಲಿ ಯಾವುದೇ ಬೆಲೆ ಇಲ್ಲ’ ಎಂದರು.

ವಿಶ್ವನಾಥ್

‘ಏಪ್ರಿಲ್ ಅಥವಾ ಮೇ ತಿಂಗಳಲ್ಲಿ ಚಲನಚಿತ್ರರಂಗದ ಹಿರಿಯ ಕಲಾವಿದರು, ತಂತ್ರಜ್ಞರು, ನಿರ್ಮಾಪಕರು ಹಾಗೂ ನಿರ್ದೇಶಕರನ್ನು ಗೌರವಿಸುವ, ರಾಷ್ಟ್ರ–ರಾಜ್ಯ ಪ್ರಶಸ್ತಿ ವಿಜೇತರನ್ನು ಸನ್ಮಾನಿಸುವ ಕಾರ್ಯಕ್ರಮವನ್ನು ನಿರ್ದೇಶಕರ ಸಂಘ ಹಮ್ಮಿಕೊಳ್ಳಲಿದೆ’ ಎಂದರು.

ಜನಪ್ರತಿನಿಧಿಗಳ ಪ್ರಕರಣಗಳ ಸೆಷನ್ಸ್ ಕೋರ್ಟ್ ಪ್ರಶ್ನೆ

ಒತ್ತುವರಿ ತೆರವಿಗೆ ಆದೇಶಿಸಿದವರು ಯಾರು?

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಎಚ್‌ಎಂಟಿ ವಾರ್ಡ್‌ನ ಪೀಣ್ಯದ ಎಸ್.ಆರ್.ಎಸ್. ರಸ್ತೆಯ ಪ್ರಥಮ ದರ್ಜೆ ಕಾಲೇಜು ಪಕ್ಕದ ಅಕ್ಕಮಹಾದೇವಿ ಕೊಳೆಗೇರಿಯ 100 ಮೀಟರ್ ಪ್ರದೇಶದಲ್ಲಿ ಶೆಡ್‌ಗಳನ್ನು ನಿರ್ಮಿಸಿಕೊಂಡಿದ್ದ 53 ಕುಟುಂಬಗಳನ್ನು ತೆರವುಗೊಳಿಸಲು ಯಾರ ಆದೇಶವಿತ್ತು ಎಂಬುದರ ಬಗ್ಗೆ ವಿವರಣೆ ನೀಡಿ’ ಎಂದು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಪ್ರಾಸಿಕ್ಯೂಷನ್‌ಗೆ ತಾಕೀತು ಮಾಡಿದೆ.

‘ತೆರವು ಕಾರ್ಯಾಚರಣೆ ವೇಳೆ ಮಾದಿಗ ಸಮುದಾಯದ 20 ವರ್ಷದ ಮಹಿಳೆಯ ಮೇಲೆ ಸ್ಥಳೀಯ ಶಾಸಕ ಮುನಿರತ್ನ ಜಾತಿನಿಂದನೆಯ ದೌರ್ಜನ್ಯ ನಡೆಸಿದ್ದಾರೆ’ ಎಂದು ಆರೋಪಿಸಲಾದ ಕ್ರಿಮಿನಲ್ ಪ್ರಕರಣದಲ್ಲಿ ನಿರೀಕ್ಷಣಾ ಜಾಮೀನು ಕೋರಿ ಮುನಿರತ್ನ ಸಲ್ಲಿಸಿರುವ ಅರ್ಜಿಯನ್ನು, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಬುಧವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ, ಮುನಿರತ್ನ ಪರ ಹೈಕೋರ್ಟ್ ವಕೀಲ ಎಸ್.ಎಸ್.ಶ್ರೀನಿವಾಸ ರಾವ್ ವಾದ ಮಂಡಿಸಿ, ’ಈ ಪ್ರಕರಣದಲ್ಲಿ ಮುನಿರತ್ನ ಮುಗ್ಧರು. ಅವರ ವಿರುದ್ಧ ಮೇಲಿಂದ ಮೇಲೆ ಪ್ರಕರಣಗಳನ್ನು ದಾಖಲಿಸುತ್ತಿರುವ ಕಾರಣ ಅವರು ಕ್ಷೇತ್ರದಲ್ಲಿ ಅಡ್ಡಾಡಿ ಸಾರ್ವಜನಿಕರ ಕೆಲಸ ಮಾಡುವುದೇ ಕಷ್ಟವಾಗಿ ಪರಿಣಮಿಸಿದೆ’ ಎಂದು ಅಳಲು ತೋಡಿಕೊಂಡರು.

‘ಒಕ್ಕಲೆಬ್ಬಿಸುವ ಕಾರ್ಯಾಚರಣೆಯನ್ನು ಬಿಬಿಎಂಪಿ ಕಾನೂನುಬದ್ಧವಾಗಿಯೇ ನಡೆಸಿದೆ. ಆದರೆ, ಮಾಧ್ಯಮಗಳಲ್ಲಿ ಮುನಿರತ್ನ ಅವರ ವ್ಯಕ್ತಿತ್ವಕ್ಕೆ ಧಕ್ಕೆ ತರುವಂತೆ ಸಲ್ಲದ ಅಪಪ್ರಚಾರ ನಡೆಸಲಾಗುತ್ತಿದೆ. ದೂರುದಾರರ ಪರ ಹಿರಿಯ ವಕೀಲ ಸಿ.ಎಚ್.ಹನುಮಂತರಾಯ ಅವರು ಆರೋಪಿಸಿ ರುವಂತೆ ಅಲ್ಲಿ ಕೇವಲ ದಲಿತ ಕುಟುಂಬಗಳು ಮಾತ್ರವೇ ಇರಲಿಲ್ಲ. ಅವರಲ್ಲಿ ಮುಸ್ಲಿಂ ಮತ್ತು ಸಾಮಾನ್ಯ ವರ್ಗದ ಜನರೂ ಇದ್ದಾರೆ’ ಎಂದರು.

ದೂರುದಾರ ಮಹಿಳೆಯ ಪರ ಸಿ.ಎಚ್.ಹನುಮಂತರಾಯ ಅವರು, ‘ಬಿಬಿಎಂಪಿ ಕಾರ್ಯಾಚರಣೆ ನಡೆಸಿದ್ದರೆ ಮುನಿರತ್ನ ಏಕೆ ಅದನ್ನು ಮೌನವಾಗಿ ವೀಕ್ಷಿಸಿದರು? ಕ್ಷೇತ್ರದ ಶಾಸಕರಾಗಿ ನಿರ್ವಸತಿಗರಿಗೆ ಏಕೆ ಪುನರ್ವಸತಿ ಕಲ್ಪಿಸಲಿಲ್ಲ’ ಎಂದು ಪ್ರಶ್ನಿಸಿದರು.ಇದಕ್ಕೆ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಅವರು, ‘ಈ ಪ್ರಕರಣದಲ್ಲಿ ಯಾರು ತೆರವು ಕಾರ್ಯಾಚರಣೆ ನಡೆಸಿದರು ಎಂಬುದೇ ಯಕ್ಷಪ್ರಶ್ನೆಯಾಗಿ ಕಾಡುತ್ತಿದೆ. ಪ್ರಾಸಿಕ್ಯೂಷನ್ ಕೋರ್ಟ್‌ಗೆ ಸಮರ್ಪಕವಾಗಿ ಸಹಕರಿಸುತ್ತಿಲ್ಲ. ಇದರಿಂದ ಮಧ್ಯಂತರ ಆದೇಶವನ್ನು ಮತ್ತೆ ಮತ್ತೆ ವಿಸ್ತರಿಸಬೇಕಾಗಿ ಬಂದಿದೆ. ಪೊಲೀಸ್ ಇಲಾಖೆ ಕ್ಷಮತೆಯಿಂದ ಕಾರ್ಯನಿರ್ವಹಿಸಬೇಕಾದ ಅವಶ್ಯಕತೆ ಇದೆ’ ಎಂದು ಅತೃಪ್ತಿ ವ್ಯಕ್ತಪಡಿಸಿದರು.

‘ಒತ್ತುವರಿ ಕಾರ್ಯಾಚರಣೆಯನ್ನು ಯಾರ ಆದೇಶದ ಅನ್ವಯ ನಿರ್ವಹಿಸಲಾಗಿದೆ ಎಂಬುದನ್ನು ಕೋರ್ಟ್‌ಗೆ ತಿಳಿಸಿ’ ಎಂದು ಪ್ರಾಸಿಕ್ಯೂಟರ್ ಪಾರ್ವತಿ ಅವರಿಗೆ ತಾಕೀತು ಮಾಡಿ ವಿಚಾರಣೆಯನ್ನು ಫೆ.6ಕ್ಕೆ ಮುಂದೂಡಿದರು.

ಮೀಟರ್ ಬಡ್ಡಿ ದಂಧೆ: 20 ಜನರ ಬಂಧನ

ಪ್ರಜಾವಾಣಿ ವಾರ್ತೆ

ಕಾರವಾರ: ಮೀಟರ್ ಬಡ್ಡಿ ವ್ಯವಹಾರ ನಡೆಸುತ್ತ, ಜನರನ್ನು ಬೆದರಿಸುತ್ತಿದ್ದ ಆರೋಪದಡಿ ಜಿಲ್ಲೆಯ ಮುಂಡಗೋಡ, ದಾಂಡೇಲಿ ನಗರ ಠಾಣೆ ಪೊಲೀಸರು 21 ಜನರ ವಿರುದ್ಧ ಪ್ರಕರಣ ದಾಖಲಿಸಿದ್ದು, 20 ಜನರನ್ನು ಬಂಧಿಸಿದ್ದಾರೆ.

ಈಚೆಗಷ್ಟೆ ಅಪಹರಣಕ್ಕೆ ಒಳಗಾಗಿದ್ದ ಜಮೀರ ಅಹಮದ್ ದರ್ಗಾವಾಲೆ ಸೇರಿ ಏಳು ಜನರ ವಿರುದ್ಧ ವ್ಯಾಪಾರಿಯೊಬ್ಬರು ನೀಡಿದ ದೂರು ಆಧರಿಸಿ, ಸಾಲ ವಸೂಲಿಗೆ ಕಿರುಕುಳ ನೀಡಿದ ಆರೋಪದ ಪ್ರಕರಣ ದಾಖಲಿಸಲಾಗಿದೆ.

ಮುಂಡಗೋಡದಲ್ಲಿ ತಡರಾತ್ರಿ ಕಾರ್ಯಾಚರಣೆ ನಡೆಸಿ ಫೈರೋಜಖಾನ ಖಾನಜಾದ, ಮಹ್ಮದ ಶಫಿ ಮುಗಳಕಟ್ಟಿ, ಸಾಹಿಲ್ ಮಿಲಾನಿ, ಮಂಜುನಾಥ ಕಾಜಗಾರ, ಕರಿಂಖಾನ್ ಖಾನಜಾದ, ಸಂಜು ಹರಿಜನ, ಕಿರಣ ಚಿಪ್ಪಾಣಿ, ವಿಶಾಲ ಫೈಟ್, ವಸಂತ ಕೊರವರ, ಮಹ್ಮದಜಾಫರ್ ಚಡಚಿ, ಅಮೀರಖಾನ್ ಪಠಾಣ, ಸುನೀಲ ಶೆಟ್ಟಿ ಎಂಬುವವರನ್ನು ಬಂಧಿಸಲಾಗಿದೆ.

ಜನರನ್ನು ಬೆದರಿಸಿ, ದರೋಡೆಗೆ ಯತ್ನಿಸಿದ ಆರೋಪದಡಿ ಮಹಮ್ಮದಸಾದೀಕ್‌ಗಾಜೀಪೂರ, ವಾಸಿಂಖಾನ್ ಬೆಂಡಿಗೇರಿ, ಮಕ್ಬುಲ್ ಅಹಮದ ಯಳ್ಳೂರು, ಮದುಸಿಂಗ್ ರಜಪೂತ, ವಿದೇಶ ಹುಲಗೂರು, ಮಂಜುನಾಥ ಶೇರಕಾನಿ ಎಂಬುವವರನ್ನು ಬಾಚಣಕಿ ಜಲಾಶಯದ ಸಮೀಪ ಗಸ್ತು ತಿರುಗುವ ವೇಳೆ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ದಾಂಡೇಲಿಯ ಗಾಂಧಿನಗರದ ಕಂಜರಬಾಟನಲ್ಲಿ ಪರವಾನಗಿ ಇಲ್ಲದೆ ಬಡ್ಡಿ ವ್ಯವಹಾರ ನಡೆಸುತ್ತಿದ್ದ ವಿನೋದ ಮಿಣೇಕರ ಹಾಗೂ ಕಿಶನ್ ಸುಭಾಷ ಕಂಜರಬಾಟ ಎಂಬುವವರನ್ನೂ ಬಂಧಿಸಲಾಗಿದೆ.

'ಬಡ್ಡಿ ವ್ಯವಹಾರದಲ್ಲಿ ತೊಡಗಿದ್ದರ ಕುರಿತು ಆರೋಪಿಗಳ ಮನೆಯಲ್ಲಿ ದಾಖಲೆಗಳು ಸಿಕ್ಕಿವೆ. ನೀಡಿದ ಸಾಲಕ್ಕೆ ದುಪ್ಪಟ್ಟು ಮೊತ್ತ ಮರಳಿಸುವಂತೆ ಪೀಡಿಸುತ್ತಿದ್ದ ಕುರಿತು ದೂರು ಬಂದಿದ್ದರಿಂದ ಕಾರ್ಯಾಚರಣೆ ನಡೆಸಲಾಗಿತ್ತು' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ನಾರಾಯಣ ತಿಳಿಸಿದ್ದಾರೆ.

ಕೊಟ್ಟೂರಲ್ಲಿ ಇಬ್ಬರ ಬಂಧನ

ಹೊಸಪೇಟೆ (ವಿಜಯನಗರ): ಕೊಟ್ಟೂರಿನ ಬಳ್ಳಾರಿ ಕ್ಯಾಂಪ್ ನಿವಾಸಿ ಅಫ್ರೀನ್ ಬೀ ಅವರು ಫೈನಾನ್ಸ್ ಕಂಪನಿಗಳ ಕಿರುಕುಳಕ್ಕೆ ಬೇಸತ್ತು ಆತ್ಮಹತ್ಯೆಗೆ ಯತ್ನಿಸಿದ ಪ್ರಕರಣಕ್ಕೆ ಸಂಬಂಧಿಸಿ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿಬಾಬು ಬಿ.ಎಲ್. ಬುಧವಾರ ಇಲ್ಲಿ ತಿಳಿಸಿದರು.

'ಧರ್ಮಸ್ಥಳ ಗ್ರಾಮಾಭಿವೃದ್ಧಿ ಮಹಿಳಾ ಸಂಘದ ಸೇವಾ ಪ್ರತಿನಿಧಿ ಜಗದೀಶ್ ಮತ್ತು ಎಲ್ ಆ್ಯಂಡ್ ಟಿ ಫೈನಾನ್ಸ್ ಕಂಪನಿಯ ಗಂಗಾಧರಸ್ವಾಮಿ ಬಂಧಿತರು. ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ. ಜಿಲ್ಲೆಯಲ್ಲಿ ಇದೊಂದು ಪ್ರಕರಣ ಬಿಟ್ಟರೆ ಬೇರೆಡೆ ಕಿರುಕುಳ ನೀಡಿದ ದೂರು ದಾಖಲಾಗಿಲ್ಲ' ಎಂದು ತಿಳಿಸಿದರು.

ಬಡ್ಡಿ ಆಮಿಷ: ಕೇರಳದ ಇಬ್ಬರ ಸೆರೆ

ಹೊಸಪೇಟೆ (ವಿಜಯನಗರ): ಅಧಿಕ ಬಡ್ಡಿಯ ಆಮಿಷವೊಡ್ಡಿ ಹಲವರಿಂದ ಕೋಟ್ಯಂತರ ರೂಪಾಯಿ ವಂಚಿಸಿದ ಪ್ರಕರಣಕ್ಕೆ ಸಂಬಂಧಿಸಿ ಇಲ್ಲಿನ ಪೊಲೀಸರು ಕೇರಳದ ಇಬ್ಬರನ್ನು ಬಂಧಿಸಿದ್ದು, ಇತರ ಆರು ಮಂದಿಗೆ ಶೋಧ ನಡೆಸುತ್ತಿದ್ದಾರೆ.

ಪ್ರಕರಣದ ಮುಖ್ಯ ಆರೋಪಿ ನಗರದ ಮುಮ್ತಾಜ್ ಬೇಗಂ (51) ತಲೆಮರೆಸಿಕೊಂಡಿದ್ದು, ಈಕೆಯ ತಂಗಿ ಕೇರಳದ ಕೋಯಿಕ್ಕೋಡ್‌ನ ನಸ್ರೀನ್ (31), ಆಕೆಯ ಪತಿ ಜಬೀರ್ ಜೇನಗಶೇರಿ (31) ಎಂಬುವರನ್ನು ಬಂಧಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿಬಾಬು ಬಿ.ಎಲ್. ತಿಳಿಸಿದ್ದಾರೆ.

ಮುಮ್ತಾಜ್ ಬೇಗಂ ಅವರು ಹಲವು ಮಂದಿ ತಮಗೆ ₹1.20 ಕೋಟಿ, ತಮ್ಮ ಸ್ನೇಹಿತ ರಾಘವೇಂದ್ರಗೆ ₹30 ಲಕ್ಷ ವಂಚಿಸಿದ್ದಾರೆ ಎಂದು ಎಂ.ಅನೀಸ್ ದೂರು ನೀಡಿದ್ದಾರೆ. ಆರೀಫಾ ಬೇಗಂ, ಎಂ.ಜಾವೀದ್, ಆರ್. ನಭಿರಸೂಲ್, ಬೆಂಗಳೂರಿನ ತಸ್ಲೀಂ ಬಾನು, ಸೈಯದ್ ಜುಬೇರ ವಿರುದ್ಧವೂ ದೂರು ನೀಡಿದ್ದಾರೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ

ಆರೋಗ್ಯ ಸೌಧ, 4ನೇ ಮಹಡಿ, 1ನೇ ಅಡ್ಡರಸ್ತೆ, ಮಾಗಡಿ ರಸ್ತೆ, ಬೆಂಗಳೂರು–560 023
ದೂರವಾಣಿ: 080-2955 7021, ಇ–ಮೇಲ್: pdksaps@gmail.com

ಸಂಖ್ಯೆ : ಕೆಎಸ್ಎಪಿಎಸ್/ಪಿಆರ್‌ಸಿ/21/2024–25 ದಿನಾಂಕ: 03.02.2025

ಟೆಂಡರ್ ಆಹ್ವಾನ ಪ್ರಕಟಣೆ
ಕೆಪಿಪಿ ಪೋರ್ಟಲ್ ಮೂಲಕ ಮಾತ್ರ

ವಿವಿಧ ಬಗೆಯ ಐಸಿಟಿಸಿ ಫಾರ್ಮೆಟ್ಸ್ ಮತ್ತು ಕಾರ್ಡ್ಸ್‌ಗಳನ್ನು ಮುದ್ರಿಸಿ ಸರಬರಾಜು ಮಾಡುವ ಸಂಬಂಧ ಕೆಪಿಪಿ ಪೋರ್ಟಲ್ ಮೂಲಕ ಟೆಂಡರ್ (ದ್ವಿ–ಲಕೋಟೆಯಲ್ಲಿ) ಕರೆಯಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **25.02.2025ರ ಸಂಜೆ 5.30 ಗಂಟೆಯವರೆಗೆ.** ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ ವೆಬ್‌ಸೈಟ್ https://kppp.karnataka.gov.in

ಸಹಿ/– ಯೋಜನಾ ನಿರ್ದೇಶಕರು
ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ.

ವಾಸಾಸಂಇ/ವಾಪ್ರ/ಜಿಎ/4841/2024–25

ಸಾರ್ವಜನಿಕ ಗ್ರಂಥಾಲಯ ಇಲಾಖೆ

ಉಪನಿರ್ದೇಶಕರ ಕಛೇರಿ, ನಗರ ಕೇಂದ್ರ ಗ್ರಂಥಾಲಯ, ಪಶ್ಚಿಮ ವಲಯ,
ಹಂಪಿನಗರ, ಬೆಂಗಳೂರು – 560 104. ದೂರವಾಣಿ: 080–23209691
ಇ–ಮೇಲ್: westzone_hampinagar@rediffmail.com

ಸಂಖ್ಯೆ: ನಕೇಗ್ರಂ/ಪವ/ಲೆಪವಿ/78/ಗ್ರಂ.ಪೀ.ಖ/ಇ–ಟೆಂ/875/2024–25 ದಿನಾಂಕ: 05.02.2025

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ನಗರ ಕೇಂದ್ರ ಗ್ರಂಥಾಲಯ, ಪಶ್ಚಿಮ ವಲಯ, ಬೆಂಗಳೂರು ಈ ಕಛೇರಿ ವ್ಯಾಪ್ತಿಯಲ್ಲಿರುವ ಶಾಖಾ/ವಾಚನಾಲಯ/ಗ್ರಾಮ ಪಂಚಾಯಿತಿಯ ಗ್ರಂಥಾಲಯಗಳಿಗೆ 2024–25ನೇ ಸಾಲಿಗೆ ಒಂದು ವರ್ಷಗಳ ರೇಟ್ ಕಾಂಟ್ರಾಕ್ಟ್ ಆಧಾರದ ಮೇಲೆ ಗ್ರಂಥಾಲಯಕ್ಕೆ ಅವಶ್ಯಕವಾಗಿ ಬೇಕಾಗಬಹುದಾದಂತಹ **"ಗ್ರಂಥಾಲಯ ಪೀಠೋಪಕರಣ"** ಗಳನ್ನು ಸರಬರಾಜು ಮಾಡಲು ದ್ವಿ ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಐದು ವರ್ಷಗಳ ಅನುಭವವುಳ್ಳ ನೋಂದಾಯಿತ ಸಂಸ್ಥೆಯವರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಭಾಗವಹಿಸಬಹುದು. ಟೆಂಡರ್‌ಗೆ ನಿಗದಿಪಡಿಸಿರುವ ಇ.ಎಂ.ಡಿ. ಮೊತ್ತ ರೂ. 4,00,000/– (ರೂಪಾಯಿ ನಾಲ್ಕು ಲಕ್ಷಗಳು ಮಾತ್ರ). ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು https://kppp.karnataka.gov.in ವೆಬ್‌ಸೈಟ್‌ನಲ್ಲಿ ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ: **13.02.2025 ಸಮಯ ಸಾಯಂಕಾಲ 04:00 ಗಂಟೆಗೆ.** ತಾಂತ್ರಿಕ ಬಿಡ್ಡುಗಳನ್ನು ದಿನಾಂಕ: **14.02.2025ರ ಸಮಯ ಸಾಯಂಕಾಲ 04:00 ಗಂಟೆಗೆ** ತೆರೆಯಲಾಗುವುದು.

ಟೆಂಡರ್‌ದಾರರು ಹೆಚ್ಚಿನ ವಿವರಗಳನ್ನು ಈ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು. ಕಛೇರಿ ದೂರವಾಣಿ ಸಂಖ್ಯೆ: 080–23209691

ಸಹಿ/–
ಉಪನಿರ್ದೇಶಕರು,
ನಗರ ಕೇಂದ್ರ ಗ್ರಂಥಾಲಯ, ಪಶ್ಚಿಮ ವಲಯ,
ಹಂಪಿನಗರ, ಬೆಂಗಳೂರು.

ವಾಸಾಸಂಇ/ವಾಪ್ರ/4849/ಎಂಎಎ/24–25

ಸಾಲಿಗ್ರಾಮ ಪಟ್ಟಣ ಪಂಚಾಯತ್, ಉಡುಪಿ ಜಿಲ್ಲೆ–576225

ಸಾ. ಪ. ಪ: A1: ತಾಂತ್ರಿಕ ವಿಭಾಗ: ಸಿಆರ್:10 : 2024–25/ಟೆಂಡರ್
ವಿವಿಧ ಹಣಕಾಸು ಅನುದಾನ ದಿನಾಂಕ: 30/01/2025

ಇ–ಟೆಂಡರ್ ಪ್ರಕಟಣೆ

ಸಾಲಿಗ್ರಾಮ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ವಿವಿಧ ಅನುದಾನದಲ್ಲಿ ಈ ಕೆಳಗಿನ ಕಾಮಗಾರಿ ನಿರ್ವಹಣೆಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಹಾಗೂ ಇ.ಪಿ.ಎಫ್ ಹಾಗೂ ಇ.ಎಸ್.ಐ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ನಿರ್ದಿಷ್ಟ ಟೆಂಡರ್ ದಸ್ತಾವೇಜಿನಲ್ಲಿ **(Standard tender document Kw1)** ನಲ್ಲಿ **KPP Portal** ನಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಇದಕ್ಕೆ ಸಂಬಂದಿಸಿದ ವಿವರಗಳನ್ನು ವೆಬ್ ಸೈಟ್ ನಲ್ಲಿ ಪಡೆಯಬಹುದಾಗಿದೆ ವೆಬ್‌ಸೈಟ್ ನಲ್ಲಿ ಟೆಂಡರ್ ಸಲ್ಲಿಸುವ ದಿನಾಂಕ ಬದಲಾವಣೆಯಾದಲ್ಲಿ ಯಾ ಸಿಂಗಲ್ ಟೆಂಡರ್ ಸಲ್ಲಿಕೆಯಾದಲ್ಲಿ ಯಾವುದೇ ಪ್ರತ್ರಿಕೆಯಲ್ಲಿ ಮರು ಪ್ರಚುರಪಡಿಸಲಾಗುವುದಿಲ್ಲ. KPP Portal ನಲ್ಲಿ ಪರಿಶೀಲಿಸಿ ಟೆಂಡರ್ ಸಲ್ಲಿಸಲು ಸೂಚಿಸಲಾಗಿದೆ. ಟೆಂಡರನ್ನು ಕಾರಣ ಕೊಡದೆಯೇ ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕು ಮುಖ್ಯಾಧಿಕಾರಿಯವರಿಗೆ ಇರುತ್ತದೆ. ಟೆಂಡರ್ ಮೊತ್ತ, EMD, ನಮೂನೆ ಬೆಲೆ KPP-Portal ನಲ್ಲಿ ನಮೂದಿಸಿದಂತೆ ಪಾವತಿಸುವುದು.

(1) ಟೆಂಡರ್ ಸ್ವೀಕರಿಸುವ ಕೊನೆಯ **ದಿನಾಂಕ: 07/02/2025 ಸಾಯಂಕಾಲ ಗಂಟೆ 05.00 ತನಕ** (2) ಟೆಂಡರ್‌ಗಳನ್ನು ತೆರೆಯುವ **ದಿನಾಂಕ: 10/02/2025 ಬೆಳಗ್ಗೆ ಗಂಟೆ 05.00 ನಂತರ**

ಕಾಮಗಾರಿಯ ಇಂಡೆಂಟ್ ವಿವರ: (1) DMA/2024-25/BD/WOEK_INDENT34035 (15th Grant2021-22), **ಅಂದಾಜು ಮೊತ್ತ: 2.60 ಲಕ್ಷ** (2) DMA/2024-25/WS/WOEK_INDENT34341 (Drinking Water Grant 2024-25), **ಅಂದಾಜು ಮೊತ್ತ: 1.25 ಲಕ್ಷ** (3) DMA/2024-25/RD/WOEK_INDENT32826 (SBM Grant) III-Call, **ಅಂದಾಜು ಮೊತ್ತ: 3.00 ಲಕ್ಷ** (4) DMA/2024-25/WS/WOEK_INDENT 27402 (24-25 15 ನೇ ಹಣಕಾಸು) –II-CALL, **ಅಂದಾಜು ಮೊತ್ತ: 28.50 ಲಕ್ಷ** (5) DMA/2024-25/OW/WOEK_INDENT35475 (M.F TSP-ಯೋಜನೆ), **ಅಂದಾಜು ಮೊತ್ತ: 2.13 ಲಕ್ಷ**

ಸಹಿ/– ಅಧ್ಯಕ್ಷರು, ಪಟ್ಟಣ ಪಂಚಾಯತ್ ಸಾಲಿಗ್ರಾಮ
ಸಹಿ/– ಮುಖ್ಯಾಧಿಕಾರಿ, ಪಟ್ಟಣ ಪಂಚಾಯತ್ ಸಾಲಿಗ್ರಾಮ

ವಾಸಾಇ/ಸನಿಉ/ಕೆಎಸ್ಎಂಸಿಎ/694/24–25 ದಿ: 05.02.2025

ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ,
ಬೆಂಗಳೂರು ಗ್ರಾಮಾಂತರ, ಆನಂದರಾವ್ ವೃತ್ತ, ಬೆಂಗಳೂರು – 560009

ಸಂ: ಕಾ.ಪಾ.ಅ/ಪಂರಾಇಂವಿ/ಬೆಂ.ಗ್ರಾಂ/ಟೆಂ–32/ತಾಂ.ಶಾ/2024–25 ದಿನಾಂಕ: 03.02.2025

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ: 32/2024–25
(ಕೆ.ಪಿ.ಪಿ ಪೋರ್ಟಲ್ ಮುಖಾಂತರ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ನ್ನು ಮೂರನೇ ದರ್ಜೆ ಮೇಲ್ಪಟ್ಟ ಗುತ್ತಿಗೆದಾರರಿಂದ 2024–25ನೇ ಸಾಲಿನ ಜಿಲ್ಲಾ ಪಂಚಾಯತ್ ಕಾರ್ಯಕ್ರಮ ಲೆಕ್ಕ ಶೀರ್ಷಿಕೆ 3054 ಟಾಸ್ಕ್ ಪೋರ್ಸ್ (ರಸ್ತೆ ನಿರ್ವಹಣೆ) ಅನುದಾನದಡಿ ಅನುಮೋದನೆಗೊಂಡಿರುವ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ಗ್ರಾಮಾಂತರ ಇವರು ಅಲ್ಪಾವಧಿ ಟೆಂಡರ್ ಆಹ್ವಾನಿಸಿರುತ್ತಾರೆ. ಸದರಿ ಕಾಮಗಾರಿಗೆ ಭರ್ತಿಮಾಡಿದ ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ: **12.02.2025 ಸಂಜೆ 5.00 ಗಂಟೆಯವರೆಗೆ** ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ ಹಾಗೂ ಟೆಂಡರ್ ವಿವರಗಳನ್ನು **https://kppp.karnataka.gov.in** ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ,
ಬೆಂಗಳೂರು ಗ್ರಾಮಾಂತರ, ಬೆಂಗಳೂರು

DIPR/CP/4836/SPAN/2024-25

ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ

(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ಇರ್ವಿನ್‌ರಸ್ತೆ, ಮೈಸೂರು–570001
Ph: +91-0821-2520512 (Off.), 2520803 (Fax)
Website : www.mmcri.karnataka.gov.in/
E-mail : mmcrimysore@yahoo.com

ಸಂಖ್ಯೆ : ಉಪಕರಣ/40/2024–25 ದಿನಾಂಕ: 31.01.2025

ಟೆಂಡರ್ ಅಧಿಸೂಚನೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 – ನಿಯಮ 2000 ರಂತೆ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು ಇಲ್ಲಿನ ಟ್ರಾಮಾ ಕೇರ್ ಸೆಂಟರ್‌ನ ಆರ್ಥೋಪೆಡಿಕ್ಸ್ ವಿಭಾಗಕ್ಕೆ ಅವಶ್ಯವಿರುವ ವಿವಿಧ ವೈದ್ಯಕೀಯ ಉಪಕರಣಗಳನ್ನು ಸರಬರಾಜು ಮಾಡಲು ವಿದ್ಯುನ್ಮಾನ ವೇದಿಕೆ ಮುಖಾಂತರ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಯನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in ಮೂಲಕ ದಿ: 04.02.2025 ರಿಂದ ಪಡೆಯಬಹುದಾಗಿದ್ದು, ದಿ: 05.03.2025 ರಂದು ಅಪರಾಹ್ನ 5.00 ರೊಳಗಾಗಿ ಸಲ್ಲಿಸಬಹುದಾಗಿರುತ್ತದೆ. ಇ.ಎಂ.ಡಿ. ಸಲ್ಲಿಸದ ಟೆಂಡರ್ ಅರ್ಜಿಗಳನ್ನು ತಿರಸ್ಕರಿಸ ಲಾಗುವುದು. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಒಂದು ವೇಳೆ ಸಾರ್ವಜನಿಕ ರಜೆಯೆಂದು ಘೋಷಿಸಲ್ಪಟ್ಟರೆ, ಮುಂದಿನ ಕೆಲಸದ ದಿನಾಂಕವನ್ನು ಕೊನೆಯ ದಿನಾಂಕವೆಂದು ಪರಿಗಣಿಸತಕ್ಕದ್ದು. ಈ ಬಗ್ಗೆ ಯಾವುದೇ ಅಧಿಸೂಚನೆ ಹೊರಡಿಸಲಾಗುವುದಿಲ್ಲ.

ಸಹಿ/– ನಿರ್ದೇಶಕರು ಮತ್ತು ಡೀನ್

DIPR/DDMYS/1233/KSMCA/856/2024-25

ಕರ್ನಾಟಕ ಸರ್ಕಾರ ತೋಟಗಾರಿಕೆ ಇಲಾಖೆ

ವಿಶೇಷಾಧಿಕಾರಿಗಳ ಕಾರ್ಯಾಲಯ, ಶ್ರೀ ಕೃಷ್ಣರಾಜೇಂದ್ರ ಗಿರಿಧಾಮ, ಕೆಮ್ಮಣ್ಣುಗುಂಡಿ.

ಕಲ್ಲತ್ತಿಪುರ (ಅಂ), ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ–577129.
ದೂರವಾಣಿ: 08261–200008, e-mail: krhskmg.1@gmail.com

ಸಂ: ತೋಇ/ವಿಅ/ಶ್ರೀಕೃರಾಗಿ/ಕೆ/ವಿನಿ/2024–25 ದಿನಾಂಕ: 04.02.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಈ ಮೂಲಕ ಪ್ರಚುರ ಪಡಿಸುವುದೇನೆಂದರೆ, ವಿಶೇಷ ಅಧಿಕಾರಿಗಳ ಕಚೇರಿ, ಶ್ರೀ ಕೃಷ್ಣರಾಜೇಂದ್ರ ಗಿರಿಧಾಮ, ಕೆಮ್ಮಣ್ಣುಗುಂಡಿ ಮತ್ತು ಕಲ್ಲತ್ತಗಿರಿ **ಉದ್ಯಾನವನಗಳ ಮತ್ತು ಅತಿಥಿಗೃಹಗಳ ನಿರ್ವಹಣೆಗೆ ಹೊರಗುತ್ತಿಗೆ ಆಧಾರದ ಮೇಲೆ ದ್ವೈವಾರ್ಷಿಕವಾಗಿ ಮಾನವಸಂಪನ್ಮೂಲ ಸೇವೆಯನ್ನು ಪಡೆಯಲು ಆನ್‌ಲೈನ್ ಟೆಂಡರ್** ಅನ್ನು ಆಹ್ವಾನಿಸಲಾಗಿದ್ದು, ಆಸಕ್ತ ಸಂಸ್ಥೆಯವರು ಇ–ಪ್ರೊಕ್ಯೂರ್ಮೆಂಟ್ (https://kppp.karnataka.gov.in/#/portal) ಪೋರ್ಟಲ್ ಮೂಲಕ ಆನ್‌ಲೈನ್‌ನಲ್ಲಿ ಸಲ್ಲಿಸತಕ್ಕದ್ದು.

1. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 14.02.2025
2. ಟೆಂಡರ್ಗಳನ್ನು ತೆರೆಯುವ ದಿನಾಂಕ: 15.02.2025
3. ಕಾಮಗಾರಿಗಳ ಕಾಲಾವಧಿ: 2 ವರ್ಷಗಳು

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರ್‌ಗಿಟ್ಟ ಮೊತ್ತ
1.	ಕೆಮ್ಮಣ್ಣುಗುಂಡಿ ಗಿರಿಧಾಮದಲ್ಲಿ ಮತ್ತು ಕಲ್ಲತ್ತಗಿರಿ ಉದ್ಯಾನವನಗಳ ಮತ್ತು ಅತಿಥಿಗೃಹಗಳ ನಿರ್ವಹಣೆಗೆ ಹೊರಗುತ್ತಿಗೆ ಆಧಾರದ ಮೇಲೆ ದ್ವೈವಾರ್ಷಿಕವಾಗಿ ಮಾನವಸಂಪನ್ಮೂಲ ಸೇವೆಯನ್ನು ಪಡೆಯಲು (Tender No.: KSHD/2024-25/SE0285/CALL-2)	ರೂ. 99 ಲಕ್ಷಗಳು

ಸಹಿ/– ವಿಶೇಷಾಧಿಕಾರಿಗಳು,
ಶ್ರೀ ಕೃಷ್ಣರಾಜೇಂದ್ರ ಗಿರಿಧಾಮ, ಕೆಮ್ಮಣ್ಣುಗುಂಡಿ.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ತುಮಕೂರು

Email: dhotumkur@gmail.com ph:0816-2278387

ಸಂ:ಜಿಆತು/ಪಿ(4)70/2023–24 ದಿನಾಂಕ: 01.02.2025

ಟೆಂಡರ್ ಪ್ರಕಟಣೆ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ತುಮಕೂರು ಇವರ ಅಧೀನದ ಆರೋಗ್ಯ ಸಂಸ್ಥೆಗಳಿಗೆ ಅನುಮೋದನೆ ನೀಡಿರುವ 232 ಗ್ರೂಪ್ –ಡಿ. 12 ಡಾಟಾ ಎಂಟ್ರಿ ಆಪರೇಟರ್ ಮತ್ತು 12 ವಾಹನ ಚಾಕಲರ ಹುದ್ದೆಗಳಿಗೆ ಹೊರಸಂಪನ್ಮೂಲದಿಂದ ಸೇವೆಯನ್ನು ಒದಗಿಸುವುದಕ್ಕಾಗಿ ಅರ್ಹ ಸಂಸ್ಥೆಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ ಹೆಚ್ಚಿನ ವಿವರಗಳನ್ನು http://eproc.karnataka.gov.in ವೆಬ್‌ಸೈಟ್‌ನಲ್ಲಿ ಪರಿಶೀಲಿಸಿ ಸೂಕ್ತ ದಾಖಲಾತಿಗಳೊಂದಿಗೆ ಟೆಂಡರ್ ಸಲ್ಲಿಸಬಹುದು ಹೆಚ್ಚಿನ ಮಾಹಿತಿಗಾಗಿ ಈ ಕೆಳಕಂಡ ಸಹಿ ಮಾಡಿರುವವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು,
ತುಮಕೂರು.

DIPR/TUM/609/KSMCA/2024-25

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಮುಖ್ಯ ಅಭಿಯಂತರರು(ತ್ಯಾನೀನಿ–ಪೂರ್ವ)ರವರ ಕಛೇರಿ
5ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560 009

ಸಂ:ಬೆಂ.ಜ.ಮಂ/ಮುಅ(ತ್ಯಾನೀನಿ–ಪೂ)/ಉಮುಅ(ತ್ಯಾನೀನಿ–ಪೂ&ಪ)/ತಾಂಸ–1/1135/2024–25 ದಿನಾಂಕ: 05.02.2025

ಟೆಂಡರ್‌ಗಾಗಿ ಆಹ್ವಾನ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಅರ್ಹ ಗುತ್ತಿಗೆದಾರರಿಂದ **4 ವರ್ಷಗಳ ಅವಧಿಗೆ ಕಾಡುಗೋಡಿಯಲ್ಲಿನ 6 ಎಂಎಲ್‌ಡಿ ಎಸ್‌ಟಿಪಿಯ ಸಮಗ್ರ ಕಾರ್ಯಾಚರಣೆ ಮತ್ತು ನಿರ್ವಹಣಾ ಕಾಮಗಾರಿಗಾಗಿ** ದ್ವಿ–ಹಂತದ ಪದ್ಧತಿಯಲ್ಲಿ ಟೆಂಡರನ್ನು ಆಹ್ವಾನಿಸಿದೆ. ಟೆಂಡರಿಗಿಟ್ಟ ಮೊತ್ತ: **ರೂ. 786.25 ಲಕ್ಷಗಳು**, ಇಎಂಡಿ: **ರೂ. 11.79 ಲಕ್ಷಗಳು.** ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: **06.03.2025 ರ ಸಂಜೆ 5.30 ಗಂಟೆಯವರೆಗೆ.** ತಾಂತ್ರಿಕ ಟೆಂಡರ್‌ಗಳನ್ನು ತೆರೆಯುವ ದಿನಾಂಕ: **10.03.2025 ರ ಸಂಜೆ 4.00 ಗಂಟೆಗೆ.** ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತ ಮಾಹಿತಿಯನ್ನು https://kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಛೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/–
ಮುಖ್ಯ ಅಭಿಯಂತರರು(ತ್ಯಾನೀನಿ–ಪೂರ್ವ)

ವಾಸಾಸಂಇ/ವಾಪ್ರ/ಜಿಎ/4864/2024–25

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ತುಮಕೂರು.
ದೂರವಾಣಿ:0816–2281105 Email:eemitmk@gmail.com
ಐ.ಎಫ್.ಟಿ ಸಂಖ್ಯೆ.10/2024–25 KW-1, KW-2, KW-3, (ದ್ವಿ ಲಕೋಟೆ)
ದಿನಾಂಕ: 01.02.2025

ಅಲ್ಪಾವಧಿ ಟೆಂಡರ್ ಪ್ರಕಟಣೆ ದಿನಾಂಕ: 01.02.2025

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ತುಮಕೂರು ವ್ಯಾಪ್ತಿಯಲ್ಲಿ 2024–25ನೇ ಸಾಲಿನ ಲೆಕ್ಕ ಶೀರ್ಷಿಕೆ: 4702–ಗಿರಿಜನ ಉಪಯೋಜನೆ, 4702–ಕೆರೆಗಳ ಆಧುನೀಕರಣ–ಪ್ರಧಾನ ಕಾಮಗಾರಿಗಳು, 4702–ಅಣೆಕಟ್ಟು ಮತ್ತು ಪಿಕಪ್ ಪ್ರಧಾನ ಕಾಮಗಾರಿಗಳು & ಅಟಲ್ ಭೂಜಲ್ ಯೋಜನೆಯಡಿಯಲ್ಲಿ ಅನುಮೋದನೆಯಾಗಿರುವ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕೆ.ಪಿ.ಪಿ.ಪಿ. ಪೋರ್ಟ್‌ಲ್ ಅಡಿಯಲ್ಲಿ ಐಟಂವಾರು ಟೆಂಡರುಗಳನ್ನು ಈ ಕಛೇರಿ ಟೆಂಡರು ಪ್ರಕಟಣೆ ಸಂಖ್ಯೆ: 10/2024–25, ದಿ: 01–02–2025 ರಂದು ಆಹ್ವಾನಿಸಲಾಗಿದೆ. ಟೆಂಡರು ಪ್ರಕ್ರಿಯೆ ದಿನಾಂಕ ಮತ್ತು ವಿವರಗಳನ್ನು ಟೆಂಡರ್‌ನ ನಿಗಧಿತ ನಮೂನೆಯಲ್ಲಿ ವೆಬ್‌ಸೈಟ್ ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಅವಶ್ಯಕ ಮಾಹಿತಿಗಳೊಂದಿಗೆ, ಅರ್ಜಿ ಶುಲ್ಕ ಹಾಗೂ ಇ.ಎಂ.ಡಿ.ಯೊಂದಿಗೆ ಅಪ್‌ಲೋಡ್ ಮಾಡಬಹುದಾಗಿದೆ. ಟೆಂಡರು ಪ್ರಕ್ರಿಯೆಯ ದಿನಾಂಕಗಳು ಈ ಕೆಳಕಂಡಂತಿವೆ:

1. ಟೆಂಡರ್ ಪ್ರಕಟಣೆಯನ್ನು ದಿನಾಂಕ: 05–02–2025 ರಂದು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಪ್ರಕಟಿಸಲಾಗುವುದು. 2. ಅವಶ್ಯ ಟೆಂಡರ್ ಮಾಹಿತಿ/ಸ್ಪಷ್ಟೀಕರಣವನ್ನು ಪಡೆಯಲು ದಿನಾಂಕ: 10–02–2025 ಬೆಳ್ಳಗ್ಗೆ 11.30 ಗಂಟೆಯವರೆಗೆ ಸ್ವೀಕರಿಸಲಾಗುವುದು. 3. ಗುತ್ತಿಗೆದಾರರಿಂದ ಟೆಂಡರ್‌ನ್ನು ಕೆ.ಪಿ.ಪಿ.ಪಿ ಪೋರ್ಟಲ್‌ನ ಮೂಲಕ ದಿನಾಂಕ: 13–02–2025 ಸಾಯಂಕಾಲ 5.00ಗಂಟೆಯವರೆಗೆ ಸ್ವೀಕರಿಸಲಾಗುವುದು. 4. ತಾಂತ್ರಿಕ ಬಿಡ್ಡನ್ನು ದಿನಾಂಕ: 14–02–2025 ಸಾಯಂಕಾಲ 5.05 ಗಂಟೆಗೆ ತೆರೆಯಲಾಗುವುದು. 5. ಆರ್ಥಿಕ ಬಿಡ್ಡನ್ನು ದಿನಾಂಕ: 15–02–2025 ಸಾಯಂಕಾಲ 5.10 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಅಥವಾ ಮೇಲೆ ತಿಳಿಸಿದ ವೆಬ್ ಸೈಟ್ ಮೂಲಕ ಪಡೆಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಸಣ್ಣ ನೀರಾವರಿ ಮತ್ತು ಅಂ.ಅ ವಿಭಾಗ, ತುಮಕೂರು.

DIPR/TUM/614/KSMCA/2024-25

ಕರ್ನಾಟಕ ಸರ್ಕಾರ

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು – 560001.
ದೂರವಾಣಿ: 080–22215601, 22211246 ಫ್ಯಾಕ್ಸ್ : 22215602

ಸಂಖ್ಯೆ: ಡಿವೈಇಎಸ್/ಎಸ್‌ವೈಸಿ/28/2024–25 ದಿನಾಂಕ : 05.02.2025

ಬಹಿರಂಗ ಹರಾಜು ಪ್ರಕಟಣೆ

ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಇವರ ಹೆಸರಿನಲ್ಲಿ ಖರೀದಿಸಲಾದ ಅನುಪಯುಕ್ತ ವಾಹನಗಳನ್ನು ಈ ಮೂಲಕ "ಎಲ್ಲಿದೆಯೋ ಅಲ್ಲಿ–ಹೇಗಿದೆಯೋ ಹಾಗೆ" **(As is where is basis)** ಬಹಿರಂಗವಾಗಿ ಹರಾಜು ಮಾಡಿ ವಿಲೇವಾರಿ ಮಾಡಲು ಹರಾಜು ಪ್ರಕಟಣೆ ನೀಡಲಾಗಿದೆ. ಹರಾಜಿನಲ್ಲಿ ಭಾಗವಹಿಸಲು ಇಚ್ಛೆಯುಳ್ಳವರು ಬಹಿರಂಗ ಹರಾಜಿಗೆ ಸಂಬಂಧಿಸಿದಂತೆ ನೀಡಿರುವ ಷರತ್ತುಗಳನ್ವಯ ದಿನಾಂಕ: 20–02–2025 ರಂದು ಅಪರಾಹ್ನ 12:00 ಗಂಟೆಗೆ ಸರಿಯಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಯುವ ಕೇಂದ್ರ ನೃಪತುಂಗ ರಸ್ತೆ ಬೆಂಗಳೂರು, ಇಲ್ಲಿನ ಕಛೇರಿಯ ಆವರಣದಲ್ಲಿ ಆಯೋಜಿಸಿರುವ ಬಹಿರಂಗ ಹರಾಜಿನಲ್ಲಿ ಭಾಗವಹಿಸಬಹುದು. ಬಹಿರಂಗ ಹರಾಜನ್ನು ಬಿಡ್‌ದಾರರ ಸಮ್ಮುಖದಲ್ಲಿ ಮಾಡಲಾಗುವುದು. ಈ ಹರಾಜಿನಲ್ಲಿ ಭಾಗವಹಿಸಿ ಅತಿ ಹೆಚ್ಚು ದರ ಬಿಡ್ ಮಾಡುವ ಬಿಡ್ ದಾರರಿಗೆ ವಾಹನವನ್ನು ವಿಲೇವಾರಿ ಮಾಡಲಾಗುವುದು.

ಈ ಪ್ರಕ್ರಿಯೆಯಲ್ಲಿ ಭಾಗವಹಿಸುವವರು ಅರ್ಜಿ ಶುಲ್ಕ ಪ್ರತಿ ವಾಹನಕ್ಕೆ ರೂ. 500/– ಹಾಗೂ ಇಎಂಡಿ ಮೊತ್ತ ರೂ. 10,000/– ಗಳನ್ನು ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ (The Commissioner, Department of Youth Empowerment and Sports) ಇವರ ಹೆಸರಿನಲ್ಲಿ ಪ್ರತ್ಯೇಕವಾಗಿ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಡಿಡಿ ಪಡೆದು ಸಲ್ಲಿಸಿ ಅರ್ಜಿ ಪಡೆಯಬೇಕಾಗಿರುತ್ತದೆ.

ಕ್ರ ಸಂ	ಸ್ಥಳ	ವಾಹನದ ವಿವರ	ವಾಹನ ಖರೀದಿ ವರ್ಷ	ಟೆಂಡರ್ ಅರ್ಜಿ ಶುಲ್ಕ ರೂ.	ಇ.ಎಂ.ಡಿ ಮೊತ್ತ ರೂ.
1.	ರಾಜ್ಯ ಯುವ ಕೇಂದ್ರ ನೃಪತುಂಗ ರಸ್ತೆ ಬೆಂಗಳೂರು–01	ಕೆಎ–01–ಜಿ–5022 (ಹೊಂಡಾ ಸಿಟಿ)	ಡಿಸೆಂಬರ್ 2008	ಪ್ರತಿ ಅರ್ಜಿಗೆ ರೂ.500/–	10,000/–
2.	ರಾಜ್ಯ ಯುವ ಕೇಂದ್ರ ನೃಪತುಂಗ ರಸ್ತೆ ಬೆಂಗಳೂರು–01	ಕೆಎ–01–ಜಿ–4724 (ಮಾರುತಿ SX4)	ಏಪ್ರಿಲ್ 2008	ಪ್ರತಿ ಅರ್ಜಿಗೆ ರೂ.500/–	10,000/–
3.	ಶ್ರೀ ಜಯಪ್ರಕಾಶ್ ನಾರಾಯಣ್ ರಾಷ್ಟ್ರೀಯ ಯುವ ಕೇಂದ್ರ ವಿದ್ಯಾನಗರ ಬೆಂಗಳೂರು ಉತ್ತರ	ಕೆಎ–01–ಜಿ–1699 (ಸ್ವರಾಜ್ ಮಜ್ದಾ)	ಡಿಸೆಂಬರ್ 1994	ಪ್ರತಿ ಅರ್ಜಿಗೆ ರೂ.500/–	10,000/–

ಸಹಿ/–
ಜಂಟಿ ನಿರ್ದೇಶಕರು
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

DIPR/CP/4845/Zen/2024-25

ಕರ್ನಾಟಕ ಸರ್ಕಾರ GOVERNMENT OF KARNATAKA

ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನ ಕೇಂದ್ರ ಬಳ್ಳಾರಿ.

Reg.No:205/1995-96-Recognized by Medical Council of India, New Delhi vide No:MCI-57(3)/79-Med/1912, Dtd.16-04-1979 &Endst. No.MCI-37(1)(Recog.-18)(UG)/2017-Med./109629,Dt: 06/05/2019
DIRECTOR: 8147796529 PRINCIPAL :8147796527
CAO:8147796526 PA : 8147796539.
e-mail-ids:directorbmcrcballari@gmail.com, website : https://bmcrcballari.karnataka.gov.inprincipalbmcrcballari@gmail.com

No: BMCRC/SUP/TEND/CTScan/05/2024-25/Call-2/270
Date: 04/02/25

ತಿದ್ದುಪಡಿ ಮರು ಇ–ಟೆಂಡರ್ ಅಧಿಸೂಚನೆ

ಬಿಎಂಸಿಆರ್ ಸಿ, ಸಂಸ್ಥೆಯ ರೇಡಿಯೋಲಜಿ ವಿಭಾಗಕ್ಕೆ ಸಿ.ಟಿ. ಸ್ಕ್ಯಾನ್ ಉಪಕರಣಗಳನ್ನು ಪೂರೈಸಲು ಕೆ.ಟಿ.ಪಿ.ಪಿ ಅಧಿನಿಯಮ–1999–2000ರಂತೆ ದ್ವಿ–ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರದ ಇ–ಪೋರ್ಟಲ್ https://kppp.karnataka.gov.in ಮೂಲಕ ಮರು ಇ–ಟೆಂಡರನ್ನು ಆಹ್ವಾನಿಸಲಾಗಿರುತ್ತದೆ. ಆಸಕ್ತ ಬಿಡ್‌ದಾರರು ಮೇಲಿನ ಪೋರ್ಟಲ್ ನಲ್ಲಿ ಟೆಂಡರನ್ನು ದಿನಾಂಕ: 11.01.2025 ಸಂಜೆ 5.00 ಗಂಟೆಯ ಒಳಗಾಗಿ ಸಲ್ಲಿಸಲು ಕೋರಲಾಗಿರುತ್ತದೆ. ಸದರಿ ದಿನಾಂಕದ ಬದಲಾಗಿ ದಿನಾಂಕ: 11.02.2025 ಎಂದು ತಿದ್ದುಪಡಿ ಮಾಡಿ ಓದಿಕೊಳ್ಳತಕ್ಕದ್ದು. ಹೆಚ್ಚಿನ ವಿವರಗಳನ್ನು ಮೇಲಿನ ವೆಬ್ ಸೈಟ್ https://bmcrcballari.karnataka.gov.in ನಲ್ಲಿ ಪಡೆಯಬಹುದಾಗಿದೆ.

ಸಹಿ/– ಡೀನ್ ಹಾಗು ನಿರ್ದೇಶಕರು, ಬಿಎಂಸಿ ಆರ್ ಸಿ, ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/869/ಕೆಎಸ್‌ಎಂಸಿಎ/2024–25

ಕರ್ನಾಟಕ ಸರ್ಕಾರ

ಕರ್ನಾಟಕ ರಾಜ್ಯ ರೈತ ಉತ್ಪಾದಕರ ಸಂಸ್ಥೆಗಳ ಸಹಕಾರ ಸಂಘ ನಿಯಮಿತ, ಬೆಂಗಳೂರು, ಜಲಾನಯನ ಅಭಿವೃದ್ಧಿ ಇಲಾಖೆ

ಆಯುಕ್ತರ ಕಾರ್ಯಾಲಯ, 7ನೇ ಮಹಡಿ, ಕ.ಗೃ.ಮಂ ಸಂಕೀರ್ಣ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560 009

ಸಂಖ್ಯೆ: ಜ.ಅ.ಇ/ಕೆ.ಎಫ್.ಸಿ.ಎಸ್./ಜಿ.ಲೇ/03/2024–25 ದಿನಾಂಕ:03.02.2025

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ರಾಜ್ಯ ರೈತ ಉತ್ಪಾದಕರ ಸಂಸ್ಥೆಗಳ ಸಹಕಾರ ಸಂಘ ನಿಯಮಿತ, ಬೆಂಗಳೂರು ಇದರ ಆಡಳಿತ ಮಂಡಳಿ ಮತ್ತು ಪದಾಧಿಕಾರಿಗಳ ಚುನಾವಣೆ ನಡೆಸುವ ಸಂಬಂಧ ಪ್ರಕಟಿಸಲಾದ ಕರಡು ಮತದಾರರ ಪಟ್ಟಿಗೆ ಸಂಬಂಧಿಸಿದಂತೆ ಆಕ್ಷೇಪಣೆಗಳನ್ನು ಆಹ್ವಾನಿಸುವ ಬಗ್ಗೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ರೈತ ಉತ್ಪಾದಕರ ಸಂಸ್ಥೆಗಳ ಸಹಕಾರ ಸಂಘ ನಿಯಮಿತ, ಬೆಂಗಳೂರು ಇದರ ಆಡಳಿತ ಮಂಡಳಿ ಮತ್ತು ಪದಾಧಿಕಾರಿಗಳ ಚುನಾವಣೆ ನಡೆಸುವ ಕುರಿತು ದಿನಾಂಕ 12.03.2025 ರಂದು ಚುನಾವಣಾ ದಿನಾಂಕವನ್ನು ನಿಗದಿಪಡಿಸಿ, ಇದರ ಚುನಾವಣೆ ನಡೆಸುವ ಸಂಬಂಧ ಮತ ನೀಡುವ ಹಕ್ಕುಳ್ಳ ಸದಸ್ಯರ ಕರಡು ಪಟ್ಟಿ, ಸುಸ್ತಿದಾರರ ಕರಡು ಪಟ್ಟಿ, ಅನರ್ಹ ಸದಸ್ಯ ಸಂಘಗಳ ಕರಡು ಪಟ್ಟಿ ಮತ್ತು ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸುವ ದಿನಾಂಕಕ್ಕೆ ಸುಸ್ತಿಯಾಗುವಂತಹ ಮತದಾರರ ಕರಡು ಪಟ್ಟಿಗಳನ್ನು ನೊಂದಾಯಿತ ರೈತ ಉತ್ಪಾದಕ ಸಂಸ್ಥೆ ಹಾಗೂ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಿಲಾಗಿರುತ್ತದೆ. ಇವುಗಳನ್ನು ಪರಿಶೀಲಿಸಿ, ಈ ಬಗ್ಗೆ ಯಾವುದೇ ಆಕ್ಷೇಪಣೆಗಳಿದಲ್ಲಿ, ಅವುಗಳನ್ನು ಸಲ್ಲಿಸಬಯಸುವ ಸದಸ್ಯರು/ಸದಸ್ಯ ಸಂಘಗಳು, ಚುನಾವಣಾಧಿಕಾರಿಗಳಿಗೆ (ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಕಂದಾಯ ಇಲಾಖೆ ಹಾಗೂ ನೋಡಲ್ ಅಧಿಕಾರಿ ಪದನಿಮಿತ್ತ ಕಾರ್ಯದರ್ಶಿಗಳು–ಆರ್ಥಿಕ ಅಪರಾಧಗಳು, 2ನೇ ಮಹಡಿ, ಬಿ.ಎಂ.ಟಿ.ಸಿ ಕಟ್ಟಡ, ಕೆ.ಹೆಚ್ ರಸ್ತೆ, ಶಾಂತಿನಗರ, ಬೆಂಗಳೂರು–560027) ಮತ್ತು ಆಡಳಿತಾಧಿಕಾರಿಗಳು, ಕರ್ನಾಟಕ ರಾಜ್ಯ ರೈತ ಉತ್ಪಾದಕರ ಸಂಸ್ಥೆಗಳ ಸಹಕಾರ ಸಂಘ ನಿ, ಬೆಂಗಳೂರು, ಜಂಟಿ ಕೃಷಿ ನಿರ್ದೇಶಕರು, ಭೂ ಸಾರ ಸಂರಕ್ಷಣಾ ವಿಭಾಗ, 7ನೇ ಮಹಡಿ, ಕೆ.ಹೆಚ್.ಬಿ ಕಟ್ಟಡ, ಕಾವೇರಿ ಭವನ , ಬೆಂಗಳೂರು–09 ರವರಿಗೆ ಚುನಾವಣಾ ದಿನಾಂಕದ ಪೂರ್ವದ ಮೂವತ್ತು(30) ದಿನದೊಳಗಾಗಿ ಅಂದರೆ, **10.02.2025** ರೊಳಗಾಗಿ ಸಂಬಂಧಿಸಿವರಿಗೆ ತಲುಪುವಂತೆ ತಮ್ಮ ನಿರ್ದಿಷ್ಟ ಆಕ್ಷೇಪಣೆಗಳನ್ನು ಅಗತ್ಯ ಪೂರಕ ದಾಖಲೆಗಳೊಂದಿಗೆ ಸಲ್ಲಿಸಲು ಕೋರಲಾಗಿದೆ.

ಸಹಿ/–
ಆಡಳಿತಾಧಿಕಾರಿಗಳು
ಕರ್ನಾಟಕ ರಾಜ್ಯ ರೈತ ಉತ್ಪಾದಕರ ಸಂಸ್ಥೆಗಳ ಸಹಕಾರ ಸಂಘ ನಿಯಮಿತ, ಬೆಂಗಳೂರು

DIPR/CP/4862/Zenkar/2024-25

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

49, 'ಪರಿಸರ ಭವನ', 1 ರಿಂದ 5ನೇ ಅಂತಸ್ತು, ಚರ್ಚ್ ರಸ್ತೆ, ಬೆಂಗಳೂರು–560001, ಕರ್ನಾಟಕ, ಇಂಡಿಯಾ.
ದೂರವಾಣಿ ಸಂಖ್ಯೆ : 25581383, 25589112, 25586520, ಫ್ಯಾಕ್ಸ್: 080–25586321
E-mail: ho@kspcb.gov.in, Website: https://kspcb.karnataka.gov.in

No: PCB/193/INFRA/EPH/2024/4664 Date : 04.02.2025

ಪರಿಸರ ಸಾರ್ವಜನಿಕ ಸಭೆಗಾಗಿ ಸೂಚನೆ

ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯವರು ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ, ನಾಗದೇವನಹಳ್ಳಿ, ಆಧಿನಾರಾಯಣ ಹೊಸಹಳ್ಳಿ ಮತ್ತು ಕೊನಘಟ್ಟ ಗ್ರಾಮದ 981.527 ಎಕರೆ (397.20 ಹೆಕ್ಟೇರ್) ಪ್ರದೇಶದಲ್ಲಿ ಆದಿನಾರಾಯಣ ಹೊಸಹಳ್ಳಿ ಕೈಗಾರಿಕಾ ಪ್ರದೇಶದ 2 ನೇ ಹಂತವನ್ನು ಅಭಿವೃದ್ಧಿ ಪಡಿಸಲು ಉದ್ದೇಶಿಸಿರುತ್ತಾರೆ. ಈ ಪ್ರಸ್ತಾಪಿತ ಯೋಜನೆಗೆ ಪರಿಸರ ಅಘಾತ ಅಧ್ಯಯನ ಅಧಿಸೂಚನೆ ದಿನಾಂಕ 14.09.2006ರ ಪ್ರಕಾರ ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ ಮತ್ತು ಅದರ ಅಂಗವಾಗಿ ಸಾರ್ವಜನಿಕ ಪರಿಸರ ಆಲಿಕೆ ಸಭೆಯನ್ನು ನಡೆಸಬೇಕಾಗಿರುತ್ತದೆ. ಅದರಂತೆ ರಾಜ್ಯ ಮಟ್ಟದ ಪರಿಸರ ಅಘಾತ ಅಂದಾಜೀಕರಣ ಪ್ರಾಧಿಕಾರ, ಕರ್ನಾಟಕ ಇವರಿಂದ ಉಲ್ಲೇಖದ ನಿಯಮಗಳು (Terms of Reference, TOR) ಪತ್ರವನ್ನು proposal No. SIA/KA/INFRA1/467571/2024 dated 24/05/2024 and TOR Identification No: TO24B3102KA5205951N, ದಿನಾಂಕ: 27.06.2024 ರಂದು ನೀಡಿರುತ್ತಾರೆ ಮತ್ತು ಪ್ರವರ್ತಕರ ಪತ್ರ ಸಂಖ್ಯೆ KIADB/EE-3/ADHIA P-2./1212/2024-25, ದಿನಾಂಕ 17.12.2024ರ ಹಾಗೂ ಪರಿಸರ ಅಧಿಕಾರಿ, ಪ್ರಾದೇಶಿಕ ಕಛೇರಿ–ದೊಡ್ಡಬಳ್ಳಾಪುರ ರವರ ಪತ್ರ ಸಂಖ್ಯೆ : ಮಾನಿಮಂ/ಪ್ರಾ.ಕ.(ದೊಡ್ಡಬಳ್ಳಾಪುರ)/ಪಸಾಸ/2024–2025/818, ದಿನಾಂಕ: 23.01.2025 ರಲ್ಲಿ ತಿಳಿಸಿರುವಂತೆ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಮಾನ್ಯ ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿಗಳು **ದಿನಾಂಕ: 07.03.2025 ರಂದು ಬೆಳಗ್ಗೆ 11.00 ಗಂಟೆಗೆ** ನಿಗಧಿಪಡಿಸಿರುತ್ತಾರೆ. ಸದರಿ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ವಿವರಗಳು ಈ ಕೆಳಕಂಡಂತಿವೆ.

1. **ಸಂಸ್ಥೆಯ ಹೆಸರು ಮತ್ತು ವಿಳಾಸ:** ಕಾರ್ಯಪಾಲಕ ಅಭಿಯಂತರರು–3, ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ, 14/3, 1ನೇ ಮಹಡಿ, ಮಹರ್ಷಿ ಅರವಿಂದ ಭವನ, ನೃಪತುಂಗ ರಸ್ತೆ, ಬೆಂಗಳೂರು–560001.
2. **ಉದ್ದೇಶಿತ ಯೋಜನೆಯ ಸ್ಥಳ :** ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ, ನಾಗದೇನಹಳ್ಳಿ, ಆದಿನಾರಾಯಣ ಹೊಸಹಳ್ಳಿ ಮತ್ತು ಕೊಣಘಟ್ಟ ಗ್ರಾಮಗಳ 981.527 ಎಕರೆ (397.20 ಹೆಕ್ಟೇರ್) ಪ್ರದೇಶದಲ್ಲಿ ಆದಿನಾರಾಯಣ ಹೊಸಹಳ್ಳಿ ಕೈಗಾರಿಕಾ ಪ್ರದೇಶದ ಎರಡನೇ ಹಂತವನ್ನು ಅಭಿವೃದ್ಧಿ ಪಡಿಸುವ ಯೋಜನೆ ಹೊಂದಿದೆ.
3. **ಯೋಜನೆಯ ಕಾರ್ಯ ಚಟುವಟಿಕೆ. :** ನಾಗದೇನಹಳ್ಳಿ, ಆದಿನಾರಾಯಣ ಹೊಸಹಳ್ಳಿ ಮತ್ತು ಕೊಣಘಟ್ಟ ಗ್ರಾಮಗಳ 981.527 ಎಕರೆ (397.20 ಹೆಕ್ಟೇರ್) ಪ್ರದೇಶದಲ್ಲಿ ಆದಿನಾರಾಯಣ ಹೊಸಹಳ್ಳಿ ಕೈಗಾರಿಕಾ ಪ್ರದೇಶದ ಎರಡನೇ ಹಂತವನ್ನು ಅಭಿವೃದ್ಧಿ ಪಡಿಸುವ ಕುರಿತು.
4. **ಪರಿಸರ ಸಾರ್ವಜನಿಕ ಸಭೆಯ ಸ್ಥಳ, ದಿನಾಂಕ ಮತ್ತು ಸಮಯ : 07ನೇ ಮಾರ್ಚ್ 2025 ರಂದು ಶುಕ್ರವಾರ ಬೆಳಿಗ್ಗೆ 11.00 ಘಂಟೆಗೆ ಉದ್ದೇಶಿತ ಯೋಜನಾ ಸ್ಥಳ ಬ್ರಾಹ್ಮಿ ರೆಸಾರ್ಟ್ ಹತ್ತಿರ, ನಾಗದೇನಹಳ್ಳಿ, ದೊಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ**
5. **ಯೋಜನೆಯ ವೆಚ್ಚ :** ರೂ. 1313.48 ಕೋಟಿ (ಯೋಜನಾ ಮೊತ್ತ),

6. **ಯೋಜನೆಯ ದಾಸ್ತವೇಜುಗಳನ್ನು ಸಾರ್ವಜನಿಕ ಪರಾಮರ್ಷೆಗೆ ಇಡುವ ಸ್ಥಳ :** (ಅ) ಜಿಲ್ಲಾಧಿಕಾರಿಗಳ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ. (ಆ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಕಛೇರಿ, ಜಿಲ್ಲಾ ಪಂಚಾಯತ್, ಬೆಂಗಳೂರು ಗ್ರಾಮಾಂತರ ಜಿಲ್ಲೆ. (ಇ) ತಹಶೀಲ್ದಾರ್ ಕಾರ್ಯಾಲಯ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ (ಈ) ಜಿಲ್ಲಾ ಕೈಗಾರಿಕಾ ಕೇಂದ್ರ, ಜಿಲ್ಲಾಧಿಕಾರಿಗಳ ಕಛೇರಿ ಸಂಕೀರ್ಣ, ಬೆಂಗಳೂರು ಗ್ರಾಮಾಂತರ ಜಿಲ್ಲೆ. (ಉ) ತಾಲ್ಲೂಕು ಪಂಚಾಯತ್ ಕಛೇರಿ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ (ಊ) ಪಟ್ಟಣ ಪಂಚಾಯತಿ ಕಚೇರಿ, ಬಾಶೆಟ್ಟಿಹಳ್ಳಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ (ಋ) ಗ್ರಾಮ ಪಂಚಾಯಿತಿ ಕಾರ್ಯಾಲಯ, ಕೊಣಘಟ್ಟ ಗ್ರಾಮ, ದೊಡ್ಡಬಳ್ಳಾಪುರ ತಾಲ್ಲೂಕು. (ಎ) ಹಿರಿಯ ಪರಿಸರ ಅಧಿಕಾರಿಗಳು, ವಲಯ ಕಛೇರಿ–ಬೆಂಗಳೂರು ಉತ್ತರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಅರ್ಬನ್ ಇಕೋ ಪಾರ್ಕ್, 1ನೇ ಮಹಡಿ, 100 ಅಡಿ ರಸ್ತೆ, ಪೀಣ್ಯ ಕೈಗಾರಿಕಾ ಪ್ರದೇಶ, 3ನೇ ಹಂತ, ಪೀಣ್ಯ, ಬೆಂಗಳೂರು–560058. (ಐ) ಪ್ರಾದೇಶಿಕ ಕಛೇರಿ, ದೊಡ್ಡಬಳ್ಳಾಪುರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಅರ್ಬನ್ ಇಕೋ ಪಾರ್ಕ್, ನೆಲ ಮಹಡಿ, 100 ಅಡಿ ರಸ್ತೆ, ಪೀಣ್ಯ ಕೈಗಾರಿಕಾ ಪ್ರದೇಶ 3ನೇ ಹಂತ, ಪೀಣ್ಯ, ಬೆಂಗಳೂರು–560058. (ಒ) ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ದಕ್ಷಿಣ ವಲಯ ಕಛೇರಿ, ನಂ.ಇ–3/240, ಕೇಂದ್ರೀಯ ಸದನ, 4ನೇ ಮಹಡಿ, ಇ ಮತ್ತು ಎಫ್ ವಿಂಗ್ಸ್, 17ನೇ ಮುಖ್ಯ ರಸ್ತೆ, 2ನೇ ಬ್ಲಾಕ್, ಕೋರಮಂಗಲ, ಬೆಂಗಳೂರು–560 034. (ಓ) ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನೆಲ ಅಂತಸ್ತು, ನಂ.49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು–560 001.

ಸೂಚನೆ: ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆಟಿಪ್ಪಣಿಗಳು ಹಾಗು ಅಹವಾಲುಗಳನ್ನು ಮೌಖಿಕ/ಲಿಖಿತ/ಮಿಂಚಂಚೆ ಮುಖಾಂತರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಸಾರ್ವಜನಿಕ ಪರಿಸರ ಸಮಿತಿ **(ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ)** ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. **ಹೆಚ್ಚಿನ ವಿವರಗಳನ್ನು ಮಂಡಳಿಯ ಜಾಲತಾಣ : http://kspcb.karnataka.gov.in ನಲ್ಲಿ ಪಡೆಯಬಹುದು.**

ಸಹಿ/–
ಸದಸ್ಯ ಕಾರ್ಯದರ್ಶಿ

ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಲಿಮಿಟೆಡ್

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
An ISO-9001:2015 & 14001:2015 Company
ಶ್ರೀಗಂಧ ನಗರ: ಅಂಚೆ ಪೆಟ್ಟಿಗೆ ಸಂ.5531, ಬೆಂಗಳೂರು–ಪುಣೆ ಹೆದ್ದಾರಿ, ಬೆಂಗಳೂರು–560 055.
ದೂರವಾಣಿ: 080–22164879, 22164886, ಜಾಲತಾಣ: www.mysoresandal.org ಇ–ಮೇಲ್: ksdl.dgmmtls@gmail.com
ದಿನಾಂಕ: 05.02.2025

ಟೆಂಡರ್ ಪ್ರಕಟಣೆ

ಕೆಎಸ್&ಡಿಎಲ್ ಸಂಸ್ಥೆಗೆ ಈ ಕೆಳಕಂಡ ಸರಕು/ಸೇವೆ/ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಜಾಲತಾಣ (https://kppp.karnataka.gov.in)ದ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಟೆಂಡರ್ ಸಂಖ್ಯೆ	ಟೆಂಡರ್ ಹೆಸರು	ಸಂಖ್ಯೆ	ಪ್ರಕಟಣೆ ದಿನಾಂಕ	ಬಿಡ್ ಸಲ್ಲಿಸಲು ಕೊನೆಯ ದಿನಾಂಕ
1	KSDL/2024-25/IND0756	ಎಂಎಸ್ ಬಾಡಿ ವಾಶ್ 200 ಎಂಎಲ್ ಗಾಗಿ ಮಲ್ಟಿ ಲೇಯರ್ ಲ್ಯಾಮಿಟ್ಯೂಬ್‌ನ ಖರೀದಿ	130000 ಸಂ.	01-02-2025	07-03-2025
2	KSDL/2024-25/IND0757	ಮೈಸೂರ್ ಡಿಟರ್ಜೆಂಟ್ ಕೇಕ್ 150 ಗ್ರಾಂಗಾಗಿ ಫ್ಲೋ ರ್‍ಯಾಪ್‌ನ ಖರೀದಿ	26000 ಕೆ.ಜಿ.	01-02-2025	07-03-2025
3	KSDL/2024-25/IND0758	ಮೈಸೂರ್ ಸ್ಯಾಂಡಲ್ ಡಿಟರ್ಜೆಂಟ್ ಕೇಕ್ 150 ಗ್ರಾಂ ಕಾರೋಗೇಟೆಡ್ ಬಾಕ್ಸ್‌ಗಳ ಖರೀದಿ	180000 ಸಂ.	01-02-2025	07-03-2025
4	KSDL/2024-25/IND0759	ಮೈಸೂರ್ ಸ್ಯಾಂಡಲ್ ಡಿಟರ್ಜೆಂಟ್ ಪೌಡರ್ 1 ಕೆಜಿ ಪೌಚ್‌ಗಳ ಖರೀದಿ	265000 ಸಂ.	01-02-2025	07-03-2025
5	KSDL/2024-25/IND0760	ಎಂ ಎಸ್ ಎಸ್ (144 ಸಂ. X 75 ಗ್ರಾಂ) ರಫ್ತು ಕಾರೋಗೇಟೆಡ್ ಬಾಕ್ಸ್‌ಗಳ ಖರೀದಿ	9800 ಸಂ.	01-02-2025	07-03-2025
6	KSDL/2024-25/IND0761	ಕ್ಯಾಪ್ ನೊಂದಿಗೆ ಕೊಕೊನಟ್ 50 ಎಂಎಲ್ HDPE ಬಾಟಲ್‌ಗಳ ಖರೀದಿ	1525000 ಸಂ.	01-02-2025	04-03-2025
7	KSDL/2024-25/IND0762	ಕ್ಯಾಪ್‌ನೊಂದಿಗೆ ಕೊಕೊನಟ್ 100 ಎಂಎಲ್ HDPE ಬಾಟಲ್‌ಗಳ ಖರೀದಿ	4888000 ಸಂ.	01-02-2025	04-03-2025
8	KSDL/2024-25/IND0763	ಸೆಪರೇಟರ್ ಮತ್ತು ಟಾಪ್ ಪ್ಲೇಟ್‌ನೊಂದಿಗೆ ಕೊಕೊನಟ್ ಆಯಿಲ್ 100 ಎಂಎಲ್ ಕಾರೋಗೇಟೆಡ್ ಬಾಕ್ಸ್‌ಗಳ ಖರೀದಿ	25000 ಸಂ.	01-02-2025	04-03-2025
9	KSDL/2024-25/IND0765	ಸೆಪರೇಟರ್ ಮತ್ತು ಟಾಪ್ ಪ್ಲೇಟ್‌ನೊಂದಿಗೆ ಕೊಕೊನಟ್ ಆಯಿಲ್ 150 ಎಂಎಲ್ ಕಾರೋಗೇಟೆಡ್ ಬಾಕ್ಸ್‌ಗಳ ಖರೀದಿ	17800 ಸಂ.	01-02-2025	04-03-2025
10	KSDL/2024-25/IND0766	250 ಎಂಎಲ್ ಹ್ಯಾಂಡ್ ವಾಶ್ ಸ್ಕ್ವೇರ್ ಆಕಾರದ PET ಬಾಟಲ್‌ಗಾಗಿ ಡಿಸ್ಪೆನ್ಸರ್ ಪಂಪ್‌ನ ಖರೀದಿ	598000 ಸಂ.	01-02-2025	04-03-2025
11	KSDL/2024-25/IND0767	ಪಾರ್ಟಿಷನ್ ಮತ್ತು ಟಾಪ್ ಪ್ಲೇಟ್ ನೊಂದಿಗೆ ಹ್ಯಾಂಡ್ ವಾಶ್ 250 ಎಂಎಲ್ ಕಾರೋಗೇಟೆಡ್ ಬಾಕ್ಸ್‌ಗಳ ಖರೀದಿ	12500 ಸಂ.	01-02-2025	04-03-2025
12	KSDL/2024-25/IND0768	ಫ್ರೆಶ್ನಾಲ್ ಲೇಬಲ್‌ಗಳ ಖರೀದಿ	2500000 ಸಂ.	01-02-2025	07-03-2025
13	KSDL/2024-25/IND0769	ಮೈಸೂರು ಸ್ಯಾಂಡಲ್ ಬಾಡಿ ವಾಶ್ 200 ಎಂಎಲ್ ಕಾರ್ಟನ್‌ಗಳ ಖರೀದಿ	130000 ಸಂ.	01-02-2025	07-03-2025
14	KSDL/2024-25/IND0770	ಕ್ಯಾಪ್ ನೊಂದಿಗೆ ಕೊಕೊನಟ್ 150 ಎಂಎಲ್ HDPE ಬಾಟಲ್‌ಗಳ ಖರೀದಿ	2100000 ಸಂ.	01-02-2025	04-03-2025
15	KSDL/2024-25/IND0771	ತೆಂಗಿನ ಎಣ್ಣೆ (Coconut Oil) ಯ ಖರೀದಿ	827 ಮೆ.ಟ.	04-02-2025	05-03-2025
16	KSDL/2024-25/IND0772	ಆರೋ ಕ್ಲೀನ್ ಎ ಎಲ್ ಸಿ (ಎಲ್) (Arrow Kleen ALC (L)) ಖರೀದಿ	444 ಕೆ.ಜಿ.	04-02-2025	19-02-2025
17	KSDL/2024-25/IND0773	ರೋಸಮೈನ್ ಎಚ್ ಎಲ್ (ROSAMINE H)L (CI. No. 45100) ಖರೀದಿ	61 ಕೆ.ಜಿ.	04-02-2025	19-02-2025
18	KSDL/2024-25/IND0775	ಅಮಿಸಾಫ್ಟ್ (Amisoft) ಖರೀದಿ	1807 ಕೆ.ಜಿ.	04-02-2025	19-02-2025

ಯಾವುದೇ ಹೆಚ್ಚಿನ ವಿಚಾರಣೆ/ಸ್ಪಷ್ಟೀಕರಣಕ್ಕೆ ಕೆಳಕಂಡ ಸಹಿದಾರರನ್ನು ಸಂಪರ್ಕಿಸಬಹುದು.

ಸಹಿ/–ಸಹಾಯಕ ಪ್ರಧಾನ ವ್ಯವಸ್ಥಾಪಕರು (ಸಾಮಗ್ರಿ)



ಮಹಾಕುಂಭ ಮೇಳ
ಗಂಗಾ ಸ್ವಚ್ಛತೆಯ ಸವಾಲುಗಳೇನು?

ಚನ್ನಬಸಪ್ಪ ರೊಟ್ಟಿ

ಈಗ ಎಲ್ಲೆಡೆ ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ 'ಮಹಾಕುಂಭಮೇಳ'ದ್ದೇ ಸುದ್ದಿ. ಜನವರಿ 13ರಿಂದ ಫೆಬ್ರುವರಿ 26ರವರೆಗೆ 45 ದಿನ ನಡೆಯಲಿರುವ ಈ ಮೇಳ ಜಗತ್ತಿನ ಅತ್ಯಂತ ದೊಡ್ಡ ಧಾರ್ಮಿಕ ಉತ್ಸವ ಎಂಬ ಖ್ಯಾತಿ ಪಡೆದಿದೆ.

ಈ ಮಹಾ ಕುಂಭಮೇಳದಲ್ಲಿ ಅಂದಾಜು 45 ಕೋಟಿ ಸಂದರ್ಶಕರು ಮತ್ತು 50 ಲಕ್ಷ 'ಕಲ್ಪವಾಸಿ' (ಮಹಾ ಕುಂಭಮೇಳ ಮುಗಿಯುವವರೆಗೆ ಅದೇ ಸ್ಥಳದಲ್ಲಿಯೇ ನೆಲೆಸುವವರು) ಯಾತ್ರಿಕರು ಭೇಟಿ ನೀಡಲಿದ್ದಾರೆ ಎಂದು ಅಂದಾಜಿಸಲಾಗಿದೆ. ಮೇಳದ ಸಮರ್ಪಕ ನಿರ್ವಹಣೆಗಾಗಿ 'ಮಹಾಕುಂಭ ನಗರ' ಎಂಬ ಪ್ರತ್ಯೇಕ ಜಿಲ್ಲೆಯನ್ನೇ ಸ್ಥಾಪಿಸಲಾಗಿದೆ. 144 ವರ್ಷಗಳಿಗೆ ಒಮ್ಮೆ ನಡೆಯುವ ಈ ಮಹಾಕುಂಭಮೇಳ ಪೌರಾಣಿಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ಹೊಂದಿದೆ.

10 ಸಾವಿರ ಎಕರೆ ವಿಸ್ತೀರ್ಣದಲ್ಲಿ ಮಹಾಕುಂಭಮೇಳಕ್ಕೆ ಸಿದ್ಧತೆ ಕೈಗೊಳ್ಳಲಾಗಿದ್ದು, ಈ ಪ್ರದೇಶವನ್ನು 25 ವಲಯಗಳನ್ನಾಗಿ ವಿಂಗಡಿಸಲಾಗಿದೆ.

ಪ್ರಯಾಗ್‌ರಾಜ್ ಗಂಗಾ, ಯಮುನಾ ಮತ್ತು ಗುಪ್ತಗಾಮಿನಿ ಸರಸ್ವತಿ ನದಿಗಳು ಇಲ್ಲಿಯೇ ಸಂಗಮಿಸುತ್ತವೆ ಎಂಬ ನಂಬಿಕೆ ಇದೆ. ಈ ಮೇಳದಲ್ಲಿ ಧಾರ್ಮಿಕ ಕಾರ್ಯಕ್ರಮದ ಜತೆಗೆ ಪ್ರವಾಸೋದ್ಯಮಕ್ಕೂ ಆದ್ಯತೆ ನೀಡಲಾಗಿದೆ. ವಿದೇಶದಿಂದ ಬರುವ ಪ್ರವಾಸಿಗರು, ವಿದ್ವಾಂಸರು, ಸಂಶೋಧಕರು ಹಾಗೂ ಯಾತ್ರಿಕರಿಗಾಗಿ 5,000 ಚದರ ಅಡಿ ಜಾಗದಲ್ಲಿ ವಿಶೇಷ ವಸತಿ ವ್ಯವಸ್ಥೆ ಮಾಡಲಾಗಿದೆ. ಈ ನಿಟ್ಟಿನಲ್ಲಿ ಗಂಗಾ ನದಿ ಶುಚಿತ್ವದ ಕುರಿತು ಹಲವು ಸವಾಲುಗಳು ತಲೆದೋರಿವೆ. ಈ ಸವಾಲುಗಳ ಜತೆ ನದಿ ಮಾಲಿನ್ಯವನ್ನು ನಿರ್ವಹಿಸಲು ಸರ್ಕಾರ ಹತ್ತಾರು ಕ್ರಮಗಳನ್ನು ಕೈಗೊಂಡಿದೆ. ಆದರೂ ನದಿ ನೀರಿನ ಗುಣಮಟ್ಟದ ಬಗ್ಗೆ ಹಲವು ಕಳವಳಗಳು ಉಳಿದುಕೊಂಡಿವೆ.

ಮೇಳಕ್ಕೆ ಭೇಟಿ ನೀಡಿದ ಬೃಹತ್ ಜನಸಂಖ್ಯೆಯು ಪ್ರಯಾಗ್‌ರಾಜ್ ಪಟ್ಟಣದ ಒಟ್ಟು ಜನಸಂಖ್ಯೆಗಿಂತ ಸುಮಾರು 25ಪಟ್ಟು ಹೆಚ್ಚು. ಇದರಿಂದಾಗಿ ಪ್ರತಿನಿತ್ಯ ಮಾಲಿನ್ಯಯುಕ್ತ ಕೊಳಚೆನೀರಿನ ಉತ್ಪಾದನೆಯಲ್ಲಿ ಅಪಾರ ಹೆಚ್ಚಳ ಕಂಡುಬರುತ್ತದೆ.

ಮೇಳದ ಮುಖ್ಯ ಆಚರಣೆ 'ಅಮೃತಸ್ನಾನ'ದ (ಶಾಹಿಸ್ನಾನ) ಇಲ್ಲಿಯವರೆಗಿನ ದಿನಗಳಲ್ಲಿ ಉತ್ಪತ್ತಿಯಾದ ಕೊಳಚೆನೀರು ಪ್ರತಿದಿನಕ್ಕೆ ಸರಿಸುಮಾರು 550 ಮಿಲಿಯನ್ ಲೀಟರ್‌ಗಳಿಗೆ ತಲುಪಿದೆ. ಜನವರಿ 13, 2025 (ಪುಷ್ಯ ಪೂರ್ಣಿಮೆ), ಜನವರಿ 14, 2025 (ಮಕರ ಸಂಕ್ರಮಣ), ಜನವರಿ 29, 2025 (ಮೌನಿ ಅಮಾವಾಸ್ಯೆ), ಫೆಬ್ರುವರಿ 3, 2025 (ವಸಂತ ಪಂಚಮಿ) ದಿನಗಳ 'ಶಾಹಿಸ್ನಾನ'ದ ಮಹೂರ್ತ ಈಗಾಗಲೇ ಮುಗಿದಿದ್ದು, ಫೆಬ್ರುವರಿ 12, 2025 (ಮಾಘಿ ಪೂರ್ಣಿಮೆ) ಹಾಗೂ ಫೆಬ್ರುವರಿ 26, 2025 (ಶಿವರಾತ್ರಿ) ದಿನಗಳಂದು 'ಶಾಹಿಸ್ನಾನ' ನಡೆಯಲಿದೆ. ಈ ದಿನಗಳಂದು ಬಹುಪಾಲು ನೀರನ್ನು ಸಂಸ್ಕರಿಸದೇ ನೇರವಾಗಿ ಗಂಗಾ ನದಿಗೆ ಬಿಡುವುದರಿಂದ ಮಾಲಿನ್ಯ ಸಮಸ್ಯೆ ಉಲ್ಬಣಿಸಿದೆ. ಮಹಾಕುಂಭ ಮೇಳದ ಸಂದರ್ಭದಲ್ಲಿ ಪ್ರಯಾಗರಾಜ್ ಪ್ರತಿದಿನ ಸರಾಸರಿ 471.93 ಮಿಲಿಯನ್ ಲೀಟರ್ ಕೊಳಚೆ ನೀರನ್ನು ಉತ್ಪಾದಿಸುತ್ತಿದೆ. ಇದರಲ್ಲಿ 293 ಮಿಲಿಯನ್ ಲೀಟರ್ ಕೊಳಚೆ ನೀರು ನೇರವಾಗಿ ಗಂಗಾ ಮತ್ತು ಯಮುನಾ ನದಿಗಳಿಗೆ ಸೇರಿದರೆ, ಇನ್ನುಳಿದ 178.31 ದಶಲಕ್ಷ ಲೀಟರ್ ಕೊಳಚೆ ನೀರು ನಗರದಲ್ಲಿನ 81 ಚರಂಡಿಗಳಲ್ಲಿ ಹರಿಯುತ್ತದೆ.

ಸ್ವಚ್ಛತೆ ನಿರ್ವಹಣೆಯ ಕ್ರಮಗಳು

ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (NGT: National Green Tribunal) ನೀಡಿದ ನಿರ್ದೇಶನದಂತೆ ಉತ್ತರ ಪ್ರದೇಶ ಸರ್ಕಾರ ಒಳಚರಂಡಿ ಸಂಸ್ಕರಣಾ ಪ್ರಕ್ರಿಯೆಗಳನ್ನು ಸುಧಾರಿಸಲು ಕ್ರಮ ಕೈಗೊಂಡಿದೆ. ಪ್ರಯಾಗರಾಜ್ ನಗರದಲ್ಲಿ ಸ್ಥಾಪಿಸಿರುವ ಹತ್ತು ಒಳಚರಂಡಿ ಸಂಸ್ಕರಣಾ ಘಟಕಗಳು (STPs) 81 ಚರಂಡಿಗಳಲ್ಲಿನ ಒಟ್ಟು 216.17 ಮಿಲಿಯನ್ ಲೀಟರ್ ಕೊಳಚೆನೀರನ್ನು ಸಂಸ್ಕರಿಸುತ್ತಿವೆ. ಆದರೆ, ಇದು ಅವುಗಳ ವಾಸ್ತವ ಸಾಮರ್ಥ್ಯ 43 ಮಿಲಿಯನ್ ಲೀಟರ್ ಅನ್ನು ಮೀರಿಸಿದೆ. ಈ ನಿಟ್ಟಿನಲ್ಲಿ ಮಹಾಕುಂಭ ನಗರ ನೆಲೆಗೊಂಡಿರುವ ಪ್ರದೇಶದಲ್ಲಿರುವ 22 ಒಳಚರಂಡಿಗಳಿಂದ ಪ್ರತಿದಿನ ಹೊರಬರುವ 60.80 ಮಿಲಿಯನ್ ಲೀಟರ್ ಕೊಳಚೆನೀರನ್ನು ಸ್ಥಳದಲ್ಲಿಯೇ ಸಂಸ್ಕರಿಸಲು ಉತ್ತರ ಪ್ರದೇಶ ಸರ್ಕಾರ ಯೋಜನೆ ರೂಪಿಸಿದೆ.

ಮಹಾಕುಂಭ ನಗರದಲ್ಲಿ ಒಟ್ಟು 1.45 ಲಕ್ಷ ತಾತ್ಕಾಲಿಕ ಶೌಚಾಲಯಗಳನ್ನು ನಿರ್ಮಿಸಲಾಗಿದೆ. ಸೆಪ್ಟಿಕ್ ಟ್ಯಾಂಕ್‌ಗಳೊಂದಿಗೆ 15,000 ಫೈಬರ್‌-ರೀ ಇನ್‌ಫೋರ್ಸ್ಡ್ ಪಾಲಿಮರ್ (Fibre-reinforced polymer) ಶೌಚಾಲಯಗಳು ಮತ್ತು 22,000 ಪ್ರಿಫ್ಯಾಬ್ರಿಕೇಟೆಡ್ ಸ್ಟೀಲ್ ಟಾಯ್ಲೆಟ್‌ಗಳು ಇದರಲ್ಲಿ ಸೇರಿವೆ. ಸಾಧು-ಸಂತರು ನೆಲೆಗೊಂಡಿರುವ ಧಾರ್ಮಿಕ ಶಿಬಿರಗಳಲ್ಲಿ, ವಿಐಪಿ ಶಿಬಿರಗಳಲ್ಲಿ ವಿಶೇಷ ಟೆಂಟ್ ಮಾದರಿಯ ಶೌಚಾಲಯಗಳನ್ನು ಸ್ಥಾಪಿಸಲಾಗಿದೆ. ಕೊಳಚೆ ನೀರು ಹರಿವಿಗಾಗಿ 200 ಕಿಲೋ ಮೀಟರ್ ಉದ್ದದ ತಾತ್ಕಾಲಿಕ ಒಳಚರಂಡಿ ವ್ಯವಸ್ಥೆಯನ್ನು ನಿರ್ಮಿಸಲಾಗಿದೆ.

ಮಾಲಿನ್ಯ ನಿಯಂತ್ರಣಕ್ಕಾಗಿ ಹಾಗೂ ಗಂಗಾ ನದಿಯ ನೀರಿನ ಗುಣಮಟ್ಟವನ್ನು ಕಾಪಾಡಲು, ನೀರಿನ ಹರಿವನ್ನು ಹೆಚ್ಚಿಸುವುದು ಅಗತ್ಯವಾಗಿದ್ದು, ಈ ನಿಟ್ಟಿನಲ್ಲಿ ಡಿಸೆಂಬರ್ 15 ರಿಂದಲೇ ತೆಹ್ರಿ ಅಣೆಕಟ್ಟಿನಿಂದ ಪ್ರತಿದಿನ 2,000 ಕ್ಯೂಸೆಕ್ ನೀರನ್ನು ಗಂಗಾ ನದಿಗೆ ಹೆಚ್ಚುವರಿಯಾಗಿ ಹರಿ ಬಿಡಲಾಗುತ್ತಿದೆ. ಇದಲ್ಲದೇ ವಿವಿಧ ಬ್ಯಾರೇಜ್‌ಗಳಿಂದಲೂ ಹೆಚ್ಚುವರಿ ನೀರನ್ನು ಗಂಗಾ ನದಿಗೆ ಹರಿಸಲಾಗುತ್ತಿದೆ. ಇವೆಲ್ಲ ತಾತ್ಕಾಲಿಕ ಕ್ರಮಗಳಾಗಿದ್ದು, ದೀರ್ಘಕಾಲೀನ ಮಾಲಿನ್ಯ ಸಮಸ್ಯೆಗಳನ್ನು ಪರಿಹರಿಸುವುದಿಲ್ಲ ಎಂಬ ಕಾಳಜಿಯನ್ನು ಪರಿಸರಪ್ರೇಮಿಗಳು ವ್ಯಕ್ತಪಡಿಸಿದ್ದಾರೆ.

ಹಸಿರೀಕರಣಕ್ಕೆ 'ಮಿಯಾವಾಕಿ' ತಂತ್ರ

ಮಹಾಕುಂಭ ಮೇಳದ ಹಿನ್ನೆಲೆಯಲ್ಲಿ, ಪ್ರಯಾಗ್‌ರಾಜ್‌ನಲ್ಲಿ ಪೂರ್ವಭಾವಿಯಾಗಿ ವ್ಯಾಪಕವಾದ ಹಸಿರೀಕರಣ ಯೋಜನೆಗಳನ್ನು ಕೈಗೊಳ್ಳಲಾಗಿದೆ. ಕೋಟ್ಯಂತರ ಪ್ರವಾಸಿಗರಿಗೆ ಶುದ್ಧ ಗಾಳಿಯನ್ನು ಒದಗಿಸಲು ನಗರದ ಸುತ್ತ ಕಳೆದ ಎರಡು ವರ್ಷಗಳಲ್ಲಿ ದಟ್ಟವಾದ ಕಾಡುಗಳನ್ನು ಸೃಷ್ಟಿಸಲು ಪ್ರಯಾಗ್‌ರಾಜ್ ನಗರ ಪಾಲಿಕೆ ಜಪಾನನಲ್ಲಿ ಬಳಸುವ 'ಮಿಯಾವಾಕಿ' ತಂತ್ರವನ್ನು ಅನುಸರಿಸಿದೆ. ವ್ಯಾಪಕ ಪ್ರಯತ್ನಗಳಿಂದಾಗಿ ಪ್ರಯಾಗ್‌ರಾಜ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಹಚ್ಚ ಹಸಿರಿನ ಕಾಡುಗಳು ಕಂಡುಬರುತ್ತಿವೆ. ಪ್ರಯಾಗ್‌ರಾಜ್ ನಗರ ಪಾಲಿಕೆ ಒಟ್ಟು 55,800 ಚದರ ಮೀಟರ್‌ಗಳನ್ನು ಒಳಗೊಂಡಿರುವ ಹತ್ತು ಸ್ಥಳಗಳಲ್ಲಿ 'ಮಿಯಾವಾಕಿ' ತಂತ್ರದಡಿ ಮರಗಳನ್ನು ನೆಟ್ಟು ಬೆಳೆಸಿದೆ. ಪ್ರಯಾಗ್‌ರಾಜ್‌ನ ನೈನಿ ಕೈಗಾರಿಕಾ ಪ್ರದೇಶದಲ್ಲಿ ಅತಿದೊಡ್ಡ ನೆಡುತೋಪು ಬೆಳೆಸಲಾಗಿದ್ದು, ಅಲ್ಲಿ 63 ವಿವಿಧ ಜಾತಿಗಳ ಸುಮಾರು 1,20,000 ಮರಗಳನ್ನು ನೆಡಲಾಗಿದೆ. ಹೆಚ್ಚುವರಿಯಾಗಿ, ನಗರದ ಅತಿದೊಡ್ಡ ಕಸದ ಡಂಪಿಂಗ್ ಯಾರ್ಡ್ ಅನ್ನು ತೆರವುಗೊಳಿಸಿ ಅಲ್ಲಿ 27 ಜಾತಿಗಳ 27,000 ಮರಗಳನ್ನು ನೆಡಲಾಗಿದೆ.

'ಮಿಯಾವಾಕಿ' ತಂತ್ರವು ಸೀಮಿತ ಸ್ಥಳದಲ್ಲಿ ಹಾಗೂ ಶೀಘ್ರವಾಗಿ ದಟ್ಟ ಕಾಡುಗಳನ್ನು ಬೆಳೆಸುವ ವಿಧಾನವಾಗಿದೆ. 1970ರ ದಶಕದಲ್ಲಿ 'ಅಕಿರಾ ಮಿಯಾವಾಕಿ' ಈ ತಂತ್ರವನ್ನು ಅಭಿವೃದ್ಧಿಪಡಿಸಿದ್ದಾರೆ. ಈ ವಿಧಾನದಲ್ಲಿ ಮರದ ಬೆಳವಣಿಗೆ ವೇಗವಾಗಿದ್ದು, ಸಾಂಪ್ರದಾಯಿಕ ವಿಧಾನಗಳಿಗಿಂತ ಹತ್ತು ಪಟ್ಟು ವೇಗವಾಗಿ ಸಸ್ಯಗಳು ಬೆಳೆಯುತ್ತವೆ. ಈ ತಂತ್ರವು ವಿವಿಧ ಸ್ಥಳೀಯ ಜಾತಿಯ ಮರಗಳನ್ನು ಸಂಯೋಜಿಸುವ ಮೂಲಕ ನೈಸರ್ಗಿಕ ಕಾಡುಗಳ ಬೆಳವಣಿಗೆಗೆ ಪೂರಕವಾಗಿರುತ್ತದೆ ಹಾಗೂ ಸ್ಥಳೀಯ ಜೀವವೈವಿಧ್ಯವನ್ನು ಮತ್ತು ಮಣ್ಣಿನ ಗುಣಮಟ್ಟವನ್ನು ಸುಧಾರಿಸುತ್ತದೆ.

'ಮಿಯಾವಾಕಿ' ಅರಣ್ಯಗಳು ವಾಯು ಮತ್ತು ನೀರಿನ ಮಾಲಿನ್ಯವನ್ನು ಕಡಿಮೆ ಮಾಡಲು, ಮಣ್ಣಿನ ಸವೆತವನ್ನು ತಡೆಗಟ್ಟಲು ಮತ್ತು ಜೀವವೈವಿಧ್ಯವನ್ನು ಹೆಚ್ಚಿಸಲು ಸಹಾಯ ಮಾಡುತ್ತವೆ. ಈ ಕಾಡುಗಳು ತಾಪಮಾನವನ್ನು 4 ರಿಂದ 7 ಡಿಗ್ರಿ ಸೆಲ್ಸಿಯಸ್‌ವರೆಗೆ ಕಡಿಮೆ ಮಾಡುತ್ತವೆ. ಇವು ಬೇಸಿಗೆಯಲ್ಲಿ ಶಾಖದ ಪರಿಣಾಮಗಳನ್ನು ತಗ್ಗಿಸುತ್ತವೆ. ಪ್ರಯಾಗ್‌ರಾಜ್‌ನಲ್ಲಿ 'ಮಿಯಾವಾಕಿ' ಅರಣ್ಯ ಯೋಜನೆಯಡಿ ವಿವಿಧ ಹಣ್ಣುಗಳ, ಔಷಧೀಯ ಮತ್ತು ಆಲಂಕಾರಿಕ ಸಸ್ಯಗಳನ್ನು ನೆಟ್ಟು ಬೆಳೆಸಲಾಗಿದೆ. ನೆಟ್ಟ ಪ್ರಮುಖ ಮರಗಳಲ್ಲಿ ಮಾವು, ಮಹುವಾ, ಬೇವು, ಅಶ್ವತ್ಥ, ಹುಣಸೆ, ತೇಗ, ದಾಸವಾಳ, ಬೌಗೆನ್ವಿಲ್ಲಾ, ಜಂಗಲ್ ಜಿಲೇಬಿ, ಬ್ರಾಹ್ಮಿ ಮತ್ತು ಬೆಟ್ಟದ ನೆಲ್ಲಿಕಾಯಿಯಂಥ ಸಸ್ಯಗಳು ಸೇರಿವೆ.

ಬಹುಆಯ್ಕೆಯ ಪ್ರಶ್ನೋತ್ತರಗಳು

1. ಸಮುದ್ರಯಾನದ ಸಂದರ್ಭದಲ್ಲಿ ಉಂಟಾಗುವ ಮಾಲಿನ್ಯವನ್ನು ತಡೆಗಟ್ಟಲು ಕೆಳಗಿನ ಯಾವ ಅಂತರರಾಷ್ಟ್ರೀಯ ಒಪ್ಪಂದ ಕಾರ್ಯನಿರ್ವಹಿಸುತ್ತಿದೆ?
ಎ. ಸಮುದ್ರಯಾನ ಮಾಲಿನ್ಯ ನಿಯಂತ್ರಣ ಒಪ್ಪಂದ.
ಬಿ. ಸಮುದ್ರಯಾನ ಅಪಘಾತ ಮಾಲಿನ್ಯ ನಿಯಂತ್ರಣ ಒಪ್ಪಂದ.
ಸಿ. ಹಸಿರುಮನೆ ಅನಿಲ ತಡೆಗಟ್ಟುವಿಕೆ ಒಪ್ಪಂದ.
ಡಿ. ಹಡಗುಗಳ ಮಾಲಿನ್ಯ ನಿಯಂತ್ರಣ ಅಂತರರಾಷ್ಟ್ರೀಯ ಸಮಾವೇಶ ಒಪ್ಪಂದ.
ಉತ್ತರ : ಡಿ

2. ಇ-ಆಡಳಿತಕ್ಕೆ ಸಂಬಂಧಿಸಿದಂತೆ ಕೆಳಗಿನ ಯಾವ ಯೋಜನೆಗಳನ್ನು ಕರ್ನಾಟಕ ಸರ್ಕಾರ ಜಾರಿಗೆ ತಂದಿದೆ?
1. ಭೂಮಿ 2.ಖಜಾನೆ
3. ಮನುಜ 4. ನಿರಂತರ ಸೇವಾ
ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1 ಮತ್ತು 2 ಬಿ. 2 ಮತ್ತು 3
ಸಿ. 3 ಮತ್ತು 4 ಡಿ. 4 ಮಾತ್ರ
ಉತ್ತರ : ಎ

3. ಸ್ಮಾರ್ಟ್ ಆಡಳಿತದಲ್ಲಿ ಕೆಳಗಿನ ಯಾವ ಅಂಶಗಳನ್ನು ಅಳವಡಿಸಿಕೊಳ್ಳಲಾಗುತ್ತದೆ?
1. ಸರಳೀಕರಣ
2. ಆಡಳಿತ ವ್ಯವಸ್ಥೆಯಲ್ಲಿ ಮೌಲ್ಯಗಳ ಅಳವಡಿಕೆ.
3. ಉತ್ತರದಾಯಿತ್ವ
4. ಪ್ರತಿಕ್ರಿಯಾಶೀಲ ಆಡಳಿತ
ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1 ಮತ್ತು 2 ಬಿ. 1, 2, 3 ಮತ್ತು 4
ಸಿ. 2 ಮತ್ತು 4 ಡಿ. 3 ಮತ್ತು 4
ಉತ್ತರ : ಬಿ

4. ಯುನೈಟೆಡ್ ಕಿಂಗ್ಡಮ್‌ನ ಕೆಳಗಿನ ಯಾವ ಪ್ರಧಾನಿಗಳು ನಾಗರಿಕ ಸನ್ನದನ್ನು ಪ್ರತಿಪಾದಿಸಿದರು?
1. ಜಾನ್ ಮೇಜರ್
2. ಮಾರ್ಗರೇಟ್ ಥ್ಯಾಚರ್
3. ಕ್ಯಾಮರೂನ್ ವೈಟ್
4. ಟೋನಿ ಬ್ಲೇರ್
ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1 ಮತ್ತು 4 ಬಿ. 1 ಮತ್ತು 2
ಸಿ. 2 ಮತ್ತು 3 ಡಿ. 3 ಮತ್ತು 4
ಉತ್ತರ : ಎ

5. ಭಾರತದಲ್ಲಿ ನಾಗರಿಕ ಸನ್ನದನ್ನು ಕೆಳಗಿನ ಯಾವ ಸಮಾವೇಶದ ನಂತರ ಜಾರಿಗೆ ತರಲಾಯಿತು?
ಎ. ರಾಜ್ಯಪಾಲರ ಸಮಾವೇಶ.
ಬಿ. ಹಣಕಾಸು ಸಚಿವರ ಸಮಾವೇಶ.
ಸಿ. ಮುಖ್ಯಮಂತ್ರಿಗಳ ಸಮಾವೇಶ.
ಡಿ. ರಕ್ಷಣಾ ಸಚಿವರ ಸಮಾವೇಶ.
ಉತ್ತರ : ಸಿ

6. ಅಲ್- ಅಕ್ಸಾ ಮಸೀದಿ ಮತ್ತು ಟೆಂಪಲ್ ಮೌಂಟ್ ಕೆಳಗಿನ ಯಾವ ಧರ್ಮದವರಿಗೆ ಪವಿತ್ರ ಸ್ಥಳವಾಗಿದೆ?
1. ಬೌದ್ಧ ಧರ್ಮದವರು.
2. ಜೈನ ಧರ್ಮದವರು.
3. ಇಸ್ಲಾಂ ಧರ್ಮದವರು.
4. ಯಹೂದಿ ಧರ್ಮದವರು.
ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1, 2 ಮತ್ತು 3 ಬಿ. 3 ಮತ್ತು 4
ಸಿ. 2 ಮತ್ತು 3 ಡಿ. 1 ಮತ್ತು 2
ಉತ್ತರ: ಬಿ

7. ಕೆಳಗಿನ ಯಾವ ರಾಷ್ಟ್ರ ಔಪಚಾರಿಕವಾಗಿ ಜೆರುಸಲೇಂ ಮತ್ತು ಗೋಲನ್ ಹೈಟ್ಸ್ ಪ್ರದೇಶ ಇಸ್ರೇಲ್‌ಗೆ ಸೇರಿದೆ ಎಂದು ಘೋಷಿಸಿದೆ?
ಎ. ಅಮೆರಿಕ
ಬಿ. ಫ್ರಾನ್ಸ್
ಸಿ. ಜಪಾನ್
ಡಿ. ಇಂಗ್ಲೆಂಡ್
ಉತ್ತರ: ಎ

8. ವಿಶ್ವ ಪತ್ರಿಕೋದ್ಯಮ ಸ್ವಾತಂತ್ರ್ಯ ಸೂಚ್ಯಂಕವನ್ನು ಕೆಳಗಿನ ಯಾವ ಸಂಸ್ಥೆ ಬಿಡುಗಡೆ ಮಾಡುತ್ತದೆ?
ಎ. ರಿಪೋರ್ಟರ್ಸ್ ವಿಥೌಟ್ ಬಾರ್ಡರ್ಸ್.
ಬಿ. ಭಾರತೀಯ ಪತ್ರಿಕೋದ್ಯಮ ಮಂಡಳಿ.
ಸಿ. ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾಲಯ.
ಡಿ. ನ್ಯೂಸ್ ಬ್ರಾಡ್ ಕ್ಯಾಸ್ಟರ್ಸ್ ಅಸೋಸಿಯೇಷನ್.
ಉತ್ತರ: ಎ

9. ವಿಶ್ವ ಪತ್ರಿಕೋದ್ಯಮ ಸ್ವಾತಂತ್ರ್ಯ ಸೂಚ್ಯಂಕವನ್ನು ಬಿಡುಗಡೆ ಮಾಡಲು ಕೆಳಗಿನ ಯಾವ ಮಾನದಂಡಗಳನ್ನು ಪರಿಗಣಿಸಲಾಗುತ್ತದೆ?
1. ರಾಜಕೀಯ ಪರಿಸ್ಥಿತಿ.
2. ಕಾನೂನಾತ್ಮಕ ನಿಬಂಧನೆಗಳು.
3. ಪತ್ರಕರ್ತರ ಭದ್ರತೆ.
4. ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಸ್ಥಿತಿ.
ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1, 2 ಮತ್ತು 3 ಬಿ. 1, 2, 3 ಮತ್ತು 4
ಸಿ. 2 ಮತ್ತು 3 ಡಿ. 3 ಮತ್ತು 4
ಉತ್ತರ: ಬಿ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಇಂಗ್ಲಿಷ್

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

XIII. Answer the following questions

45. How does the poet portray the positive side of India in the poem 'The song of India'?

Ans:- The poet was answered by a wonderful vision. A vision of new and bright future. In the vision he saw the mother (motherland) rise gloriously against the blue sky. The three milky - white oceans, i.e., the Arabian sea, Bay of Bengal and the Indian Ocean, rose and fell with steady powerful motions. (There was calm on the sea's). Their waves sent forth a wonderful and illuminated her. She seemed to sit of this illuminating light to write the 'book of marrow'. (a new reign, a new future'.) She foresaw a new 'destiny', a new bright future like the bright sun - god, who destroyed darkness with his powerful rays, this new future wiped out the sorrow of her people. This new future will arrive like a 'clear dawn'. In this new future the sorrows and hardships of her people will flee like a nightmare (bad dream). This new future (sun beam) will act like the 'Hand that saves' her people.

46. Why did Nehru choose Ambedkar as the law minister?

Ans:- Dr. Ambedkar had talented skill in the field of law and legislation. He had a foresighted vision of social Justice. Above all he had succeeded in his own campaigns against social injustice. From all points of view he deserved person to choose as the law minister. Therefore Nehru chose him as the first law minister of free India.

47. What lessons did Keilis Borok learn at the Geneva Summit?

Ans:- Kellis Borok learn the following lessons at the Geneva summit.
i) He had similar people who think and inter act like him all over the world.
ii) There is no need to feel lonely in abroad.
iii) Where there is science, there is hope of survival and well being for all.

48. Why does the poet have the feeling that he is imprisoned?

Ans:- The poet have the feeling that he is imprisoned because in space there is no communication, no letters, no mail. Nobody visits him. Totally he was alone and he felt that he was in prison and he imprisoned in it.

49. How can you say that Don Anselmo was passionate about his land and the children of Rio en Medio?

Ans:- Don Anselmo was very much passionate about his land and the children. His land had come from his ancestors. He lived in that land from his birth. He took possession of his house from his mother. Everyone in the village were his relatives and the children are his nieces, nephews and grand children. Every time a child has been born in Rio en Medio, a tree was planted in its name.

50. How can you say that Pepe was loyal to Columbus?

Ans:- We feel Pepe was loyal to Columbus because he was obedient to him and prefer to accompany though· he was off duty. He requested Columbus to be careful from seamen because sometimes they were dangerous. He took more concern about Columbus.

51. What do you think is the writer of 'Narayanapur incident' trying to impress upon the readers?

Ans:- This incident was most common during 1942. This gives bravery, truthfulness, patriotism etc., It teaches a lesson to readers. If youngsters during their school time read this type of incidents, they may cultivate these qualities. The writer's intention is to sow the good (virtue) seeds, it may give good fruits only.

52. What qualities of Dicky Dolma led her to realise her dream?

Ans:- From the childhood days she had an urge to climb Mount Everest. Daily she watched the beautiful, breath taking view of the Mountain. She had firm determination, and hard work helped her. She practiced 4 hours a day. She had one track mind and ready to face hardships. Her desire grew when she came to know about the newly opened mountaineering institute in Manali. She was just 16 years at that time. She joined the institute and got 'A' grade and selected at all India level.

53. Life for Hanif, in the beginning, was never a smooth sail. Explain.

Ans:- When Hanif was eight years old, he lost his father. He had to take the responsibility to look after his three younger brothers. His mother Hema aziz had a touring job and was out very often. They had to do their work for themselves. So it was not a smooth sail.

54. Why were the poeple miserable in Wangjia's village?

Ans:- In ancient times, there was a poor area in Tibet was Wangjia's village. The people who lived in that area suffered from hunger and cold. There was no river or water source, trees, green grass or any types of crops, No fruits, flowers or vegetables. The land was also not good. The people did not know what happiness could be. In spite of that they believed that happiness must exist somewhere in the world. (Contd........)

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC -BIOLOGY

REVISION : MODEL QUESTIONS

11. An agriculture labour was spraying some powder mixed with water onto fruit trees to get rid of insect larvae. Which of the following biocontrol agent could have been used here?
a) Bacillus thuringiensis b) Trichoderma
c) Dragonflies d) Ladybird
Ans:- (a) Bacillus thuringiensis

12. Choose the correct sequence of polymerase chain reaction steps from the following:
a) Annealing →Denaturation → Extension
b) Extension→ Annealing →Denaturation
c) Denaturation → Extension → Annealing
d) Denaturation → Annealing → Extension
Ans:- (d) Denaturation → Annealing → Extension

13. Use of bioresources by multinational companies and other organisations without proper authorisation and compensatory payment is referred as
a) Biopiracy b) Biofortification
c) Bioprospecting d) Bioprocessing
Ans:- (a) Biopiracy

14. An example for ex situ conservation is
a) National parks b) Sacred groves
c) Biosphere reserves d) Zoological parks
Ans:- (d) Zoological parks

15. The graph given below shows species-area relationships. Which of the following equation correctly represent the curve?



a) $S = CA^Z$ b) $\log S = \log C + Z \log A$
c) $A = CS^Z$
d) $\log Z = \log C + S \log A$
Ans:- (b) $\log S = \log C + Z \log A$

II. Fill in the blanks by choosing the appropriate word/words from those given in the bracket. (Primary productivity, Coelacanth, Secondary productivity, Glomus, Amniocentesis, Plasmid)

16. Statutory ban on ____________ is required to check increasing female foeticides.
Ans:- Amniocentesis,

17. A fish thought to be extinct and caught in South Africa in 1938 is __________.
Ans:- Coelacanth

18. An example for mycorrhiza forming fungi is __________.
Ans:- Glomus

19. Autonomously replicating circular extra-chromosomal DNA of bacteria is known as ______.
Ans:- Plasmid

20. Rate of formation of new organic matter by consumers is referred as ________
Ans:- Secondary productivity

Answer the following questions

24. Draw an ideal pyramid of energy and mention the units.
Ans:-



The sequential, gradual and predicable changes in the species composition in an area are called succession or ecological succession, they are two type primary succession and Secondary succession.

25. a) Distinguish between primary productivity and secondary productivity of an ecosystem.
Ans:-

Primary Productivity	*Secondary Productivity*
It is the rate at which organic matter is built up by producers.	It is the rate at which organic matter is built up by consumers.
It is the result of synthesis of fresh organic matter from inorganic materials.	It is the result of synthesis of organic matter from organic matter.

b) Define food web?
Ans:- Many organisms occupy positions in different food chains and several food chains become interconnected to form a food web.

26. Briefly explain any three prevention and control measures of drug/ alcohol abuse.
Ans:- 1) Avoid undue peer pressure.
2) Educating and counselling problems and stresses to avoid disappointments and failure in life.
3) Seeking professional and medical help whenever required.
4) seeking help from parents and friends.

27. Describe the out breeding devices that prevent the auto-gamy.
Ans:- Continued self-pollination results in inbreeding depression,
(Contd……)

ಮೈಸೂರು, ಬೆಂಗಳೂರು ಸೇರಿ ಹಲವೆಡೆ ಆದಾಯ ತೆರಿಗೆ ಅಧಿಕಾರಿಗಳಿಂದ ತಪಾಸಣೆ

ತೆರಿಗೆ ವಂಚನೆ: ಐಟಿ ದಾಳಿ, ಶೋಧ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಗುತ್ತಿಗೆದಾರರು, ಉದ್ಯಮಿ ಮನೆ–ಕಚೇರಿಗಳ ಮೇಲೆ ದಾಳಿ
- ಸರ್ಕಾರದ ಗುತ್ತಿಗೆ ಕಾಮಗಾರಿಗಳ ದಾಖಲೆಗಳ ಪರಿಶೋಧನೆ
- ತೆರಿಗೆ ವಂಚನೆಗೆ ಸಂಬಂಧಿಸಿದ ದಾಖಲೆಗಳು ವಶಕ್ಕೆ

ಬೆಂಗಳೂರು/ಮೈಸೂರು: ಆದಾಯ ತೆರಿಗೆ ವಂಚನೆ ಸಂಬಂಧ ಮೈಸೂರು ಮತ್ತು ಬೆಂಗಳೂರು ಸೇರಿ ರಾಜ್ಯದ ಹಲವೆಡೆ ಆದಾಯ ತೆರಿಗೆ (ಐಟಿ) ಅಧಿಕಾರಿಗಳು ಬುಧವಾರ ದಾಳಿ ನಡೆಸಿದ್ದು, ಶೋಧ ಕಾರ್ಯ ಕೈಗೊಂಡಿದ್ದಾರೆ.

10 ಕಾರುಗಳಲ್ಲಿ ಬಂದಿಳಿದ ಐವತ್ತು ಮಂದಿ ಅಧಿಕಾರಿಗಳು, ಪ್ರಥಮ ದರ್ಜೆ ಗುತ್ತಿಗೆದಾರ, ಗುತ್ತಿಗೆದಾರ ಮತ್ತು ಇತರ ಉದ್ಯಮಿಗಳಿಗೆ ಸೇರಿದ ಮನೆ, ಕಚೇರಿ ಮತ್ತು ಆಪ್ತ ಮನೆಗಳ ಮೇಲೆ ದಾಳಿ ನಡೆಸಿದರು. ಮನೆ, ಕಚೇರಿಗಳ ಆವರಣದಲ್ಲಿದ್ದ ವಾಹನಗಳನ್ನೂ ತಪಾಸಣೆ ನಡೆಸಿ, ಅವುಗಳಲ್ಲಿದ್ದ ದಾಖಲೆಗಳನ್ನು ವಶಕ್ಕೆ ಪಡೆದಿದ್ದಾರೆ.

ಆದಾಯ ತೆರಿಗೆ ಸಲ್ಲಿಕೆಗೆ ಸಂಬಂಧಿಸಿದಂತೆ ದತ್ತಾಂಶಗಳು ತಾಳೆಯಾಗದ ಕಾರಣ ಈ ಉದ್ಯಮಿಗಳ ಬ್ಯಾಂಕ್ ವಹಿವಾಟನ್ನು ಪರಿಶೀಲಿಸಲಾಗಿತ್ತು. ಅವುಗಳಲ್ಲಿ ಕೆಲವು ವರ್ಗಾವಣೆಗಳ ದಾಖಲೆಗಳನ್ನು ಅವರು ನಮೂದಿಸಿರಲಿಲ್ಲ. ಮೂವರು ಉದ್ಯಮಿಗಳ ಪ್ರಕರಣದಲ್ಲೂ ಹೀಗೇ ಆಗಿದೆ. ಅವೆಲ್ಲವನ್ನೂ ಖಚಿತಪಡಿಸಿಕೊಂಡೇ ಶೋಧ ಕಾರ್ಯಾಚರಣೆ ರೂಪಿಸಲಾಗಿತ್ತು ಎಂದು ಮೂಲಗಳು ತಿಳಿಸಿವೆ.

ರಾಜ್ಯ ಸರ್ಕಾರದ ಕೆಲವು ಪ್ರಮುಖ ಕಾಮಗಾರಿಗಳ ಗುತ್ತಿಗೆ ಪಡೆದಿರುವ ಜಯಕೃಷ್ಣ ಅಲಿಯಾಸ್ ರಾಮಕೃಷ್ಣೇಗೌಡ ಅವರ ಮನೆ ಮತ್ತು ಕಚೇರಿಗಳ ತಪಾಸಣೆ ನಡೆಸಲಾಗಿದೆ. ಜಯಕೃಷ್ಣ ಅವರ ಕಂಪನಿಯ ಸಿಬ್ಬಂದಿ ಮತ್ತು ಆಪ್ತರಿಗೆ ಸಂಬಂಧಿಸಿದ ಬೆಂಗಳೂರಿನ ಸ್ಥಳಗಳಲ್ಲೂ ಶೋಧ ನಡೆಸಲಾಗಿದೆ ಎಂದು ಮೂಲಗಳು ಖಚಿತಪಡಿಸಿವೆ.

ಜಯಕೃಷ್ಣ ಅವರು ಇಟ್ಟಿಗೆ ತಯಾರಿಕೆ ಕಾರ್ಖಾನೆಯನ್ನೂ ಹೊಂದಿದ್ದಾರೆ. ತಾವು ಗುತ್ತಿಗೆ ಪಡೆದ ಕಾಮಗಾರಿಗಳಲ್ಲಿ ಆ ಇಟ್ಟಿಗೆಗಳನ್ನೂ ಬಳಸುತ್ತಿದ್ದು, ಅದರ ವಹಿವಾಟಿನ ದಾಖಲೆಗಳಲ್ಲಿ ವ್ಯತ್ಯಾಸ ಪತ್ತೆಯಾಗಿದೆ. ಹಲವು ವಹಿವಾಟುಗಳಿಗೆ ಸಂಬಂಧಿಸಿದಂತೆ ತೆರಿಗೆ ಪಾವತಿ ಮಾಡಿಲ್ಲ ಎಂದು ಗೊತ್ತಾಗಿದೆ.

ಇದಲ್ಲದೇ ಅವರು ಇತರೆ ವ್ಯಾಪಾರ–ವಹಿವಾಟು ನಡೆಸುತ್ತಿದ್ದಾರೆ. ಹಿರಿಯ ಪೊಲೀಸ್ ಅಧಿಕಾರಿಯೊಬ್ಬರ ಮಾವ ಹಾಗೂ ಸ್ಥಳೀಯ ಶಾಸಕರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದಾರೆ ಎನ್ನಲಾಗಿದೆ.

ಮೈಸೂರಿನಲ್ಲಿ ಹೋಟೆಲ್ ಮತ್ತು ಕಲ್ಯಾಣ ಮಂಟಪಗಳನ್ನು ನಡೆಸುತ್ತಿರುವ ಉದ್ಯಮಿ ಕಾಂತರಾಜು ಅವರ ಮನೆ, ಎಂಪೋರಿಯೊ ಹೋಟೆಲ್ ಮತ್ತು ಅವರ ಇಬ್ಬರು ಪಾಲುದಾರರಾದ ಹರಿಕುಮಾರ್, ಹರೀಶ್‌ಬಾಬು ಅವರ ಮಾಲೀಕತ್ವದ ಅಲಂಕಾರ್‌ಯಲ್ಲಿರುವ ಹೋಟೆಲ್ ಮೇಲೂ ದಾಳಿ ನಡೆದಿದೆ. ವಿಜಯನಗರದ 3ನೇ ಹಂತದ ನಿವಾಸಿಯಾದ ಉದ್ಯಮಿ ರಮೇಶ್ ಅವರ ಮನೆ ಹಾಗೂ ಕಚೇರಿಯಲ್ಲಿಯೂ ತಪಾಸಣೆ ನಡೆಸಲಾಗಿದೆ.

ತೆರಿಗೆ ವಂಚನೆಯನ್ನು ಸಾಬೀತು ಮಾಡುವ ಹಲವು ದಾಖಲೆಗಳು ಪತ್ತೆಯಾಗಿದ್ದು, ಅವುಗಳನ್ನು ವಶಕ್ಕೆ ಪಡೆಯಲಾಗಿದೆ. ಉದ್ಯಮಿಗಳಿಂದ ವಿವರಣೆ ಕೇಳಲಾಗಿದೆ. ಕೆಲವೆಡೆ ಇನ್ನೂ ತಪಾಸಣೆ ನಡೆಯುತ್ತಿದೆ ಎಂದು ಮೂಲಗಳು ತಿಳಿಸಿವೆ.

ಮೈಸೂರಿನ ಉದ್ಯಮಿ ಜಯಕೃಷ್ಣ ಅವರ ರಾಮಕೃಷ್ಣನಗರದ ಮನೆಯಲ್ಲಿ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಬುಧವಾರ ಶೋಧ ನಡೆಸಿದರು

ಪ್ರಜಾವಾಣಿ ಚಿತ್ರ

ಸರಗಳ್ಳನ ಹಿಡಿದುಕೊಟ್ಟ ಮಹಿಳೆಯರು

ಪ್ರಜಾವಾಣಿ ವಾರ್ತೆ

ಸಂತೇಬೆನ್ನೂರು (ದಾವಣಗೆರೆ ಜಿಲ್ಲೆ): ಡ್ರಾಪ್ ಕೊಡುವ ನೆಪದಲ್ಲಿ ಬೈಕ್‌ನಲ್ಲಿ ಮಹಿಳೆಯೊಬ್ಬರನ್ನು ಕೂರಿಸಿಕೊಂಡು ಸ್ವಲ್ಪ ದೂರ ಸಾಗಿದ ನಂತರ ಕೊರಳಲ್ಲಿದ್ದ ಚಿನ್ನದ ಸರ ಕಸಿದು ಪರಾರಿಯಾಗಲು ಯತ್ನಿಸಿದ ಇಬ್ಬರ ಪೈಕಿ ಒಬ್ಬ ಸರಗಳ್ಳನನ್ನು ಕೂಲಿ ಕಾರ್ಮಿಕ ಮಹಿಳೆಯರೇ ಹಿಡಿದು ಪೊಲೀಸರಿಗೆ ಒಪ್ಪಿಸಿದ ಘಟನೆ ಸಮೀಪದ ಕಾಕನೂರು ಗ್ರಾಮದ ಬಳಿ ಮಂಗಳವಾರ ಸಂಜೆ ನಡೆದಿದೆ.

ಕಾಕನೂರು ಬಳಿಯ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ಪಕ್ಕದಲ್ಲಿರುವ ಚಿಕ್ಕಬೆನ್ನೂರು ಗ್ರಾಮದ ಕಚ್ಚಾ ರಸ್ತೆಯಲ್ಲಿ ಈ ಘಟನೆ ನಡೆದಿದೆ. ಒಬ್ಬ ಕಳ್ಳ ₹ 2.50 ಲಕ್ಷ ಮೌಲ್ಯದ 40 ಗ್ರಾಂ ಮಾಂಗಲ್ಯ ಸರ ಕಿತ್ತು ಪರಾರಿಯಾಗಿದ್ದಾನೆ. ಆತನೊಂದಿಗಿದ್ದ ಇನ್ನೊಬ್ಬನನ್ನು ಸಂತ್ರಸ್ತ ಮಹಿಳೆಯರೇ ಹಿಡಿದು, ಥಳಿಸಿ ಪೊಲೀಸರಿಗೆ ಒಪ್ಪಿಸಿದ್ದಾರೆ. ಈ ಸಂದರ್ಭ ಕಳ್ಳ ಕಲ್ಲಿನಿಂದ ಹಲ್ಲೆ ಮಾಡಿದ್ದು, ಇಬ್ಬರು ಮಹಿಳೆಯರು ಗಾಯಗೊಂಡಿದ್ದಾರೆ.

ಘಟನೆಯ ವಿವರ: ಚಿಕ್ಕಬೆನ್ನೂರು ಗ್ರಾಮಕ್ಕೆ ನೇರ ಬಸ್ ಸಂಪರ್ಕ ಇಲ್ಲ. ಕಾಕನೂರಿನಲ್ಲಿರುವ ಕಿತ್ತೂರು ಚೆನ್ನಮ್ಮ ವಸತಿ ಶಾಲೆ ಬಳಿ ಬಸ್ ಇಳಿದು ನಡೆದು ಸಾಗುವುದು ಅನಿವಾರ್ಯ. ಕೂಲಿ ಕೆಲಸ ಮುಗಿಸಿ, ಶಾಲೆಯ ಬಳಿ ಬಸ್ ಇಳಿದಿರುವ ಗ್ರಾಮದ ರತ್ನಮ್ಮ, ಗೌರಮ್ಮ ಹಾಗೂ ಶಾಂತಮ್ಮ ಕಡಲೆ ಹಾಗೂ ಈರುಳ್ಳಿ ಮೂಟೆ ಹೊತ್ತು ಕಾಲ್ನಡಿಗೆಯಲ್ಲಿ ಸಾಗಿದ್ದಾರೆ. ಬೈಕ್‌ನಲ್ಲಿ ಬಂದ ಇಬ್ಬರು ಅಪರಿಚಿತರು, ಊರವರೆಗೆ ಡ್ರಾಪ್ ನೀಡುವುದಾಗಿ ಹೇಳಿದ್ದರಿಂದ ರತ್ನಮ್ಮ ಮಾತ್ರ ಬೈಕ್ ಹತ್ತಿದ್ದಾರೆ. ಸ್ವಲ್ಪ ದೂರ ಸಾಗಿದ ನಂತರ ಅಪರಿಚಿತರು ರತ್ನಮ್ಮ ಅವರನ್ನು ಬೈಕ್‌ನಿಂದ ಕೆಳಗೆ ಇಳಿಸಿ, ಕೊರಳಲ್ಲಿದ್ದ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಲು ಯತ್ನಿಸಿದ್ದಾರೆ.

ರತ್ನಮ್ಮ ಕೂಗಿಕೊಂಡಾಗ ಹಿಂದೆ ಬರುತ್ತಿದ್ದ ಗೌರಮ್ಮ ಹಾಗೂ ಶಾಂತಮ್ಮ ರಕ್ಷಣೆಗೆ ಧಾವಿಸಿದ್ದಾರೆ. ಬೈಕ್‌ನಲ್ಲಿ ಕುಳಿತಿದ್ದ ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕು ಮಾದನಾಯಕನಹಳ್ಳಿ ಗ್ರಾಮದ ಸುರೇಶ ಎಂಬವನನ್ನು ರತ್ನಮ್ಮ, ಚಿನ್ನಿತ್ರ ಬೈಕ್‌ನಿಂದ ಬೀಳಿಸಿ ಹಿಡಿದಿದ್ದಾರೆ. ಆಗ ಸುರೇಶ ರತ್ನಮ್ಮ ಅವರಿಗೆ ಕಲ್ಲಿನಿಂದ ಹೊಡೆದಿದ್ದಾನೆ. ರಕ್ತಸ್ರಾವದ ನಡುವೆಯೂ ರತ್ನಮ್ಮ ಅವನನ್ನು ಬಿಡದೆ ನೆಲಕ್ಕುರುಳಿಸಿದ್ದಾರೆ. ಚಿಕ್ಕಬೆನ್ನೂರು ಕಡೆಯಿಂದ ಬಂದ ಕೆಲವರು ಆರೋಪಿಯನ್ನು ಪೊಲೀಸರಿಗೆ ಒಪ್ಪಿಸಿದ್ದಾರೆ.

‘ಸರ ಕಿತ್ತುಕೊಂಡು ಪರಾರಿಯಾಗಿರುವ ವ್ಯಕ್ತಿ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕು ಕನ್ನಗುಂದಿ ಗ್ರಾಮದ ಸೋಮಶೇಖರ ಎಂಬುದಾಗಿ ಬಂಧಿತ ಮಾಹಿತಿ ನೀಡಿದ್ದಾನೆ. ಆತನಿಗಾಗಿ ಶೋಧ ನಡೆದಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ತಿಳಿಸಿದ್ದಾರೆ. ಸಂತೇಬೆನ್ನೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸರಗಳ್ಳನನ್ನು ಹಿಡಿದ ರತ್ನಮ್ಮ, ಗೌರಮ್ಮ ಹಾಗೂ ಶಾಂತಮ್ಮ

ಸ್ಥಳೀಯರಿಗೆ ಆನೆಗಳ ಚಲನವಲನ ಮಾಹಿತಿ ನೀಡುವ ಕೆ.ಪಿ.ಟ್ರ್ಯಾಕರ್

ಆನೆಗಳಿಗೆ ದೇಶೀ ನಿರ್ಮಿತ ರೇಡಿಯೊ ಕಾಲರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆನೆಗಳ ಚಲನವಲನದ ಬಗ್ಗೆ ನಿಗಾ ಇಟ್ಟು ಮಾಹಿತಿ ನೀಡುವ ‘ಕರ್ನಾಟಕ-ಪರಿಶೋಧಿತ ಪತ್ತೆ ಸಾಧನ’ (ಕೆ.ಪಿ. ಟ್ರ್ಯಾಕರ್) ಸ್ವದೇಶಿ ರೇಡಿಯೊ ಕಾಲರ್ ಅನ್ನು ಅರಣ್ಯ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ಬಿಡುಗಡೆಗೊಳಿಸಿದರು.

ಅರಣ್ಯ ಇಲಾಖೆ ಮತ್ತು ಬೆಂಗಳೂರಿನ ಇನ್‌ಫಿಕ್ಷನ್ ಲ್ಯಾಬ್ಸ್ ಪ್ರೈವೇಟ್ ಲಿಮಿಟೆಡ್ ಜೊತೆಗೂಡಿ ‘ಕರ್ನಾಟಕ-ಪರಿಶೋಧಿತ ಪತ್ತೆ ಸಾಧನ’ವನ್ನು ಅಭಿವೃದ್ಧಿಪಡಿಸಿವೆ. ಇವುಗಳನ್ನು ಬಂಡೀಪುರ ಮತ್ತು ನಾಗರಹೊಳೆ ಹುಲಿಸಂರಕ್ಷಿತ ಪ್ರದೇಶದ ಅಧಿಕಾರಿಗಳಿಗೆ ಬುಧವಾರ ಅರಣ್ಯ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಚಿವರು ಹಸ್ತಾಂತರಿಸಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಈಶ್ವರ ಖಂಡ್ರೆ, ಕೊಡಗು, ಚಿಕ್ಕಮಗಳೂರು, ಹಾಸನ ಸುತ್ತಮುತ್ತ ಆನೆಗಳು ಹೆಚ್ಚಾಗಿ ನಾಡಿನಲ್ಲೇ ಸಂಚರಿಸುತ್ತಿವೆ. ಗುಂಪಿನ ನಾಯಕತ್ವ ವಹಿಸುವ ಹೆಣ್ಣಾನೆಗಳಿಗೆ ಈ ರೇಡಿಯೊ ಕಾಲರ್‌ಗಳನ್ನು ಅಳವಡಿಸಲಾಗುತ್ತದೆ. ಇದರಿಂದ ಆನೆ ಗುಂಪಿನ ಸಂಚಾರದ ಮಾಹಿತಿ ಸಂಗ್ರಹಿಸಿ ಸ್ಥಳೀಯರಿಗೆ ನೀಡಲಾಗುವುದು ಎಂದು ಹೇಳಿದರು.

ರಾಜ್ಯದಲ್ಲಿ ಒಟ್ಟು 6,395 ಆನೆಗಳಿವೆ. ದೇಶದಲ್ಲೇ ಅತಿ ಹೆಚ್ಚು ಸಂಖ್ಯೆಯ ಆನೆಗಳು ನಮ್ಮಲ್ಲಿವೆ. ಆದರೆ, ಆನೆಗಳ ಸಂಖ್ಯೆಗೆ ಅನುಗುಣವಾಗಿ ಕಾಡಿನ ಪ್ರದೇಶ ಹೆಚ್ಚಳವಾಗದ ಕಾರಣ ಆನೆ- ಮಾನವ ಸಂಘರ್ಷ ಹೆಚ್ಚುತ್ತಿದೆ. ಆನೆಗಳ ಹಾವಳಿ ತಪ್ಪಿಸಿ, ಅಮೂಲ್ಯ ಜೀವ ಉಳಿಸಲು ಈ ರೇಡಿಯೊ ಕಾಲರ್ ಸಹಾಯಕವಾಗುತ್ತವೆ ಎಂದರು.

ಈವರೆಗೆ ದಕ್ಷಿಣ ಆಫ್ರಿಕಾದ ಆಫ್ರಿಕನ್ ವೈಲ್ಡ್ ಲೈಫ್ ಟ್ರ್ಯಾಕಿಂಗ್ ಮತ್ತು ಜರ್ಮನಿಯ ವೆಕ್ಟ್ರೋನಿಕ್ ಸಂಸ್ಥೆಗಳಿಂದ ರೇಡಿಯೊ ಕಾಲರ್‌ಗಳನ್ನು ಆಮದು ಮಾಡಿಕೊಳ್ಳಲಾಗುತ್ತಿತ್ತು. ಸಕಾಲದಲ್ಲಿ ಅವುಗಳು ಲಭ್ಯವಾಗುತ್ತಿರಲಿಲ್ಲ. ಜತೆಗೆ ಒಂದು ರೇಡಿಯೊ ಕಾಲರ್‌ಗೆ ₹.6.5 ಲಕ್ಷ ವೆಚ್ಚವಾಗುತ್ತಿತ್ತು. ನಾವು ಅಭಿವೃದ್ಧಿಪಡಿಸಿರುವ ರೇಡಿಯೊ ಕಾಲರ್‌ಗೆ ₹1.80 ಲಕ್ಷ ವೆಚ್ಚವಾಗುತ್ತದೆ. ಇದರಿಂದ ಸಾಕಷ್ಟು ಹಣ ಉಳಿತಾಯವಾಗುತ್ತದೆ ಎಂದರು.

ಆಮದು ಮಾಡಿಕೊಂಡ ರೇಡಿಯೊ ಕಾಲರ್‌ಗಳ ತೂಕ 16 ರಿಂದ 17 ಕೆ.ಜಿ ಇರುತ್ತಿದ್ದವು. ಆದರೆ ಈಗ ದೇಶೀಯವಾಗಿ ಅಭಿವೃದ್ಧಿಪಡಿಸಿರುವ ಕಾಲರ್ ಕೇವಲ 7 ಕೆ.ಜಿ ತೂಕವಿದ್ದು, ಹಗುರವಾಗಿದೆ ಎಂದು ಖಂಡ್ರೆ ತಿಳಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿ ಸುಭಾಷ್ ಮಾಲ್ಕಡೆ, ಎಪಿಸಿಸಿಎಫ್ ಕುಮಾರ್ ಪುಷ್ಕರ್ ಮತ್ತು ಪಿ.ಸಿ. ರೇ ಇದ್ದರು.

ಅರಣ್ಯ ಸಚಿವ ಈಶ್ವರ ಖಂಡ್ರೆ ಅವರು ಕೆ.ಪಿ.ಟ್ರ್ಯಾಕರ್ ರೇಡಿಯೊ ಕಾಲರ್ ಬಿಡುಗಡೆ ಮಾಡಿದರು. ಮುಖ್ಯ ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿ ಸುಭಾಷ್ ಮಾಲ್ಕಡೆ, ಎಪಿಸಿಸಿಎಫ್ ಕುಮಾರ್ ಪುಷ್ಕರ್ ಮತ್ತು ಅಜಿತ್ ರೆ ಇದ್ದರು

ಕೆ.ಪಿ.ಟ್ರ್ಯಾಕರ್ ರೇಡಿಯೊ ಕಾಲರ್

ಹುಲಿ, ಚಿರತೆಗಳಿಗೂ ರೇಡಿಯೊ ಕಾಲರ್

ಮೊದಲ ಹಂತದಲ್ಲಿ ಆನೆಗಳ ರೇಡಿಯೊ ಕಾಲರ್ ಮಾತ್ರ ಸಿದ್ಧವಾಗಿದೆ. ಹುಲಿ ಮತ್ತು ಚಿರತೆಗಳಿಗೂ ರೇಡಿಯೋ ಕಾಲರ್ ಅಭಿವೃದ್ಧಿಪಡಿಸಲಾಗುತ್ತಿದೆ. ಅವುಗಳನ್ನು ಶೀಘ್ರವೇ ಬಿಡುಗಡೆ ಮಾಡಲಾಗುವುದು ಎಂದು ಸಚಿವ ಈಶ್ವರ್ ಖಂಡ್ರೆ ತಿಳಿಸಿದರು.

ಅರಣ್ಯ ಇಲಾಖೆ ತನ್ನ ಅಗತ್ಯಗಳಿಗೆ ತಕ್ಕಂತೆ ಮತ್ತು ಪರಿಸರ ಸ್ನೇಹಿ ಕಚ್ಚಾ ವಸ್ತುಗಳನ್ನೇ ಬಳಸಿ ರೇಡಿಯೊ ಕಾಲರ್ ತಯಾರಿಸಿದೆ. ಇದರಿಂದ ವನ್ಯಜೀವಿಗಳಿಗಾಗಲಿ, ಪರಿಸರಕ್ಕಾಗಲಿ ಅಪಾಯವಾಗುವುದಿಲ್ಲ. ಒಂದು ವೇಳೆ ರೇಡಿಯೊ ಕಾಲರ್‌ಗಳಲ್ಲಿ ದೋಷ ಕಂಡು ಬಂದರೆ ದುರಸ್ತಿ ಮಾಡಲು, ಬ್ಯಾಟರಿ, ಬಲ್ಬ್ ಸರ್ಕಿಟ್ ಬದಲಾಯಿಸಲು ಅವಕಾಶವಿದೆ. ಆದರೆ, ಆಮದು ರೇಡಿಯೊ ಕಾಲರ್‌ಗಳಲ್ಲಿ ಈ ಅವಕಾಶ ಇರಲಿಲ್ಲ ಎಂದರು.

‘ವಿದೇಶದಿಂದ ಆಮದು ಮಾಡಿಕೊಳ್ಳುತ್ತಿದ್ದ ರೇಡಿಯೊ ಕಾಲರ್‌ಗಳಿಂದ ನಮ್ಮ ಕಾಡು ಮತ್ತು ವನ್ಯಜೀವಿಗಳ ಮಾಹಿತಿ ಸೋರಿಕೆ ಆಗುವ ಅಪಾಯವಿತ್ತು. ಈಗ ದೇಶೀಯವಾಗಿ ಈ ರೇಡಿಯೋ ಕಾಲರ್ ಅಭಿವೃದ್ಧಿಪಡಿಸಿರುವುದರಿಂದ ಅಂತಹ ಅಪಾಯ ಇರುವುದಿಲ್ಲ. ದತ್ತಾಂಶ ಕೂಡ ಸ್ಥಳೀಯ ಸರ್ವರ್‌ಗಳಲ್ಲಿ ಸುರಕ್ಷಿತವಾಗಿರುತ್ತದೆ’ ಎಂದು ಖಂಡ್ರೆ ವಿವರಿಸಿದರು.

ರೇಡಿಯೊ ಕಾಲರ್ ರೂವಾರಿಗಳು

ಕರ್ನಾಟಕ ಅರಣ್ಯ ಇಲಾಖೆಯ ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಕುಮಾರ್ ಪುಷ್ಕರ್ ಹಾಗೂ ಇನ್‌ಫಿಕ್ಷನ್ ಲ್ಯಾಬ್ಸ್ ಪ್ರೈವೇಟ್ ಲಿಮಿಟೆಡ್‌ನ ತಾಂತ್ರಿಕ ತಜ್ಞ ಗುರುದೀಪ ಅವರು ಸ್ವದೇಶಿ ಜಿಎಸ್‌ಎಂ ಆಧಾರಿತ ರೇಡಿಯೊ ಕಾಲರ್ ಅಭಿವೃದ್ಧಿಪಡಿಸಿದ್ದಾರೆ. ಇದಕ್ಕೆ ‘ಕರ್ನಾಟಕ ನಿರ್ಮಿತ ಟ್ರ್ಯಾಕರ್’ ಅಥವಾ ‘ಕರ್ನಾಟಕ ಪ್ರಡ್ಯೂಸ್ಡ್’(ಕೆ.ಪಿ.ಟ್ರ್ಯಾಕರ್) ಎಂದು ಹೆಸರಿಸಲಾಗಿದೆ.

ಎನ್‌ಇಪಿ ಹೇರಿಕೆಗೆ ಹುನ್ನಾರ: ರಾಜ್ಯಗಳ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರ 2022ರಲ್ಲಿ ರೂಪಿಸಿರುವ ರಾಷ್ಟ್ರೀಯ ಶಿಕ್ಷಣ ನೀತಿಯನ್ನು (ಎನ್‌ಇಪಿ) ರಾಜ್ಯಗಳ ಮೇಲೆ ಬಲವಂತವಾಗಿ ಹೇರಲು ಕೇಂದ್ರ ಸರ್ಕಾರ ಯುಜಿಸಿಯನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದು ಆರು ರಾಜ್ಯಗಳ ಉನ್ನತ ಶಿಕ್ಷಣ ಸಚಿವರು ದೂರಿದರು.

ನಗರದಲ್ಲಿ ಬುಧವಾರ ನಡೆದ ಉನ್ನತ ಶಿಕ್ಷಣ ಸಚಿವರ ಸಮಾವೇಶದಲ್ಲಿ ಭಾಗವಹಿಸಿದ್ದ ಜಾರ್ಖಂಡ್‌ನ ಸುದಿವ್ಯಕುಮಾರ್ ಮಾತನಾಡಿ, ಎನ್‌ಇಪಿಯಲ್ಲಿನ ಎಲ್ಲ ಅಂಶಗಳನ್ನೂ ಕಡ್ಡಾಯವಾಗಿ ಪಾಲಿಸುವಂತೆ ಕರಡು ನಿಯಮ ಹೇಳುತ್ತದೆ. ಅನುಷ್ಠಾನಗೊಳಿಸದ ಶಿಕ್ಷಣ ಸಂಸ್ಥೆಗಳ ವಿರುದ್ಧ ತೆಗೆದುಕೊಳ್ಳುವ ಕ್ರಮಗಳ ಪಟ್ಟಿ ವಿಪರೀತವಾಗಿವೆ. ಇಂತಹ ನಡೆ ಸರ್ವಾಧಿಕಾರಿಯಾಗಿದೆ. ಪ್ರಜಾಸತ್ತಾತ್ಮಕವಾಗಿಲ್ಲ ಎಂದು ಹೇಳಿದರು.

ಎನ್‌ಇಪಿ ನಿಯಮಗಳಲ್ಲಿ ಅಳವಡಿಸಿದ್ದ ದ್ವಿಪದವಿ ವ್ಯವಸ್ಥೆ, ಬಹುಪ್ರವೇಶ, ಬಹುನಿರ್ಗಮನ ಮೊದಲಾದ ಅಂಶಗಳನ್ನು ಯುಜಿಸಿ ನಿಯಮಗಳಲ್ಲೂ ಉಲ್ಲೇಖಿಸಲಾಗಿದೆ. ಇಂತಹ ವಿಷಯಗಳನ್ನು ಅಳವಡಿಸುವ ಮೊದಲು ರಾಜ್ಯಗಳ ಜತೆ ಚರ್ಚಿಸಿಲ್ಲ. ಎನ್‌ಇಪಿ ತಿರಸ್ಕರಿಸಿದ ರಾಜ್ಯಗಳ ಮೇಲೆ ಬಲವಂತದ ಹೇರಿಕೆ ಮಾಡಲಾಗುತ್ತಿದೆ ಎಂದು ಹಿಮಾಚಲ ಪ್ರದೇಶದ ಸಚಿವ ರೋಹಿತ್ ಠಾಕೂರ್ ದೂರಿದರು.

ಎನ್‌ಇಪಿ ವಿರೋಧಿಸಿ: ಶಿವಕುಮಾರ್

ಯುಜಿಸಿ ಕರಡು ನಿಯಮಗಳ ಜತೆಗೆ ರಾಷ್ಟ್ರೀಯ ಶಿಕ್ಷಣ ನೀತಿಯನ್ನೂ (ಎನ್‌ಇಪಿ) ಹಿಂಪಡೆಯಲು ಕೇಂದ್ರದ ಮೇಲೆ ಎಲ್ಲ ರಾಜ್ಯಗಳೂ ಒತ್ತಡ ಹಾಕಬೇಕು ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಲಹೆ ನೀಡಿದರು.

ಉನ್ನತ ಶಿಕ್ಷಣ ಸಚಿವರ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ಎನ್‌ಇಪಿಯಲ್ಲಿ ಹಲವು ನ್ಯೂನತೆಗಳಿವೆ. ಹಾಗಾಗಿ, ರಾಜ್ಯ ಶಿಕ್ಷಣ ನೀತಿ ರೂಪಿಸಲು ಆಯೋಗ ರಚಿಸಲಾಗಿದೆ. ವಿಶ್ವವಿದ್ಯಾಲಯ ಮಟ್ಟದಲ್ಲೂ ಹಲವು ಸುಧಾರಣೆ ಮಾಡಬೇಕಿದೆ. ಶಿಕ್ಷಣ ವ್ಯವಸ್ಥೆ ಜಾಗತೀಕರಣಗೊಳಿಸಲು ತಜ್ಞರ ಅಭಿಪ್ರಾಯ ಪಡೆಯಬೇಕಿದೆ ಎಂದರು. ಸಚಿವ ಡಾ. ಜಿ ಪರಮೇಶ್ವರ ಇದ್ದರು.

ಐವರು ಆರೋಪಿಗಳಿಗೆ ಜಾಮೀನು

ಬೀದರ್: ಯುವ ಗುತ್ತಿಗೆದಾರ ಸಚಿನ್ ಪಾಂಚಾಳ್ ಆತ್ಮಹತ್ಯೆ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿದ್ದ ಕಾಂಗ್ರೆಸ್ ಮುಖಂಡ ರಾಜು ಕಪನೂರ ಸೇರಿದಂತೆ ಐವರು ಆರೋಪಿಗಳಿಗೆ ಇಲ್ಲಿನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಬುಧವಾರ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ. ಸಚಿವ ಪ್ರಿಯಾಂಕ್ ಖರ್ಗೆ ಅವರ ಆಪ್ತ ರಾಜು ಕಪನೂರ, ನಂದಕುಮಾರ ನಾಗಭುಜಂಗೆ, ಗೋರಖನಾಥ, ಸತೀಶ ಹಾಗೂ ರಾಮನಗೌಡ ಅವರಿಗೆ ಜಾಮೀನು ಮಂಜೂರಾಗಿದೆ.

ಯುಜಿಸಿ ನಿಯಮಕ್ಕೆ 6 ರಾಜ್ಯ ಸಡ್ಡು

ಒಂದನೇ ಪುಟದಿಂದ...

ಉದ್ಯಮಿಗಳು, ಸಾರ್ವಜನಿಕ ಆಡಳಿತದ ನೀತಿ, ನಿರೂಪಕರು ಸೇರಿ ಬೇರೆ ಕ್ಷೇತ್ರದಲ್ಲಿರುವ ತಜ್ಞರು ಕುಲಪತಿಗಳಾಗುತ್ತಾರೆ. ಇದು ಉನ್ನತ ಶಿಕ್ಷಣದ ಗುಣಮಟ್ಟ ಕುಸಿತಕ್ಕೆ ನಾಂದಿಯಾಡುತ್ತದೆ. ಸಾರ್ವಜನಿಕ ವಿಶ್ವವಿದ್ಯಾಲಯಗಳು ಬಾಗಿಲು ಮುಚ್ಚಬೇಕಾಗುತ್ತದೆ. ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಉತ್ತೇಜನ ದೊರಕಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಒಂದು ರಾಜ್ಯಕ್ಕೂ ಮತ್ತೊಂದು ರಾಜ್ಯಕ್ಕೂ ಪದವಿ ಕೋರ್ಸ್‌ಗಳ ಆಯ್ಕೆಯಲ್ಲಿ ವಿದ್ಯಾರ್ಥಿಗಳ ಅಭಿರುಚಿ ಭಿನ್ನವಾಗಿರುತ್ತದೆ. ಯುಜಿಸಿ ನಿಯಮ ತಿದ್ದುಪಡಿ ಕರಡು ಪ್ರಕಾರ ಎಲ್ಲ ಪದವಿಗಳಿಗೆ ಪ್ರವೇಶ ಪರೀಕ್ಷೆ ನಡೆಸಲು ಸಾಧ್ಯವಿಲ್ಲ. ಕಲಾ ವಿಷಯ ಸೇರಿದಂತೆ ಹಲವು ಕೋರ್ಸ್‌ಗಳು ವಿದ್ಯಾರ್ಥಿಗಳ ಕೊರತೆ ಎದುರಿಸುತ್ತಿವೆ. ಇನ್ನು ಪ್ರವೇಶ ಪರೀಕ್ಷೆ ನಡೆಸಿದರೆ ಕೋರ್ಸ್‌ಗಳನ್ನೇ ಸ್ಥಗಿತಗೊಳಿಸಬೇಕಾಗುತ್ತದೆ ಎಂದು ಸಚಿವ ಸುಧಾಕರ್ ಹೇಳಿದರು.

> **ಉನ್ನತ ಶಿಕ್ಷಣ ಸಂಸ್ಥೆ, ವಿಶ್ವವಿದ್ಯಾಲಯ ಸ್ಥಾಪಿಸಲು ರಾಜ್ಯ ಸರ್ಕಾರ ಹಣ, ಭೂಮಿ ಕೊಡುತ್ತದೆ. ಕುಲಪತಿಗಳನ್ನು ಏಕೆ ನೇಮಕ ಮಾಡಬಾರದು?**
>
> **ಗೋವಿ ಸಿಝಿಯಾನ್**
> ತಮಿಳುನಾಡು ಸಚಿವ

ಯುಸಿಸಿ: ಸಹಜೀವನದ ಒಂದೇ ಅರ್ಜಿ ದಾಖಲು

ಡೆಹ್ರಾಡೂನ್ (ಪಿಟಿಐ): ಉತ್ತರಾಖಂಡ ರಾಜ್ಯವು ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಅನುಷ್ಠಾನಕ್ಕೆ ತಂದ ಮೊದಲ 10 ದಿನಗಳಲ್ಲಿ ಸಹಜೀವನ ಸಂಬಂಧದ ಕೇವಲ ಒಂದು ಅರ್ಜಿ ಪೋರ್ಟಲ್‌ನಲ್ಲಿ ನೋಂದಣಿಯಾಗಿದೆ.

ಸಹ ಜೀವನ ಜೋಡಿಗಳಿಂದ ಐದು ಅರ್ಜಿಗಳನ್ನು ಸ್ವೀಕರಿಸಲಾಗಿದೆ. ಈವರೆಗೆ ಒಬ್ಬರ ಅರ್ಜಿಯನ್ನು ನೋಂದಣಿ ಮಾಡಲಾಗಿದೆ. ಉಳಿದ ನಾಲ್ವರ ಅರ್ಜಿಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ವಿವಿಧ ವೃಂದಗಳ 184 ಹುದ್ದೆಗಳ ಭರ್ತಿಗೆ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಫೆಬ್ರುವರಿ 6ರಂದು ಪ್ರಕಟಿಸಲಾಗುತ್ತದೆ.

ಕಲ್ಯಾಣ ಅಧಿಕಾರಿಗಳು, ಕ್ಷೇತ್ರ ನಿರೀಕ್ಷಕರು, ಪ್ರಥಮ ದರ್ಜೆ ಸಹಾಯಕರು ಮತ್ತು ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳ ನೇಮಕಾತಿ ಪರೀಕ್ಷೆ ಪ್ರಕ್ರಿಯೆ ಮುಗಿದಿದೆ. ಈ ಹುದ್ದೆಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಮಂಡಳಿಯ ವೆಬ್‌ಸೈಟ್‌ನಲ್ಲಿ https://karbwwb.karnataka.gov.in ಮತ್ತು ಸೂಚನಾ ಫಲಕದಲ್ಲಿ ಪ್ರಕಟಿಸಲಾಗುವುದು ಎಂದು ಮಂಡಳಿಯ ಜಂಟಿ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಟ್ಟಿಯ ಬಗ್ಗೆ ಆಕ್ಷೇಪಣೆಗಳಿದ್ದರೆ ಅಭ್ಯರ್ಥಿಗಳು ಫೆ. 21ರ ಸಂಜೆ 5.30ರರೊಳಗೆ ಜಂಟಿ ಕಾರ್ಯದರ್ಶಿ ಹಾಗೂ ಸದಸ್ಯ ಕಾರ್ಯದರ್ಶಿ ಅವರಿಗೆ ಸಲ್ಲಿಸಬಹುದು ಎಂದು ತಿಳಿಸಲಾಗಿದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಕೆಂಪೇಗೌಡ ಬಸ್ ನಿಲ್ದಾಣ ವಿಭಾಗ, ಬೆಂಗಳೂರು

ಸಂ.: ಕರಾಸಾ/ವಿನಿ/ಕೆಂಬನಿ/ವಾ/1050/2024–25 ದಿನಾಂಕ: 03/02/2025

ಇ–ಟೆಂಡರ್/ಸಂಧಾನ ಪ್ರಕಟಣೆ ಸಂಖ್ಯೆ: 06/2024–25

ಕೆಂಪೇಗೌಡ ಬಸ್ ನಿಲ್ದಾಣದ ಟರ್ಮಿನಲ್ 1, 2, 2ಎ ಮತ್ತು ಟರ್ಮಿನಲ್–3 ರಲ್ಲಿ ಖಾಲಿ ಇರುವ / ಖಾಲಿಯಾಗಲಿರುವ ಮಳಿಗೆ ಸಂಖ್ಯೆ 45, 09, 04 ಮತ್ತು ಮೈಸೂರು ರಸ್ತೆ ಬಸ್ ನಿಲ್ದಾಣದ ಮಳಿಗೆ ಸಂಖ್ಯೆ 06, 13, 31 & 02 (ತೆರೆದ ಸ್ಥಳ) ಕ್ಕೆ ಪರವಾನಗಿದಾರರನ್ನು ಆಯ್ಕೆ ಮಾಡಲು ಕೆಪಿಪಿ ಪೋರ್ಟಲ್ ಮೂಲಕ ಮತ್ತು ಕೆಂಪೇಗೌಡ ಬಸ್ ನಿಲ್ದಾಣದಲ್ಲಿರುವ ಸಾಮಾನ್ಯ ಮಳಿಗೆ ಸಂಖ್ಯೆ 46, 48, 116, ದ್ವಿಚಕ್ರ ವಾಹನ ನಿಲುಗಡೆ (ಟರ್ಮಿನಲ್–2), ಕಾರು & ದ್ವಿಚಕ್ರ ವಾಹನ ನಿಲುಗಡೆ (ಟರ್ಮಿನಲ್–3 ರ ಮುಖ್ಯದ್ವಾರದ ಎಡಭಾಗ & ಬಲಭಾಗದಲ್ಲಿರುವ ಖಾಲಿ ಜಾಗ & ಇಂದಿರಾ ಕ್ಯಾಂಟಿನ್‌ನ ಹಿಂಭಾಗ ಹಾಗೂ ಪಕ್ಕದಲ್ಲಿರುವ ಖಾಲಿ ಜಾಗ), ಮೈಸೂರು ರಸ್ತೆ ಬಸ್ ನಿಲ್ದಾಣದಲ್ಲಿರುವ ಮಳಿಗೆ ಸಂಖ್ಯೆ 30 ಕ್ಕೆ ಪರವಾನಗಿದಾರರನ್ನು ಆಯ್ಕೆ ಮಾಡಲು ಸಂಧಾನದ (ಮಾತುಕತೆ) ಮೂಲಕ ದಿನಾಂಕ: 06.02.2025 ರಿಂದ 27.02.2025 ರವರೆಗೆ ಟೆಂಡರ್ / ಸಂಧಾನದ ಮೂಲಕ ಆಸಕ್ತಿದಾರರಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಇ–ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ಕ.ರಾ.ರ.ಸಾ. ನಿಗಮದ ವೆಬ್‌ಸೈಟ್ ksrtc.karnataka.gov.in ನಲ್ಲಿ ಟೆಂಡರ್ ಪ್ರಕಟಣೆಯನ್ನು ವೀಕ್ಷಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ. ನಿಗಮ, ಕೆಂಪೇಗೌಡ ಬಸ್ ನಿಲ್ದಾಣ ವಿಭಾಗ, ಬೆಂಗಳೂರು–560009, ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ದೂರವಾಣಿ ಸಂಖ್ಯೆ 7760990554, 7760990557 ಮತ್ತು ಕೆಪಿಪಿ ಪೋರ್ಟಲ್ ಸಹಾಯವಾಣಿ ಸಂಖ್ಯೆ 080–8046010000 / 080–8068948777.

ಸಹಿ/– ಹಿರಿಯ ವಿಭಾಗೀಯ ನಿಯಂತ್ರಣಾಧಿಕಾರಿ, ಕೆಂಬನಿ ವಿಭಾಗ, ಬೆಂಗಳೂರು
ವಾ.ಸಾ.ಸಂ.ಇ/ವಾಪ್ರ/4860/ಆಕಾರ್/2024–25

ಕರ್ನಾಟಕ ಸರ್ಕಾರ – ಧಾರ್ಮಿಕ ದತ್ತಿ ಇಲಾಖೆ
ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ
ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನ, ನಂಜನಗೂಡು, ಮೈಸೂರು ಜಿಲ್ಲೆ
ದೂರವಾಣಿ ಸಂಖ್ಯೆ: 08221–226245, 226275 Mail ID : sstnanjangud@gmail.com

ಸಂಖ್ಯೆ : ಎಸ್‌ಎಸ್‌ಟಿ/ಇ–ಟೆಂಡರ್/ಗುತ್ತಿಗೆ/1/2024–25 ದಿನಾಂಕ : 04–02–2025

ಟೆಂಡರ್ ಪ್ರಕಟಣೆ
ಇ–ಟೆಂಡರ್–ಪ್ರಕಟಣೆ
(ದ್ವಿ–ಲಕೋಟೆ ಪದ್ಧತಿ ಪ್ರಕಾರ)

ನಂಜನಗೂಡು ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನದ ಒಳಾಂಗಣ, ಹೊರಾಂಗಣ, ಪಾರ್ಕಿಂಗ್ ಸ್ಥಳ ಹಾಗೂ ಕಪಿಲಾನದಿ ಸ್ನಾನ ಘಟ್ಟ ಇತ್ಯಾದಿ ಸ್ಥಳಗಳಲ್ಲಿ ಅಕುಶಲ ಕಾರ್ಮಿಕರು (ಕಾಮಾಟಿ), ಸ್ವಚ್ಛತಾ ಸಿಬ್ಬಂದಿ ಹಾಗೂ ಭದ್ರತಾ ಸಿಬ್ಬಂದಿಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆದು ಕೆಲಸ ನಿರ್ವಹಿಸಿಕೊಳ್ಳುವ ಬಗ್ಗೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999, ನಿಯಮಾವಳಿಗಳು 2000ರ ಪ್ರಕಾರ ಅರ್ಹ ನೊಂದಾಯಿತ ಏಜೆನ್ಸಿಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.
ಟೆಂಡರ್ ಅವಧಿಯು ಕೆಲಸದ ಆದೇಶ ನೀಡಿದ ದಿನಾಂಕದಿಂದ ಒಂದು ವರ್ಷದ ಅವಧಿಯಾಗಿದ್ದು, ಆಪೇಕ್ಷಿಸುವ ಅರ್ಹ ಏಜೆನ್ಸಿಯವರು ಷರತ್ತು ಮತ್ತು ನಿಬಂಧನೆಗಳನ್ನು ಗಮನಿಸಿ, ಅಕುಶಲ ಕಾರ್ಮಿಕರು (ಕಾಮಾಟಿ), ಸ್ವಚ್ಛತಾ ಸಿಬ್ಬಂದಿ ಹಾಗೂ ಭದ್ರತಾ ಸಿಬ್ಬಂದಿಗೆ ಮಾಸಿಕ ಸೇವಾ ಶುಲ್ಕ ದರವನ್ನು ಸೂಚಿಸಿ ದ್ವಿ–ಲಕೋಟೆ ಪದ್ದತಿಯ ಪ್ರಕಾರ ಟೆಂಡರುಗಳನ್ನು Webiste : https://kppp.karnataka.gov.in ಮೂಲಕ ಸಲ್ಲಿಸುವುದು.

ಕ್ರ.ಸಂ.	ಟೆಂಡರ್‌ನ ವಿವರ	ಇ.ಎಂ.ಡಿ. ಮೊತ್ತ
1	ನಂಜನಗೂಡು ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನದ ಒಳಾಂಗಣ, ಹೊರಾಂಗಣ, ಪಾರ್ಕಿಂಗ್ ಸ್ಥಳ ಹಾಗೂ ಕಪಿಲಾನದಿ ಸ್ನಾನ ಘಟ್ಟ ಇತ್ಯಾದಿ ದೇವಾಲಯಕ್ಕೆ ಬಾದ್ಯಪಟ್ಟ ಸ್ಥಳಗಳಲ್ಲಿ ಅಕುಶಳ ಕಾರ್ಮಿಕರು (ಕಾಮಾಟಿ), ಸ್ವಚ್ಛತಾ ಸಿಬ್ಬಂದಿ ಹಾಗೂ ಭದ್ರತಾ ಸಿಬ್ಬಂದಿಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆದು ಕೆಲಸ ನಿರ್ವಹಿಸಿಕೊಳ್ಳುವ ಗುತ್ತಿಗೆ ಹಕ್ಕನ್ನು ಪಡೆದುಕೊಳ್ಳಲು ಗುತ್ತಿಗೆ ಹಕ್ಕಿನ ಬಗ್ಗೆ.	1,50,000.00

ಇ–ಪ್ರಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಇ–ಟೆಂಡರ್ ಷೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿದೆ.

1.	ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ	05–02–2025	ರ ನಂತರ
2.	ಇ–ಟೆಂಡರ್ ಸಲ್ಲಿಸುವ ಕೊನೆ ದಿನಾಂಕ ಮತ್ತು ಕಾಲ	21–02–2025	ಸಂಜೆ 5.00 ಗಂಟೆಯವರೆಗೆ
3.	ಇ–ಟೆಂಡರ್ ತೆರೆಯುವ ದಿನಾಂಕ ಮತ್ತು ಕಾಲ	24–02–2025	11.00 A.M. ನಂತರ

ಸಹಿ/– ಕಾರ್ಯ ನಿರ್ವಾಹಕ ಅಧಿಕಾರಿಗಳು
ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನ, ನಂಜನಗೂಡು

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ವಿಜನಿನಿ, ಭ.ಮೇ.ಯೋ. ವಿಭಾಗ, ನಂ.7, ಹಿರಿಯೂರು ಕ್ಯಾಂಪ್, ಚಿತ್ರದುರ್ಗ.
ದೂರವಾಣಿ ಸಂ:08194–200187 Email ID:ubpeediv07@gmail.com
ಸಂ:ಕಾ.ಇಂ/ವಿ.ಜ.ನಿ.ನಿ/ಭಮೇಯೋ/ವಿ.ನಂ.07/ಹಿ/ಕ್ಯಾಂ.ಚಿ/2024–25/16
ದಿನಾಂಕ:04.02.2025

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕೆ.ಪಿ.ಪಿ ಪೋರ್ಟಲ್ ಮುಖಾಂತರ)

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ವಿ.ಜ.ನಿ.ನಿ, ಭದ್ರಾ ಮೇಲ್ದಂಡೆ ಯೋಜನಾ, ವಿಭಾಗ ನಂ.07, ಹಿರಿಯೂರು ಕ್ಯಾಂಪ್; ಚಿತ್ರದುರ್ಗ ಇವರಿಂದ ಟೆಂಡರನ್ನು ಭದ್ರಾ ಮೇಲ್ದಂಡೆ ಯೋಜನೆಯ ಲೆಕ್ಕಶೀರ್ಷಿಕೆ DMF (District Mineral Fund) ಅಡಿಯಲ್ಲಿ ಈ ಕೆಳಕಂಡ ಕಾಮಗಾರಿಯನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ Karnataka Public Procurement Portalನ https://kppp.karnataka.gov.in ಪೋರ್ಟಲ್‌ನಲ್ಲಿ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಅನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಕೆಳಗೆ ಸಹಿ ಮಾಡಿರುವವರನ್ನು ಕಛೇರಿ ಸಮಯದಲ್ಲಿ ಖುದ್ದಾಗಿ ಅಥವಾ ದೂರವಾಣಿ ಸಂ:08194–200187 ರಲ್ಲಿ ಸಂಪರ್ಕಿಸಬಹುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಟೆಂಡರ್‌ನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

Name of work:- Improvements to tank at Ramaghatta village in RamagiriHobli of HolalkereTaluk under D.M.F (VJNL/2024-25/MT/WORK_INDENT 160/CALL-2) Amount put to tender in Lakhs:- 83.36 EMD amount in Lakhs:- 1.67 The last date for submission of tender document 11.02.2025 @ 5.00 PM Date & time of Opening of Technical Bid 12.02.2025@ 5.30 PM

DIPR/CTA/KSMCA/552/2024-25
ಸಹಿ/– ಕಾರ್ಯಪಾಲಕ ಇಂಜಿನಿಯರ್
ವಿ.ಜ.ನಿ.ನಿ, ಭ.ಮೇ.ಯೋ, ವಿಭಾಗ ನಂ.07,
ಹಿರಿಯೂರು ಕ್ಯಾಂಪ್: ಚಿತ್ರದುರ್ಗ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಚೇರಿ, (ವಿದ್ಯುತ್) ಪೂರ್ವ ವಲಯ,
16ನೇ ಮಹಡಿ, ಪಿ.ಯು.ಬಿ ಕಟ್ಟಡ, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು.
ಸಂಖ್ಯೆ:ಕಾಪಾಅ/ವಿದ್ಯುತ್/ಪೂರ್ವ/ಟೆಂಡರ್/11/2024–25 ದಿನಾಂಕ: 05.02.2025

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ದ್ವಿಲಕೋಟೆ ಪದ್ದತಿ)
(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು (ವಿದ್ಯುತ್), ಪೂರ್ವ ವಲಯ, ಇವರು ಬೃ.ಬೆಂ.ಮ.ಪಾಲಿಕೆ ಇವರ ಪರವಾಗಿ, ಕೆಟಿಪಿಪಿ ಕಾಯಿದೆಗಳು 2000ಕ್ಕೆ ಅನುಗುಣವಾಗಿ ಬೃ.ಬೆಂ.ಮ.ಪಾಲಿಕೆ ಅಥವಾ ತತ್ಸಮಾನವಾಗಿ ಸಿ.ಪಿ.ಡಬ್ಲ್ಯೂ.ಡಿ/ಕೆ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ಎಂ.ಇ.ಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ತತ್ಸಮಾನವಾಗಿ ಯಾವುದೇ ಕೇಂದ್ರ/ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ವಿದ್ಯುತ್ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಗಳ ಹೆಸರು
1.	ಬೃ.ಬೆಂ.ಮ.ಪಾಲಿಕೆ ವ್ಯಾಪ್ತಿಯಲ್ಲಿ ಬ್ರ್ಯಾಂಡ್ ಬೆಂಗಳೂರು – ವೈಬ್ರಂಟ್ ಬೆಂಗಳೂರು ಯೋಜನೆಯಡಿಯಲ್ಲಿ ಬೆಂಗಳೂರಿನಲ್ಲಿರುವ ಪಾರಂಪರಿಕ ಕಟ್ಟಡಗಳಿಗೆ Ornamental and Architectural Facade Lighting ಒದಗಿಸುವುದು. ಟೆಂಡರಿಗಿಟ್ಟ ಮೊತ್ತ: ₹.804.75 ಲಕ್ಷಗಳು, ಇಎಂಡಿ: ₹.12.07 ಲಕ್ಷಗಳು (ಹನ್ನೆರಡು ಲಕ್ಷದ ಏಳು ಸಾವಿರಗಳು ಮಾತ್ರ) (ರೂ.02.00 ಲಕ್ಷಗಳು (ಎರಡು ಲಕ್ಷ ಮಾತ್ರ)ವನ್ನು ಕೆಪಿಪಿ ಪೋರ್ಟಲ್ ಆನ್‌ಲೈನ್ ಮೂಲಕ ಪಾವತಿಸಬೇಕು ಮತ್ತು ಉಳಿದ ರೂ.10.07 ಲಕ್ಷಗಳು (ಹತ್ತು ಲಕ್ಷದ ಏಳು ಸಾವಿರಗಳು ಮಾತ್ರ) ಬ್ಯಾಂಕ್ ಗ್ಯಾರಂಟಿ ಮೂಲಕ ಪಾವತಿಸಬೇಕು)
2.	ಬೃ.ಬೆಂ.ಮ.ಪಾಲಿಕೆ ವ್ಯಾಪ್ತಿಯಲ್ಲಿ ಬ್ರ್ಯಾಂಡ್ ಬೆಂಗಳೂರು – ವೈಬ್ರಂಟ್ ಬೆಂಗಳೂರು ಯೋಜನೆಯಡಿಯಲ್ಲಿ ಬೆಂಗಳೂರಿನಲ್ಲಿರುವ ಸರ್ಕಾರಿ ಪ್ರಮುಖ /ಬಹುಮಹಡಿ ಕಟ್ಟಡಗಳಿಗೆ Ornamental and Architectural Facade Lighting ಒದಗಿಸುವುದು. ಟೆಂಡರಿಗಿಟ್ಟ ಮೊತ್ತ: ₹.804.75 ಲಕ್ಷಗಳು, ಇಎಂಡಿ: ₹.12.07 ಲಕ್ಷಗಳು (ಹನ್ನೆರಡು ಲಕ್ಷದ ಏಳು ಸಾವಿರಗಳು ಮಾತ್ರ) (ರೂ.02.00 ಲಕ್ಷಗಳು (ಎರಡು ಲಕ್ಷ ಮಾತ್ರ)ವನ್ನು ಕೆಪಿಪಿ ಪೋರ್ಟಲ್ ಆನ್‌ಲೈನ್ ಮೂಲಕ ಪಾವತಿಸಬೇಕು ಮತ್ತು ಉಳಿದ ರೂ.10.07 ಲಕ್ಷಗಳು (ಹತ್ತು ಲಕ್ಷದ ಏಳು ಸಾವಿರಗಳು ಮಾತ್ರ) ಬ್ಯಾಂಕ್ ಗ್ಯಾರಂಟಿ ಮೂಲಕ ಪಾವತಿಸಬೇಕು)

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ 07.02.2025ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್ ವಿಚಾರಣೆ/ಆಕ್ಷೇಪಣೆಗಳಿಗೆ ಕೊನೆಯ ದಿನಾಂಕ 13.02.2025ರ ಸಂಜೆ 4:00 ಗಂಟೆಗೆ (3) ಟೆಂಡರ್‌ಗಳನ್ನು ಕೆಪಿಪಿ ಪೋರ್ಟಲ್ ಮುಖಾಂತರ ಆನ್‌ಲೈನ್‌ನಲ್ಲಿ ಸಲ್ಲಿಸುವ ದಿನಾಂಕ 24.02.2025ರ ಸಂಜೆ 4:00 ಗಂಟೆಗೆ ಅಥವಾ ಮುಂಚಿತವಾಗಿ. (4) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ 14.02.2025ರ ಬೆಳಿಗ್ಗೆ 11:30 ಗಂಟೆಗೆ ನಡೆಸಲಾಗುವುದು. (5) ತಾಂತ್ರಿಕ ಬಿಡ್‌ಗಳನ್ನು ದಿನಾಂಕ 25.02.2025ರ ಸಂಜೆ 4:30 ಗಂಟೆಗೆ ತೆರೆಯಲಾಗುವುದು. (6) ಆರ್ಥಿಕ ಬಿಡ್‌ಗಳನ್ನು ದಿನಾಂಕ 28.02.2025ರ ಬೆಳಿಗ್ಗೆ 11:00 ಗಂಟೆಗೆ ತೆರೆಯಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು (ವಿದ್ಯುತ್)
ಪೂರ್ವ ವಲಯ

ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಜಿಲ್ಲಾ ಶಸ್ತ್ರಚಿಕಿತ್ಸಕರ ಕಾರ್ಯಾಲಯ, ಜಿಲ್ಲಾ ಆಸ್ಪತ್ರೆ, ಚಿತ್ರದುರ್ಗ.
ದೂರವಾಣಿ 08194–234710, ಇ–ಮೇಲ್: dschitradurga@gmail.com
ಸಂ:ಚಿಜಿಆ/ಸಿಬ್ಬಂದಿ/01/172/2024–25 ದಿನಾಂಕ: 04.02.2025

ಪ್ರಕಟಣೆ

ಚಿತ್ರದುರ್ಗ ಜಿಲ್ಲಾ ಆಸ್ಪತ್ರೆಯಲ್ಲಿ ಖಾಲಿ ಇರುವ 07 ತುರ್ತು ಚಿಕಿತ್ಸಾ ವೈದ್ಯಾಧಿಕಾರಿಗಳ ಹುದ್ದೆಗೆ ಎಂ.ಬಿ.ಬಿ.ಎಸ್ ಪದವೀಧರ ವೈದ್ಯರನ್ನು ಗುತ್ತಿಗೆ ಆಧಾರದ ಮೇಲೆ 01 ವರ್ಷದ ಅವಧಿಗೆ ಅಥವಾ ಖಾಯಂ ವೈದ್ಯರನ್ನು ನೇಮಿಸುವವರೆಗೂ ಇದಲ್ಲಿ ಯಾವುದೋ ಮೊದಲು ಅಲ್ಲಿವರೆಗೂ ರೋಸ್ಟರ್ ಮತ್ತು ಮೇರಿಟ್ ಆಧಾರದ ಮೇಲೆ ಸಂದರ್ಶನದ ಮೂಲಕ ನೇಮಕ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ. ಈ ಸಂದರ್ಶನವು ದಿನಾಂಕ: 19/02/2025 ರಂದು ಏರ್ಪಡಿಸಲಾಗಿದೆ. ಈ ಸಂದರ್ಶನವು ದಿನಾಂಕ: 19/02/2025 ರಿಂದ ನೇಮಕಾತಿ ಪೂರ್ಣಗೊಳ್ಳುವರೆಗೆ ಪ್ರತಿದಿನ ನಡೆಯಲಿದೆ. ಆಯ್ಕೆಯಾದ ವೈದ್ಯರಿಗೆ ಮಾಸಿಕ ರೂ. 60,000/–ಗಳ ವೇತನ ನೀಡಲಾಗುವುದು. ಇಚ್ಛೆಯುಳ್ಳ ಅಭ್ಯರ್ಥಿಗಳು ಬಯೋ–ಡೆಟಾ ದೊಂದಿಗೆ ಎಸ್.ಎಸ್.ಎಲ್.ಸಿ, ಎಂ.ಬಿ.ಬಿ.ಎಸ್ ವಿದ್ಯಾರ್ಹತೆಯ ಎಲ್ಲಾ ವರ್ಷದ ಅಂಕಪಟ್ಟಿಗಳು, ಹೌಸ್‌ಮೆನ್‌ಶಿಪ್, ಕೆ.ಎಂ.ಸಿ ನೊಂದಣಿ ಪತ್ರ, ಜಾತಿ ಪ್ರಮಾಣ ಪತ್ರ, ಅಗತ್ಯ ದಾಖಲಾತಿಗಳೊಂದಿಗೆ (ಮೂಲ ಹಾಗೂ ದೃಢೀಕೃತ ಜೆರಾಕ್ಸ್ ಪ್ರತಿಗಳೊಂದಿಗೆ) ಅರ್ಜಿಯನ್ನು ಜಿಲ್ಲಾ ಶಸ್ತ್ರಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ಚಿತ್ರದುರ್ಗ ಇಲ್ಲಿಗೆ ಸಂದರ್ಶನಕ್ಕೆ ಹಾಜರಾಗಲು ಸೂಚಿಸಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಶಸ್ತ್ರಚಿಕಿತ್ಸಕರ ಕಾರ್ಯಾಲಯ, ಚಿತ್ರದುರ್ಗ ಇಲ್ಲಿಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಲು ತಿಳಿಸಿದೆ.

RO.No.548:DIPR/CTA/KSMCA/2024-25
ಸಹಿ/– ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ಚಿತ್ರದುರ್ಗ.

ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ
ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಆವರಣ, ಬೆಂಗಳೂರು – 560012
ನಂ. ಕೆಎಸ್‌ಸಿಎಸ್‌ಟಿ/ಎನ್‌ಟಿಎಫ್‌ಪಿಸಿಇ & ಕೆಡಿಎಂ ದಿನಾಂಕ: 05–02–2025

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಮಂಡಳಿಯ ಅಲ್ಪಾವಧಿ ಇ–ಟೆಂಡರ್‌ಗಳನ್ನು ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಡಿ ಪ್ರಕಟಿಸಲಾಗಿದೆ. ಟೆಂಡರ್‌ಗಳ ವಿವರ ಈ ಕೆಳಕಂಡಂತಿದೆ:

1. **3ಡಿ ಲೇಸರ್ ಸ್ಕ್ಯಾನಿಂಗ್ ಮತ್ತು ಜಿಯೋ–ಸ್ಪೇಷಿಯಲ್ ತಂತ್ರಜ್ಞಾನಗಳನ್ನು ಬಳಸಿಕೊಂಡು ಕರ್ನಾಟಕದ ಸರ್ಕಾರಿ ವಸ್ತುಸಂಗ್ರಹಾಲಯಗಳಲ್ಲಿನ ಪ್ರಾಚೀನ ವಸ್ತುಗಳ ಡಿಜಿಟಲೀಕರಣ” ಎಂಬ ಯೋಜನೆಯಡಿ ಹ್ಯಾಂಡ್‌ಹೆಲ್ಡ್ ಮತ್ತು ಡೆಸ್ಕ್ಟಾಪ್ 3ಡಿ ಲೇಸರ್ ಸ್ಕ್ಯಾನರ್‌ಗಳು ಮತ್ತು ತಂತ್ರಾಂಶಗಳ ಪೂರೈಕೆ, ಸ್ಥಾಪನೆ ಮತ್ತು ತರಬೇತಿ.** ಟೆಂಡರ್ ಸಂಖ್ಯೆ: ITBTST/2024-25/IND0017 ದಿನಾಂಕ: 04.02.2025 ಪ್ರಕಟಿಸಲಾಗಿದೆ. ಟೆಂಡರ್ ಬಿಡ್ ಸಲ್ಲಿಸಲು ಕೊನೆಯ ದಿನಾಂಕ: **25ನೇ ಫೆಬ್ರವರಿ, 2025, ಸಂಜೆ 05.30 ಗಂಟೆಯೊಳಗೆ.**
2. **ಕರ್ನಾಟಕ ರಾಜ್ಯ ಲ್ಯಾಂಪ್ಸ್ ಸಹಕಾರ ಮಹಾಮಂಡಳಿ ನಿಯಮಿತ, ಹೆಬ್ಬಾಳ್ ಕೈಗಾರಿಕಾ ಪ್ರದೇಶ, ಮೈಸೂರುನಲ್ಲಿ 1000 ಕೆಜಿ ಸಾಮರ್ಥ್ಯದ ಸೀಗೆಕಾಯಿ ಸಂಸ್ಕರಣೆ ಮತ್ತು ಪ್ಯಾಕಿಂಗ್ ಘಟಕದ ವಿನ್ಯಾಸ, ಸರಬರಾಜು, ಸ್ಥಾಪನೆ ಮತ್ತು ಅನುಷ್ಠಾನ.** ಟೆಂಡರ್ ಸಂಖ್ಯೆ: ITBTST/2024-25/IND0015 ದಿನಾಂಕ: 04.02.2025 ಪ್ರಕಟಿಸಲಾಗಿದೆ. ಟೆಂಡರ್ ಬಿಡ್ ಸಲ್ಲಿಸಲು ಕೊನೆಯ ದಿನಾಂಕ: **28ನೇ ಫೆಬ್ರವರಿ, 2025, ಸಂಜೆ 05.30 ಗಂಟೆಯೊಳಗೆ.**
2. **ಲ್ಯಾಂಪ್ಸ್ ಸಹಕಾರ ಸಂಘ, ಕೊಪ್ಪ, ಚಿಕ್ಕಮಗಳೂರು ಜಿಲ್ಲೆಯಲ್ಲಿ ‘ಸಂಸ್ಕರಿಸಿದ ಜೇನನ್ನು ಪ್ಯಾಕಿಂಗ್ (ಬಾಟ್ಲಿಂಗ್) ಘಟಕದ ಸರಬರಾಜು, ಸ್ಥಾಪನೆ ಮತ್ತು ಅನುಷ್ಠಾನ.** ಟೆಂಡರ್ ಸಂಖ್ಯೆ: ITBTST/2024-25/IND0016 ದಿನಾಂಕ: 04.02.2025 ಪ್ರಕಟಿಸಲಾಗಿದೆ. ಟೆಂಡರ್ ಬಿಡ್ ಸಲ್ಲಿಸಲು ಕೊನೆಯ ದಿನಾಂಕ: **28ನೇ ಫೆಬ್ರವರಿ, 2025, ಸಂಜೆ 05.30 ಗಂಟೆಯೊಳಗೆ.**

ಹೆಚ್ಚಿನ ವಿವರಗಳಿಗಾಗಿ ಮತ್ತು ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಲು,
ಜಾಲತಾಣ ಲಿಂಕ್: https://kppp.karnataka.gov.in/#/portal/searchTender/live

DIPR/CP/YC/4852/2024-25 ಸಹಿ/– ಕಾರ್ಯನಿರ್ವಾಹಕ ಕಾರ್ಯದರ್ಶಿ, ಕೆ.ಎಸ್.ಸಿ.ಎಸ್.ಟಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ (ವಿದ್ಯುತ್), ಪಶ್ಚಿಮ ವಲಯ,
98, 1ನೇ ಮಹಡಿ, 8ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು.
ಸಂಖ್ಯೆ: ಕಾಅ/ವಿದ್ಯುತ್/ಪಶ್ಚಿಮ/ಟೆಂಡರ್/12/2024–25 ದಿನಾಂಕ: 05–02–2025

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) – (ಅಲ್ಪಾವಧಿ)
(ದ್ವಿ–ಲಕೋಟೆ ಪದ್ಧತಿ) (ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು (ವಿದ್ಯುತ್), ಪಶ್ಚಿಮ ವಲಯ, ಬಿಬಿಎಂಪಿ, ಬೆಂಗಳೂರು ಇವರು ಈ ಕೆಳಕಂಡ ವಿದ್ಯುತ್ ಕಾಮಗಾರಿಗೆ ಬಿಬಿಎಂಪಿ / ಕೆಪಿಡಬ್ಲ್ಯೂಡಿ / ಸಿಪಿಡಬ್ಲ್ಯೂಡಿ / ರೈಲ್ವೇಸ್ / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ಇತರೆ ಕೇಂದ್ರ / ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ತತ್ಸಮಾನ ದರ್ಜೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಕೆಟಿಪಿಪಿ ನಿಯಮಗಳು 2000 ಅನುಸಾರ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಯ ಹೆಸರು
1	“ಬ್ರ್ಯಾಂಡ್ ಬೆಂಗಳೂರು – ವೈಬ್ರೆಂಟ್ ಬೆಂಗಳೂರು” ಅಡಿಯಲ್ಲಿ ಬಿಬಿಎಂಪಿ ವ್ಯಾಪ್ತಿಯಲ್ಲಿರುವ ವಿವಿಧ ಜಂಕ್ಷನ್‌ಗಳು ಹಾಗೂ ಸರ್ಕಲ್‌ಗಳಲ್ಲಿ ಬಣ್ಣ / ಅಲಂಕಾರಿಕ ಲೈಟ್‌ಗಳನ್ನು ಒದಗಿಸುವ ಕಾಮಗಾರಿ. **ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ): 799.00, ಇ.ಎಂ.ಡಿ ಮೊತ್ತ (ರೂ. ಲಕ್ಷಗಳಲ್ಲಿ): 12.00 (ರೂ. 2.00 ಲಕ್ಷಗಳು ಕೆಪಿಪಿ ಪೋರ್ಟಲ್ ಮೂಲಕ ಪಾವತಿಸಬೇಕು ಬಾಕಿ ರೂ. 10.00 ಲಕ್ಷಗಳು ಬಿಜಿ / ಎಫ್‌ಡಿಆರ್ / ಡಿಡಿ ರೂಪದಲ್ಲಿ ಸಲ್ಲಿಸಬೇಕು.)**

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: https://kppp.karnataka.gov.in ನಿಂದ ದಿನಾಂಕ: **07–02–2025 ರಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಟೆಂಡರ್ ವಿಚಾರಣೆಗಳಿಗೆ ಕೊನೆಯ ದಿನಾಂಕ: **13–02–2025 ರಂದು 16.00 ಗಂಟೆಗೆ ಅಥವಾ ಮುಂಚಿತವಾಗಿ.** 3) ಬಿಡ್ ಪೂರ್ವಭಾವಿ ಸಭೆ ದಿನಾಂಕ ಮತ್ತು ಸಮಯ: **14–02–2025 ರಂದು 11.30 ಗಂಟೆಗೆ.** 4) ಬಿಡ್‌ಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಆನ್‌ಲೈನ್ ಮೂಲಕ ಸಲ್ಲಿಸುವ ಕೊನೆಯ ದಿನಾಂಕ: **24–02–2025 ರಂದು 16.00 ಗಂಟೆಗೆ ಅಥವಾ ಮುಂಚಿತವಾಗಿ.** 5) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **25–02–2025 ರಂದು 16.30 ಗಂಟೆಯ ನಂತರ. 6)** ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **03–03–2025 ರಂದು 11.30 ಗಂಟೆಗೆ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು (ವಿದ್ಯುತ್), ಪಶ್ಚಿಮ ವಲಯ, ಬಿಬಿಎಂಪಿ.

❦ ಸುಭಾಷಿತ ❦

ಸಂಸ್ಕೃತಿಯ ಮಹೋನ್ನತವಾದ ಮಹಲಿಗೆ ನೀತಿ ನೆಲಗಟ್ಟು, ಅನುಭವ ಆವಾರ.

–ಕೆ.ಎಸ್.ನಿಸಾರ್ ಅಹಮದ್

ಘನತೆಯ ಸಾವು ಖಾತರಿಗೆ ಆದೇಶ ಆರೋಗ್ಯ ಇಲಾಖೆಯ ಮಹತ್ವದ ನಡೆ

ಗುಣಪಡಿಸಲು ಸಾಧ್ಯವೇ ಇಲ್ಲದಂತಹ ಕಾಯಿಲೆ ಇರುವವರಿಗೆ ಘನತೆಯ ಸಾವು ಒದಗಿಸಿಕೊಡಲು ಅವಕಾಶ ಕಲ್ಪಿಸುವ ಸುಪ್ರೀಂ ಕೋರ್ಟ್‌ನ ಮಹತ್ವದ ತೀರ್ಪನ್ನು ಅನುಷ್ಠಾನಕ್ಕೆ ತರಲು ರಾಜ್ಯದ ಆರೋಗ್ಯ ಇಲಾಖೆಯು ಆದೇಶ ಹೊರಡಿಸಿದೆ. ಈ ಮೂಲಕ ಇಲಾಖೆಯು ಐತಿಹಾಸಿಕ ಹೆಜ್ಜೆಯೊಂದನ್ನು ಇರಿಸಿದೆ. ಇಲಾಖೆಯ ಈ ತೀರ್ಮಾನವು ಆರೋಗ್ಯ ಸೇವೆಗಳಿಗೆ ಸಂಬಂಧಿಸಿದ ನೀತಿಗಳಲ್ಲಿ ದೊಡ್ಡ ತಿರುವು. ಕಾಯಿಲೆ ಗುಣವಾಗುವ ಸಾಧ್ಯತೆಯೇ ಇಲ್ಲ ಎಂಬುದು ಖಚಿತವಾದಾಗ ರೋಗಿಗಳಿಗೆ ದೀರ್ಘಾವಧಿಯ ಯಾತನೆಯಿಂದ ಮುಕ್ತಿ ಪಡೆಯಲು ಅವಕಾಶ ಕಲ್ಪಿಸುವ ನಿರ್ಧಾರ ಇದು. ಈ ಆದೇಶವು ಮೂರು ಆಯಾಮಗಳನ್ನು ಒಳಗೊಂಡಿದೆ. ಮರಣ ಇಚ್ಛೆಯ ಉಯಿಲು, ಜೀವರಕ್ಷಕ ಔಷಧಿಗಳು ಹಾಗೂ ಉಪಕರಣಗಳ ನೆರವನ್ನು ತೆಗೆಯುವುದು ಮತ್ತು ಸಂಬಂಧಿಸಿದ ಸುರಕ್ಷತಾ ಕ್ರಮಗಳನ್ನು ಪಾಲಿಸುವುದು ಆ ಮೂರು ಆಯಾಮಗಳು. ತಾವು ಗುಣಮುಖರಾಗಲು ಸಾಧ್ಯವೇ ಇಲ್ಲದ ಸ್ಥಿತಿಗೆ ತಲುಪಿದರೆ ಅಥವಾ ಜೀವಚ್ಛವದಂತೆ ಆದರೆ ಆಗ ತಮಗೆ ಜೀವರಕ್ಷಕ ಉಪಕರಣಗಳನ್ನು ಅಳವಡಿಸ ಬೇಕಾಗಿಲ್ಲ ಎಂಬುದನ್ನು ತಿಳಿಸುವ ಮರಣ ಇಚ್ಛೆಯ ಉಯಿಲನ್ನು ರೋಗಿಗಳು ಬರೆಯಬಹುದು, ವೈದ್ಯಕೀಯ ಸೇವೆ ಒದಗಿಸುವವರಿಗೆ ಸೂಚನೆಗಳನ್ನು (ಎಎಂಡಿ) ಬರೆದಿರಿಸಬಹುದು. ಇದಕ್ಕೆ ಹಲವು ಹಂತಗಳ ಅನುಮತಿಯ ಅಗತ್ಯವನ್ನು, ನ್ಯಾಯಾಂಗದ ಮೇಲ್ವಿಚಾರಣೆಯನ್ನು ಆದೇಶದಲ್ಲಿನ ಸುರಕ್ಷತಾ ಕ್ರಮಗಳ ಭಾಗದಲ್ಲಿ ವಿವರಿಸಲಾಗಿದೆ. ಆದೇಶದ ದುರ್ಬಳಕೆ ಆಗಬಾರದು ಎನ್ನುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ. ರೋಗಿಯ ಸ್ವಾತಂತ್ರ್ಯವನ್ನು, ವೈದ್ಯಕೀಯ ಲೋಕದ ನೈತಿಕ ನಿಯಮಗಳನ್ನು, ಕಾನೂನಿನ ಚೌಕಟ್ಟಿನಲ್ಲಿ ನಡೆದುಕೊಳ್ಳಬೇಕಿರುವುದರ ಮಹತ್ವವನ್ನು, ರೋಗಿಯ ಹತ್ತಿರದ ಸಂಬಂಧಿಕರು ಇಂತಹ ಪರಿಸ್ಥಿತಿಯಲ್ಲಿ ಎದುರಿಸುವ ಮಾನಸಿಕ ತೊಳಲಾಟವನ್ನು ಈ ಆದೇಶವು ಸಮತೋಲನದಿಂದ ಗ್ರಹಿಸಿದೆ.

ಈ ಆದೇಶವು ಪರಿಣಾಮಕಾರಿಯಾಗಿ, ಸಹಾನುಭೂತಿಯಿಂದ ಮತ್ತು ಮನುಷ್ಯನ ಜೀವವನ್ನು ಗೌರವಿಸುವ ರೀತಿಯಲ್ಲಿ ಅನುಷ್ಠಾನಕ್ಕೆ ಬರುವಂತೆ ಕಾಳಜಿ ವಹಿಸಬೇಕು

ಆರೋಗ್ಯಸೇವೆ ಒದಗಿಸುವ ಸಂದರ್ಭದಲ್ಲಿ ರೂಢಿಸಿಕೊಳ್ಳಬೇಕಿರುವ ಸಹಾನುಭೂತಿಯ ಧೋರಣೆಯನ್ನು ಈ ಆದೇಶವು ಖಾತರಿಪಡಿಸುತ್ತದೆ. ಆದರೆ ಇದು ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳಬೇಕು ಎಂದಾದರೆ ಪ್ರಕ್ರಿಯೆಗಳು ಪಾರದರ್ಶಕವಾಗಿರಬೇಕು. ಬಹು ಹಂತಗಳ ಪರಿಶೀಲನಾ ವ್ಯವಸ್ಥೆಯು ಇಲ್ಲಿ ಅಗತ್ಯವಿದ್ದರೂ ಅದು ಆದೇಶದ ಉದ್ದೇಶವನ್ನೇ ವಿಫಲಗೊಳಿಸುವಂತೆ ಆಗಬಾರದು. ಸಂದರ್ಭದ ತುರ್ತನ್ನು ಅರ್ಥ ಮಾಡಿಕೊಳ್ಳುವ ವ್ಯವಸ್ಥಿತ ಪ್ರಕ್ರಿಯೆಗಳು ಇಲ್ಲಿರಬೇಕು. ಇಂತಹ ಸೂಕ್ಷ್ಮ ಸಂದರ್ಭಗಳನ್ನು ನಿರ್ವಹಿಸಲು ಸಾಧ್ಯವಾಗುವಂತೆ ವೈದ್ಯಕೀಯ ಸೌಲಭ್ಯಗಳನ್ನು ಸಜ್ಜುಗೊಳಿಸಬೇಕು, ಅದರಲ್ಲೂ ಮುಖ್ಯವಾಗಿ ಸರ್ಕಾರಿ ಆಸ್ಪತ್ರೆಗಳಲ್ಲಿ ಇದು ಸರಿಯಾಗಿ ಇರಬೇಕು. ವೈದ್ಯಕೀಯ ಸಿಬ್ಬಂದಿಗೆ ವೈದ್ಯಕೀಯ ಶಿಷ್ಟಾಚಾರಗಳ ಪಾಲನೆಯ ವಿಚಾರದಲ್ಲಿ ಮಾತ್ರವೇ ಅಲ್ಲದೆ ಬಹಳ ಸಂಕೀರ್ಣವಾದ ನೈತಿಕ ತೀರ್ಮಾನಗಳನ್ನು ತೆಗೆದುಕೊಳ್ಳುವ ವಿಚಾರದಲ್ಲಿಯೂ ತರಬೇತಿ ಒದಗಿಸಬೇಕು. ರೋಗಿಯು ಸಿದ್ಧಪಡಿಸಿರುವ ಎಎಂಡಿ ಸುಲಭವಾಗಿ ಲಭ್ಯವಿರುವಂತೆ ಮಾಡಬೇಕು. ಜೀವರಕ್ಷಕ ಚಿಕಿತ್ಸಾ ಕ್ರಮಗಳು ತಮಗೆ ಬೇಡ ಎಂಬ ಅವರ ಇಚ್ಛೆಯನ್ನು ವಿಳಂಬವಿಲ್ಲದೆ ಗೌರವಿಸುವ ಕೆಲಸ ಆಗಬೇಕು.

ಸುಪ್ರೀಂ ಕೋರ್ಟ್ ನೀಡಿದ ತೀರ್ಪು ಹಾಗೂ ಅದಕ್ಕೆ ಅನುಗುಣವಾಗಿ ಆರೋಗ್ಯ ಇಲಾಖೆ ಹೊರಡಿಸಿರುವ ಆದೇಶವು ವೈದ್ಯಕೀಯ ಮತ್ತು ಕಾನೂನು ವ್ಯವಸ್ಥೆಯ ಮೇಲೆ ಗಮನಾರ್ಹವಾದ ಹೊಣೆಯನ್ನು ಹೊರಿಸಿವೆ. ಈ ಎರಡು ವ್ಯವಸ್ಥೆಗಳು ಇಡೀ ಪ್ರಕ್ರಿಯೆಯ ಪಾವಿತ್ರ್ಯವನ್ನು ಕಾಪಾಡಬೇಕಿದೆ. ಆದೇಶವನ್ನು ಯಾರೂ ದುರ್ಬಳಕೆ ಮಾಡಿಕೊಳ್ಳದಂತೆ ನಿಗಾ ವಹಿಸಬೇಕು ಹಾಗೂ ಅದೇ ಹೊತ್ತಿನಲ್ಲಿ ರೋಗಿಯ ಹಕ್ಕುಗಳನ್ನು ಗೌರವಿಸುವ ಕೆಲಸವೂ ಆಗಬೇಕು. ಆರೈಕೆಯನ್ನು ನಿರಾಕರಿಸುವ ಸಂದರ್ಭದಲ್ಲಿ ಯಾವುದೇ ತಪ್ಪುಗಳು ಸಂಭವಿಸದಂತೆ ನೋಡಿಕೊಳ್ಳುವ ಕೆಲಸದಲ್ಲಿ ದೊಡ್ಡ ಹೊಣೆ ಇರುವುದು ಕಾನೂನು ವ್ಯವಸ್ಥೆಯ ಮೇಲೆ. ಸುಪ್ರೀಂ ಕೋರ್ಟ್‌ನ ತೀರ್ಪನ್ನು ಇಲಾಖೆಯು ಅನುಷ್ಠಾನಕ್ಕೆ ತಂದಿರುವುದು ರೋಗಿಗಳಿಗೆ ಕೊನೆಯ ದಿನಗಳಲ್ಲಿ ಘನತೆಯನ್ನು ಖಾತರಿಪಡಿಸುವ ದಿಸೆಯಲ್ಲಿ ಒಂದು ದಿಟ್ಟ ಹೆಜ್ಜೆ. ಸರ್ಕಾರ, ವೈದ್ಯಕೀಯ ಸಿಬ್ಬಂದಿ, ಕಾನೂನು ವ್ಯವಸ್ಥೆ ಮತ್ತು ಸಾರ್ವಜನಿಕರು ಒಟ್ಟಾಗಿ ಈ ಆದೇಶವು ಪರಿಣಾಮಕಾರಿಯಾಗಿ, ಸಹಾನುಭೂತಿಯಿಂದ ಮತ್ತು ಮನುಷ್ಯನ ಜೀವವನ್ನು ಗೌರವಿಸುವ ರೀತಿಯಲ್ಲಿ ಅನುಷ್ಠಾನಕ್ಕೆ ಬರುವಂತೆ ಕಾಳಜಿ ವಹಿಸಬೇಕು.

ದಿನದ ಟ್ವೀಟ್

ಬಸ್ ವ್ಯವಸ್ಥೆ ಜನಸ್ನೇಹಿಯಾಗಲಿ

ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಬಸ್‌ಗಳು ಹೇಗೆ ಕಾರ್ಯನಿರ್ವಹಿಸುತ್ತವೆ ಎಂಬುದನ್ನು ನಾನು ನೋಡಿದ್ದೇನೆ. ನಮ್ಮ ಬಸ್ ವ್ಯವಸ್ಥೆಯು ಅಲ್ಲಿಗಿಂತ ಬಹಳ ಹಿಂದೆ ಇದೆ. ಸಂತಸದ ಸಂಗತಿಯೆಂದರೆ, ನಾವು ಹೆಚ್ಚು ಬಸ್‌ಗಳನ್ನು ಹೊಂದಿದ್ದೇವೆ. ಹವಾನಿಯಂತ್ರಣ ಸೌಲಭ್ಯ, ಯುಪಿಐ ವ್ಯವಸ್ಥೆಯು ಬಸ್‌ಗಳಲ್ಲಿ ಇದೆ. ಚಾಲಕರು ನಿಯಮಗಳನ್ನು ಅನುಸರಿಸುವಂತೆ ಮಾಡುವುದು, ವಿಶಾಲವಾದ ಬಸ್ ನಿಲ್ದಾಣಗಳು ಮತ್ತು ಬಸ್ ಆದ್ಯತೆಯ ಲೇನ್‌ಗಳನ್ನು ನಿರ್ಮಿಸುವುದು ನಿಜಕ್ಕೂ ಅಗತ್ಯವಾಗಿ ಆಗಬೇಕಾದ ಕೆಲಸಗಳಾಗಿವೆ.

ಅವಿನಾಶ್ ಬೆಂಗಳೂರು, ಸಾಫ್ಟ್‌ವೇರ್ ಎಂಜಿನಿಯರ್

ಕಿಡಿನುಡಿ

ಬಿಡುವಿಲ್ಲದ ಕೆಲಸದ ದಿನಗಳಲ್ಲಿ ಧಾರ್ಮಿಕ ಮೆರವಣಿಗೆಗಳಿಗಾಗಿ ಸಾರ್ವಜನಿಕ ರಸ್ತೆಗಳನ್ನು ನಿರ್ಬಂಧಿಸುವುದು ಅತ್ಯಂತ ಅಸಂಬದ್ಧವಾದುದು. ಪರಂಪರೆ ಮತ್ತು ಸಂಪ್ರದಾಯಗಳ ಹೆಸರಿನಲ್ಲಿ ಜನರಿಗೆ ಅನನುಕೂಲ ಉಂಟುಮಾಡುವ ಮೂಲಕ ನೀವು ಏನನ್ನು ಸಾಧಿಸುತ್ತೀರಿ? ಸಾಮಾನ್ಯ ಜ್ಞಾನವು ಈ ದೇಶದಲ್ಲಿ ಎಂದಾದರೂ ಮಹತ್ವ ಪಡೆದುಕೊಂಡೀತೆ?

ರಾಮಚಂದ್ರ ಎಮ್., ಬರಹಗಾರ

25 ವರ್ಷಗಳ ಹಿಂದೆ

ಭಾನುವಾರ, 6-2-2000

• ಬಳ್ಳಾರಿ: ಈ ಬಾರಿ ಕಣದಲ್ಲಿ ಮಹಿಳೆಯರೇ ಇಲ್ಲ!

ಬೆಂಗಳೂರು, ಫೆ. 5– ಕೇವಲ ಐದು ತಿಂಗಳ ಹಿಂದಷ್ಟೇ ದೇಶ– ವಿದೇಶಗಳ ಗಮನ ಸೆಳೆದಿದ್ದ, ರಾಜ್ಯದ ಹಿಂದುಳಿದ ಜಿಲ್ಲೆಗಳಲ್ಲಿ ಒಂದಾದ ಬಳ್ಳಾರಿ ಈಗ ಮತ್ತೊಂದು ಚುನಾವಣೆಗೆ ಸಜ್ಜಾಗಿದೆ.

ಅಖಿಲ ಭಾರತ ಕಾಂಗ್ರೆಸ್ ಸಮಿತಿ ಅಧ್ಯಕ್ಷೆ ಸೋನಿಯಾ ಗಾಂಧಿ ಹಾಗೂ ಅವರ ಪ್ರತಿಸ್ಪರ್ಧಿಯಾಗಿ ಬಿಜೆಪಿಯ ಕೇಂದ್ರದ ಮಾಜಿ ಸಚಿವೆ ಸುಷ್ಮಾ ಸ್ವರಾಜ್ ಅವರು ಸ್ಪರ್ಧಿಸಿದ್ದ ಕಾರಣ ಕಳೆದ ಲೋಕಸಭಾ ಚುನಾವಣೆಯಲ್ಲಿ ಬಳ್ಳಾರಿ ಕ್ಷೇತ್ರ ಅಂತರರಾಷ್ಟ್ರೀಯ ಮಟ್ಟದಲ್ಲಿ ಎಲ್ಲರ ಗಮನ ಸೆಳೆದಿತ್ತು.

ಆದರೆ ಸೋನಿಯಾ ಉತ್ತರಪ್ರದೇಶದ ಅಮೇಠಿ ಕ್ಷೇತ್ರವನ್ನು ಉಳಿಸಿಕೊಂಡು ಬಳ್ಳಾರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರಿಂದ ಈಗ ಅದಕ್ಕೆ ಉಪಚುನಾವಣೆ ನಡೆಯುತ್ತಿದೆ.

ಕಳೆದ ಬಾರಿ ಇಬ್ಬರು ಮಹಿಳೆಯರ ಹೋರಾಟದ ಕಣವಾಗಿದ್ದ ಬಳ್ಳಾರಿ ಲೋಕಸಭಾ ಕ್ಷೇತ್ರದಲ್ಲಿ ಈ ಬಾರಿ ಆರು ಮಂದಿ ಅಭ್ಯರ್ಥಿಗಳು ಕಣದಲ್ಲಿದ್ದರೂ ಅವರಲ್ಲಿ ಒಬ್ಬ ಮಹಿಳೆಯೂ ಇಲ್ಲದಿರುವುದೇ ವಿಶೇಷವಾಗಿದೆ.

50 ವರ್ಷಗಳ ಹಿಂದೆ

ಗುರುವಾರ, 6-2-1975

• ನನ್ನ ಪದಚ್ಯುತಿ ಯತ್ನ ಈಡೇರದು: ಅರಸು

ಬೆಳಗಾವಿ, ಫೆ. 5– ‘ಮುಖ್ಯಮಂತ್ರಿ ಸ್ಥಾನದಿಂದ ನನ್ನನ್ನು ಪದಚ್ಯುತಿಗೊಳಿಸಲು ರಾಜ್ಯ ಕಾಂಗ್ರೆಸ್ ಪಕ್ಷದೊಳಗಿನ ಕೆಲವರು ಮಾಡುತ್ತಿರುವ ಪ್ರಯತ್ನಗಳು ಹೊಳೆಯಲ್ಲಿ ಹುಣಿಸೆಹಣ್ಣು ತೊಳೆದಂತೆ ವಿಫಲಗೊಳ್ಳುವುದು ಖಚಿತ’ ಎಂದು ದೇವರಾಜ ಅರಸು ಅವರು ಇಂದು ಇಲ್ಲಿ ಹೇಳಿದರು.

ಜಿಲ್ಲಾ ಕಾಂಗ್ರೆಸ್ ಕಾರ್ಯಕರ್ತರ ಭಾರಿ ಸಭೆಯಲ್ಲಿ ಮಾತನಾಡುತ್ತಿದ್ದ ಅರಸು ಅವರು ‘ಪಕ್ಷದ ಒಗ್ಗಟ್ಟಿಗೆ ಧಕ್ಕೆ ತರುವ ಗುಂಪುಗಾರಿಕೆ ಮತ್ತು ಸಂಚುಗಳಲ್ಲಿ ಕಾಲ ವ್ಯರ್ಥಮಾಡುವ’ ಕಾಂಗ್ರೆಸ್ಸಿಗರಿಗೆ ಛೀಮಾರಿ ಹಾಕಿದರು.

‘ಈ ಗುಂಪುಗಾರಿಕೆ ಪ್ರವೃತ್ತಿಯ ಜನರ ಚಟುವಟಿಕೆಗಳ ಬಗ್ಗೆ ನನಗೆ ಚಿಂತೆಯೇ ಇಲ್ಲ. ನಾನು ಅಧಿಕಾರದಲ್ಲಿರುತ್ತೇನೆಯೇ ಅಥವಾ ಇಲ್ಲವೇ ಎಂಬುದು ಮುಖ್ಯವಲ್ಲ. ಅಧಿಕಾರ ಸ್ಥಾನದಿಂದ ಹೊರಗಿದ್ದುಕೊಂಡೇ ದೇಶ ಮತ್ತು ಪಕ್ಷಕ್ಕೆ ಸೇವೆ ಸಲ್ಲಿಸಬಹುದು’ ಎಂದರು.

‘ಸ್ವಾತಂತ್ರ್ಯಪೂರ್ವದಲ್ಲಿ ಬೆಳಗಾವಿ ಜಿಲ್ಲಾ ಕಾಂಗ್ರೆಸ್ ಪ್ರಬಲವಾದ ಘಟಕವಾಗಿತ್ತು. ಈಗ ಅದು ಅತ್ಯಂತ ದುರ್ಬಲ ಘಟಕವಾಗಿದೆ. ಜಿಲ್ಲೆಯ ಕಾಂಗ್ರೆಸ್ ಮುಖಂಡರಲ್ಲಿ ಒಗ್ಗಟ್ಟಿನ ಕೊರತೆ ಇದಕ್ಕೆ ಮುಖ್ಯ ಕಾರಣ’ ಎಂದರು.

• ‘ಬುದ್ಧಿ ಕಸರತ್ತಿನ ವಿಕೃತ ಕೃತಿಗಳಿಂದ ಜನಪದ ಕಲೆಗೆ ಅಪಚಾರ’

ಧಾರವಾಡ, ಫೆ. 5– ‘ಇತ್ತೀಚೆಗೆ ಜನಪದ ಸಾಹಿತ್ಯ, ಕಲೆಗಳ ಸತ್ವಹೀನ ಅನುಕರಣೆಯ ಕೃತಿಗಳು ಹೊರಬರುತ್ತಿವೆ. ಗ್ರಾಮ ಜೀವನದ, ಸಂಘಜೀವನದ ಅನುಭವವಿಲ್ಲದೆ ಬುದ್ಧಿಶಕ್ತಿಯ ಕಸರತ್ತಿನಿಂದ ಹೊರಬರುವ ಈ ವಿಕೃತ ಕೃತಿಗಳು ಜನಪದ ಕಲಾಪರಂಪರೆಗೇ ಅಪಚಾರ ಮಾಡಿದಂತೆ. ಆಧುನಿಕ ಅವಶ್ಯಕತೆಗಳಿಗೆ ಜನಪದ ಕಲಾಸಂಪತ್ತನ್ನು ಅಳವಡಿಸಿಕೊಳ್ಳುವಾಗ ಈ ಬೇರಿಲ್ಲದ ಬೆಳವಣಿಗೆಯ ಬಗೆಗೆ ಜಾಗೃತರಾಗಿರುವುದು ಅಗತ್ಯ’ ಎಂದು ಮುಖ್ಯಮಂತ್ರಿ ದೇವರಾಜ ಅರಸು ನುಡಿದರು.

ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಆಶ್ರಯದಲ್ಲಿ ಏರ್ಪಡಿಸಿರುವ ಎರಡು ದಿನಗಳ ಜನಪದ ಸಮ್ಮೇಳನ ಉದ್ಘಾಟಿಸಿ ಮಾತನಾಡಿದರು.

ವೈಯಕ್ತಿಕ ದತ್ತಾಂಶ ದುರ್ಬಳಕೆಯು 2010ರಿಂದಲೂ ವ್ಯಾಪಕವಾಗಿ ಅರಿವಿಗೆ ಬಂದಿದೆ

ಡಿಜಿಟಲ್ ದತ್ತಾಂಶ: ಭಾರತದ ಮಾದರಿ

ವಿಶ್ಲೇಷಣೆ

ರಾಜೀವ್ ಚಂದ್ರಶೇಖರ್

ಭಾರತವು ದತ್ತಾಂಶ ಸುರಕ್ಷತೆಗೆ ಸಂಬಂಧಿಸಿದ ಶಾಸನವನ್ನು ರೂಪಿಸುತ್ತಿರುವ ಸಂದರ್ಭದಲ್ಲಿ ಕೃತಕ ಬುದ್ಧಿಮತ್ತೆ (ಎ.ಐ) ಬೃಹತ್ ಸ್ವರೂಪ ಪಡೆದುಕೊಂಡಿದೆ. ತನ್ನ ಜೊತೆ ಅದು ಖಾಸಗಿತನವನ್ನು ಅತಿಕ್ರಮಿಸುವ ತಂತ್ರಜ್ಞಾನವನ್ನು ಹೊತ್ತುತಂದಿದೆ. ಜನವರಿ 28 ಅನ್ನು ವಿಶ್ವವು ದತ್ತಾಂಶಗಳ ಖಾಸಗಿತನದ ದಿನವನ್ನಾಗಿ ಆಚರಿಸಿತು. ಭಾರತದಲ್ಲಿ ದತ್ತಾಂಶದ ಖಾಸಗಿತನವು ಬಹಳಷ್ಟು ಹೋರಾಟದ ನಂತರ ದಕ್ಕಿದೆ. ಈಗ ಅದು ಮೂಲಭೂತ ಹಕ್ಕುಗಳಲ್ಲಿ ಒಂದು.

ದೇಶದ ಪ್ರತಿ ಪ್ರಜೆಗೂ ಮೂಲಭೂತ ಹಕ್ಕುಗಳು ಇರಬೇಕು, ಪ್ರತಿ ಪ್ರಜೆಯೂ ಆ ಹಕ್ಕುಗಳನ್ನು ಸಮಾನವಾಗಿ ಅನುಭವಿಸುವಂತಿರಬೇಕು ಎಂಬ ಆಲೋಚನೆಯ ಆಧಾರದಲ್ಲಿ ನಮ್ಮ ಸಂವಿಧಾನವನ್ನು ರೂಪಿಸಲಾಗಿದೆ. ಸಮಕಾಲೀನ ಆಧುನಿಕ ಪ್ರಜಾತಂತ್ರ ವ್ಯವಸ್ಥೆಗಳಲ್ಲಿ ಖಾಸಗಿತನಕ್ಕೆ ಸಂಬಂಧಿಸಿದ ಚರ್ಚೆಯು ಹೊಸದು. ಖಾಸಗಿತನವನ್ನು ಮೂಲಭೂತ ಹಕ್ಕಾಗಿ ಪರಿಗಣಿಸುವುದಕ್ಕೆ ರಾಷ್ಟ್ರದ ಭದ್ರತೆ ಮತ್ತು ಅದೇ ಬಗೆಯ ಇತರ ಸಾರ್ವಜನಿಕ ಹಿತಾಸಕ್ತಿಗಳ ಆಧಾರದಲ್ಲಿ ವಿರೋಧ ದಾಖಲಾಗಿದೆ. ವ್ಯಕ್ತಿಮಟ್ಟದಲ್ಲಿನ ಖಾಸಗಿತನಕ್ಕಿಂತ ಸಮಷ್ಟಿಯ ಹಿತವು ಹೆಚ್ಚು ಮಹತ್ವದ್ದು ಎಂದು ವಾದಿಸಲಾಗಿದೆ.

ಡಿಜಿಟಲೀಕರಣ ಹಾಗೂ ಸೈಬರ್ ಜಗತ್ತಿನ ಹೃದಯ ಭಾಗದಲ್ಲಿ ಇರುವುದು ದತ್ತಾಂಶ. ದತ್ತಾಂಶ ಆಧಾರಿತ ಅರ್ಥವ್ಯವಸ್ಥೆ ಹಾಗೂ ಉದ್ಯಮಕ್ಕೆ ವೇಗ ನೀಡಿದ್ದೇ ಇದು. ಬಹಳ ವೇಗವಾಗಿ ಬೆಳವಣಿಗೆ ಕಾಣುತ್ತಿರುವ ಹಲವು ಆ್ಯಪ್‌ಗಳು, ಸರ್ಚ್ ಎಂಜಿನ್‌ಗಳು, ಸಾಮಾಜಿಕ ಜಾಲತಾಣ ವೇದಿಕೆಗಳು ಮತ್ತು ವೆಬ್‌ಸೈಟ್‌ಗಳು ತಮ್ಮ ಬಳಕೆದಾರರ ವೈಯಕ್ತಿಕ ಮಾಹಿತಿಯನ್ನು ಸಂಗ್ರಹಿಸುವ, ಅವುಗಳನ್ನು ಅಗತ್ಯ ರೀತಿಯಲ್ಲಿ ಸಂಸ್ಕರಿಸುವ ಕೆಲಸಗಳಲ್ಲಿ ತೊಡಗಿವೆ.

ಬಳಕೆದಾರರು ಯಾರು, ಅವರ ನಿಲುವುಗಳೇನು ಎಂಬುದನ್ನು ಗುರುತಿಸಿ, ಅವರನ್ನು ಗುರಿಯಾಗಿಸಿಕೊಂಡು ಕೆಲವು ಕ್ರಮಗಳನ್ನು ಕೈಗೊಳ್ಳುವುದು ಇಂತಹ ದತ್ತಾಂಶ ಸಂಗ್ರಹಣೆ ಕಾರ್ಯದ ಅತ್ಯಂತ ಕಳವಳಕಾರಿ ಆಯಾಮ. ಖಾಸಗಿತನ, ಮಾಹಿತಿ ಮತ್ತು ದತ್ತಾಂಶದ ಖಾಸಗಿತನದ ಸುತ್ತಲಿನ ಚರ್ಚೆಗಳು ಭಾರಿ ದೊಡ್ಡ ಮಟ್ಟದಲ್ಲಿ ನಡೆಯುವಂತೆ ಆಗಿದ್ದಕ್ಕೆ ಕಾರಣ ಇದುವೇ. ವೈಯಕ್ತಿಕ ದತ್ತಾಂಶವನ್ನು ದುರ್ಬಳಕೆ ಮಾಡಿಕೊಳ್ಳುವ ಸಂಗತಿಯು 2010ರಿಂದಲೂ ವ್ಯಾಪಕವಾಗಿ ಅರಿವಿಗೆ ಬಂದಿದೆ. ಫೇಸ್‌ಬುಕ್–ಕೇಂಬ್ರಿಜ್ ಅನಾಲಿಟಿಕಾ ಪ್ರಕರಣವನ್ನು ಈ ಮಾತಿಗೆ ನಿದರ್ಶನವಾಗಿ ಹೇಳಬಹುದು. ಈ ಪ್ರಕರಣವು ಪ್ರಜಾತಾಂತ್ರಿಕ ಪ್ರಕ್ರಿಯೆಗಳಿಗೆ ಕೂಡ ಎದುರಾಗುವ ಅಪಾಯಗಳನ್ನು ತೋರಿಸಿಕೊಟ್ಟಿತು. ಆನ್‌ಲೈನ್ ಜಗತ್ತಿನಲ್ಲಿ ವೈಯಕ್ತಿಕ ಖಾಸಗಿತನ ಕಾಪಾಡಲು ಶಾಸನದ ಅಗತ್ಯವಿದೆ ಎಂಬ ಬೇಡಿಕೆ ಗಟ್ಟಿಯಾಗಲು ಕಾರಣವಾಯಿತು. ‘ಖಾಸಗಿತನವು ಹಿಂದೆಲ್ಲ ಸಹಜವಾಗಿಯೇ ಇತ್ತು. ಮಾಹಿತಿ ಗುರುತಿಸಿ, ಅದನ್ನು ಕಲೆಹಾಕುವುದು ಕಷ್ಟವಾಗಿತ್ತು. ಆದರೆ ಡಿಜಿಟಲ್ ಜಗದಲ್ಲಿ ಸ್ಪಷ್ಟವಾದ ನಿಯಮಗಳ ಅಗತ್ಯವಿದೆ. ಇದು ಸರ್ಕಾರಗಳಿಗೆ ಮಾತ್ರವಲ್ಲ, ಖಾಸಗಿ ಕಂಪನಿಗಳಿಗೂ ಅನ್ವಯವಾಗುವಂತಿರಬೇಕು’ ಎಂದು ಬಿಲ್ ಗೇಟ್ಸ್ ಹೇಳಿದ್ದಾರೆ. ಖಾಸಗಿತನವು ರಾಜಿ ಮಾಡಿಕೊಳ್ಳಲು ಆಗದಂತಹ ಹಕ್ಕಾಗಿ ಬದಲಾವಣೆ ಕಂಡಿದೆ. ಪ್ರಜಾತಂತ್ರ ವ್ಯವಸ್ಥೆಗಳು ಹೊಸ ಸವಾಲುಗಳ ವಿಚಾರದಲ್ಲಿ ತಮ್ಮ ಜನರಿಗಾಗಿ ಹೇಗೆ ಶಾಸನಗಳನ್ನು ರೂಪಿಸುತ್ತವೆ ಎಂಬುದಕ್ಕೆ ಭಾರತದಲ್ಲಿ ಖಾಸಗಿತನದ ಸುತ್ತ ನಡೆದಿರುವ ಚರ್ಚೆಯು ಒಂದು ನಿದರ್ಶನ. ಇತರ ಪ್ರಜಾತಂತ್ರ ವ್ಯವಸ್ಥೆಗಳಿಗೆ ಇದು ಅಧ್ಯಯನಯೋಗ್ಯ ವಸ್ತು.

ಭಾರತದಲ್ಲಿ ರಾಷ್ಟ್ರ ಮಟ್ಟದ ಡಿಜಿಟಲೀಕರಣ ಯೋಜನೆಯ ಆಲೋಚನೆ ಮೊದಲು ಮೂಡಿದ್ದು 2000ನೆಯ ಇಸವಿಯಲ್ಲಿ, ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಸರ್ಕಾರ ಇದ್ದಾಗ. ನಂತರ ಡಿಜಿಟಲ್ ಗುರುತಿನ ಸಂಖ್ಯೆ ನೀಡುವ ಆಧಾರ್ ಯೋಜನೆಯನ್ನು 2009ರಲ್ಲಿ ಆರಂಭಿಸಲಾಯಿತು. ಆದರೆ ಭಾರಿ ಪ್ರಮಾಣದ ಈ ದತ್ತಾಂಶ ಕೋಶವನ್ನು ರೂಪಿಸುವ ಕೆಲಸವು ಆರಂಭದಿಂದಲೂ ದೋಷಪೂರಿತವಾಗಿತ್ತು. ಸಾರ್ವಜನಿಕರ ಜೊತೆ ಸಮಾಲೋಚನೆ ವ್ಯಾಪಕವಾಗಿ ರಲಿಲ್ಲ, ಪ್ರಜೆಗಳನ್ನು ಈ ಯೋಜನೆ ವ್ಯಾಪ್ತಿಗೆ ಬರುವಂತೆ ಬಲವಂತ ಮಾಡಲಾಯಿತು, ದತ್ತಾಂಶವನ್ನು ಸಂಗ್ರಹಿಸಿ ಇಡುವ ಬಗೆಯು ಬಿಗಿಯಾಗಿರಲಿಲ್ಲ.

ಯೋಜನೆಯ ಚೌಕಟ್ಟು ಬಹಳ ದುರ್ಬಲವಾಗಿದ್ದರೂ 50 ಕೋಟಿಗೂ ಹೆಚ್ಚು ಮಂದಿ ಈ ಯೋಜನೆಯ ವ್ಯಾಪ್ತಿಗೆ ಬಂದರು. ಇದರಿಂದಾಗಿ ಎರಡು ಬಗೆಯ ಸಮಸ್ಯೆಗಳಿಗೆ ಆಧಾರ್ ರಹದಾರಿಯಂತಾಯಿತು – ನಕಲಿ ಗುರುತಿನ ಚೀಟಿಗಳಿಗೆ ಇದು ಅನುವು ಮಾಡಿಕೊಟ್ಟಿತು, ವ್ಯಕ್ತಿಗಳ ಗುರುತಿನ ಚೀಟಿಯ ವಿವರಗಳು ಸೋರಿಕೆಯಾಗುತ್ತಿದ್ದವು. ಅಂದಿನ ಆಡಳಿತ ವ್ಯವಸ್ಥೆಯ ಅಡಿಯಲ್ಲಿ ಆಧಾರ್ ಎಂಬ ಒಳ್ಳೆಯ ಆಲೋಚನೆಯು ಕೆಟ್ಟ ಯೋಜನೆಯಾಗಿ ಪರಿವರ್ತನೆಯಾಗಿತ್ತು. ಹೀಗಾಗಿಯೇ, ಖಾಸಗಿತನ ಮತ್ತು ದತ್ತಾಂಶಗಳ ಸುರಕ್ಷತೆಗೆ ಬಲವಾದ ಆಗ್ರಹಗಳು ಬರಲಾರಂಭಿಸಿದವು. 2010ರಲ್ಲಿ ನಾನು ಖಾಸಗಿತನದ ಹಕ್ಕು ಮಸೂದೆ ಮಂಡಿಸಿದ್ದೆ. ಇದು ಸಂಸತ್ತಿನ ಒಳಗೆ ಮತ್ತು ಹೊರಗೆ ಚರ್ಚೆ ಹುಟ್ಟುಹಾಕಿತು. ‘ಖಾಸಗಿತನಕ್ಕೆ ಸಂಬಂಧಿಸಿದ ಶಾಸನವು ಭಾರತದಲ್ಲಿ ಎಲ್ಲರಿಗೂ ಖಾಸಗಿತನದ ಹಕ್ಕನ್ನು ನೀಡಬೇಕು’ ಎಂದು ನ್ಯಾಯಮೂರ್ತಿ ಅಜಿತ್ ಶಾ 2012ರಲ್ಲಿ ಹೇಳಿದ್ದರು. ಆದರೆ ‘ಖಾಸಗಿತನವು ಬಹಳ ಉಚ್ಚವರ್ಗದವರಿಗೆ ಸಂಬಂಧಿಸಿದ್ದು’, ‘ಆಧಾರ್ ಯೋಜನೆಯಲ್ಲಿ ಖಾಸಗಿತನದ ರಕ್ಷಣೆಯು ಅಂತರ್ಗತವಾಗಿಯೇ ಇದೆ’ ಎಂದು ಹೇಳುತ್ತ ಸರ್ಕಾರವು ನಮ್ಮ ಯತ್ನಗಳಿಗೆ ಅಡ್ಡಿ ಸೃಷ್ಟಿಸುತ್ತಿತ್ತು.

ನ್ಯಾಯಮೂರ್ತಿ ಪುಟ್ಟಸ್ವಾಮಿ ನೇತೃತ್ವದಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ಪಿಐಎಲ್ ಒಂದನ್ನು ಸಲ್ಲಿಸಲಾಯಿತು, ಇದಕ್ಕೆ ನನ್ನ ಬೆಂಬಲವಿತ್ತು, ಇದರಲ್ಲಿ ನಾನೂ ಒಂದು ಅರ್ಜಿಯನ್ನು ಹಾಕಿದ್ದೆ. ಖಾಸಗಿತನವನ್ನು ಮೂಲಭೂತ ಹಕ್ಕನ್ನಾಗಿ ಘೋಷಿಸಬೇಕು ಎಂದು ಕೋರಿದ್ದೆ. 2017ರ ಆಗಸ್ಟ್‌ನಲ್ಲಿ ಕೋರ್ಟ್, ಖಾಸಗಿತನವನ್ನು ಮೂಲಭೂತ ಹಕ್ಕು ಎಂದು ಸಾರಿತು.

ಮುಂದಿನ ಹೆಜ್ಜೆ ದತ್ತಾಂಶ ಸುರಕ್ಷತೆ ಕಾನೂನಿನ ಮೂಲಕ ಈ ಹಕ್ಕಿಗೆ ಸಂಹಿತೆಯ ರೂಪವನ್ನು ಕೊಡುವುದಾಗಿತ್ತು. 2017ರಲ್ಲಿ ಮೂರು ಬಗೆಯ ಡಿಜಿಟಲ್ ನಿಯಂತ್ರಣ ಮಾದರಿಗಳು ಲಭ್ಯವಿದ್ದವು. ಮೊದಲನೆಯದು, ಅಮೆರಿಕದ ಮಾದರಿಯಾಗಿತ್ತು. ಖಾಸಗಿತನವನ್ನು ಗುರುತಿಸಿ ಅದಕ್ಕೆ ಮಾನ್ಯತೆ ನೀಡುವ ಕೆಲಸವನ್ನು ಈ ಮಾದರಿಯು ಮಾರುಕಟ್ಟೆಗಳಿಗೆ ಮತ್ತು ಗ್ರಾಹಕರಿಗೆ ನೀಡಿತ್ತು. ಚೀನಾದ ಮಾದರಿಯಲ್ಲಿ ಹಕ್ಕುಗಳು ಸಂಹಿತೆಯ ರೂಪ ಪಡೆದುಕೊಂಡಿರಲಿಲ್ಲ. ಅಲ್ಲಿ ವೈಯಕ್ತಿಕ ದತ್ತಾಂಶವನ್ನು ಯಾರು ಪರಿಶೀಲಿಸಬಹುದು, ಪ್ರಜೆಗಳಿಗೆ ಖಾಸಗಿತನದ ಹಕ್ಕು ಇದೆಯೇ ಎಂಬುದನ್ನು ಪ್ರಭುತ್ವವು ಕಾಲಕಾಲಕ್ಕೆ ತೀರ್ಮಾನಿಸುತ್ತಿತ್ತು.

ಐರೋಪ್ಯ ಒಕ್ಕೂಟದ ಮಾದರಿಯು ಬಹಳ ವ್ಯಾಪಕವಾಗಿ ಉಲ್ಲೇಖವಾಗುತ್ತಿದ್ದ ದತ್ತಾಂಶ ಸುರಕ್ಷತಾ ಮಾದರಿಯಾಗಿತ್ತು. 2021ರಲ್ಲಿ ನಾನು ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಖಾತೆ ರಾಜ್ಯ ಸಚಿವನಾಗಿ ನೇಮಕಗೊಂಡ ನಂತರ, ಮಸೂದೆಯನ್ನು ಸರಳವಾಗಿ ಪುನರ್‌ರಚಿಸುವ ಕೆಲಸ ಆರಂಭಿಸಿದೆ. ಆರು ತಿಂಗಳಿಗೂ ಕಡಿಮೆ ಅವಧಿಯಲ್ಲಿ ಹೊಸ ಮಸೂದೆ ಸಿದ್ಧವಾಗಿತ್ತು. ಇದನ್ನು ಸಂಸತ್ತಿನಲ್ಲಿ ಮಂಡಿಸಿ 2023ರಲ್ಲಿ ಅಂಗೀಕಾರ ಪಡೆದುಕೊಳ್ಳಲಾಯಿತು. ಈ ಕಾಯ್ದೆಯ ಅನುಷ್ಠಾನಕ್ಕೆ ಬೇಕಿರುವ ನಿಯಮಗಳನ್ನು ಸಮಾಲೋಚನೆಯ ನಂತರ ಈ ತಿಂಗಳಲ್ಲೇ ಅಧಿಸೂಚನೆಯಲ್ಲಿ ಪ್ರಕಟಿಸುವ ನಿರೀಕ್ಷೆ ಇದೆ. ಭಾರತವು ದತ್ತಾಂಶ ಸುರಕ್ಷತೆಯ ಶಾಸನವನ್ನು ರೂಪಿಸಿರುವ ಈ ಸಂದರ್ಭದಲ್ಲಿ ಕೃತಕ ಬುದ್ಧಿಮತ್ತೆಯು ಭಾರಿ ಸ್ವರೂಪದಲ್ಲಿ ಬೆಳೆದುನಿಂತಿದೆ. ಇದು ತನ್ನೊಂದಿಗೆ ಖಾಸಗಿತನವನ್ನು ಅತಿಕ್ರಮಿಸುವ ತಂತ್ರಜ್ಞಾನವನ್ನು, ಮಾದರಿಗಳನ್ನು ಮತ್ತು ಉತ್ಪನ್ನಗಳನ್ನು ಹೊತ್ತುತಂದಿದೆ.

ನಿಯಂತ್ರಣ ಕ್ರಮಗಳು ಹಾಗೂ ಹೊಸತನದ ಅನ್ವೇಷಣೆ ನಡುವಿನ ಅಂತರವು ಇನ್ನಷ್ಟು ಹೆಚ್ಚಾಗುತ್ತಿದೆ. ಎ.ಐ ಆ್ಯಪ್‌ಗಳು, ಉಪಕರಣಗಳು, ಭಾಷಾ ಮಾದರಿಗಳು ಬೃಹತ್ ಪ್ರಮಾಣದ ದತ್ತಾಂಶವನ್ನು ನೆಚ್ಚಿಕೊಂಡು ಕೆಲಸ ಮಾಡುತ್ತವೆ. ದತ್ತಾಂಶ ವ್ಯವಸ್ಥೆಯು ಕಾನೂನಿನ ನಿಯಂತ್ರಣಕ್ಕೆ ಒಳಪಟ್ಟಿಲ್ಲ. ಅಂದರೆ, ವೈಯಕ್ತಿಕವಲ್ಲದ ದತ್ತಾಂಶಗಳ ಸುತ್ತ ಮಾಡಬೇಕಿರುವ ಕೆಲಸಗಳು ಇನ್ನೂ ಹಲವಷ್ಟಿವೆ ಎಂಬುದನ್ನು ಇದು ಹೇಳುತ್ತಿದೆ. ಎ.ಐ ಮಾದರಿಗಳು ಬಳಸಿಕೊಳ್ಳುತ್ತಿರುವುದು ಇಂತಹ ದತ್ತಾಂಶವನ್ನು.

ಭಾರತದ ಡಿಜಿಟಲ್ ವೈಯಕ್ತಿಕ ದತ್ತಾಂಶ ಸುರಕ್ಷತಾ ಕಾಯ್ದೆಯು (ಡಿಪಿಡಿಪಿ ಕಾಯ್ದೆ) ಡಿಜಿಟಲ್ ಜಗತ್ತಿನಲ್ಲಿ ಹೊಸತನಕ್ಕೆ ಉತ್ತೇಜನ ನೀಡುವುದು ಮತ್ತು ನಾಗರಿಕರ ಹಕ್ಕುಗಳನ್ನು ರಕ್ಷಿಸುವುದು ಬೇರೆ ಬೇರೆ ಅಲ್ಲ ಎಂಬುದನ್ನು ಸಾಬೀತು ಮಾಡಿದೆ. ಭಾರತದ ಶಕ್ತಿಶಾಲಿ ಹಾಗೂ ತ್ವರಿತವಾಗಿ ಬೆಳವಣಿಗೆ ಕಾಣುತ್ತಿರುವ ಡಿಜಿಟಲ್ ಅರ್ಥ ವ್ಯವಸ್ಥೆಯಲ್ಲಿ ಇದೊಂದು ಪ್ರಮುಖ ಗುರುತು.

ಲೇಖಕ: ಬಿಜೆಪಿ ಮುಖಂಡ

ಚುರುಮುರಿ

ಮೈಕ್ರೊ ಚಿಪ್ಪು!

• ತುರುವೇಕೆರೆ ಪ್ರಸಾದ್

ಗುದ್ಲಿಂಗ ಹರಟೆಕಟ್ಟೇಲಿ ಪೆನ್ನು, ಪೇಪರ್ ಹಿಡ್ಕೊಂಡು ಕೂತಿದ್ದ. ಕಟ್ಟೆ ಸದಸ್ಯರು ಬಂದೋರು ‘ಏನೋ ಮಾಡ್ತಿದೀಯ?’ ಅಂದ್ರು. ‘ನಮ್ ಇಸ್ಕೂಲ್ ಮೇಷ್ಟ್ರು ಉಡುಗ್ರುಗೆ ಯೂನಿಯನ್ ಡೇ ಮಾಡುಸ್ತಾವ್ರಂತೆ. ಒಂದು ವೊಸ ನಾಟ್ಕ ಬರ್ಕೊಡು ಅಂದ್ರು, ಅದಕ್ಕೇ ಒಂದು ರೀಮಿಕ್ಸ್ ನಾಟಕ ಬರೀತಾ ಇವ್ನಿ’.

‘ಈ ರೀಮಿಕ್ಸ್ ನಾಟಕ ಅಂದ್ರೆ ಯೇನ್ಲಾ?’

‘ಹಾಡುಗಳನ್ನೆಲ್ಲಾ ತುಂಡಾಕಿ ಯಾವ್ದಕ್ಕೆ ಯಾವ್ದನ್ನೋ ಸೇರ್ಸಿ ರೀಮಿಕ್ಸ್ ಮಾಡಕಿಲ್ವಾ? ಅಂಗೇ ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಎಲ್ಲಾ ಕಲ್ಸು ಮ್ಯಾಲೋಗರ ಮಾಡಿ ಒಂದು ಬೆರಕಿ ಜಾನರ್ ನಾಟಕ ಬರೀಬೇಕು ಅಂದ್ಕಂಡಿವ್ನಿ’.

‘ಅದೆಂಗ್ ಮಾಡಕ್ಕಾಯ್ತದೆ?’

‘ಈಗ ಪೌರಾಣಿಕದಲ್ಲಿ, ಪ್ರಹ್ಲಾದಂಗೆ ಕುಡಿಸಕ್ಕೆ ಕಯಾದು ವಿಷದ ಬಾಟ್ಲು ತಕಂಡ್ ಬತ್ತಾಳೆ. ಕುಮಾರ, ನಾನು ಏನು ಕೊಟ್ಟರೂ ಕುಡೀತಿಯಲ್ವಾ? ಅಂತಾಳೆ. ಅದಕ್ಕೆ ಪ್ರಹ್ಲಾದ ಅಮ್ಮ, ವಿಷ ಕೊಟ್ರೂ ಕುಡೀತೀನಮ್ಮ ಅಂತಾನೆ. ಆಗ ಕಯಾದು, ಅಯ್ಯೋ ಮಗನೆ, ಆ ಕೇಜ್ರಿವಾಲು ಯಮುನಾ ನದಿ ನೀರು ಕಳಿಸವ್ರೆ ಅಂದಾಗ ಪ್ರಹ್ಲಾದ, ಅಮ್ಮ ಇದು ರಾಂಗ್ ಡೆಲಿವರಿ, ಪ್ರಹ್ಲಾದ ಜೋಶಿಜೀಗೆ ಹೋಗ್ಬೇಕಾದ್ದು ಅಂತಾನೆ’.

‘ವಾವಾ! ಐತಿಹಾಸಿಕ ಪ್ರಹಸನ ಯಾವುದ್ಲಾ?’

‘ಗೆದ್ದೇಂದ್ರ ಅರಸರೂ ಹಿಟ್ನಾಲ್ ಸಾಮಂತರೂ ಯುದ್ಧಭೂಮಿಯಲ್ಲಿ ನಿಂತವ್ರೆ. ರಾಧಾ ರಮಣನ ಕೃಷ್ಣ ಸಂಧಾನವೂ ವಿಫಲವಾಗಿದೆ. ಆಗ ಅಮಾತ್ಯರು ಓಡಿ ಬರುತ್ತಾರೆ. ‘ಯುದ್ಧ ನಿಲ್ಲಿಸಿ, ನೀವು ಯಾವ ರಾಜ್ಯಕ್ಕಾಗಿ ಯುದ್ಧ ಮಾಡುತ್ತಿದ್ದೀರೋ ಅದು ನಿಮ್ಮದಲ್ಲ. ಈ ರಾಜ್ಯ ಈಸ್ಟ್ ಇಂಡಿಯಾ ಕಂಪನಿಗೂ ಮುಂಚೆ ನಮಗೆ ಸೇರಿದ್ದು’ ಅಂತ ವುಕ್ಸಪ್ಪನೋರು ಹಕ್ಕು ಮಂಡಿಸವ್ರೆ ಎಂದಾಗ, ಇಬ್ರೂ ವಿಮೋಚನೆಗೆ ವಿರುದ್ಧ ದಿಕ್ಕಿನಲ್ಲಿ ದಂಡೆತ್ತಿ ಓಯ್ತಾರೆ ಎಂಗೆ?’

‘ಚಿಂದಿ ಬಿಡ್ಲಾ? ಇನ್ನು ಸಾಮಾಜಿಕ ಸೀನು?’

‘ಅದ್ರಲ್ಲಿ ಒಂದು ಗಂಡು ಪಾತ್ರದ ಸ್ವಗತ, ‘ಎಲ್ಲೆಡೆ ಮೈಕ್ರೊ ವೇವು! ಒಳಗೆ ಮೈಕ್ರೊ ಓವನ್ ಸುಡುತ್ತೆ, ಹೊರಗೆ ಮೈಕ್ರೊ ಫೈನಾನ್ಸ್ ಕಾಡುತ್ತೆ. ಸರ್ವಂ ಮೈಕ್ರೋಮಯಂ. ಅಂಗಾಡಿ ಇಂಗಾಡಿ ಜನರ ಕೈಗೆ ಕೊನೆಗೆ ಸಿಕ್ಕುತ್ತೆ ಮೈಕ್ರೊ ಚಿಪ್ಪು’.

ಸಕತ್ ಕಣ್ಲಾ! ಎಂದು ಎಲ್ಲ ಗುದ್ಲಿಂಗನಿಗೆ ಗುದ್ದಿದರು.

ಸಂಗತ

ಓದುವಿಕೆ: ಹರಿದಿದೆ ಹೊಸ ನೀರು

ಹೊಸ ತಲೆಮಾರಿನವರಲ್ಲಿ ಓದುವಿಕೆ ಕಡಿಮೆಯಾಗಿಲ್ಲ, ಹಲವು ಬೆಳವಣಿಗೆಗಳ ಪ್ರಭಾವದಿಂದ ಅವರು ಓದುವ ವಿಧಾನ ಬದಲಾಗಿದೆ ಅಷ್ಟೆ

• ಪ್ರೊ. ಶಿವಲಿಂಗಸ್ವಾಮಿ ಎಚ್.ಕೆ.

ಓದುವಿಕೆ ಎಂದೊಡನೆ, ‘ಕವಿರತ್ನ ಕಾಳಿದಾಸ’ ಚಿತ್ರದಲ್ಲಿ ಡಿಂಡಿಮ ಕವಿಯು ‘ಕವಿತಾ ಪ್ರೌಢಿಮೆಯು ವಾಗ್ದೇವಿಯ ಭಂಡಾರದ ಬೀಗಮುದ್ರೆಯನ್ನು ತಲೆಯಿಂದ ಕುಟ್ಟಿ ಕೆಡವಿದರಷ್ಟೇ ಲಭ್ಯವಾಗುವುದು’ ಎಂದು ಹೇಳುವ ಮಾತು ನೆನಪಿಗೆ ಬರುತ್ತದೆ. ಈ ಮಾತನ್ನು ಆಳವಾಗಿ ಅರ್ಥೈಸಿದರೆ, ಓದು ಎಂದರೆ ಕಲಿಯುವಿಕೆ, ಅರ್ಥೈಸುವಿಕೆ ಮತ್ತು ಜ್ಞಾನ ಪಡೆಯುವ ಪವಿತ್ರ ಪ್ರಕ್ರಿಯೆ ಎಂಬುದು ತಿಳಿಯುತ್ತದೆ. ಕೇಳುವುದು, ಚಿಂತಿಸುವುದು ಮತ್ತು ಅನುಭವಿಸುವುದು ಕ್ರಮಬದ್ಧ ಓದಿನ ಪ್ರಮುಖ ಅಂಗಗಳು. ಇಂತಹ ಶ್ರದ್ಧಾಪೂರ್ವಕ ಓದುವಿಕೆಯು ವ್ಯಕ್ತಿಯನ್ನು ಬುದ್ಧಿವಂತನನ್ನಾಗಿ ಮಾಡಿ, ತನ್ನ ಜೀವನದ ಅರ್ಥವನ್ನು ಹುಡುಕುವಂತೆ ಮಾಡುತ್ತದೆ ಎಂಬ ನಂಬಿಕೆಯಿದೆ.

ಹೀಗೆ ಓದಿನ ಪ್ರಕ್ರಿಯೆಯ ಕುರಿತಾಗಿ ಬಹಳಷ್ಟು ಸಾಂಪ್ರದಾಯಿಕ ನಿಲುವುಗಳಿವೆ. ಓದುವಿಕೆ ಎಂದರೆ ಬಹಳ ಗಂಭೀರವಾದ ಜ್ಞಾನಸಂಪ್ರಾಪ್ತಿಯ ಚಟುವಟಿಕೆ. ಅದು ಸಾಧ್ಯವಾಗುವುದು, ಪುಸ್ತಕಗಳ ಮುಂದೆ ಶ್ರದ್ಧೆಯಿಂದ ಕುಳಿತು, ಕಾಗದದ ಪ್ರತಿ ಪುಟವನ್ನೂ ಓದಿದಾಗ ಮಾತ್ರ, ಓದು ಒಂದು ಕಠಿಣವಾದ ಬೌದ್ಧಿಕ ಕಸರತ್ತು ಎಂಬುದು ಇಂತಹ ನಿಲುವುಗಳಲ್ಲಿ ಪ್ರಮುಖವಾದವು. ಇವನ್ನು ಆಧಾರವಾಗಿಟ್ಟು ನೋಡಿದರೆ, ಇಂದಿನ ತಲೆಮಾರಿನ ಮಕ್ಕಳು ಓದುವ ಸಂಸ್ಕೃತಿಯಿಂದ ವಿಮುಖರಾಗಿದ್ದಾರೆ ಎನಿಸುವುದು ಸಹಜ. ಇದು ಪೋಷಕರು ಮತ್ತು ಮೇಷ್ಟ್ರುಗಳ ಅಳಲು ಕೂಡ ಆಗಿದೆ. ಓದು ಎಂಬುದು ಹಿಂದಿನ ತಲೆಮಾರುಗಳ ಜೊತೆಯಲ್ಲೇ ಮರೆಯಾಯಿತು ಎಂಬುದು ಎಲ್ಲರ ಬಾಯಲ್ಲಿ ಬರುವ ಮಾತು. ಹಿಂದೆಲ್ಲ, ಓದುವಿಕೆಯು ಗದ್ಯ-ಪದ್ಯಕ್ಕೆ ಮಾತ್ರ ಸೀಮಿತವಾಗಿರದೆ, ಬದುಕಿನ ಸಂದೇಶಗಳು, ಜೀವನದ ಮೌಲ್ಯಗಳು ಮತ್ತು ಜ್ಞಾನವನ್ನು ನೀಡುವ ವಿಶಿಷ್ಟ ಸಾಧನದಂತಿತ್ತು. ಈಗ ಇಂತಹ ಓದಿನ ಸಂಸ್ಕೃತಿ ಸಂಪೂರ್ಣ ಮರೆಯಾಗಿದೆ ಎಂಬ ನಂಬಿಕೆ ಬಲವಾಗಿ ತಳವೂರಿದೆ.

ಹಾಗಾದರೆ ಹೊಸ ತಲೆಮಾರಿನ ವಿದ್ಯಾರ್ಥಿಗಳು ಓದುವುದೇ ಇಲ್ಲವೆ? ಹೀಗೆ ದೂರುವ ಬದಲು, ಅವರ ಆಲೋಚನೆ, ಓದಿನ ಕ್ರಮಗಳು ಮತ್ತು ಅಭ್ಯಾಸಗಳು ಮೂಲಭೂತವಾಗಿ ಬದಲಾಗಿರುವುದನ್ನು ಅರಿತುಕೊಳ್ಳಬೇಕಿದೆ. ತಂತ್ರಜ್ಞಾನ, ಡಿಜಿಟಲ್ ಜಗತ್ತು ಹಾಗೂ ವೇಗದ ಜೀವನಶೈಲಿಯು ಈ ತಲೆಮಾರಿನ ಓದುಗರನ್ನು ಪ್ರಭಾವಿತಗೊಳಿಸುತ್ತಿವೆ. ಈ ಓದುಗರಿಗೆ ಸಾಂಪ್ರದಾಯಿಕ ಓದಿನ ಕ್ರಮಕ್ಕಿಂತ ಹೆಚ್ಚು ವೇಗ, ತಾತ್ಕಾಲಿಕ ಮಾಹಿತಿ ಮತ್ತು ನವೀನ ಆಸಕ್ತಿಗಳ ಬಗ್ಗೆ ಹಸಿವು ಹೆಚ್ಚಾಗಿದೆ. ಓದುವಿಕೆಯು ಹಲವಾರು ಬೆಳವಣಿಗೆಗಳ ಪ್ರಭಾವದಿಂದ ಕಾಲಕ್ಕೆ ತಕ್ಕಂತೆ ಬದಲಾಗುತ್ತಿದೆ.

ಹೊಸ ತಲೆಮಾರಿನ ಓದುಗರು ತಂತ್ರಜ್ಞಾನವನ್ನು ಅಳವಡಿಸಿಕೊಂಡು ಓದುವಿಕೆಯ ಅನುಭವವನ್ನು ತಮ್ಮ ಅನುಕೂಲಕ್ಕೆ ಅನುಗುಣವಾಗಿ ವಿನ್ಯಾಸ ಮಾಡಿಕೊಳ್ಳುತ್ತಿದ್ದಾರೆ. ತ್ವರಿತ ಓದು ಮತ್ತು ಶೀಘ್ರ ಮಾಹಿತಿ ಲಭ್ಯತೆಯ ಹಾದಿಯಲ್ಲಿ ಸಾಗುವ ಓದುಗರು, ಆಳವಾದ ಜ್ಞಾನ ಮತ್ತು ಚಿಂತನೆಗಳಿಗೆ ಅಲಕ್ಷ್ಯ ತೋರುತ್ತಾರೆ ಎಂದು ಅನ್ನಿಸುವುದು ಸಹಜ. ಇಟಾಲಿಯನ್ ಚಿಂತಕ ಫ್ರಾಂಕೊ ಮೊರೆಟ್ಟಿ ‘ಡಿಸ್ಟಂಟ್ ರೀಡಿಂಗ್’ ಎಂಬ ಪರಿಕಲ್ಪನೆಯನ್ನು ಕೆಲ ವರ್ಷಗಳ ಹಿಂದೆ ಪರಿಚಯಿಸಿದ್ದು, ಆಧುನಿಕ ಸಾಹಿತ್ಯ ಅಧ್ಯಯನದಲ್ಲಿ ಅದು ಮಹತ್ವ ಪಡೆದಿದೆ.



ಹಿಂದಿನ ತಲೆಮಾರಿನವರಂತೆ ಒಂದು ಗ್ರಂಥವನ್ನು ಆಳವಾಗಿ ವಿಶ್ಲೇಷಿಸುವ ವಿಧಾನಕ್ಕೆ ಪರ್ಯಾಯವಾಗಿ ಸಾಹಿತ್ಯ ಗ್ರಂಥಗಳನ್ನು ಸಮೂಹವನ್ನಾಗಿ ಪರಿಗಣಿಸಿ, ಅವುಗಳ ರಚನಾ ವಿಧಾನವನ್ನು ಅರ್ಥ ಮಾಡಿಕೊಳ್ಳುವುದು ಡಿಸ್ಟಂಟ್ ರೀಡಿಂಗ್ ಕ್ರಮದ ಉದ್ದೇಶವಾಗಿದೆ. ಇಂದಿನ ತಂತ್ರಜ್ಞಾನ ಈ ರೀತಿಯ ಓದುವಿಕೆಯನ್ನು ಸಾಧ್ಯಗೊಳಿಸಿದೆ. ಹೊಸ ತಲೆಮಾರಿನ ಓದುಗರು ಕಾಗದದ ಪುಸ್ತಕಗಳ ಬದಲಾಗಿ ತಮ್ಮ ಹೆಚ್ಚಿನ ಗಮನವನ್ನು ಇ-ಪುಸ್ತಕಗಳು, ಆಡಿಯೊ ಬುಕ್‌ಗಳು ಮತ್ತು ಡಿಜಿಟಲ್ ಪೋಸ್ಟ್‌ಗಳಿಗೆ ತೋರಿಸುತ್ತಿದ್ದಾರೆ. ಡಿಜಿಟಲ್ ಪ್ಲ್ಯಾಟ್‌ಫಾರ್ಮ್‌ಗಳಲ್ಲಿ ವಿಶ್ವದ ಅಪಾರ ಸಾಹಿತ್ಯವು ಬರೀ ಕೆಲವು ಕ್ಲಿಕ್ಕುಗಳಲ್ಲಿ ಲಭ್ಯ ಇರುತ್ತದೆ. ಹೀಗಾಗಿ, ಹೆಚ್ಚಿನ ಸಂಖ್ಯೆಯ ಪುಸ್ತಕಗಳ ಮೇಲ್ಮಟ್ಟದ ಜ್ಞಾನವನ್ನು ಕಡಿಮೆ ಅವಧಿಯಲ್ಲಿ ಪಡೆಯುವುದು ಓದುಗರ ಆದ್ಯತೆಯಾಗಿರುವುದನ್ನು ಗಮನಿಸಬೇಕಿದೆ.

ಬಹಳಷ್ಟು ಸಾಂಪ್ರದಾಯಿಕ ಚಿಂತಕರಿಗೆ ಈ ವಿಧಾನ ಅಷ್ಟು ತೃಪ್ತಿಕರ ಅನ್ನಿಸುವುದಿಲ್ಲವಾದರೂ ಗಣನೀಯ ಪ್ರಮಾಣದಲ್ಲಿ ವಿದ್ಯಾರ್ಥಿಗಳು ತ್ವರಿತಗತಿಯಲ್ಲಿ ಮಾಹಿತಿಯ ಲಭ್ಯತೆಗಾಗಿ ಡಿಜಿಟಲ್ ಮಾಧ್ಯಮವನ್ನು ಅವಲಂಬಿಸುತ್ತಿದ್ದಾರೆ. ಬೃಹತ್ ಗಾತ್ರದ ಗ್ರಂಥಗಳನ್ನು ಓದಿ ಅವನ್ನು ಆಳವಾದ ಅಧ್ಯಯನ ಮಾಡುವ ವ್ಯವಧಾನ ಇಂದಿನ ತಲೆಮಾರಿನಲ್ಲಿ ಕಣ್ಮರೆಯಾಗಲು ಮೂಲ ಕಾರಣ, ತಂತ್ರಜ್ಞಾನ ಲಭ್ಯಗೊಳಿಸುವ ಬ್ಲಾಗ್‌ಗಳಲ್ಲಿ ಸಿಗುವ ಕಿರು ಲೇಖನಗಳು, ಡಿಜಿಟಲ್ ಕಥೆಗಳು ಮತ್ತು ವಿಡಿಯೊ ದೃಶ್ಯಗಳು. ಇವು ಗ್ರಂಥಾಲಯಗಳಿಗೆ ಹೋಗಿ ಪುಸ್ತಕಗಳನ್ನು ಹುಡುಕುವ ಪರಿಶ್ರಮವನ್ನು ತಪ್ಪಿಸಿ, ಓದುಗರಿಗೆ ಕಡಿಮೆ ಸಮಯದಲ್ಲಿ ಹೆಚ್ಚು ವಿಷಯವನ್ನು ನೀಡುತ್ತಿವೆ. ಹೊಸ ತಲೆಮಾರಿನ ಓದುಗರನ್ನು ವೈಶಿಷ್ಟ್ಯಪೂರ್ಣವಾಗಿ ಆಕರ್ಷಿಸುತ್ತಿವೆ.

ಉನ್ನತ ಶಿಕ್ಷಣ ಸಂಸ್ಥೆಗಳು ಈ ಸಂದರ್ಭದಲ್ಲಿ, ಓದುಗರು ಕಣ್ಮರೆಯಾಗಿದ್ದಾರೆ ಎಂದು ಕೊರಗುವ ಬದಲು, ಹೊಸ ಬಗೆಯ ಓದುಗರನ್ನು ಪರಿಗಣಿಸಿ ತಮ್ಮ ಪಾಠಕ್ರಮಗಳು, ಓದುವ ವಾತಾವರಣ ಮತ್ತು ಕಲಿಕಾ ವಿಧಾನಗಳಲ್ಲಿ ಹೊಸತನ ಅಳವಡಿಸಿಕೊಳ್ಳಲು ಸಜ್ಜಾಗುವುದು ಅವಶ್ಯ.

ವಾಚಕರ ವಾಣಿ

ತೆರಿಗೆ ಹಂಚಿಕೆ: ಮಾನದಂಡ ಬದಲಾಗಲಿ

‘ಕೇಂದ್ರ ಸರ್ಕಾರವು ಹಣಕಾಸು ಆಯೋಗದ ಶಿಫಾರಸಿನ ಮೇರೆಗೆ ತೆರಿಗೆ ಹಂಚಿಕೆ ಮಾಡುತ್ತದೆ. ತೆರಿಗೆ ಹಂಚಿಕೆ ಮಾನದಂಡಗಳ ಬದಲಾವಣೆಗೆ ರಾಜ್ಯಗಳು ಹಣಕಾಸು ಆಯೋಗವನ್ನು ಸಂಪರ್ಕಿಸಬೇಕು’ ಎಂದು, ತೆರಿಗೆ ಹಣ ಹಂಚಿಕೆಯಲ್ಲಿ ಅನ್ಯಾಯ ಆಗುತ್ತಿದೆ ಎಂಬ ದಕ್ಷಿಣದ ರಾಜ್ಯಗಳ ಕಳವಳಕ್ಕೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಪ್ರತಿಕ್ರಿಯಿಸಿದ್ದಾರೆ (ಪ್ರ.ವಾ., ಫೆ. 4). ಹಣಕಾಸು ಆಯೋಗವು ತೆರಿಗೆ ವರಮಾನವನ್ನು ವಿಂಗಡಿಸಲು ಬಳಸುವ ಮಾನದಂಡಗಳಲ್ಲಿ ಜನಸಂಖ್ಯೆಯೂ ಒಂದು. ಆದರೆ, ಕುಟುಂಬ ಯೋಜನೆಯ ಯಶಸ್ವಿ ಅನುಷ್ಠಾನದಿಂದಾಗಿ ದಕ್ಷಿಣದ ರಾಜ್ಯಗಳ ಜನಸಂಖ್ಯೆಯ ಬೆಳವಣಿಗೆ ದರ ಕುಸಿತ ಕಂಡಿದೆ. ಹಾಗಿದ್ದರೆ, ಈ ದಿಸೆಯಲ್ಲಿ ಕೇಂದ್ರ ಸರ್ಕಾರವೇ ರೂಪಿಸಿರುವ ಯೋಜನೆಯನ್ನು ಯಶಸ್ವಿಯಾಗಿಸಿರುವುದಕ್ಕಾಗಿ ದಕ್ಷಿಣದ ರಾಜ್ಯಗಳಿಗೆ ಅನುದಾನ ಕಡಿಮೆ ಕೊಡುವಂತಹ ಶಿಕ್ಷೆ ನೀಡುವುದು ಎಷ್ಟರಮಟ್ಟಿಗೆ ಸರಿ? ಕುಟುಂಬ ಯೋಜನೆಯಿಂದ ಫಲವಂತಿಕೆ ದರ ಕಡಿತಗೊಂಡಿದ್ದರೂ ಆ ರಾಜ್ಯಗಳಿಂದಲೇ ಕೇಂದ್ರ ಸರ್ಕಾರಕ್ಕೆ ಹೆಚ್ಚು ಆದಾಯ ಬರುತ್ತಿದೆ. ಈ ಯೋಜನೆಯನ್ನು ಅಷ್ಟಾಗಿ ಯಶಸ್ವಿಗೊಳಿಸದ ಉತ್ತರದ ರಾಜ್ಯಗಳಲ್ಲಿ ಜನಸಂಖ್ಯೆಯ ಬೆಳವಣಿಗೆ ದರ ತುಲನಾತ್ಮಕವಾಗಿ ಹೆಚ್ಚಾಗಿದ್ದರೂ ತೆರಿಗೆ ಸಂಗ್ರಹದ ಪ್ರಮಾಣವು ದಕ್ಷಿಣದ ರಾಜ್ಯಗಳಿಗಿಂತ ಕಡಿಮೆ ಇದೆ. ಈ ಮೂಲಕ ದಕ್ಷಿಣದ ರಾಜ್ಯಗಳ ಜನರ ಶ್ರಮದ ಫಲವನ್ನು ಉತ್ತರದ ರಾಜ್ಯಗಳಿಗೆ ಹಂಚುತ್ತಿರುವುದು ನ್ಯಾಯಸಮ್ಮತವಲ್ಲ.

ಜನಸಂಖ್ಯೆಯ ಪ್ರಮಾಣಕ್ಕೆ ಅನುಗುಣವಾಗಿ ತೆರಿಗೆ ಸಂಗ್ರಹ ಆಗದಿರುವುದನ್ನು ಗಮನಿಸಿದರೆ, ಅಲ್ಲಿನ ರಾಜ್ಯಗಳಲ್ಲಿ ತೆರಿಗೆ ಸೋರಿಕೆ ಹೆಚ್ಚಿನ ಪ್ರಮಾಣದಲ್ಲಿದೆ ಎಂದರ್ಥ. ಸರ್ಕಾರದ ಒಂದು ಪ್ರಮುಖ ಯೋಜನೆಯ ಅನುಷ್ಠಾನದಲ್ಲಿನ ಸೋಲು ಮತ್ತು ತೆರಿಗೆ ಸಂಗ್ರಹದಲ್ಲಿ ಆಗುತ್ತಿರುವ ಸೋರಿಕೆಯನ್ನು ಅಲ್ಲಿನ ಸರ್ಕಾರಗಳ ವೈಫಲ್ಯ ಎಂದು ಪರಿಗಣಿಸಬೇಕಾಗುತ್ತದೆ. ಅದಕ್ಕಾಗಿ ಅವುಗಳನ್ನು ದಂಡಿಸುವ ಬದಲು ಹಣಕಾಸು ಆಯೋಗ ಮತ್ತು ಕೇಂದ್ರ ಸರ್ಕಾರವು ಬಹುಮಾನವಾಗಿ ಹೆಚ್ಚಿನ ಪ್ರಮಾಣದಲ್ಲಿ ತೆರಿಗೆ ಹಂಚಿಕೆಯನ್ನು ಮಾಡುವ ಮಾನದಂಡ ಇಟ್ಟುಕೊಂಡಿರುವುದೇ ಸರಿಯಲ್ಲ. ಇದರಿಂದ ದಕ್ಷಿಣದ ರಾಜ್ಯಗಳು ಉತ್ತರದ ರಾಜ್ಯಗಳನ್ನು ಅನುಕರಣೆ ಮಾಡಲು ಉತ್ತೇಜಿಸಿದಂತೆ ಆಗುತ್ತದೆ. ಈ ಮಾನದಂಡ ಅನ್ಯಾಯದ ಪರಮಾವಧಿ.

ಕೆ.ಎಂ.ನಾಗರಾಜು, ಮೈಸೂರು

ಕಾಲ್ತುಳಿತ: ಹೃದಯಹೀನ ಹೇಳಿಕೆ ತರವೇ?

ಮಹಾಕುಂಭಮೇಳದಲ್ಲಿ ಇತ್ತೀಚೆಗೆ ಸಂಭವಿಸಿದ ಕಾಲ್ತುಳಿತದಲ್ಲಿ 30 ಭಕ್ತರು ಸಾವಿಗೀಡಾಗಿರುವುದಕ್ಕೆ ಸಂಸದೆ ಹೇಮಾಮಾಲಿನಿ ಅವರು ‘ಕುಂಭಮೇಳದಲ್ಲಿ ನಡೆದ ಕಾಲ್ತುಳಿತ ದೊಡ್ಡ ಘಟನೆ ಏನಲ್ಲ, ಆದರೆ ದೊಡ್ಡದಾಗಿ ಬಿಂಬಿಸಲಾಗುತ್ತಿದೆ’ ಎಂದು ಪ್ರತಿಕ್ರಿಯಿಸಿರುವುದು ದುರದೃಷ್ಟಕರ. ಅಂದರೆ ಹೆಚ್ಚು ಮಂದಿ ಸತ್ತಾಗ ಮಾತ್ರ ಅದಕ್ಕೆ ಮಹತ್ವ ಇರುತ್ತದೆ ಎನ್ನುವ ಅರ್ಥದ ಹೇಳಿಕೆಯು ಕಾಲ್ತುಳಿತದಿಂದ ಪ್ರಾಣ ತೆತ್ತವರನ್ನು ಅವಹೇಳನ ಮಾಡುವಂತಿದೆ. ಜೀವಕ್ಕೆ ಬೆಲೆ ಕೊಡದ, ಸಹಾನುಭೂತಿ, ಮಾನವೀಯತೆಯ ಅಂತಃಕರಣ ಇಲ್ಲದ ಇಂತಹ ಹೃದಯಹೀನ ಸಂಸದರಿಂದ ಹೆಚ್ಚಿನದನ್ನು ನಿರೀಕ್ಷಿಸಲು ಸಾಧ್ಯವಿಲ್ಲ.

ಶಾಂತಕುಮಾರ್, ಸರ್ಜಾಪುರ

ಧರ್ಮದ ವ್ಯಾಖ್ಯಾನ ಸ್ಪಷ್ಟಪಡಿಸಲಿ

‘ಧರ್ಮ, ಗೋಮಾತೆಯನ್ನು ಮರೆತಿರುವುದರಿಂದ ದೇಶಕ್ಕೆ ಅಪಾಯ ಎದುರಾಗಿದೆ. ಗೋಮಾತೆಯನ್ನು ಕಡಿಯುವವರ ಕೈ ಕಡಿಯುವ ತೀರ್ಮಾನ ಮಾಡೋಣ’ ಎಂದು ಕ್ರಾಂತಿವೀರ ಬ್ರಿಗೇಡ್‌ನ ರಾಜ್ಯ ಸಂಚಾಲಕ ಕೆ.ಎಸ್.ಈಶ್ವರಪ್ಪ ಕರೆ ನೀಡಿರುವುದಾಗಿ ವರದಿಯಾಗಿದೆ (ಪ್ರ.ವಾ., ಫೆ. 5). ಮೊದಲಿಗೆ, ಅವರ ಪ್ರಕಾರ ಧರ್ಮ ಎಂದರೆ ಏನು? ಕೇಸರಿ ಶಲ್ಯ ಹಾಕುವುದು, ಹಣೆಯ ಮೇಲೆ ಕುಂಕುಮ, ಕೈಗಳಿಗೆ ಬಣ್ಣ ಬಣ್ಣದ ದಾರ ಕಟ್ಟಿಕೊಳ್ಳುವುದು ಧರ್ಮವೇ? ಒಂದು ನಿರ್ದಿಷ್ಟ ಸಮುದಾಯವನ್ನು ವಿರೋಧಿಸುವುದು ಧರ್ಮವೇ? ಧರ್ಮ ಅವರವರ ಅಂತರಂಗಕ್ಕೆ ಸೇರಿದ್ದೋ ಬಹಿರಂಗ ಆಚರಣೆಗೆ ಸೇರಿದ್ದೋ? ಈ ಕುರಿತು ಈಶ್ವರಪ್ಪ ಅವರು ಸ್ಪಷ್ಟವಾಗಿ ತಿಳಿಸಲಿ.

ಇನ್ನು ಎರಡನೆಯದಾಗಿ, ‘ಗೋಮಾತೆ ಕಡಿಯುವವರ ಕೈ ಕಡಿಯಿರಿ’ ಎಂದಿದ್ದಾರೆ. ಹಾಗಾದರೆ ಗೋಮಾಂಸ ರಫ್ತು ಮಾಡುವವರಿಗೆ ಕೈ ಮುಗಿಯಬೇಕೆ? ರಾಜಕಾರಣಿಯಾಗಿ ತಮ್ಮನ್ನು ರೂಪಿಸಿದ ಪಕ್ಷದ ನೇತೃತ್ವದ ಸರ್ಕಾರವೇ ಕೇಂದ್ರದಲ್ಲಿದೆ. ಕೆಲವು ರಾಜ್ಯಗಳಲ್ಲಿ ಗೋಹತ್ಯಾ ನಿಷೇಧದ ಕಾಯ್ದೆಯೂ ಇದೆ. ಆದಾಗ್ಯೂ ದೇಶದಿಂದ ವಿದೇಶಗಳಿಗೆ ಗೋಮಾಂಸ ರಫ್ತು ಮಾಡುತ್ತಿರುವವರ ವಿರುದ್ಧ ಏನು ಕ್ರಮ ತೆಗೆದುಕೊಳ್ಳಲಾಗಿದೆ? ಪ್ರಪಂಚದಾದ್ಯಂತ ಗೋಮಾಂಸ ರಫ್ತು ಮಾಡುತ್ತಿರುವ ಬೇರೆ ಬೇರೆ ದೇಶಗಳಲ್ಲಿ ಭಾರತದ ಸ್ಥಾನವೂ ದೊಡ್ಡದಿದೆ. ಬಾಗಿಲಿನ ಮೂಲಕ ಸಾಗುತ್ತಿರುವ ಕಳ್ಳರನ್ನು ಬಿಟ್ಟು, ಕಿಟಕಿ ಕಳ್ಳರನ್ನು ಹಿಡಿಯಲು ಪ್ರಚೋದನೆ ಮಾಡಿ, ಸ್ಥಳೀಯರನ್ನು ಎತ್ತಿ ಕಟ್ಟುವುದು ಸರಿಯಲ್ಲ.

ತಾ.ಸಿ.ತಿಮ್ಮಯ್ಯ, ಬೆಂಗಳೂರು

ಅಸಾಂವಿಧಾನಿಕ, ಅವೈಜ್ಞಾನಿಕ ನಡೆ

ತುಮಕೂರು ಜಿಲ್ಲೆಯ ಕೊರಟಗೆರೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಆವರಣದಲ್ಲಿ ಸರಸ್ವತಿದೇವಿ ವಿಗ್ರಹ ಪ್ರತಿಷ್ಠಾಪಿಸಲಾಗಿದ್ದು, ಮುಂಜಾನೆಯಿಂದಲೇ ಆಗಮಿಕರು ಪೂಜೆ, ಹೋಮ, ಹವನ ಹಾಗೂ ಅಭಿಷೇಕ ಕಾರ್ಯಕ್ರಮ ಹಮ್ಮಿಕೊಂಡಿದ್ದಾಗಿ ವರದಿಯಾಗಿದೆ (ಪ್ರ.ವಾ., ಫೆ. 4). ಇದೊಂದು ಅಸಾಂವಿಧಾನಿಕ, ಅವೈಜ್ಞಾನಿಕ ಹಾಗೂ ಅವೈಚಾರಿಕ ನಡೆ. ಸರ್ಕಾರಿ ಕಾಲೇಜಿನಲ್ಲಿ ಸಂವಿಧಾನದ ಧರ್ಮನಿರಪೇಕ್ಷ ತತ್ವಕ್ಕೆ ವಿರುದ್ಧವಾದ ಕಾರ್ಯವನ್ನು ನಡೆಸಿದ್ದು ಎಷ್ಟರಮಟ್ಟಿಗೆ ಸರಿ? ಗ್ರಾಮೀಣ ಭಾಗದ ವಿದ್ಯಾರ್ಥಿಗಳೇ ಹೆಚ್ಚು ಕಲಿಯುತ್ತಿರುವ ಕಾಲೇಜಿನಲ್ಲಿ ಯಾವುದೇ ಖಾಸಗಿ ಕಾಲೇಜಿಗೆ ಕಡಿಮೆ ಇಲ್ಲದಂತೆ ಸೌಲಭ್ಯಗಳನ್ನು ಒದಗಿಸಿರುವುದು ಕಾಲೇಜು ಅಭಿವೃದ್ಧಿ ಸಮಿತಿಯವರ ಪ್ರಶಂಸಾರ್ಹ ಕಾರ್ಯ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಕಾಲೇಜಿನ ವಾತಾವರಣ ಧರ್ಮಾತೀತವೂ ಮತಾತೀತವೂ ಜಾತ್ಯತೀತವೂ ಆಗಿರಬೇಕಲ್ಲವೆ? ಎಲ್ಲ ಮತ ಧರ್ಮದವರೂ ಕಲಿಯುವ ಸರ್ಕಾರಿ ಸಂಸ್ಥೆಯಲ್ಲಿ ಇಂತಹ ಧಾರ್ಮಿಕ ಆಚರಣೆಗೆ ಅವಕಾಶ ಕಲ್ಪಿಸಿದವರಿಗೆ ನಮ್ಮ ಸಂವಿಧಾನದ ಆಶಯದ ಅರಿವಿಲ್ಲದೇ ಹೋದದ್ದು ಶೋಚನೀಯ.

‘ಕಲಿಕಾ ಸ್ಥಳದಲ್ಲಿ ಶ್ರದ್ಧಾ ಭಕ್ತಿ ಮೂಡಲಿ ಎಂಬ ಮಹದಾಸೆಯಿಂದ ಮೂರ್ತಿ ಪ್ರತಿಷ್ಠಾಪನೆ ಮಾಡಲಾಗಿದೆ’ ಎಂಬ ಪ್ರಾಂಶುಪಾಲ ಈರಪ್ಪ ನಾಯ್ಕ ಅವರ ಮಾತು, ಅವರ ಮುಗ್ಧತೆ ಅಥವಾ ಅವೈಚಾರಿಕತೆಯ ದ್ಯೋತಕವಾಗಿದೆ. ಕ್ರಮಬದ್ಧವಾದ ಪಾಠಪ್ರವಚನ, ಶಿಸ್ತು, ಸ್ವಚ್ಛತೆ, ಸಮಾನತೆ, ಗುರುಗಳು– ವಿದ್ಯಾರ್ಥಿಗಳ ನಡುವಿನ ಮಾನವೀಯ ಸಂವೇದನೆ ಹಾಗೂ ಕರ್ತವ್ಯಪ್ರಜ್ಞೆಯಂತಹ ಶೈಕ್ಷಣಿಕ ವಾತಾವರಣದ ನಿರ್ಮಾಣದಿಂದ ಮಾತ್ರ ಕಲಿಕಾ ಸ್ಥಳದಲ್ಲಿ ಶ್ರದ್ಧಾ ಭಕ್ತಿ ಮೂಡಲು ಸಾಧ್ಯ.

ಪು.ಸೂ.ಲಕ್ಷ್ಮೀನಾರಾಯಣ ರಾವ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಅಮೆರಿಕ ದುಬಾರಿ ಕನಸು

ಅಮೆರಿಕ-ಮೆಕ್ಸಿಕೊ ಗಡಿಯನ್ನು ಅಕ್ರಮವಾಗಿ ದಾಟಿದ ನಂತರ ಅಮೆರಿಕದ ಗಡಿ ಕಾವಲು ಪಡೆಯ ಪರಿಶೀಲನೆಗಾಗಿ ಸರದಿಯಲ್ಲಿ ಕಾಯುತ್ತಿರುವ ವಲಸಿಗರು -ಎಎಫ್‌ಪಿ ಚಿತ್ರ

ಅಮೆರಿಕದ ಕನಸು ಅನೇಕ ಭಾರತೀಯರ ಪಾಲಿಗೆ ದುಃಸ್ವಪ್ನವಾಗುತ್ತಿದೆ. ಡೊನಾಲ್ಡ್ ಟ್ರಂಪ್ ಅವರು ಅಕ್ರಮ ವಲಸಿಗರನ್ನು ದೇಶದಿಂದ ಹೊರಗೆ ಕಳುಹಿಸುವ ಕಾರ್ಯಕ್ಕೆ ಚಾಲನೆ ನೀಡಿದ್ದು, ಭಾರತಕ್ಕೆ ಮೊದಲ ವಿಮಾನ ಬಂದು ತಲುಪಿದೆ. ವೀಸಾ ಪಡೆದು ಶಿಕ್ಷಣ, ಉದ್ಯೋಗಕ್ಕಾಗಿ ಅಮೆರಿಕಕ್ಕೆ ಹೋಗಿ, ಅವಧಿ ಮುಗಿದ ನಂತರವೂ ಅಲ್ಲೇ ಇರುವವರು, ಹಲವು ರೀತಿಯ ಪಾಡು ಪಟ್ಟು, ಭಾರಿ ಸಾಹಸ ಮಾಡಿ ಅಕ್ರಮ (ಡಂಕಿ) ಮಾರ್ಗದ ಮೂಲಕ ಹೋದವರು ತಮ್ಮ ಊರಿಗೆ ಮರಳಬೇಕಾಗಿದೆ

ಪ್ರಜಾವಾಣಿ ವಾರ್ತೆ

ಅಕ್ರಮವಾಗಿ ಅಮೆರಿಕ ಪ್ರವೇಶಿಸಿದ್ದರು ಎನ್ನಲಾದ ವಿದೇಶಿಯರನ್ನು ಅವರ ದೇಶಗಳಿಗೆ ಕಳುಹಿಸುವುದಕ್ಕೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮುಂದಾಗಿದ್ದು, ಇದರ ಭಾಗವಾಗಿ 104 ಭಾರತೀಯರನ್ನು ಟ್ರಂಪ್ ಸರ್ಕಾರ ಬುಧವಾರ ಸೇನಾ ವಿಮಾನದಲ್ಲಿ ಪಂಜಾಬ್‌ನ ಅಮೃತಸರಕ್ಕೆ ತಂದು ಇಳಿಸಿದೆ. ಇದು ಆರಂಭ ಮಾತ್ರ ಎನ್ನಲಾಗುತ್ತಿದೆ.

ಅಮೆರಿಕಕ್ಕೆ ಹೋಗುವುದು, ಅಲ್ಲಿ ಕೆಲಸ ಗಳಿಸುವುದು, ಅಲ್ಲಿನ ಪ್ರಜೆ ಆಗುವುದು ಕೋಟ್ಯಂತರ ಭಾರತೀಯರ ಕನಸು. ಅದಕ್ಕೆ ಅಲ್ಲಿನ ಜೀವನ ಶೈಲಿ, ಉತ್ತಮ ಸಂಬಳ ಆಕರ್ಷಣೆಯಾಗಿವೆ. ಅದರಲ್ಲೂ ಮಾಹಿತಿ ತಂತ್ರಜ್ಞಾನ ಓದಿದ ಮತ್ತು ಓದುತ್ತಿರುವ ಬಹುತೇಕರ ದೃಷ್ಟಿ ಅಮೆರಿಕದತ್ತಲೇ ನೆಟ್ಟಿರುತ್ತದೆ. ಅಲ್ಲಿಗೆ ಅಧಿಕೃತವಾಗಿ ಹೋಗಿ, ನೆಲಸಲು ಅವಕಾಶ ಸಿಗುವುದು ಕೆಲವರಿಗೆ ಮಾತ್ರ. ಎಚ್‌1ಬಿ ಸೇರಿದಂತೆ ವಿವಿಧ ರೀತಿಯ ವೀಸಾ ಪಡೆದವರು ಅಧಿಕೃತ ಮಾರ್ಗದ ಮೂಲಕ ಅಮೆರಿಕಕ್ಕೆ ಉದ್ಯೋಗ, ಶಿಕ್ಷಣಕ್ಕಾಗಿ ಹೋಗುತ್ತಾರೆ.

ಅಮೆರಿಕದಲ್ಲಿರುವ ಅತಿ ಹೆಚ್ಚು ಮಂದಿ ವಲಸಿಗರ ಪೈಕಿ ಮೆಕ್ಸಿಕನ್ನರು ಮೊದಲ ಸ್ಥಾನದಲ್ಲಿದ್ದರೆ, ಭಾರತೀಯರು ಎರಡನೇ ಸ್ಥಾನದಲ್ಲಿದ್ದಾರೆ. ಎಚ್‌1ಬಿ ವೀಸಾ ಅಡಿ ಅಮೆರಿಕ ಪ್ರವೇಶಿಸುವವರ ಪೈಕಿ ಭಾರತೀಯರು ಮೊದಲ ಸ್ಥಾನದಲ್ಲಿದ್ದು, ಶೇ 72ರಷ್ಟಿದ್ದಾರೆ. ನಂತರದ ಸ್ಥಾನದಲ್ಲಿ ಚೀನಾದವರು (ಶೇ 12ರಷ್ಟು) ಇದ್ದಾರೆ. ಈ ಹಿಂದೆ ಚೀನಾದಿಂದ ಅತಿ ಹೆಚ್ಚು ವಿದ್ಯಾರ್ಥಿಗಳು ಅಮೆರಿಕಕ್ಕೆ ಶಿಕ್ಷಣಕ್ಕಾಗಿ ತೆರಳುತ್ತಿದ್ದರು. ಈಗ ಭಾರತವು ಚೀನಾವನ್ನು ಹಿಂದಿಕ್ಕಿದ್ದು, 2023–24ರಲ್ಲಿ ಅಮೆರಿಕಕ್ಕೆ ವ್ಯಾಸಂಗ ಮಾಡಲು ಹೋದ ಭಾರತೀಯ ವಿದ್ಯಾರ್ಥಿಗಳ ಸಂಖ್ಯೆ 3,31,602.

ಭಾರತದಿಂದಷ್ಟೇ ಅಲ್ಲ, ಜಗತ್ತಿನ ಹಲವು ದೇಶಗಳಿಂದ ಜನರು ಅಕ್ರಮವಾಗಿ ಅಮೆರಿಕಕ್ಕೆ ಹೋಗುತ್ತಾರೆ. ಟ್ರಂಪ್ ಆಡಳಿತ ಸದ್ಯ ಗುರುತಿಸಿರುವ, ಭಾರತದಿಂದ ಅಮೆರಿಕಕ್ಕೆ ತೆರಳಿರುವ ಅಕ್ರಮ ವಲಸಿಗರ ಸಂಖ್ಯೆ 17,940. ಆದರೆ, ಅವರಷ್ಟೇ ಅಲ್ಲ. ಪ್ಯೂ ರಿಸರ್ಚ್ ಸೆಂಟರ್ ಪ್ರಕಾರ, ಭಾರತದಿಂದ ಅಕ್ರಮವಾಗಿ ಅಮೆರಿಕಕ್ಕೆ ವಲಸೆ ಹೋದವರ ಸಂಖ್ಯೆ 7.25 ಲಕ್ಷ (2022ರ ಅಂಕಿಅಂಶ). ಮೆಕ್ಸಿಕೊ, ಎಲ್ ಸಾಲ್ವಡಾರ್ ನಂತರ ಅಮೆರಿಕದಲ್ಲಿರುವ ಅಕ್ರಮ ವಲಸಿಗರ ಸಂಖ್ಯೆಯಲ್ಲಿ ಭಾರತ ಮೂರನೇ ಸ್ಥಾನದಲ್ಲಿದೆ. ಹೀಗೆ ಹೋದವರು ಗ್ರೀನ್ ಕಾರ್ಡ್ ಪಡೆಯುವ ತನಕ ಅಕ್ರಮ ವಲಸಿಗರಾಗಿಯೇ ಬದುಕಬೇಕಾಗುತ್ತದೆ. ಗ್ರೀನ್ ಕಾರ್ಡ್ ಪಡೆಯುವುದು ದೀರ್ಘಾವಧಿಯ, ಅನಿಶ್ಚಿತವಾದ ಹಾಗೂ ಭಾರಿ ತ್ರಾಸದಾಯಕ ಕೆಲಸ.

ಶಿಕ್ಷಣ, ಉದ್ಯೋಗಕ್ಕಾಗಿ ಅಮೆರಿಕಕ್ಕೆ ಹೋದವರು ತಮ್ಮ ವೀಸಾ ಅವಧಿ ಮುಗಿದ ಮೇಲೂ ಅಲ್ಲಿಯೇ ಇದ್ದರೆ, ಅವರು ಅಕ್ರಮ ವಲಸಿಗರೆನಿಸಿಕೊಳ್ಳುತ್ತಾರೆ. ವೀಸಾ ಇಲ್ಲದೇ ಅಮೆರಿಕಕ್ಕೆ ಹೋಗುವ ಇನ್ನೊಂದು ಮಾರ್ಗ ಇದೆ. ಅದನ್ನು ಅಕ್ರಮ ಮಾರ್ಗ (ಡಂಕಿ) ಎನ್ನಲಾಗುತ್ತದೆ. ಹಲವು ತಿಂಗಳುಗಳನ್ನು ತೆಗೆದುಕೊಳ್ಳುವ ಈ ಪ್ರಯಾಣವು, ಅತ್ಯಂತ ಅಪಾಯಕಾರಿಯಾದ, ಸಾಹಸದ, ದುಬಾರಿ (₹50 ಲಕ್ಷದಿಂದ ₹1 ಕೋಟಿವರೆಗೆ) ವೆಚ್ಚದ್ದಾಗಿರುತ್ತದೆ. ಏಜೆಂಟರಿಗೆ ಭಾರಿ ಮೊತ್ತದ ಹಣ ನೀಡುವುದರ ಜತೆಗೆ, ತೀವ್ರ ಬಿಸಿಲು ಇಲ್ಲವೇ ಹಿಮಪಾತ, ಹಸಿವು, ಕಾಯಿಲೆ, ದೈಹಿಕ ಹಲ್ಲೆ, ಅತ್ಯಾಚಾರದಂತಹ ಹಲವು ರೀತಿಯ ಸಮಸ್ಯೆಗಳು ಎದುರಾಗಬಹುದಾದ ಅಪಾಯಕಾರಿ ಮಾರ್ಗ ಇದು.

ಅಮೆರಿಕಕ್ಕೆ ಹೋಗುವ ಕನಸಿನೊಂದಿಗೆ ಮನೆ ಬಿಟ್ಟು ಡಂಕಿ ಮಾರ್ಗದಲ್ಲಿ ಹೊರಟವರು ನಾನಾ ಕಾರಣಕ್ಕೆ ಮಾರ್ಗ ಮಧ್ಯೆಯೇ ಸತ್ತುಹೋದ ಘಟನೆಗಳು ಲೆಕ್ಕವಿಲ್ಲದಷ್ಟಿವೆ. 2022ರ ಜನವರಿಯಲ್ಲಿ ಇಬ್ಬರು ಪುಟ್ಟ ಮಕ್ಕಳೊಂದಿಗೆ ಅಮೆರಿಕ ಸೇರುವ ಕನಸಿನೊಂದಿಗೆ ಸಾಗುತ್ತಿದ್ದ ಭಾರತೀಯ ದಂಪತಿ ಕೆನಡಾದ ಗಡಿಯಲ್ಲಿ ತೀವ್ರ ಹಿಮಪಾತಕ್ಕೆ ಸಿಲುಕಿ ಸಾವಿಗೀಡಾಗಿದ್ದರು. ಕೆಲವೊಮ್ಮೆ, ಇಂಥವರನ್ನು ಗಡಿಗಳಲ್ಲೇ ತಡೆಹಿಡಿದು ವಾಪಸ್ ಕಳುಹಿಸಲಾಗುತ್ತಿದೆ. 2020ರ ಅಕ್ಟೋಬರ್‌ನಿಂದ 2024ರ ಆಗಸ್ಟ್‌ವರೆಗೆ 86,400 ಭಾರತೀಯರನ್ನು ಅಮೆರಿಕ–ಮೆಕ್ಸಿಕೊ ಗಡಿಯಲ್ಲಿ ತಡೆದು ವಾಪಸ್ ಕಳುಹಿಸಲಾಗಿದ್ದರೆ, 88,800 ಭಾರತೀಯರನ್ನು ಅಮೆರಿಕ–ಕೆನಡಾದ ಗಡಿಯಲ್ಲಿ ತಡೆಯಲಾಗಿದೆ ಎಂದು ಅಮೆರಿಕದ ಸುಂಕ ಮತ್ತು ಗಡಿ ರಕ್ಷಣಾ ವಿಭಾಗ ಹೇಳಿದೆ.

ಅದರ ಪ್ರಕಾರ, 2021ರಲ್ಲಿ 30,662 ಮಂದಿಯನ್ನು ಭಾರತಕ್ಕೆ ವಾಪಸ್ ಕಳಿಸಲಾಗಿತ್ತು.

ಅಮೆರಿಕ ಈ ಹಿಂದೆಯೂ ಅಕ್ರಮ ವಲಸಿಗರನ್ನು ವಿಮಾನಗಳಲ್ಲಿ ಅವರ ದೇಶಕ್ಕೆ ವಾಪಸ್ ಕಳಿಸಿದ ನಿದರ್ಶನಗಳಿವೆ. 2023–24ರಲ್ಲಿ ಅಮೆರಿಕದ ಆಂತರಿಕ ಭದ್ರತಾ ಇಲಾಖೆಯು (ಡಿಎಚ್‌ಎಸ್) 495 ವಿಮಾನಗಳಲ್ಲಿ 145 ದೇಶಗಳ 1,60,000ಕ್ಕೂ ಹೆಚ್ಚು ಅಕ್ರಮ ವಲಸಿಗರನ್ನು ಅವರ ಸ್ವದೇಶಗಳಿಗೆ ಕಳುಹಿಸಿಕೊಟ್ಟಿತ್ತು. ಇದರಲ್ಲಿ 1,100 ಭಾರತೀಯರೂ ಇದ್ದರು.

ಅಕ್ರಮ ವಲಸಿಗರನ್ನು ವಾಪಸ್ ಕಳಿಸುವುದಷ್ಟೇ ಅಲ್ಲ, ಟ್ರಂಪ್ ಅವರು ಎಚ್‌1ಬಿ ವೀಸಾ ನಿಯಮಗಳನ್ನೂ ಬಿಗಿಗೊಳಿಸುವ ಸಂಭವ ಇದೆ. ಅವರ ಮೊದಲ ಅವಧಿಯಲ್ಲಿಯೂ ವೀಸಾ ನಿಯಮಗಳನ್ನು ಬಿಗಿಗೊಳಿಸುವ ಮೂಲಕ ಹೆಚ್ಚಿನ ಅರ್ಜಿಗಳನ್ನು ತಿರಸ್ಕರಿಸಲಾಗಿತ್ತು. ಬರಾಕ್ ಒಬಾಮ ಅವರ ಅವಧಿಯಲ್ಲಿ ವೀಸಾ ನಿರಾಕರಣೆಯ ಪ್ರಮಾಣ ಶೇ 5–ಶೇ 8ರಷ್ಟಿದ್ದರೆ, ಜೋ ಬೈಡನ್ ಅವಧಿಯಲ್ಲಿ ಅದರ ಪ್ರಮಾಣ ಶೇ 2–ಶೇ 4ರಷ್ಟಿತ್ತು. ಟ್ರಂಪ್ ಅವಧಿಯಲ್ಲಿ (2018) ವೀಸಾ ನಿರಾಕರಣೆಯ ಪ್ರಮಾಣ ಶೇ 24ಕ್ಕೆ ಹೆಚ್ಚಾಗಿತ್ತು. ಈ ಬಾರಿಯೂ ಅದೇ ಪುನರಾವರ್ತನೆ ಆಗಲಿದೆಯೇ ಎನ್ನುವ ಆತಂಕವೂ ಅಮೆರಿಕದೆಡೆಗೆ ದೃಷ್ಟಿ ನೆಟ್ಟಿರುವ ಭಾರತೀಯರಲ್ಲಿದೆ.

ಆಧಾರ: ಪಿಟಿಐ, ಪ್ಯೂ ರಿಸರ್ಚ್ ಸೆಂಟರ್, ಬಿಬಿಸಿ

33.49 ಕೋಟಿ	1.10 ಕೋಟಿ	17,940	7.25 ಲಕ್ಷ
ಅಮೆರಿಕದ ಜನಸಂಖ್ಯೆ	ಅಮೆರಿಕದಲ್ಲಿರುವ ಅಕ್ರಮ ವಲಸಿಗರು	ಟ್ರಂಪ್ ಆಡಳಿತ ಗುರುತಿಸಿರುವ ಭಾರತದಿಂದ ಹೋದ ಅಕ್ರಮ ವಲಸಿಗರು	2022ರಲ್ಲಿ ಅಮೆರಿಕದಲ್ಲಿದ್ದ ಭಾರತದ ಅಕ್ರಮ ವಲಸಿಗರು

ಸೇನಾ ವಿಮಾನದಲ್ಲಿ ಏಕೆ?

ಅಮೆರಿಕವು ಅಕ್ರಮ ವಲಸಿಗರನ್ನು ಅವರ ದೇಶಗಳಿಗೆ ಸೇನಾ ವಿಮಾನಗಳಲ್ಲಿ ಕಳುಹಿಸುತ್ತಿದೆ. ಸಾಮಾನ್ಯ ವಿಮಾನಗಳಿಗೆ ಹೋಲಿಸಿದರೆ, ಸೇನಾ ವಿಮಾನದ ಬಳಕೆಯ ವೆಚ್ಚ ದುಬಾರಿ. ಹಿಂದೆ ಅಕ್ರಮ ವಲಸಿಗರನ್ನು ವಿಶೇಷ ವಿಮಾನಗಳಲ್ಲಿ ಕಳುಹಿಸಲಾಗುತ್ತಿತ್ತು.

ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸುತ್ತಿದ್ದಂತೆಯೇ ಟ್ರಂಪ್ ಅವರು ವಲಸಿಗರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವ ನಿರ್ಧಾರ ಪ್ರಕಟಿಸಿದ್ದರು. ರಾಷ್ಟ್ರೀಯ ತುರ್ತು ಸ್ಥಿತಿ ಘೋಷಿಸಿದ್ದರು. ದಕ್ಷಿಣದ ಗಡಿಯಲ್ಲಿ ಅಕ್ರಮ ವಲಸಿಗರ ಒಳನುಸುಳುವಿಕೆ ತಡೆಯಲು 1,500 ಸೇನಾ ಸಿಬ್ಬಂದಿಯನ್ನು ನಿಯೋಜಿಸಿದ್ದರು. ಅಕ್ರಮ ವಲಸಿಗರನ್ನು ಅವರ ದೇಶಗಳಿಗೆ ಕಳುಹಿಸುವುದಕ್ಕೆ ಆದ್ಯತೆ ನೀಡುವಂತೆ ಸೇನಾ ಆಡಳಿತಕ್ಕೆ ಸೂಚಿಸಿದ್ದ ಟ್ರಂಪ್, ಸೇನೆಗೆ ನೀಡಿದ ಅನುದಾನವನ್ನು ಈ ಉದ್ದೇಶಕ್ಕೆ ಬಳಸಿಕೊಳ್ಳುವಂತೆಯೂ ಸೂಚಿಸಿದ್ದರು. ಇದನ್ನು ಆದ್ಯತೆಯನ್ನಾಗಿ ಪರಿಗಣಿಸಿರುವ ಸೇನೆಯು, ಅಕ್ರಮ ವಲಸಿಗರನ್ನು ದೇಶದಿಂದ ಹೊರಕ್ಕೆ ಕಳುಹಿಸುವ ಪ್ರಕ್ರಿಯೆಯನ್ನು ತ್ವರಿತವಾಗಿ ಪೂರ್ಣಗೊಳಿಸಲು ತನ್ನ ವಿಮಾನಗಳನ್ನು ಬಳಸಿಕೊಳ್ಳುತ್ತಿದೆ ಎಂದು ಹೇಳಲಾಗುತ್ತಿದೆ.



ಬಹುತೇಕರು ಕಾರ್ಮಿಕರು

ಅಮೆರಿಕದಲ್ಲಿರುವ ಅಕ್ರಮ ವಲಸಿಗರಲ್ಲಿ 82.50 ಲಕ್ಷ ಮಂದಿ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ದೇಶದ ಒಟ್ಟು ಕಾರ್ಮಿಕ ಬಲದಲ್ಲಿ ಇವರ ಪಾಲು ಶೇ 4.8. ಕಟ್ಟಡ ನಿರ್ಮಾಣ, ಕೃಷಿ ಚಟುವಟಿಕೆಗಳು, ತಯಾರಿಕಾ ಕ್ಷೇತ್ರ, ಆತಿಥ್ಯ, ಉದ್ಯಮ ಸೇವೆಗಳಲ್ಲಿ ಇವರು ದುಡಿಯುತ್ತಿದ್ದಾರೆ.

ಏನಿದು ಡಂಕಿ ಮಾರ್ಗ?



ಶಾರುಕ್ ಖಾನ್ ಅಭಿನಯದ 'ಡಂಕಿ' ಸಿನಿಮಾ ನೆನಪಿರಬಹುದು. ಪಂಜಾಬ್‌ನಿಂದ ಬ್ರಿಟನ್‌ಗೆ ಅಕ್ರಮವಾಗಿ ವಲಸೆ ಹೋಗುವುದರ ಕುರಿತಾಗಿರುವ ಸಿನಿಮಾ ಅದು. ಭಾರತದಿಂದ ಅಮೆರಿಕ, ಬ್ರಿಟನ್, ಕೆನಡಾದಂತಹ ಪಶ್ಚಿಮದ ರಾಷ್ಟ್ರಗಳಿಗೆ ಅಕ್ರಮವಾಗಿ ವಲಸೆ ಹೋಗುವ ಮಾರ್ಗವನ್ನು 'ಡಂಕಿ ಮಾರ್ಗ' ಎಂದು ಕರೆಯಲಾಗುತ್ತದೆ. ಅಪಾಯಕಾರಿಯಾದ ಈ ಮಾರ್ಗದಲ್ಲಿ ಅಮೆರಿಕ ಪ್ರವೇಶಿಸಲು ಬಯಸುವ ಜನರು ದೇಶದ ಪಂಜಾಬ್, ಹರಿಯಾಣ, ಗುಜರಾತ್ ಸೇರಿದಂತೆ ಹಲವು ರಾಜ್ಯಗಳಲ್ಲಿ ದೊಡ್ಡ ಸಂಖ್ಯೆಯಲ್ಲಿದ್ದಾರೆ.

ಭಾರತೀಯರು ಮೂರು ಮಾರ್ಗಗಳಲ್ಲಿ ಅಮೆರಿಕವನ್ನು ಅಕ್ರಮವಾಗಿ ಪ್ರವೇಶಿಸಲು ಯತ್ನಿಸುತ್ತಾರೆ. ಒಂದು ಮೆಕ್ಸಿಕೊ ಗಡಿಯ ಮೂಲಕ, ಮತ್ತೊಂದು ಕೆನಡಾ ಗಡಿಯಿಂದ, ಇನ್ನೊಂದು ಮಾರ್ಗ ಬಹಾಮಾದ ಮೂಲಕ. ಇಲ್ಲಿ ಜಲ ಮಾರ್ಗ ಬಳಸಲಾಗುತ್ತದೆ.

ಈ ಮೂರರಲ್ಲಿ ಮೆಕ್ಸಿಕೊ ಗಡಿ ಮೂಲಕ ಅಮೆರಿಕ ಗಡಿ ಪ್ರವೇಶಿಸುವ ಮಾರ್ಗ ಹೆಚ್ಚು ಬಳಕೆಯಲ್ಲಿದೆ. ಈ ಮಾರ್ಗದಲ್ಲಿ ತೆರಳುವವರು ಹಲವು ರಾಷ್ಟ್ರಗಳ ಮೂಲಕ ಸಾಗಬೇಕಾಗುತ್ತದೆ. ಹಲವು ದಿನ ಪ್ರಯಾಣ ಮಾಡಬೇಕಾಗುತ್ತದೆ.

ಅಮೆರಿಕಕ್ಕೆ ಹೋಗಬಯಸುವ ಅಕ್ರಮ ವಲಸಿಗರು ಲ್ಯಾಟಿನ್ ಅಮೆರಿಕದ ಈಕ್ವೆಡಾರ್, ಬೊಲಿವಿಯಾ, ಗಯಾನದಂತಹ ರಾಷ್ಟ್ರಗಳಿಗೆ ತೆರಳುತ್ತಾರೆ. ಭಾರತೀಯರು ಈ ದೇಶದಲ್ಲಿ ಇಳಿದ ನಂತರ ವೀಸಾ ಪಡೆಯಲು ಅವಕಾಶ ಇದೆ. ಪ್ರವಾಸಿ ವೀಸಾ ಸುಲಭವಾಗಿ ಸಿಗುತ್ತದೆ. ಇಲ್ಲಿಂದ ಏಜೆಂಟರು ಭಾರತೀಯರನ್ನು ಕೊಲಂಬಿಯಾಕ್ಕೆ ಕರೆದೊಯ್ಯುತ್ತಾರೆ. ಅಲ್ಲಿಂದ ಪನಾಮಾದ ಅಪಾಯಕಾರಿ ಡೇರೆನ್ ಕಾಡಿನ ಹಾದಿಯಲ್ಲಿ ತೆರಳಿ, ಬಳಿಕ ಕೋಸ್ಟರೀಕಾ, ನಿಕರಾಗುವಾ, ಹೋಂಡುರಾಸ್, ಎಲ್ ಸಾಲ್ವಡಾರ್, ಗ್ವಾಟೆಮಾಲಾದ ಮೂಲಕ ಮೆಕ್ಸಿಕೊ ತಲುಪಿ, ಅಲ್ಲಿನ ಗಡಿಯಿಂದ ಭದ್ರತಾ ಸಿಬ್ಬಂದಿ ಕಣ್ತಪ್ಪಿಸಿ ಅಮೆರಿಕ ಪ್ರವೇಶಿಸುತ್ತಾರೆ.

ಕೆಲವರು ದುಬೈನಿಂದ ಮೆಕ್ಸಿಕೊಗೆ ನೇರ ವಿಮಾನದಲ್ಲಿ ಪ್ರಯಾಣಿಸುತ್ತಾರೆ. ಆದರೆ, ಸಮರ್ಪಕ ದಾಖಲೆಗಳಿಲ್ಲದೇ ಇದ್ದರೆ ಅಲ್ಲಿನ ವಲಸೆ ವಿಭಾಗದ ಅಧಿಕಾರಿಗಳು ವಶಕ್ಕೆ ಪಡೆಯುವುದರಿಂದ ಬಹುತೇಕರು ಈ ಮಾರ್ಗವನ್ನು ಆಯ್ಕೆ ಮಾಡಿಕೊಳ್ಳುವುದಿಲ್ಲ. ಭಾರತದಿಂದ ಟರ್ಕಿ/ಯುರೋಪ್/ರಷ್ಯಾಕ್ಕೆ ತೆರಳಿ ಅಲ್ಲಿಂದ ಲ್ಯಾಟಿನ್ ಅಮೆರಿಕಾದ ರಾಷ್ಟ್ರಗಳಿಗೆ ಹೋಗಿ ನಂತರ ಮೆಕ್ಸಿಕೊಕ್ಕೆ ಪ್ರಯಾಣಿಸುವವರೂ ಇದ್ದಾರೆ.

ಜೀವನ ಸುಲಭವಲ್ಲ

ಯಾವುದೇ ದಾಖಲೆಗಳಿಲ್ಲದೆ, ಅಕ್ರಮ ವಲಸಿಗರಾಗಿ ಅಮೆರಿಕದಲ್ಲಿ ಬದುಕುವುದು ಸುಲಭವಲ್ಲ. ಇವರೆಲ್ಲ ಆಡಳಿತದ ಕಣ್ಣಿನಿಂದ ಸದಾ ತಪ್ಪಿಸಿಕೊಳ್ಳುತ್ತಿರಬೇಕು. ಇವರಿಗೆ ಉತ್ತಮ ಕೆಲಸಗಳು ಸಿಗುವುದಿಲ್ಲ. ಭಾರತ ಮೂಲದವರು ನಡೆಸುವ ಉದ್ಯಮದಲ್ಲಿ ಸಣ್ಣ ಪುಟ್ಟ ಕೆಲಸ ಮಾಡುತ್ತಾರೆ ಇಲ್ಲವೇ ಗ್ಯಾಸ್ ಸ್ಟೇಷನ್, ಪೆಟ್ರೋಲ್ ಪಂಪ್‌ನಂಥ ಕಡೆ ಕೆಲಸ ಮಾಡಬೇಕು. ಚಾಲನಾ ಪರವಾನಗಿ ಸೇರಿದಂತೆ ಅಲ್ಲಿನ ಯಾವುದೇ ಸರ್ಕಾರಿ ದಾಖಲೆಗಳನ್ನು ಮಾಡಿಸಿಕೊಳ್ಳಲು ಆಗುವುದಿಲ್ಲ. ಅಪಾಯ ಎದುರಾದ ಸಂದರ್ಭದಲ್ಲಿ ಪೊಲೀಸರಿಗೆ ದೂರು ನೀಡಲೂ ಅವರು ಹಿಂದೇಟು ಹಾಕುತ್ತಾರೆ. ತನಿಖೆ ವೇಳೆ ತಾನು ಅಕ್ರಮ ವಲಸಿಗ ಎಂದು ಗೊತ್ತಾದರೆ ಎನ್ನುವ ಭಯ ಅವರನ್ನು ಕಾಡುತ್ತದೆ. ಅಮೆರಿಕದಲ್ಲಿ ಈಗಾಗಲೇ ನೆಲಸಿರುವ ಅವರ ನೆಂಟರು, ಪರಿಚಿತರು ಅಥವಾ ಭಾರತೀಯ ಸಮುದಾಯದ ಇತರರ ಆಶ್ರಯದಲ್ಲೇ ಇರುತ್ತಾರೆ.

ಸಿನಿ ಬಿಟ್ಸ್

ಫೆ.21ಕ್ಕೆ 'ಭಾವ ತೀರ ಯಾನ' ಬಿಡುಗಡೆ

'ಶಾಖಾಹಾರಿ' ಸಿನಿಮಾದ ಸಂಗೀತ ನಿರ್ದೇಶಕ ಮಯೂರ್ ಅಂಬೆಕಲ್ಲು ನಿರ್ದೇಶಿಸಿರುವ 'ಭಾವ ತೀರ ಯಾನ' ಸಿನಿಮಾ ಫೆ.21ರಂದು ಬಿಡುಗಡೆ ಆಗುತ್ತಿದೆ. 'ಶಾಖಾಹಾರಿ' ಹಾಗೂ 'ಬ್ಲಿಂಕ್' ಸಿನಿಮಾ ನಿರ್ಮಾಪಕರು ಚಿತ್ರಕ್ಕೆ ಸಾಥ್ ನೀಡಿದ್ದಾರೆ.

ಮಯೂರ್ ಹಾಗೂ ತೇಜಸ್ ಕಿರಣ್ ಚಿತ್ರವನ್ನು ಜಂಟಿಯಾಗಿ ನಿರ್ದೇಶಿಸಿದ್ದು, 'ಬ್ಲಿಂಕ್' ನಿರ್ಮಾಪಕ ರವಿಚಂದ್ರ 'ಭಾವ ತೀರ ಯಾನ' ಸಿನಿಮಾವನ್ನು ರಾಜ್ಯದಾದ್ಯಂತ ವಿತರಣೆ ಮಾಡುತ್ತಿದ್ದು, 'ಶಾಖಾಹಾರಿ' ನಿರ್ಮಾಪಕ ರಾಜೇಶ್ ಕೀಳಂಬಿ ಹಾಗೂ ರಂಜನಿ ಪ್ರಸನ್ನ ಪ್ರಸ್ತುತಪಡಿಸುತ್ತಿದ್ದಾರೆ.

ರೊಮ್ಯಾಂಟಿಕ್ ಕಥಾಹಂದರ ಹೊಂದಿರುವ ಈ ಸಿನಿಮಾದಲ್ಲಿ ತೇಜಸ್ ಕಿರಣ್ ನಾಯಕನಾಗಿ ಅಭಿನಯಿಸಿದ್ದು, ಆರೋಹಿ ನೈನಾ ಹಾಗೂ ಅನುಷಾ ಕೃಷ್ಣ ನಾಯಕಿಯರಾಗಿದ್ದಾರೆ. ರಮೇಶ್ ಭಟ್ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದು, ಚಂದನಾ ಅನಂತಕೃಷ್ಣ, ವಿದ್ಯಾಮೂರ್ತಿ ಸೇರಿದಂತೆ ಹಲವರು ತಾರಾಬಳಗದಲ್ಲಿದ್ದಾರೆ. ಆರೋಹ ಫಿಲಂಸ್ ಬ್ಯಾನರ್‌ನಡಿ ಮಯೂರ್ ಅಂಬೆಕಲ್ಲು, ತೇಜಸ್ ಕಿರಣ್, ಶೈಲೇಶ್ ಅಂಬೆಕಲ್ಲು ಹಾಗೂ ಲಕ್ಷ್ಮಣ್ ಬಿ.ಕೆ. ನಿರ್ಮಾಣ ಮಾಡಿದ್ದಾರೆ. ಶಿವಶಂಕರ್ ನೂರಂಬಡ ಛಾಯಾಚಿತ್ರಗ್ರಹಣ, ಸುಪ್ರೀತ್ ಬಿ.ಕೆ. ಸಂಕಲನ ಚಿತ್ರಕ್ಕಿದೆ. ❖

'ಜಸ್ಟಿಸ್' ಸಿನಿಮಾ ಫೆ.14ಕ್ಕೆ ರಿಲೀಸ್

ಸಾಹಿಲ್, ರಿಯಾ ಭಾಸ್ಕರ್

ಸಂಗೀತ ನಿರ್ದೇಶಕರಾಗಿ ಚಿತ್ರರಂಗ ಪ್ರವೇಶಿಸಿದ್ದ ಅರೋನಾ ಕಾರ್ತಿಕ್ ನಂತರದಲ್ಲಿ 'ದರ್ಪಣ', 'ಪರಿಶುದ್ಧಂ' ಸೇರಿ ಹಲವು ಚಿತ್ರಗಳನ್ನು ನಿರ್ಮಿಸಿ, ನಿರ್ದೇಶಿಸಿದ್ದರು. ಇದೀಗ ಅವರ ನಿರ್ದೇಶನದ ಮತ್ತೊಂದು ಸಿನಿಮಾ 'ಜಸ್ಟಿಸ್' ಫೆ.14ರಂದು ತೆರೆಗೆ ಬರುತ್ತಿದೆ.

'ನಮ್ಮ ನೆಲದ ಕಾನೂನು ಮತ್ತು ಅದರಲ್ಲಿರುವ ಲೋಪಗಳು, ಜೊತೆಗೆ ಕಾನೂನಿನ ಒಳಿತು ಕೆಡುಕುಗಳನ್ನು ಈ ಚಿತ್ರ ಹೇಳಲಿದೆ. ಕೆಲ ಸಂದರ್ಭಗಳಲ್ಲಿ ನಿಜವಾದ ಅಪರಾಧಿಗಳು ಕಾನೂನಿನ ಕುಣಿಕೆಯಿಂದ ಹೇಗೆಲ್ಲಾ ತಪ್ಪಿಸಿಕೊಳ್ಳುತ್ತಿದ್ದಾರೆ ಎಂಬುದನ್ನು ಈ ಚಿತ್ರದ ಮೂಲಕ ಹೇಳಿದ್ದೇವೆ' ಎಂದಿದ್ದಾರೆ ಆರೋನಾ ಕಾರ್ತಿಕ್. ಸರ್ಕಾರ್ ಸಾಹಿಲ್ ಈ ಚಿತ್ರದಲ್ಲಿ ನಾಯಕನಾಗಿ ನಟಿಸಿದ್ದಾರೆ.

'ಪೆರೋಲ್‌ನಲ್ಲಿ ಹೊರಹೋದ ವ್ಯಕ್ತಿ ಪದೇ ಪದೇ ಅಪರಾಧಗಳನ್ನು ಮಾಡುತ್ತಿರುತ್ತಾನೆ. ಆತನ ಹಿನ್ನೆಲೆ ಏನು, ಆತ ಹಿಂದೆಯೂ ಹೀಗೇ ಇದ್ದನೇ, ಅವನ ಹಿಂದಿನ ಜೀವನ ಎಷ್ಟು ಕ್ರೂರವಾಗಿತ್ತು, ಮಹಿಳಾ ಭದ್ರತೆ ಮತ್ತು ಅತ್ಯಾಚಾರಿಗಳಿಗೆ ಕಠಿಣ ಶಿಕ್ಷೆಯಾಗಬೇಕು' ಎನ್ನುವುದು ಚಿತ್ರದ ಕಥಾಹಂದರ ಎಂದಿದೆ ಚಿತ್ರತಂಡ. ಮುದಾಸಿರ್ ಅಹ್ಮದ್, ಅಹ್ಮದ್ ಅಲಿ ಖಾನ್, ಮೊಹ್ಮದ್ ಜಾವಿದ್, ಹರೀಶ್ ಈ ಚಿತ್ರವನ್ನು ನಿರ್ಮಿಸಿದ್ದಾರೆ. ರಿಯಾ ಭಾಸ್ಕರ್, ಚೇತನ್ ಕೃಷ್ಣ, ನವಾಜ್, ಗಣೇಶ್ ರಾವ್, ಸುರೇಶ್ ಬಾಬು, ಮೊಹ್ಮದ್ ರಾಯ್, ನಾಸರ್ ತಾರಾಬಳಗದಲ್ಲಿದ್ದಾರೆ. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ

ಮಾತು ನಿರ್ಮಿಸುವ ನಾಕ ನರಕ!

ನುಡಿ ಬೆಳಗು

ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

126

ಒಂದು ಊರಿನಲ್ಲಿ ರಾಮಾಯಣದ ನಾಟಕ ನಡೆಯಿತು. ಊರಿನ ಶ್ರೀಮಂತ ರಾವಣನ ಪಾತ್ರ ಮಾಡಿದ್ದ. ನಾಟಕದ ದೃಶ್ಯದಲ್ಲಿ ಶೂರ್ಪಣಖಿ ಬಂದು 'ಅಣ್ಣಾ... ರಾಮ, ಲಕ್ಷ್ಮಣರು ನನ್ನ ಮೂಗು ಕೊಯ್ದರು' ಎಂದಳು. ರಾವಣನ ಪಾತ್ರಧಾರಿಗೆ ನಾಟಕದ ಮಾತುಗಳು ಮರೆತು ಹೋಗಿತ್ತು. ಆಕೆ ಎರಡು ಮೂರು ಬಾರಿ 'ಅಣ್ಣಾ ರಾಮ, ಲಕ್ಷ್ಮಣರು ನನ್ನ ಮೂಗು ಕೊಯ್ದರು' ಎಂದು ಹೇಳಿದಳು. ಇವ ತಕ್ಷಣವೇ, 'ನೀನು ಅಲ್ಯಾಕೆ ಹೋಗಿದ್ದೆ ಸಾಯಾಕೆ' ಎಂದು ಕೇಳಿಬಿಟ್ಟ. ನಾಟಕ ಹಾಳಾಯಿತು. ಆಡಬೇಕಾದ ಮಾತನ್ನು ಸರಿಯಾಗಿ ಆಡದೇ ಹೋದರೆ ನಾಟಕ ಹಾಳಾಗುತ್ತದೆ. ಜೀವನದಲ್ಲಿಯೂ ಹಾಗೆ. ಹೇಳಬೇಕಾದ ಮಾತುಗಳನ್ನು ಸರಿಯಾಗಿ ಹೇಳದೇ ಇದ್ದರೆ ಜೀವನವೆಂಬ ನಾಟಕವೂ ಹಾಳಾಗುತ್ತದೆ.

ಬಸವಣ್ಣನವರ ಮಾತು ಎಷ್ಟು ಚೊಲೋ ಇತ್ತು. ಎಲ್ಲೆಲ್ಲಿಂದಲೂ ಜನ ಯಾಕೆ ಕಲ್ಯಾಣಕ್ಕೆ ಬಂದರು ಎಂದರೆ ಬಸವಣ್ಣನವರ ಮಾತು ಅಷ್ಟು ರುಚಿ ಇತ್ತು. ಬಸವಣ್ಣ ಮಾತನಾಡಿದರೆ ಕೂಡಲಸಂಗಮ ಬೆನ್ನು ತಟ್ಟುತ್ತಿದ್ದ. ಲಿಂಗಮೆಚ್ಚಿ ಅಹುದಹುದೆನ್ನುವಂತೆ ಅವರು ಮಾತನಾಡುತ್ತಿದ್ದರು. 'ನನ್ನ ತಪ್ಪು ಬಹಳ ಇದೆ. ನಿಮ್ಮ ಸೈರಣೆಗೆ ಎಣೆಯಿಲ್ಲ' ಎಂದು ಅವರು ಹೇಳುತ್ತಿದ್ದರು. 'ಎನ್ನ ತಪ್ಪು ಅನಂತಕೋಟಿ, ನಿಮ್ಮ ಸೈರಣೆಗೆ ಲೆಕ್ಕವಿಲ್ಲವಯ್ಯ' ಅಂತಿದ್ದರು ಅವರು. ಇದು ಬಸವ ಭಾಷೆ. ನಮಗೆಲ್ಲಾ ಮಧುಮೇಹ ಯಾಕೆ ಬಂದಿದೆ ಎಂದರೆ ನಾಲಿಗೆ ಮೇಲಿನ ಸಿಹಿ ಮಾತು ಇಲ್ಲದ್ದಕ್ಕೆ, ಅದು ದೇಹದ ಒಳಕ್ಕೆ ಪ್ರವೇಶಿಸಿದೆ ಅಷ್ಟೆ. ನಾಲಿಗೆ ಮೇಲೆ ಸಿಹಿ ಮಾತು ಇರಬೇಕು. ಈ ಜಗತ್ತಿನಲ್ಲಿ ಸ್ವರ್ಗ ನಿರ್ಮಾಣ ಮಾಡುವುದೂ ಮಾತು, ನರಕ ನಿರ್ಮಾಣ ಮಾಡುವುದೂ ಮಾತು. ಬಸವಣ್ಣನವರು ಯಾವುದೇ ಆಮಿಷ ತೋರಿರಲಿಲ್ಲ. ಅಕ್ಕಿ ಕೊಡ್ತೀವಿ, ಮನೆ ಕೊಡ್ತೀವಿ ಅನ್ನಲಿಲ್ಲ. ಅವರು ಹೇಳಿದ್ದು ಎರಡೇ ಎರಡು ಶಬ್ದ. ಬಂದವರಿಗೆಲ್ಲಾ 'ಶರಣು, ಶರಣಾರ್ಥಿ' ಎಂದರು ಅಷ್ಟೆ. ಈ ಎರಡು ಶಬ್ದಗಳೇ ಕಲ್ಯಾಣವನ್ನು ನಿರ್ಮಾಣ ಮಾಡಿತ್ತು.

ನಮ್ಮ ಎದೆಯಲ್ಲಿ ಒಂದಿಷ್ಟು ಒಳ್ಳೆಯ ಭಾವನೆ ಇರಬೇಕು. ಚೊಲೋ ಭಾವನೆಗಳೇ ಇಲ್ಲದಿದ್ದರೆ ಅದೆಂತಹ ಜೀವನ? ಹಿಂದಿನ ಋಷಿಗಳಿದ್ದರಲ್ಲ, ಅವರು ಎಂತಹ ಜೀವನ ಕಟ್ಟಿದರು. ಎಲ್ಲೋ ಕುಳಿತಿದ್ದರು. ತಪಸ್ಸು ಮಾಡಿದರು. ಹೃದಯ ತುಂಬಿ ಬಂದು 'ಸರ್ವೇ ಜನಾಃ ಸುಖಿನೋ ಭವಂತು, ಸರ್ವೇ ಭವಂತು ಸುಖಿನಃ ಸರ್ವೇ ಸಂತು ನಿರಾಮಯಾಃ ಸರ್ವೇ ಭದ್ರಾನ್ನಿ ಪಶ್ಯಂತು ಮಾ ಕಶ್ಚಿದ್-ದುಃಖ-ಭಾಗ-ಭವೇತ್' ಎಂದು ಹಾಡಿದರು. ಋಷಿ ಎಲ್ಲಿ ಕುಳಿತಿದ್ದಾನೆ ಎನ್ನುವುದು ಮುಖ್ಯವಲ್ಲ, ಅವನ ಜಾತಿ ಧರ್ಮ ಯಾವುದು ಎನ್ನುವುದು ಮುಖ್ಯವಲ್ಲ. ಆದರೆ ಅವರು ಧ್ಯಾನಿಸಿದ್ದು ಸಮಾಜದ ಎಲ್ಲ ಜನರೂ ಸುಖಿಗಳಾಗಬೇಕು ಎಂದು. ಯಾವ ಜೀವಿಯ ಕಣ್ಣಿನಲ್ಲಿ ನೀರು ಬರದಿರಲಿ ಎಂದು ಅವರು ಪ್ರಾರ್ಥಿಸುತ್ತಾರೆ.

ಒಂದು ಊದಿನಕಡ್ಡಿ ದೇವರ ಮುಂದೆ ಉರೀತಿತ್ತು. ಒಬ್ಬ ಮನುಷ್ಯ ಅದನ್ನು ನೋಡಿ 'ನೀನು ನೋಡಿದರೆ ಇಷ್ಟು ಸಣ್ಣ ಕಡ್ಡಿ. ಆದರೂ ದೇವರು ನಿನ್ನನ್ನು ತನ್ನ ಪಕ್ಕದಲ್ಲಿಯೇ ಇಟ್ಟುಕೊಂಡಾನ. ನನ್ನನ್ನು ಮಾತ್ರ ದೇವರ ಗುಡಿಯಿಂದ ಹೊರಕ್ಕೆ ಇಟ್ಟಾನ ಯಾಕೆ' ಎಂದು ಪ್ರಶ್ನೆ ಮಾಡಿದ. ಅದಕ್ಕೆ ಊದಿನಕಡ್ಡಿ 'ಯಾಕೆಂದರೆ ನೀನು ಇನ್ನೊಬ್ಬರ ಮನೆ ಸುಟ್ಟು ನಾನು ಚೆನ್ನಾಗಿರಬೇಕು ಅಂತ ಬಯಸುತ್ತಿ. ನಾನಾದರೆ ನನ್ನ ನಾ ಸುಟ್ಟುಕೊಂಡು ಮನೆ ಬೆಳಗುತ್ತೀನಿ, ಇಡೀ ಮನೆ ಸುವಾಸನೆಯುಕ್ತ ಮಾಡ್ತೀನಿ. ಅದಕ್ಕೆ ನನ್ನ ಹತ್ತಿರ ಇಟ್ಟುಕೊಂಡಾನ' ಅಂತು. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಫೆಬ್ರುವರಿ 6, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಶುಕ್ಲ ನವಮಿ ಗಂ. 22-54 ನಕ್ಷತ್ರ: ಕೃತ್ತಿಕಾ ಗಂ. 19-30 ಯೋಗ: ಬ್ರಹ್ಮ ಗಂ. 18-42 ಕರಣ: ಬಾಲವ ಗಂ. 11-43, ಮಕರ ಮಾಸದ 23 ನೇ ದಿನ, ಮಳೆನಕ್ಷತ್ರ: ಧನಿಷ್ಠಾ 1.
ರಾಹುಕಾಲ : ಮಧ್ಯಾಹ್ನ 01-30 – 03-00
ಸೂರ್ಯೋದಯ : 07-00 ಸೂರ್ಯಾಸ್ತ : 06-30
ಮುಸ್ಲಿಂ ದಿನಾಂಕ : 07 ಶಬನ್
ಅದೃಷ್ಟ ಸಂಖ್ಯೆ : 9, 10

ಮೇಷ: ಗಣಿತದಲ್ಲಿ ಅಥವಾ ಸಂಗೀತದಲ್ಲಿ ಪರಿಣತಿ ಹೊಂದಿರುವವರಿಗೆ ಉತ್ತಮ ಅವಕಾಶಗಳು ಅರಸಿ ಬರಲಿವೆ. ಧ್ಯಾನ, ಯೋಗದಿಂದ ಮಾನಸಿಕ ಒತ್ತಡ ಕಡಿಮೆಯಾಗಲಿದೆ. ಮದುವೆ ಸಮಾರಂಭ ನಡೆಯುವ ಸಾಧ್ಯತೆಗಳಿವೆ.

ವೃಷಭ: ಸರ್ಕಾರಿ ಕಾಮಗಾರಿ ಗುತ್ತಿಗೆದಾರರಿಗೆ ದೊಡ್ಡ ಯೋಜನೆಯೊಂದು ಹುಡುಕಿಕೊಂಡು ಬರಲಿದೆ. ಶತ್ರುಗಳ ಬಾಧೆ ದೂರಾಗಿ, ಯೋಜನೆಗಳು ಈಡೇರಲಿವೆ. ಮನೆಮದ್ದಿನಿಂದ ರೋಗವು ಶಮನವಾಗಲಿದೆ.

ಮಿಥುನ: ಸೋಲು ನಿಮ್ಮನ್ನು ಬಾಧಿಸುತ್ತಿದ್ದರೂ ಮರಳಿ ಪ್ರಯತ್ನ ಮಾಡುವುದರಿಂದ ಜಯಶಾಲಿಯಾಗಬಹುದು. ಇಂದಿನ ಅವಧಿಯಲ್ಲಿ ಹಿರಿಯರ ಆರೋಗ್ಯ ತಪಾಸಣೆ ನಡೆಸುವ ಬಗ್ಗೆ ಗಮನಹರಿಸಿ.

ಕರ್ಕಾಟಕ: ದೇವರ ದಯೆಯಿಂದ ಮತ್ತು ಜನಬಲದಿಂದಾಗಿ ಕೆಲಸದ ಒತ್ತಡವನ್ನು ಸಮರ್ಥವಾಗಿ ನಿಭಾಯಿಸುವಿರಿ. ಆರೋಗ್ಯದಲ್ಲಿ ಸ್ವಲ್ಪ ಮಟ್ಟಿಗೆ ಏರುಪೇರಾದರೆ ಆತಂಕ ಬೇಡ. ವಿವಾಹದ ವಿಷಯಗಳು ಚರ್ಚೆಯಾಗುವುದು.

ಸಿಂಹ: ಮುನ್ನುಗ್ಗಿ ಕೆಲಸ ಮಾಡುವ ದಲ್ಲಾಳಿಗಳು ಮತ್ತು ವೃತ್ತಿವ್ಯಾಪಾರಿಗಳ ಕನಸುಗಳು ನನಸಾಗಲಿವೆ. ಉದ್ಯೋಗದಲ್ಲಿ ಸ್ಥಾನ ಬದಲಾವಣೆಯಾಗಿ ಮನಸ್ಸಿಗೆ ನೆಮ್ಮದಿ. ವೈದ್ಯರ ಸಲಹೆಯಂತೆ ವಿಶ್ರಾಂತಿ ಪಡೆಯಿರಿ.

ಕನ್ಯಾ: ಯಾವುದೇ ಒಪ್ಪಂದಗಳಿಗೆ ಒಪ್ಪಿಕೊಳ್ಳುವ ಮೊದಲು ಕೂಲಂಕಷವಾಗಿ ಯೋಚಿಸಿ ತೀರ್ಮಾನಿಸಿ. ಯಂತ್ರೋಪಕರಣದ ಕ್ರಿಯೆಯ ಬಗ್ಗೆ ಅತೀವ ಆಸಕ್ತಿ ಮೂಡುವುದು. ಒಂಟಿತನವು ಕಾಡಲಿದೆ. ಜಾಗ್ರತರಾಗಿರಿ.

ತುಲಾ: ವಂಶಪಾರಂಪರ್ಯದಿಂದ ಬಂದ ವ್ಯವಹಾರಗಳು ಏಳಿಗೆಯನ್ನು ಕಾಣಲಿವೆ. ವ್ಯವಹಾರಿಕ ಸಲಹೆಗಳಿಗೆ ಹೆಚ್ಚಿನ ಆದ್ಯತೆ ದೊರೆಯಲಿದೆ. ನಾನಾ ರೀತಿಯಲ್ಲಿ ಹಣವು ನಿಮ್ಮ ಕೈ ಸೇರಲಿದೆ.

ವೃಶ್ಚಿಕ: ಮಗಳ ಮದುವೆಯ ಸಲುವಾಗಿ ಆಭರಣ ಕೊಳ್ಳುವ ಬಗ್ಗೆ ಅಥವಾ ಇನ್ನೇನಾದರೂ ತಯಾರಿ ಮಾಡಿಕೊಳ್ಳುವ ಬಗ್ಗೆ ಯೋಚಿಸಿ. ವ್ಯವಹಾರ ನಡೆಸುವವರು ಪಾಲುದಾರರನ್ನು ಹುಡುಕುವ ಪ್ರಯತ್ನ ನಡೆಸಬಹುದು.

ಧನು: ಇನ್ನೊಬ್ಬರನ್ನು ಹೀಯಾಳಿಸುವುದು ಅಥವಾ ಅಪಹಾಸ್ಯ ಮಾಡುವುದು ಅಭಿವೃದ್ಧಿಯನ್ನು ಕುಂಠಿತಗೊಳಿಸುತ್ತದೆ. ತಂದೆಯ ಮನಸ್ಸಿಗೆ ನೋವಾಗುವ ಹಾಗೆ ನೀವು ನಡೆದುಕೊಳ್ಳುವ ಸಾಧ್ಯತೆ ಇದೆ.

ಮಕರ: ದೇಹದಲ್ಲಿ ವಾತ, ಪಿತ್ತದ ಅಂಶ ಅಧಿಕವಾಗುವುದರಿಂದ ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದು ಅವಶ್ಯಕ. ವಾಹನ ವಹಿವಾಟುಗಳಲ್ಲಿ ನಿರೀಕ್ಷೆಗೂ ಮೀರಿದ ಲಾಭವನ್ನು ಪಡೆಯಬಹುದು.

ಕುಂಭ: ನಿವೇಶನಗಳ ಖರೀದಿಯ ಆಲೋಚನೆಗಳಿಗೆ ಪೂರಕ ವಾತಾವರಣ ಸ್ನೇಹಿತರಿಂದ ಸಿಗಲಿದೆ. ನ್ಯಾಯಾಲಯದಲ್ಲಿದ್ದ ಸಮಸ್ಯೆಗಳಿಗೆ ನಿಮ್ಮಲ್ಲಿಯೇ ಉತ್ತರ ಸಿಗಲಿದೆ. ಆಕಸ್ಮಿಕ ರೀತಿಯಲ್ಲಿ ಮದುವೆ ನಿಶ್ಚಯ ಕಾರ್ಯ ನಡೆಯಲಿದೆ.

ಮೀನ: ಹಿಂದಿನಿಂದ ಬಾಕಿ ಇರುವ ಮನೆ ಹಾಗೂ ದೇವರ ಕೆಲಸಗಳನ್ನು ಮಾಡಿ ಮುಗಿಸುವ ನಿರ್ಧಾರಕ್ಕೆ ಬರುವಂತಾಗುವುದು. ಅಧಿಕಾರಿಗಳ ಒಪ್ಪಂದದಿಂದ ಕಾರ್ಯಭಾರ ಅಧಿಕವಾಗಬಹುದು. ಸುಂದರ ಸಂಜೆ ನಿಮ್ಮದಾಗುತ್ತದೆ.

ಪದಬಂಧ 5945

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ರಾಜ ಕುಳಿತುಕೊಳ್ಳುವ ಆಸನ (4)
3.ಉಳಿಕೆಯನ್ನು ನಿಲ್ಲಿಸಿಕೊಂಡಿರುವವನು (4)
5.ಸ್ಫುಟವಾಗಿ ಗೋಚರಿಸದೆ ಅಸ್ಪಷ್ಟವಾಗಿರುವುದು (3)
7.ಹತ್ತಿಯನ್ನು ಸೇರಿಸಿ ಸಿದ್ಧಗೊಳಿಸಿದ ಮೇಲುಹೊದಿಕೆ (3)
9.ಸತ್ವ ಇಲ್ಲದ (3)
11.ಹೊಟ್ಟೆಕಿಚ್ಚಿಗೊಂದು ಪರ್ಯಾಯ ಪದ (3)
12.ಪ್ರಾಣಿಗಳನ್ನು ಕತ್ತರಿಸುವವನು (3)
13.ಕಾಂತಿ ಅಥವಾ ಪ್ರಕಾಶ (3)
15.ವನದ ಬಗ್ಗೆ ಬರೆದಿರುವ ಪದ್ಯ (3)
17.ಈತ ಅತೀ ಬುದ್ಧಿವಂತ (4)
18.ತರಹೇವಾರಿ ಕಾಯಿಪಲ್ಯೆ (4)

ಮೇಲಿಂದ ಕೆಳಕ್ಕೆ
1.ಅಡಿಕೆ ಹೂವಿನ ಗೊಂಚಲು (3)
2.ಚಿತ್ತವಿಲ್ಲಿ ಉಲ್ಟಾಪಲ್ಟಾ ಆಗಿಬಿಟ್ಟಿದೆ (2)
3.ತಂಬಾಕು ಕತ್ತರಿಸಲು ಬಳಸಿದ ಕಿರುಗತ್ತಿ (2)
4.ಪಣ ತೊಟ್ಟು ಗಳಿಸಿದ ಐಶ್ವರ್ಯ ಇಲ್ಲಿದೆ (3)
6.ಚಿನ್ನದ ಹಬ್ಬವಿದು (7)
8.ಕರಿದ ಪದಾರ್ಥಗಳನ್ನು ಬಾಣಲೆಯಿಂದ ತೆಗೆಯಲು ಬಳಸುವ ಸಾಧನ (5)
10.ಕಾವಲು ಪಡೆ ಇಲ್ಲದೆ (5)
12.ಕನ್ನ ಹಾಕಿ ಕದ್ದೊಯ್ದ ಚಿನ್ನ (3)
14.ರಾಜಕೀಯ ವ್ಯಕ್ತಿ (3)
15.ಕರಣದಲ್ಲಿರುವ ಅತ್ಯಂತ ಚಿಕ್ಕ ಚೂರುಕಾಣುತ್ತಿದೆಯೇ? (2)
16.ನಗುತಲಿದ್ದವದವ ಹೀಗೆ ಶರಣಾದ! (2)



5944ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಿವಾದ 3.ಪ್ರವಾಸ
5.ವ್ಯಕ್ತಿ 6.ಗಾವಿಲ
7.ಕಲಿ 11.ನಗ
13.ತಳಿಗೆ 14.ದ್ವಾರ
15.ಸುಗುಣ 16.ನಗರ

ಮೇಲಿಂದ ಕೆಳಕ್ಕೆ:
1.ವಿಮುಕ್ತಿ 2.ದನಗಾಹಿ
3.ಪ್ರಕ್ಷಾಲನ 4.ಸರೀಕ
5.ವ್ಯವಕಲನ
8.ಲೀಲಾವುದಾರ 9.ವಿತರಣ
10.ಹಗೆತನ 12.ಗವಸು
14.ದ್ವಾಪರ

ಸುಡೊಕು 6330

2			1				8	
						5		9
8		3			9		1	
3		9	5		1			
	6						4	
5		1	6		8			2
	7			3		2		4
4		5					6	
	8		4	6		3		1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6329 ಸುಡೊಕು

4	7	5	3	9	8	2	6	1
1	2	9	6	4	7	5	8	3
3	6	8	5	1	2	4	9	7
9	5	2	7	8	1	3	4	6
6	4	1	9	5	3	8	7	2
8	3	7	2	6	4	1	5	9
7	1	6	4	3	5	9	2	8
5	9	3	8	2	6	7	1	4
2	8	4	1	7	9	6	3	5

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	20000-27500
ಹೊಸತು	30000-36000
ಹಳತು	45500-49500
ಶಿವಮೊಗ್ಗ	
ಬೆಟ್ಟೆ	42009-56600
ಗೊರಬಲು	17600-27009
ರಾಶಿ	31269-51509
ಸರಕು	54099-80006
ಸಿದ್ದಾಪುರ	
ಬಿಳಿಗೋಟು	22389-26799
ಚಾಲಿ	31509-37899
ಕೋಕ	14319-23109
ಹೊಸಚಾಲಿ	22109-32989
ಕೆಂಪುಗೋಟು	19119-21219
ರಾಶಿ	41599-48899
ತಟ್ಟಿಬೆಟ್ಟೆ	27699-40189
ಕುಂದಾಪುರ	
ಹಳೆಚಾಲಿ	40000-49000
ಹೊಸಚಾಲಿ	30000-36500

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,739
ಇಂದಿನ ಅಂತ್ಯ	23,696
▼	42
ದಿನದ ಕನಿಷ್ಠ	23,686

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹495
12 ಕ್ಕೆ	₹66
ಮೈಸೂರು	
100ಕ್ಕೆ	₹497

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹411-705
ದ್ವಿತಳಿ (ಬಿ.ವಿ)	₹311-850

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹188
ಆರ್‌ಎಸ್‌ಎಸ್-5	₹183
ಗುಡ್ ಲಾಟ್	₹178

(ಪ್ರತಿ ಕೆ.ಜಿಗೆ)

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹26400
ಎಸಿ	₹14420
ಆರ್‌ಪಿ	₹22000
ಆರ್‌ಸಿ	₹12450

ಸೆನ್ಸೆಕ್ಸ್ ಇಳಿಕೆ

ಮುಂಬೈ (ಪಿಟಿಐ): ದೇಶದ ಷೇರುಪೇಟೆಯಲ್ಲಿ ಬುಧವಾರ ನಡೆದ ವಹಿವಾಟಿನಲ್ಲಿ ಸೂಚ್ಯಂಕಗಳು ಇಳಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 312 ಅಂಶ ಇಳಿಕೆ ಕಂಡು 78,271 ಅಂಶಗಳಲ್ಲಿ ಸ್ಥಿರಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 42 ಅಂಶ ಇಳಿಕೆಯಾಗಿ 23,696 ಅಂಶಗಳಲ್ಲಿ ವಹಿವಾಟು ಮುಕ್ತಾಯಗೊಂಡಿತು.

ಏಷ್ಯನ್ ಪೇಂಟ್ಸ್ ಷೇರಿನ ಮೌಲ್ಯದಲ್ಲಿ ಶೇ 3ರಷ್ಟು ಇಳಿಕೆಯಾಗಿದೆ.

ಆರ್‌ಬಿಐ ಹಣಕಾಸು ನೀತಿ ಸಮಿತಿ ಸಭೆಯು ರೆಪೊ ದರ ಕಡಿತಕ್ಕೆ ಸಂಬಂಧಿಸಿದಂತೆ ಯಾವ ತೀರ್ಮಾನ ಕೈಗೊಳ್ಳಲಿದೆ ಎಂಬುದನ್ನು ಹೂಡಿಕೆದಾರರು ಎದುರು ನೋಡುತ್ತಿದ್ದಾರೆ. ಅಲ್ಲದೆ, ಜಾಗತಿಕ ಮಟ್ಟದಲ್ಲಿನ ಸುಂಕ ಸಮರದಿಂದ ರೂಪಾಯಿ ಮೌಲ್ಯ ಇಳಿಕೆಯಾಗಿದೆ. ಇದು ದೇಶೀಯ ಮಾರುಕಟ್ಟೆಯಲ್ಲಿ ನಕಾರಾತ್ಮಕ ವಹಿವಾಟಿಗೆ ಕಾರಣವಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಅಮೆರಿಕ–ಚೀನಾ ನಡುವೆ ಸುಂಕ ಸಮರ: ಡಾಲರ್ ಎದುರು 36 ಪೈಸೆ ಇಳಿಕೆ

ಮಂಡಿಯೂರಿದ ರೂಪಾಯಿ

ಮುಂಬೈ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಬುಧವಾರ ನಡೆದ ವಹಿವಾಟಿನಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮತ್ತೆ ಮಂಡಿಯೂರಿದೆ.

ರೂಪಾಯಿ ಮೌಲ್ಯವು 36 ಪೈಸೆ ಇಳಿಕೆಯಾಗಿದ್ದು, ಸಾರ್ವಕಾಲಿಕ ಕನಿಷ್ಠ ಮಟ್ಟಕ್ಕೆ ತಲುಪಿದೆ. ಪ್ರತೀ ಡಾಲರ್ ಮೌಲ್ಯವು ₹87.43 ಆಗಿದೆ.

ಮೆಕ್ಸಿಕೊ, ಕೆನಡಾ ಮತ್ತು ಚೀನಾದ ಸರಕುಗಳ ಮೇಲೆ ಅಮೆರಿಕ ಸುಂಕ ವಿಧಿಸಿದೆ. ಚೀನಾ ಕೂಡ ಅಮೆರಿಕದ ಸರಕುಗಳ ಮೇಲೆ ಪ್ರತಿ ಸುಂಕ ವಿಧಿಸಲು ಮುಂದಾಗಿದೆ. ಈ ಸುಂಕ ಸಮರದಿಂದಾಗಿ ರೂಪಾಯಿಯು ಒತ್ತಡಕ್ಕೆ ಸಿಲುಕಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಭಾರತೀಯ ರಿಸರ್ವ್ ಬ್ಯಾಂಕ್‌ನ ಹಣಕಾಸು ನೀತಿ ಸಮಿತಿ ಸಭೆಯಲ್ಲಿ ರೆಪೊ ದರ ಕಡಿತದ ಬಗ್ಗೆ ಕೈಗೊಳ್ಳುವ ತೀರ್ಮಾನವು ಷೇರು ಹೂಡಿಕೆದಾರರ ಮೇಲೆ ಪರಿಣಾಮ ಬೀರಲಿದೆ ಎಂದು ಹೇಳಿದ್ದಾರೆ.

ವಹಿವಾಟಿನ ಆರಂಭದಲ್ಲಿ ರೂಪಾಯಿ ಮೌಲ್ಯವು ₹87.13 ಇತ್ತು. ದಿನದ ವಹಿವಾಟಿನಲ್ಲಿ ಕನಿಷ್ಠ ಮಟ್ಟವಾದ ₹87.49ಕ್ಕೆ ತಲುಪಿತ್ತು. ಬಳಿಕ 36 ಪೈಸೆ ಕುಸಿಯಿತು.

ಮಂಗಳವಾರದ ವಹಿವಾಟಿನಲ್ಲಿ ಚೇತರಿಕೆ ಕಂಡಿದ್ದ ರೂಪಾಯಿ ಮೌಲ್ಯವು 4 ಪೈಸೆ ಏರಿಕೆಯಾಗಿತ್ತು.

ಅಮೆರಿಕದ ಕಂಪನಿಗಳು ಚೀನಾದಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ಶೇ 10ರಷ್ಟು ಸುಂಕ ವಿಧಿಸುವುದಾಗಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ. ಇದಕ್ಕೆ ಪ್ರತಿಯಾಗಿ ಚೀನಾವು ಅಮೆರಿಕದ ಸರಕುಗಳ ಮೇಲೆ ಸುಂಕ ವಿಧಿಸಲು ಕ್ರಮಕೈಗೊಂಡಿದೆ. ಅಲ್ಲದೆ, ದೇಶದ ಏಕಸ್ವಾಮ್ಯ ಕಾನೂನಿನ ಉಲ್ಲಂಘನೆ ಆರೋಪದ ಮೇರೆಗೆ ಗೂಗಲ್ ವಿರುದ್ಧ ತನಿಖೆಗೂ ಆದೇಶಿಸಿದೆ. ಈ ಬೆಳವಣಿಗೆಯು ಜಾಗತಿಕ ವಹಿವಾಟಿನ ಮೇಲೆ ಪರಿಣಾಮ ಬೀರಲಿದೆ ಎಂದು ತಜ್ಞರು ಹೇಳಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯು ಶೇ 0.51ರಷ್ಟು ಇಳಿಕೆಯಾಗಿದೆ. ಪ್ರತೀ ಬ್ಯಾರೆಲ್ 75.81 ಡಾಲರ್ ಆಗಿದೆ.

ಇರಾನ್ ಕರೆನ್ಸಿ ಮೌಲ್ಯ ಕುಸಿತ

ಟೆಹರಾನ್ (ಎಪಿ): ಅಮೆರಿಕದ ಡಾಲರ್ ಎದುರು ಇರಾನ್ ಕರೆನ್ಸಿಯಾದ ರಿಯಾಲ್ ಮೌಲ್ಯವು ಬುಧವಾರದ ವಹಿವಾಟಿನಲ್ಲಿ ಕನಿಷ್ಠ ಮಟ್ಟಕ್ಕೆ ಇಳಿಕೆಯಾಗಿದೆ.

ಒಂದು ಡಾಲರ್‌ಗೆ 8,50,000 ರಿಯಾಲ್‌ಗಳಲ್ಲಿ ವಹಿವಾಟು ನಡೆಯಿತು.

ಇರಾನ್‌ನ ತೈಲ ರಫ್ತು ವ್ಯವಹಾರಕ್ಕೆ ಸಂಬಂಧಿಸಿದಂತೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಹಲವು ನಿರ್ಬಂಧ ಹೇರಿದ್ದಾರೆ. ಇದೇ ರಿಯಾಲ್ ಮೌಲ್ಯ ಇಳಿಕೆಗೆ ಕಾರಣ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಚಿನ್ನದ ಬೇಡಿಕೆ ಶೇ 5ರಷ್ಟು ಹೆಚ್ಚಳ

ಮುಂಬೈ (ಪಿಟಿಐ): ಕಳೆದ ವರ್ಷ ದೇಶದಲ್ಲಿ ಚಿನ್ನದ ಬೇಡಿಕೆಯು ಶೇ 5ರಷ್ಟು ಹೆಚ್ಚಳವಾಗಿದೆ. ಒಟ್ಟು ಬೇಡಿಕೆ 802.8 ಟನ್ ಆಗಿದ್ದು, ಇದರ ಮೌಲ್ಯವು ₹5.15 ಲಕ್ಷ ಕೋಟಿ ಆಗಿದೆ ಎಂದು ವಿಶ್ವ ಚಿನ್ನ ಸಮಿತಿ (ಡಬ್ಲ್ಯುಜಿಸಿ) ತಿಳಿಸಿದೆ.

ಕೇಂದ್ರ ಸರ್ಕಾರವು ಬಜೆಟ್‌ನಲ್ಲಿ ಚಿನ್ನದ ಮೇಲಿನ ಮೂಲ ಕಸ್ಟಮ್ಸ್ ಸುಂಕವನ್ನು ಕಡಿತಗೊಳಿಸಿತ್ತು. ಅಲ್ಲದೆ, ಮದುವೆ ಮತ್ತು ಹಬ್ಬದ ಋತುವಿನಲ್ಲಿ ಹಳದಿ ಲೋಹಕ್ಕೆ ಬೇಡಿಕೆ ಹೆಚ್ಚಿತ್ತು. ಇದರಿಂದ ಬೇಡಿಕೆ ಹೆಚ್ಚಳವಾಗಿದೆ. ಪ್ರಸಕ್ತ ವರ್ಷದಲ್ಲಿ ಬೇಡಿಕೆಯು 700 ಟನ್‌ನಿಂದ 800 ಟನ್‌ಗೆ ಮುಟ್ಟುವ ನಿರೀಕ್ಷೆಯಿದೆ ಎಂದು ಬುಧವಾರ ಬಿಡುಗಡೆಯಾಗಿರುವ ವರದಿ ತಿಳಿಸಿದೆ.

ದೇಶದಲ್ಲಿ 2023ರಲ್ಲಿ 761 ಟನ್ ಚಿನ್ನಕ್ಕೆ ಬೇಡಿಕೆ ಬಂದಿತ್ತು. ಇದರ ಒಟ್ಟು ಮೌಲ್ಯ ₹3.92 ಲಕ್ಷ ಕೋಟಿ ಆಗಿದೆ.

'ಮದುವೆ ಋತುವಿನಲ್ಲಿ ಹಳದಿ ಲೋಹದ ಖರೀದಿಯು ಚೇತರಿಕೆ ಕಾಣುವ ನಿರೀಕ್ಷೆಯಿದೆ. ಒಂದು ಹಂತಕ್ಕೆ ಬೆಲೆ ಕೂಡ ಸ್ಥಿರಗೊಳ್ಳುವ ನಿರೀಕ್ಷೆಯಿದೆ' ಎಂದು ಸಮಿತಿಯ ಭಾರತದ ಸಿಇಒ ಸಚಿನ್ ಜೈನ್ ತಿಳಿಸಿದ್ದಾರೆ.

ಕಳೆದ ವರ್ಷ ಚಿನ್ನದ ಬೆಲೆಯು ದಾಖಲೆ ಮಟ್ಟದಲ್ಲಿ ಏರಿಕೆಯಾಗಿದೆ. ಪ್ರಸಕ್ತ ವರ್ಷವೂ ದರ ಏರಿಕೆ ಮುಂದುವರಿದಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಸೇವಾ ಚಟುವಟಿಕೆ ಇಳಿಕೆ

ನವದೆಹಲಿ (ಪಿಟಿಐ): ಜನವರಿಯಲ್ಲಿ ದೇಶದ ಸೇವಾ ವಲಯದ ಚಟುವಟಿಕೆಗಳು ಎರಡು ವರ್ಷದ ಕನಿಷ್ಠ ಮಟ್ಟಕ್ಕೆ ಕುಸಿದಿವೆ. ಮಾರಾಟ ಮತ್ತು ಉತ್ಪಾದನೆಯಲ್ಲಿ ಅಲ್ಪ ಪ್ರಮಾಣದ ಏರಿಕೆ ನಡುವೆಯೂ ಈ ವಲಯವು ಇಳಿಕೆ ದಾಖಲಿಸಿದೆ.

ಸೇವಾ ವಲಯದ ಚಟುವಟಿಕೆಯನ್ನು ಸೂಚಿಸುವ ಎಚ್‌ಎಸ್‌ಬಿಸಿ ಇಂಡಿಯಾ ಸರ್ವಿಸ್ ಬ್ಯುಸಿನೆಸ್ ಸೂಚ್ಯಂಕವು, ಕಳೆದ ವರ್ಷದ ಡಿಸೆಂಬರ್‌ನಲ್ಲಿ 59.3 ಇತ್ತು. ಜನವರಿಯಲ್ಲಿ 56.5 ಇದೆ ಎಂದು ಬುಧವಾರ ಬಿಡುಗಡೆಯಾಗಿರುವ ಎಸ್ ಆ್ಯಂಡ್ ಪಿ ಗ್ಲೋಬಲ್ ಇಂಡಿಯಾ ಸಂಸ್ಥೆಯ ವರದಿ ತಿಳಿಸಿದೆ.

ಪರ್ಚೇಸಿಂಗ್ ಮ್ಯಾನೇಜರ್ಸ್ ಸೂಚ್ಯಂಕವು (ಪಿಎಂಐ) 50ರ ಮೇಲಿದ್ದರೆ ಬೆಳವಣಿಗೆಯು ಸದೃಢವಾಗಿದೆ ಎಂದು ಅರ್ಥೈಸಲಾಗುತ್ತದೆ. 50ಕ್ಕಿಂತ ಕಡಿಮೆ ಇದ್ದರೆ ಬೆಳವಣಿಗೆಯು ಕುಂಠಿತವಾಗಿದೆ ಎಂದು ಹೇಳಲಾಗುತ್ತದೆ.

ಕಳೆದ ವರ್ಷದ ಮಧ್ಯಭಾಗದಿಂದಲೂ ಹೊಸ ರಫ್ತು ವ್ಯವಹಾರವು ಭಾಗಶಃ ಇಳಿಕೆಯಾಗಿದೆ. ಆದರೆ, ಡಿಸೆಂಬರ್‌ನಲ್ಲಷ್ಟೇ ಸೇವಾ ವಲಯದ ರಫ್ತು ಏರಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಜಿಮ್ ಚರ್ಚೆ: 75 ಸಾಧಕರು ಭಾಗಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇದೇ 11ರಿಂದ 14ರ ವರೆಗೆ ಇಲ್ಲಿ ನಡೆಯಲಿರುವ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ (ಜಿಮ್) ಶಶಿ ತರೂರ್, ಆನಂದ್ ಮಹೀಂದ್ರ, ಕಿರಣ್ ಮಜುಂದಾರ್ ಷಾ, ಪ್ರಶಾಂತ್ ಪ್ರಕಾಶ್, ಗ್ರೀಸ್ ಮಾಜಿ ಪ್ರಧಾನಿ ಜಾರ್ಜ್ ಪಪಾಂಡ್ರಿಯೊ, ವೋಲ್ವೊ ಸಮೂಹದ ಅಧ್ಯಕ್ಷ ಮಾರ್ಟಿನ್ ಲುಂಡ್ ಸ್ಟೆಡ್ ಸೇರಿ 75 ಸಾಧಕ ಉದ್ಯಮಿಗಳು ಮಾತನಾಡಲಿದ್ದಾರೆ' ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ತಿಳಿಸಿದ್ದಾರೆ.

'ಆದಿತ್ಯ ಬಿರ್ಲಾ ಗ್ರೂಪ್ ಅಧ್ಯಕ್ಷ ಕುಮಾರಮಂಗಲಂ ಬಿರ್ಲಾ, ಜಿಂದಾಲ್ ಸ್ಟೀಲ್ ವರ್ಕ್ಸ್ ವ್ಯವಸ್ಥಾಪಕ ನಿರ್ದೇಶಕ ಸಜ್ಜನ್ ಜಿಂದಾಲ್, ಆಯುಷ್ಮಾನ್ ಭಾರತ ಯೋಜನೆಯ ಮಾಜಿ ಸಿಇಒ ಇಂದುಭೂಷಣ್, ಸಿನಿಮಾ ನಿರ್ಮಾಪಕಿ ಕಿರಣ್ ರಾವ್, ಇಸ್ರೊ ಮಾಜಿ ಅಧ್ಯಕ್ಷ ಸೋಮನಾಥ್, ಏಕಸ್ ಸಿಇಒ ಅರವಿಂದ್ ಮೆಳ್ಳಿಗೇರಿ, ಅಮೆರಿಕದ ಇಂಧನ ಇಲಾಖೆಯ ಸಿಇಒ ಆ್ಯನ್ ಡಂಕಿನ್, ಜೆರೊಡಾ ಸಹ ಸಂಸ್ಥಾಪಕ ನಿಖಿಲ್ ಕಾಮತ್, ಯೋಜನಾ ಆಯೋಗದ ಮಾಜಿ ಉಪಾಧ್ಯಕ್ಷ ಮೊಂಟೆಕ್ ಸಿಂಗ್ ಅಹ್ಲುವಾಲಿಯಾ, ಕಿರ್ಲೋಸ್ಕರ್ ಸಮೂಹದ ಎಂ.ಡಿ ಗೀತಾಂಜಲಿ ಕಿರ್ಲೋಸ್ಕರ್ ಅವರು ಸಮಾವೇಶದ ವಿವಿಧ ಗೋಷ್ಠಿಗಳನ್ನು ಉದ್ದೇಶಿಸಿ ಮಾತನಾಡಲಿದ್ದಾರೆ' ಎಂದು ತಿಳಿಸಿದ್ದಾರೆ.

ಸಮಾವೇಶದಲ್ಲಿ ಐದು ಸಾವಿರಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸುತ್ತಿದ್ದಾರೆ. 30ಕ್ಕೂ ಹೆಚ್ಚು ಚಿಂತನಾ ಗೋಷ್ಠಿ ಏರ್ಪಡಿಸಲಾಗಿದೆ. ಸಣ್ಣ ಮತ್ತು ಮಧ್ಯಮ ಸ್ತರದ ಕೈಗಾರಿಕೆಗಳು ಹಾಗೂ ನವೋದ್ಯಮಗಳಿಗೆ ಹೆಚ್ಚು ಆದ್ಯತೆ ನೀಡಲಾಗಿದೆ. ಮುಖ್ಯವಾಗಿ ಭವಿಷ್ಯದ ತಂತ್ರಜ್ಞಾನ, ಆರ್ಥಿಕತೆ ಮತ್ತು ಕೈಗಾರಿಕಾ ಉದ್ಯಮ ಕುರಿತು ಸಮಾವೇಶದಲ್ಲಿ ಮೂರು ದಿನಗಳ ಕಾಲ ಚರ್ಚಿಸಲಾಗುವುದು ಎಂದು ವಿವರಿಸಿದ್ದಾರೆ.

'ಸಮಾವೇಶದ ಮೂಲಕ ₹10 ಲಕ್ಷ ಕೋಟಿ ಬಂಡವಾಳ ಹೂಡಿಕೆ ಆಕರ್ಷಿಸುವ ಗುರಿ ಹೊಂದಲಾಗಿದೆ. ಈ ಪೈಕಿ ಶೇ 80ರಷ್ಟಾದರೂ ನೈಜ ಹೂಡಿಕೆಯಾಗಿ ಬರಬೇಕು ಎನ್ನುವುದು ನಮ್ಮ ಪ್ರಯತ್ನ' ಎಂದು ಅವರು ಹೇಳಿದ್ದಾರೆ.

ನಿರ್ಮಲಾ, ಪೀಯೂಷ್‌ಗೆ ಆಹ್ವಾನ: ನವದೆಹಲಿಯಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಕೇಂದ್ರ ವಾಣಿಜ್ಯ ಸಚಿವ ಪೀಯೂಷ್ ಗೋಯಲ್ ಮತ್ತು ಸಂಸದ ಕೆ.ಸಿ. ವೇಣುಗೋಪಾಲ್ ಅವರನ್ನು ಭೇಟಿ ಮಾಡಿದ ಎಂ.ಬಿ. ಪಾಟೀಲ ಅವರು ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ಭಾಗವಹಿಸುವಂತೆ ಆಹ್ವಾನ ನೀಡಿದ್ದಾರೆ.

ಸಮಾವೇಶದ ವೈಶಿಷ್ಟ್ಯಗಳು, ರಾಜ್ಯ ಸರ್ಕಾರದ ನೂತನ ಕೈಗಾರಿಕಾ ನೀತಿ ಹಾಗೂ ಸ್ವಚ್ಛ ಇಂಧನ ನೀತಿ ಕುರಿತು ನಿರ್ಮಲಾ ಅವರಿಗೆ ಸಚಿವರು ಇದೇ ವೇಳೆ ಮಾಹಿತಿ ನೀಡಿದರು. ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಕೂಡ ಜೊತೆಗಿದ್ದರು.

ನವದೆಹಲಿಯಲ್ಲಿ ಬುಧವಾರ ಸಚಿವ ಎಂ.ಬಿ. ಪಾಟೀಲ ಅವರು, ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಭೇಟಿ ಮಾಡಿ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ಭಾಗವಹಿಸುವಂತೆ ಅಧಿಕೃತವಾಗಿ ಆಹ್ವಾನಿಸಿದರು. ಕೇಂದ್ರ ಆಹಾರ ಸಚಿವ ಪ್ರಲ್ಹಾದ ಜೋಶಿ ಇದ್ದರು

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಹರೀಶ್ ಎಚ್.ಆರ್., ಎನ್.ಆರ್. ಕಾಲೊನಿ, ಬೆಂಗಳೂರು.

- **ಪ್ರಶ್ನೆ: ಬ್ಯಾಂಕ್‌ಗಳು ಠೇವಣಿ ವಿಮೆ ಮತ್ತು ಕ್ರೆಡಿಟ್ ಗ್ಯಾರಂಟಿ ಕಾರ್ಪೊರೇಷನ್ (ಡಿಐಸಿಜಿಸಿ) ಸಂಸ್ಥೆ ಅಡಿ ನೋಂದಾಯಿತವಾಗಿವೆ. ಗ್ರಾಹಕರ ಹಣಕ್ಕೆ ಭದ್ರತೆ ನೀಡಬೇಕೆಂದು ಆರ್‌ಬಿಐನ ನಿರ್ದೇಶನವಿದೆ ಎಂದು ಕೇಳಿದ್ದೇನೆ. ಇದು ₹5 ಲಕ್ಷಕ್ಕೆ ಸೀಮಿತ ಅಂತಲೂ ತಿಳಿದಿದ್ದೇನೆ. ಆರ್ಥಿಕ ಮುಗ್ಗಟ್ಟಿನ ಸಂದರ್ಭದಲ್ಲಿ ಅಲ್ಲಿ ಇರಿಸುವ ಎಲ್ಲಾ ಠೇವಣಿ ಹಣಕ್ಕೆ ವಿಮೆಯ ರಕ್ಷಣೆ ಇರುತ್ತದೆಯೇ ಅಥವಾ ₹5 ಲಕ್ಷ ಮೊತ್ತಕ್ಕೆ ಸೀಮಿತವೇ?**
ಒಂದು ವೇಳೆ ಒಂದಷ್ಟು ಮೊತ್ತವನ್ನು ಸಹಕಾರ ಸಂಘಗಳು ಅಥವಾ ಬ್ಯಾಂಕ್‌ಗಳಲ್ಲಿ ಇರಿಸಿದರೆ ಈ ರಕ್ಷಣೆಯು ಅಂತಹ ಮೊತ್ತಕ್ಕೂ ಅನ್ವಯವಾಗುವುದೇ? ಇಲ್ಲವಾದರೆ ಸಹಕಾರ ಸಂಘಗಳಲ್ಲಿ ಠೇವಣಿ ಇರಿಸಿದ ಹಣಕ್ಕೆ ಯಾವ ಖಾತರಿ ಇದೆ? ನಮ್ಮ ಠೇವಣಿ ಮೊತ್ತದ ನಿರ್ವಹಣೆ ಹೇಗಿರಬೇಕು?

ಉತ್ತರ: ಹೂಡಿಕೆದಾರರು ಬ್ಯಾಂಕ್ ಅಥವಾ ಸಹಕಾರ ಬ್ಯಾಂಕ್‌ಗಳಲ್ಲಿ ಹಣ ಇರಿಸಿದಾಗ ಆರ್ಥಿಕ ಭದ್ರತೆಯನ್ನು ಒಂದು ಹಂತದ ಮೊತ್ತಕ್ಕೆ ನೀಡಲಾಗುತ್ತದೆ. ಇದು ಆರ್‌ಬಿಐ ನಿರ್ದೇಶನದಡಿ ವ್ಯವಹರಿಸುವ ಸಂಸ್ಥೆಗಳಿಗೆ ಅನ್ವಯವಾಗುತ್ತದೆ. ಒಂದು ವೇಳೆ ಹಣ ಇರಿಸಿದ ಸಂಸ್ಥೆಗೆ ಆರ್ಥಿಕ ಬಿಕ್ಕಟ್ಟು ಎದುರಾದಾಗ ಹೂಡಿಕೆದಾರರ ಹಣವನ್ನು ಅವರ ಅಗತ್ಯಕ್ಕೆ ತಕ್ಕಂತೆ ಮರಳಿಸಲಾಗದ ದುಃಸ್ಥಿತಿ ಉಂಟಾದರೆ ಅಂತಹ ಹೂಡಿಕೆಗಳು ಷೇರು ವ್ಯವಹಾರದಲ್ಲಾಗುವ ನಷ್ಟಕ್ಕಿಂತ ಹೆಚ್ಚು ಅಪಾಯಕಾರಿ ಆಗಿರುತ್ತವೆ.

ಅಂತಹ ಆರ್ಥಿಕ ಹಿನ್ನಡೆಗೆ ಹಿಂದಿರುವ ಕಾರಣಗಳ ಬಗ್ಗೆ ಪ್ರತಿಯೊಬ್ಬ ಗ್ರಾಹಕ ಕೂಡ ಹಣ ತೊಡಗಿಸುವ ಮೊದಲೇ ಅರಿತಿರಬೇಕು. ಇದು ಒಂದು ಹಂತದ ಆರ್ಥಿಕ ಪೂರ್ವಾನ್ವೇಷಣೆಯ ಭಾಗವೂ ಹೌದು.

ಸಂಸ್ಥೆಗಳಲ್ಲಿರುವ ಅಧಿಕಾರಿಗಳು ಅಧಿಕಾರ ದುರ್ಬಳಕೆ ಮಾಡಿಕೊಂಡು ಹಣ ವಂಚನೆ ಮಾಡಿದಾಗ ಗ್ರಾಹಕರ ವಿಶ್ವಾಸ ಕಳೆದುಕೊಳ್ಳುವ ಸಂಸ್ಥೆಗಳು ಆರ್ಥಿಕ ಮುಗ್ಗಟ್ಟಿಗೆ ಸಿಲುಕುತ್ತವೆ. ಇಂತಹ ಸನ್ನಿವೇಶದಲ್ಲಿ ಹೂಡಿದ ಹಣವನ್ನು ಸಕಾಲದಲ್ಲಿ ಹಿಂತಿರುಗಿಸಲಾಗದ ಅಸಹಾಯಕ ಸ್ಥಿತಿಗೆ ತಲುಪುತ್ತವೆ. ಈ ಬಗ್ಗೆ ಗ್ರಾಹಕರು ಹಣ ಇಟ್ಟು ಸುಮ್ಮನಿರುವುದು ಸಲ್ಲದು. ಹೂಡಿಕೆ ಮಾಡಿದ ಸಂಸ್ಥೆಗಳ ಬಗ್ಗೆ ತದನಂತರವೂ ನಿಗಾ ಇಡಬೇಕು.

ಯಾವುದೇ ಬ್ಯಾಂಕ್ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದಾಗ ಹಾಗೂ ಠೇವಣಿದಾರರ ಹಣ ಮರಳಿಸಲು ವಿಫಲವಾದರೆ ಠೇವಣಿ ವಿಮೆ ಮತ್ತು ಕ್ರೆಡಿಟ್ ಗ್ಯಾರಂಟಿ ಕಾರ್ಪೊರೇಷನ್ (ಡಿಐಸಿಜಿಸಿ), ಗ್ರಾಹಕರಿಗೆ ₹5 ಲಕ್ಷದವರೆಗಿನ ಠೇವಣಿ ನಷ್ಟಕ್ಕೆ ವಿಮಾ ಭದ್ರತೆ ನೀಡುತ್ತದೆ. ಹೂಡಿಕೆ ಮಾಡುವ ಮುನ್ನವೇ ಈ ಮಾಹಿತಿಯನ್ನು ಮೊದಲೇ ಅಂತಹ ಸಂಸ್ಥೆಗಳಿಂದ ಖಾತರಿಪಡಿಸಿಕೊಳ್ಳಬೇಕು.

ಭಾರತದಲ್ಲಿ ಕಾರ್ಯ ನಿರ್ವಹಿಸುವ ವಿದೇಶಿ ಬ್ಯಾಂಕ್ ಶಾಖೆಗಳು, ಸ್ಥಳೀಯ ಪ್ರದೇಶದ ಬ್ಯಾಂಕ್‌ಗಳು, ಪಟ್ಟಣ ಸಹಕಾರ ಬ್ಯಾಂಕ್‌ಗಳು ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳು ಸೇರಿ ಎಲ್ಲಾ ವಾಣಿಜ್ಯ ಬ್ಯಾಂಕ್‌ಗಳು ಡಿಐಸಿಜಿಸಿಗೆ ವಿಮಾ ಕಂತು ಪಾವತಿಸಿ ಆ ಸೌಲಭ್ಯ ನೀಡುತ್ತವೆ. ಡಿಐಸಿಜಿಸಿಯು ಯಾವುದೇ ಸಂಸ್ಥೆಗಳನ್ನು ವಿಮೆ ಮಾಡಿಸಿದ ಸಂಸ್ಥೆಗಳಾಗಿ ನೋಂದಾಯಿಸುವಾಗ ಅಂತಹ ಸಂಸ್ಥೆಗಳ ಠೇವಣಿದಾರರಿಗೆ ನಿಗಮವು ಒದಗಿಸುವ ವಿಮಾ ರಕ್ಷಣೆಗೆ ಸಂಬಂಧಿಸಿದ ಮಾಹಿತಿಯನ್ನು ಪ್ರಕಟಿಸುತ್ತದೆ.

ಠೇವಣಿದಾರರು ಈ ಬಗ್ಗೆ ಸಂದೇಹವಿದ್ದರೆ ಶಾಖೆಯ ಅಧಿಕಾರಿಗಳಿಂದ ನಿರ್ದಿಷ್ಟ ವಿಚಾರಣೆ ಮೂಲಕ ಮಾಹಿತಿ ಸಂಗ್ರಹಿಸಬೇಕು. ಗ್ರಾಹಕರು ಠೇವಣಿ ಇರಿಸುವ ಮುನ್ನ ಈ ಬಗ್ಗೆ ಮಾಹಿತಿ ಪಡೆದುಕೊಳ್ಳುವುದು ಉತ್ತಮ.

ಪ್ರಸ್ತುತ ನಿಮ್ಮ ವಿಚಾರದಲ್ಲಿ ನಿಮ್ಮ ಹೂಡಿಕೆ ಮೊತ್ತ ಒಂದೇ ಬ್ಯಾಂಕ್‌ನ ಎಲ್ಲ ಖಾತೆಗಳು ಹಾಗೂ ಎಲ್ಲಾ ಶಾಖೆಗಳ ಮೊತ್ತ ₹5 ಲಕ್ಷಕ್ಕಿಂತ ಅಧಿಕ ಇದ್ದರೆ ಅದನ್ನು ಪ್ರತ್ಯೇಕಿಸಿ ಇತರೆ ಬ್ಯಾಂಕ್‌ಗೆ ವರ್ಗಾಯಿಸುವುದು ಉತ್ತಮ. ಇದರಿಂದ ಸಂಭಾವ್ಯ ಅಪಾಯವನ್ನು ತಪ್ಪಿಸಬಹುದು. ಆದರೆ, ಈ ವಿಮಾ ವ್ಯವಸ್ಥೆ ಬ್ಯಾಂಕ್‌ಗಳಲ್ಲದ ಸಹಕಾರ ಕ್ಷೇತ್ರದ ಸೊಸೈಟಿಗಳಿಗಿಲ್ಲ. ಸಹಕಾರ ಕ್ರೆಡಿಟ್ ಸೊಸೈಟಿಗಳಲ್ಲಿ ಹೂಡಿಕೆ ಮಾಡಲಾದ ಠೇವಣಿಗಳಿಗೆ ಇಂತಹ ವಿಮಾ ರಕ್ಷಣೆ ಇರುವುದಿಲ್ಲ.

ಬಸಪ್ಪ ಪಟ್ಟಣಶೆಟ್ರು, ಊರು ತಿಳಿಸಿಲ್ಲ.

- **ಪ್ರಶ್ನೆ: ನಾನು ಕಳೆದ ವರ್ಷದ ಡಿಸೆಂಬರ್‌ನಿಂದ ₹10 ಸಾವಿರ ಮೊತ್ತವನ್ನು ಪ್ರತಿ ತಿಂಗಳು ಬಂಗಾರ ಖರೀದಿ ಯೋಜನೆಯಲ್ಲಿ ಮತ್ತು ಪ್ರತಿ ತಿಂಗಳು ಐದು ಮ್ಯೂಚುವಲ್ ಫಂಡ್‌ಗಳಲ್ಲಿ ₹2 ಸಾವಿರದಂತೆ (ಪ್ರತಿ ಫಂಡ್‌ನಲ್ಲಿ) ಮೂರು ವರ್ಷದ ಅವಧಿಗೆ ಫೋನ್ ಪೇ ಮೂಲಕ ಪಾವತಿಸುತ್ತಿದ್ದೇನೆ. ಈ ವಿಧಾನ ಸರಿಯಾದುದೇ ಅಥವಾ ಬದಲಾಯಿಸಬೇಕೇ? ತೊಡಗಿಸಿದ ಹಣಕ್ಕೆ ಭದ್ರತೆ ಇದೆಯೇ? ಅವಧಿ ಮುಗಿದ ನಂತರ ಹಣ ಮರಳಿ ಪಡೆಯುವಾಗ ಏನಾದರೂ ತೊಂದರೆ ಆಗುತ್ತದೆಯೇ?**

ಉತ್ತರ: ನೀವು ತಿಳಿಸಿರುವಂತೆ ಆನ್‌ಲೈನ್ ಮೂಲಕ ಹೂಡಿಕೆಗೆ ನೋಂದಾಯಿಸಿದ್ದೀರಿ. ಇಂದಿನ ತಂತ್ರಜ್ಞಾನ ಯುಗದಲ್ಲಿ ಮೊಬೈಲ್ ಹಾಗೂ ಕಂಪ್ಯೂಟರ್‌ಗಳು ಜನರ ದೈನಂದಿನ ಬದುಕಿನ ಮಹತ್ವದ ಭಾಗವಾಗಿವೆ. ಇದರಿಂದ ಅವುಗಳ ಗುಣಾವಗುಣಗಳು ಎಲ್ಲರಿಗೂ ಗೊತ್ತಿರುವ ವಿಚಾರ. ಇಂದು ವಿವಿಧ ಆ್ಯಪ್ ಬಳಸಿ ಆರ್ಥಿಕ ವ್ಯವಹಾರ ನಡೆಯುತ್ತಿವೆ. ಇದರಿಂದ ಇಂತಹ ಮಾಧ್ಯಮಗಳನ್ನು ದೂರವಿಡುವ ವಿಚಾರವೇ ಅಪ್ರಸ್ತುತ.

ಇಂತಹ ಸಂದರ್ಭದಲ್ಲಿ ಯಾವುದೇ ಹೂಡಿಕೆ ಮಾಡುವ ಮುನ್ನ ನೀವು ಆಯಾ ಆ್ಯಪ್‌ಗಳಲ್ಲಿ ಮ್ಯೂಚುವಲ್ ಫಂಡ್ ವಿತರಕರು ನೋಂದಾಯಿತ ಸಂಖ್ಯೆಯನ್ನು ಹೊಂದಿ ವ್ಯವಹರಿಸುತ್ತಿದ್ದಾರೆಯೇ ಎಂಬುದನ್ನು ಮೊದಲು ಖಾತರಿಪಡಿಸಿಕೊಳ್ಳಿ. ನೋಂದಣಿ ಇಲ್ಲದ ವಿತರಕರೊಡನೆ ವ್ಯವಹರಿಸಬೇಡಿ.

ನೀವು ಉಲ್ಲೇಖಿಸಿರುವ ಸಂಸ್ಥೆ ನೋಂದಾಯಿತ ಸಂಸ್ಥೆಯಾಗಿದೆ. ಅಲ್ಲದೆ, ಭಾರತೀಯ ಮ್ಯೂಚುವಲ್ ಫಂಡ್ ಅಸೋಸಿಯೇಷನ್ ಜಾಲತಾಣದಲ್ಲಿ (https://www.amfiindia.com/ investor-corner) ವಿತರಕರ ನೋಂದಾಯಿತ ಸಂಖ್ಯೆಯನ್ನು ಹಾಕಿ ಅವರ ಪೂರ್ಣ ಮಾಹಿತಿಯನ್ನು ಖಚಿತಪಡಿಸಿಕೊಳ್ಳಬಹುದು. ಅಲ್ಲದೆ ನೋಂದಣಿ ರದ್ದು ಮಾಡಲಾದ ಹೆಸರುಗಳನ್ನೂ ಇದರಲ್ಲಿ ಮಾಹಿತಿಗಾಗಿ ಹಾಕಲಾಗುತ್ತದೆ. ಹೂಡಿಕೆದಾರರು ತಮ್ಮ ಹಕ್ಕು, ಜವಾಬ್ದಾರಿ ಅರಿತು ವ್ಯವಹರಿಸಬೇಕೆಕಿದೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ–ಮೇಲ್: businessdesk@prajavani.co.in

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ವಾಹನ

Four Wheelers Selling

Others

SALE ISUZU DMAX CREW-CAB BOLERO CAMPER CASH VAN BOLERO PICKUP YELLOW BOARD 9606450151 CLASSIC AUTOMOTIVES

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

CONNECT ಕ್ಲಾಸಿಫೈಡ್ಸ್

ಹೊಂಗೆ ಬೀಜ ಖರೀದಿ

ದಿನಾಂಕ: 30–01–2025

M11 ಎನರ್ಜಿ ಟ್ರಾನ್ಸಿಷನ್ ಪ್ರೈವೇಟ್ ಲಿಮಿಟೆಡ್, ಇದು ಎಂ.ಕೆ ಆಗ್ರೋಟೆಕ್ ಪ್ರೈವೇಟ್ ಲಿಮಿಟೆಡ್ ಇದರ ಅಂಗಸಂಸ್ಥೆಯಾಗಿದ್ದು, ಪ್ರಸ್ತುತ ಬಯೋಡೀಸೆಲ್ ಉತ್ಪಾದನೆ ಕಾರ್ಯ ಪ್ರಾರಂಭಿಸಿದೆ. ಉಡುಪಿಯ ಪಡುಬಿದುರೆಯಲ್ಲಿ M11 ಎನರ್ಜಿ ಟ್ರಾನ್ಸಿಷನ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯು ದಿನವಹಿ 500 ಟನ್ ಸಾಮರ್ಥ್ಯದ ಅತ್ಯಾಧುನಿಕ ಬಯೋಫ್ಯೂಲ್ ಉತ್ಪಾದಕ ಘಟಕವನ್ನು ಹೊಂದಿದ್ದು, ಈಗಾಗಲೇ ಹೊಂಗೆ, ಜಟ್ರೋಪ, ಉಪಯೋಗಿಸಿದ ಅಡುಗೆ ಎಣ್ಣೆ ಇತ್ಯಾದಿ ಕಚ್ಚಾವಸ್ತುಗಳ ಖರೀದಿಯನ್ನು ಪ್ರಾರಂಭಿಸಿದೆ.

ಮಸೂಮ್ ಗ್ರೂಪ್ ಆಫ್ ಕಂಪನೀಸ್ ಸುಮಾರು 1969 ರಿಂದಲೂ ಕರ್ನಾಟಕದಲ್ಲಿ ವಿವಿಧ ರೀತಿಯ ವ್ಯಾಪಾರ ವ್ಯವಹಾರಗಳನ್ನು ನಡೆಸಿಕೊಂಡು ಬಂದಿರುತ್ತದೆ. ಉದಾ:–ಖಂಡಸಾರಿ ಸಕ್ಕರೆ, ನೈಸರ್ಗಿಕ ಬೆಲ್ಲ, ರೈಸ್‌ಬ್ರಾನ್ ಎಣ್ಣೆ, ಸೂರ್ಯಕಾಂತಿ ಎಣ್ಣೆ, ಶೇಂಗಾ ಎಣ್ಣೆ, ಮಸಾಲೆ ಪದಾರ್ಥಗಳು ಇತ್ಯಾದಿ ಸನ್‌ಪ್ಯೂರ್ ಬ್ರಾಂಡ್ ಭಾರತದ ಸರ್ವಶ್ರೇಷ್ಠ ಅಡುಗೆ ಎಣ್ಣೆಗಳನ್ನು ಉತ್ಪಾದಿಸಿ ಮಾರುಕಟ್ಟೆಗೆ ಒದಗಿಸುತ್ತಿದೆ. ಮುಂದುವರೆದು, ಕಂಪನಿಯು ಹೊಂಗೆ, ಮಾಹುವಾ(ಹಿಪ್ಪೆ), ಜಟ್ರೋಪ, ರಬ್ಬರ್ ಬೀಜಗಳು, ಸುರಹೊನ್ನೆ ಬೀಜಗಳು, ಅಮೋರ ಬೀಜಗಳನ್ನು ಹಳ್ಳಿಮಟ್ಟದಲ್ಲಿ ರೈತರಿಂದ ನೇರವಾಗಿ ಹಳ್ಳಿಮಟ್ಟದ ಸಂಘಗಳ ಮೂಲಕ ರೂ.35/– ಕೆ.ಜಿ ದರದಲ್ಲಿ (ತೇವಾಂಶ ಗರಿಷ್ಠ 12%) ತಮ್ಮ ಸ್ಥಳದಲ್ಲೇ ಖರೀದಿಸಲು ತೀರ್ಮಾನಿಸಿದೆ. ಹಳ್ಳಿಮಟ್ಟದ ಸಂಘಗಳಿಗೆ ಕಮೀಷನ್ ರೂಪದಲ್ಲಿ ಖರೀದಿ ಬೆಲೆಯ ಮೇಲೆ 6% ಹಾಗೂ ತಾಲ್ಲೂಕು ಮಟ್ಟದ ಸಂಘಗಳಿಗೆ ಕಮೀಷನ್ ರೂಪದಲ್ಲಿ ಖರೀದಿ ಬೆಲೆಯ ಮೇಲೆ 6% ಕಮೀಷನ್ ನೀಡಲು ತೀರ್ಮಾನಿಸಿದೆ.

ಆದುದರಿಂದ, ಎಲ್ಲರಿಗೂ ಮನವಿ ಮಾಡಿಕೊಳ್ಳುವುದೇನೆಂದರೆ ಸುಮಾರು 55 ವರ್ಷಗಳಿಂದ ನಮ್ಮ ವಿವಿಧ ಕಂಪನಿಗಳೊಂದಿಗೆ ಸ್ಪಂದಿಸಿದ ಹಾಗೆ ಮುಂದೆಯೂ ನಮ್ಮ ಜೊತೆ ಸಕ್ರಿಯವಾಗಿ ಪಾಲ್ಗೊಂಡು ತಾವು ಸಂಗ್ರಹಿಸಿರುವ ಹೊಂಗೆಬೀಜ, ಜಟ್ರೋಪಬೀಜ, ಮಾಹುವಾ(ಹಿಪ್ಪೆ), ರಬ್ಬರ್ ಬೀಜ, ಸುರಹೊನ್ನೆಬೀಜ ಹಾಗೂ ಉಪಯೋಗಿಸಿದ ಅಡುಗೆ ಎಣ್ಣೆ ಇವುಗಳನ್ನು ನಮ್ಮ ಕಂಪನಿಗೆ ನೇರವಾಗಿ ಮಾರಾಟ ಮಾಡಿ ಉತ್ತಮ ಬೆಲೆಯನ್ನು ಪಡೆಯಲು ಕೆಳಕಂಡ ವಿಳಾಸದಲ್ಲಿ ಸಂಪರ್ಕಿಸಲು ಕೋರಲಾಗಿದೆ.

M11 ಎನರ್ಜಿ ಟ್ರಾನ್ಸಿಷನ್ ಪ್ರೈವೇಟ್ ಲಿಮಿಟೆಡ್, ನೆಲಮಂಗಲ, ಬೆಂಗಳೂರು

Ph. No.: 9008146840 / 8880880625

ಪ್ರವಾಸ

Travel

ದೆಹಲಿ ಆಗ್ರಾ, ಅಯೋಧ್ಯೆ 7 ದಿನಗಳು. ವೈಷ್ಣೋದೇವಿ 7 ದಿನಗಳು, ನೇಪಾಳ,ಮುಕ್ತಿನಾಥ ಯಾತ್ರಾ 7 ದಿನಗಳು. ಸಂಪರ್ಕಿಸಿ: ವಿಜಯ ಟ್ರಾವಲ್ಸ್ ಮಲ್ಲೇಶ್ವರಂ ಬೆಂಗಳೂರು. 9448294477

23.04. 2025, 16.05.2025 ರಿಂದ 18 ದಿನಗಳ ಯುಕೆ ಮತ್ತು ಯುರೋಪ್ ಪ್ರವಾಸ 10 ದೇಶಗಳು. ಪ್ರೇಕ್ಷಣೀಯ ಸ್ಥಳಗಳು ಮತ್ತು ಊಟ, ವಸತಿ ತೆರಿಗೆ ಟಿಪ್ಸ್ ಟೋಲ್ ವಿಮೆದರ ಟೂರ್ ಮ್ಯಾನೇಜರ್ ಬೆಂಗಳೂರಿಂದ ಬೆಂಗಳೂರಿನ ತನಕ ಎಲ್ಲ ಸೇರಿರುತ್ತದೆ ಸಂಪರ್ಕಿಸಿ: ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್ ಬಸವನಗುಡಿ ಬೆಂಗಳೂರು-04, 9900080794, 9611329473

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಹೆಸರು ಬದಲಾವಣೆ
@50/-* PER WORDS
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 7795158424 | +91 9901641752
+91 9731810277 | +91 9900428036
*Conditions apply

ಅಧ್ಯಕ್ಷ ಟ್ರಂಪ್ ಹೇಳಿಕೆ • ನೆತನ್ಯಾಹು ಸ್ವಾಗತ– ಹಮಾಸ್ ವಿರೋಧ

'ಅಮೆರಿಕ ಸುಪರ್ದಿಗೆ ಗಾಜಾ ಪಟ್ಟಿ'

ವಾಷಿಂಗ್ಟನ್ (ಪಿಟಿಐ): 'ಯುದ್ಧ ಬಾಧಿತ ಗಾಜಾಪಟ್ಟಿಯನ್ನು ಅಮೆರಿಕ ತನ್ನ ಸುಪರ್ದಿಗೆ ಪಡೆದು, ಸಮಗ್ರವಾಗಿ ಆರ್ಥಿಕ ಅಭಿವೃದ್ಧಿ ಚಟುವಟಿಕೆ ಕೈಗೊಂಡು, ಉದ್ಯೋಗಗಳನ್ನೂ ಸೃಷ್ಟಿಸಲಿದೆ' ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಜೊತೆ ಶ್ವೇತಭವನದಲ್ಲಿ ಬುಧವಾರ ನಡೆಸಿದ ಸಭೆ ಬಳಿಕ ಜಂಟಿ ಸುದ್ದಿಗೋಷ್ಠಿಯಲ್ಲಿ ಈ ಅಚ್ಚರಿಯ ತೀರ್ಮಾನ ಪ್ರಕಟಿಸಿದರು.

ಟ್ರಂಪ್ ಅವರ ಈ ನಡೆಗೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ. ಪಶ್ಚಿಮ ಏಷ್ಯಾದಲ್ಲಿ ಅಮೆರಿಕದ ಸಹವರ್ತಿ ರಾಷ್ಟ್ರಗಳಾಗಿರುವ ಈಜಿಪ್ಟ್, ಜೋರ್ಡನ್, ಇತರೆ ರಾಷ್ಟ್ರಗಳು ಈ ಪ್ರಸ್ತಾವವನ್ನು ತಿರಸ್ಕರಿಸಿವೆ. 'ಇದು, ಬೆಂಕಿಗೆ ತುಪ್ಪ ಸುರಿಯುವ ಕ್ರಮ' ಎಂದು ಹಮಾಸ್ ಹೇಳಿದೆ.

ಪ್ರಸ್ತುತ, ಗಾಜಾ ಪಟ್ಟಿಯಲ್ಲಿ ನೆಲಸಿರುವ ಸುಮಾರು 20 ಲಕ್ಷ ಪ್ಯಾಲೆಸ್ಟೀನಿಯರು ಅಲ್ಲಿಂದ ನಿರ್ಗಮಿಸಬೇಕು. ಇವರಿಗೆ ಪಶ್ಚಿಮ ಏಷ್ಯಾದ ಇತರೆ ರಾಷ್ಟ್ರಗಳಲ್ಲಿ ನೆಲೆ ಒದಗಿಸಬೇಕು ಎಂದು ಟ್ರಂಪ್ ಅವರು ಇದೇ ವೇಳೆ ನೆತನ್ಯಾಹು ಉಪಸ್ಥಿತಿಯಲ್ಲಿ ಹೇಳಿದರು.

'ಇಸ್ರೇಲ್ ಅಷ್ಟೇ ಅಲ್ಲ, ಮಧ್ಯಪ್ರಾಚ್ಯ ವಲಯಕ್ಕೆ ಸದೃಢ ವಲಯವಾಗಿ ಗಾಜಾಪಟ್ಟಿ ರೂಪಿಸಲಿದ್ದೇವೆ. ಶೀಘ್ರವೇ ಭೇಟಿ ನೀಡುತ್ತೇನೆ. ಸೇನೆ ರವಾನೆ ಸೇರಿ ಎಲ್ಲ ಅಗತ್ಯ ಕ್ರಮವಹಿಸುತ್ತೇವೆ' ಎಂದರು.

'ಗಾಜಾಪಟ್ಟಿಯಲ್ಲಿ ಇರುವ ಅಪಾಯಕಾರಿ, ಸ್ಫೋಟಿಸದ ಬಾಂಬ್‌ಗಳು, ಇತರೆ ಶಸ್ತ್ರಾಸ್ತ್ರಗಳನ್ನು ಸೇನೆ ನಿಷ್ಕ್ರಿಯಗೊಳಿಸಲಿದೆ. ಅವಶೇಷಗಳ ತೆರವುಗೊಳಿಸಲಿದೆ. ಉತ್ತಮ ವಾತಾವರಣ ರೂಪಿಸಲಿದೆ' ಎಂದರು.

ಅಮೆರಿಕವು ಈ ನೆಲದ ಸಾರ್ವಭೌಮತೆಯನ್ನು ತನ್ನ ಹಿಡಿತಕ್ಕೆ ಪಡೆಯಲಿದೆಯೇ? ಶಾಶ್ವತವಾಗಿ ಸ್ವಾಧೀನ ಪಡೆಯಲಿದೆಯೇ ಎಂಬ ಪ್ರಶ್ನೆಗೆ, 'ದೀರ್ಘಾವಧಿ ಸುಪರ್ದಿಯನ್ನೇ ಎದುರು ನೋಡುತ್ತಿದ್ದೇನೆ. ಮಧ್ಯಪ್ರಾಚ್ಯದ ವಿಸ್ತೃತ ಸ್ಥಿರತೆಗೆ ಇದು ಅಗತ್ಯ' ಎಂದರು.

ಜಗತ್ತಿನ ಪ್ರತಿನಿಧಿಗಳ ನೆಲೆ: ಮರುನಿರ್ಮಾಣ ಬಳಿಕ ಗಾಜಾ ಪಟ್ಟಿಯಲ್ಲಿ ಯಾರು ನೆಲಸುತ್ತಾರೆ ಎಂಬ ಪ್ರಶ್ನೆಗೆ ಟ್ರಂಪ್, 'ನನ್ನ ಕಾಲ್ಪನಿಕ ಜಗತ್ತಿನ, ವಿಶ್ವದ ಜನ ನೆಲಸುತ್ತಾರೆ. ಬಹುಶಃ ಅದು ಅಂತರರಾಷ್ಟ್ರೀಯ, ವಿಶ್ವಾಸಾರ್ಹವಾದ ಸ್ಥಳವಾಗಲಿದೆ' ಎಂದರು.

'ಬಹುಶಃ ಜಗತ್ತಿನ ಎಲ್ಲ ಪ್ರತಿನಿಧಿಗಳು ಅಲ್ಲಿರುತ್ತಾರೆ. ಪ್ಯಾಲೆಸ್ಟೀನಿಯರೂ ಇರುತ್ತಾರೆ. ಹಲವು ಜನ ಸಮುದಾಯದವರು ಇರುತ್ತಾರೆ. ಇತಿಹಾಸದಿಂದ ನಾವು ಪಾಠ ಕಲಿಯಬೇಕು. ಇತಿಹಾಸ ಉಳಿಸುವುದು, ಪುನರಾವರ್ತನೆ ಸಲ್ಲದು. ಹೊಸತನ್ನು ಮಾಡುವ ಅವಕಾಶ ನಮಗೆ ಸಿಕ್ಕಿದೆ' ಎಂದು ಪ್ರತಿಪಾದಿಸಿದರು.

ಇತಿಹಾಸ ಬದಲಿಸುವ ನಡೆ –ನೆತನ್ಯಾಹು

ವಾಷಿಂಗ್ಟನ್ (ಪಿಟಿಐ): 'ಇದು, ಇತಿಹಾಸ ಬದಲಿಸುವ ನಡೆ ಹಾಗೂ ಮೌಲ್ಯಯುತವಾದ ಕ್ರಮ ಎಂದು ನಾನು ಭಾವಿಸುತ್ತೇನೆ' ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಪ್ರತಿಕ್ರಿಯಿಸಿದ್ದಾರೆ.

'ಗಾಜಾಪಟ್ಟಿ ಭವಿಷ್ಯದಲ್ಲಿ ಎಂದಿಗೂ ಬೆದರಿಕೆ ಒಡ್ಡಬಾರದು ಎಂಬುದಷ್ಟೇ ಇಸ್ರೇಲ್‌ನ ಗುರಿ' ಎಂದು ಅವರು ಜಂಟಿ ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ಟ್ರಂಪ್ ಅವರಿಗೆ ಭಿನ್ನ ಚಿಂತನೆಯಿದೆ. ಬದಲಾವಣೆ ಸಾಧ್ಯತೆಗಳನ್ನು ನಾವು ಚರ್ಚಿಸುತ್ತಿದ್ದೆವು. ಅವರು ಕಾರ್ಯರೂಪಕ್ಕೆ ಇಳಿಸುತ್ತಿದ್ದಾರೆ' ಎಂದು ಹೇಳಿದರು.

ಪ್ಯಾಲೆಸ್ಟೀನಿಯರ ಹಕ್ಕುಗಳನ್ನು ರಕ್ಷಿಸಬೇಕು. ಟ್ರಂಪ್ ಅವರು ಏನು ಮಾಡಬೇಕು ಎಂದಿದ್ದಾರೋ ಅದು ಅಂತರರಾಷ್ಟ್ರೀಯ ಕಾಯ್ದೆಯ ಗಂಭೀರ ಉಲ್ಲಂಘನೆ
ಮಹಮೂದ್ ಅಬ್ಬಾಸ್
ಅಧ್ಯಕ್ಷ, ಪ್ಯಾಲೆಸ್ಟೀನ್

ಪಶ್ಚಿಮ ಏಷ್ಯಾ ಪ್ರಾಂತ್ಯದಲ್ಲಿ ಎರಡು ರಾಷ್ಟ್ರಗಳ ನಿರ್ಮಾಣವೇ ಈಗಿನ ಸಮಸ್ಯೆಗೆ ಪರಿಹಾರ. ನಮ್ಮ ಈ ನಿಲುವಿನಲ್ಲಿ ಬದಲಾವಣೆ ಇಲ್ಲ
ಆಸ್ಟ್ರೇಲಿಯಾ, ನ್ಯೂಜಿಲೆಂಡ್
ಚೀನಾ

'ಬಿಗುವಿನ ಸ್ಥಿತಿ ಹೆಚ್ಚಲಿದೆ'

ದುಬೈ (ಎ.ಪಿ): ಗಾಜಾ ಪಟ್ಟಿಯನ್ನು ಸುಪರ್ದಿಗೆ ಪಡೆಯುವ ಟ್ರಂಪ್ ಅವರ ತೀರ್ಮಾನವನ್ನು ಹಮಾಸ್ ತಿರಸ್ಕರಿಸಿದೆ.

'ಗಾಜಾಪಟ್ಟಿಯಲ್ಲಿನ ನರಮೇಧಕ್ಕೆ ಇಸ್ರೇಲ್ ಅನ್ನು ಶಿಕ್ಷಿಸುವ ಬದಲಿಗೆ, ಈ ಮೂಲಕ ಪುರಸ್ಕಾರ ನೀಡಲಾಗುತ್ತಿದೆ' ಎಂದು ಹಮಾಸ್ ಬಂಡುಕೋರರ ಸಂಘಟನೆ ಪ್ರತಿಕ್ರಿಯಿಸಿದೆ.

'ಪ್ಯಾಲೆಸ್ಟೀನಿಯರನ್ನು ಎತ್ತಂಗಡಿ ಮಾಡುವುದು ಈ ವಲಯದಲ್ಲಿ ಇನ್ನಷ್ಟು ಗೊಂದಲ ಮತ್ತು ಉದ್ವಿಗ್ನ ಸ್ಥಿತಿ ಮೂಡಲು ಕಾರಣವಾಗಬಹುದು' ಎಂದು ಹಮಾಸ್ ಹೇಳಿದೆ.

ಸಂಕ್ಷಿಪ್ತ ಸುದ್ದಿ

'ಶೇಖ್ ಹಸೀನಾ ಕರೆತರಲು ಅಗತ್ಯ ಕಾನೂನು ಕ್ರಮ'

ಶೇಖ್ ಹಸೀನಾ

ಢಾಕಾ (ಪಿಟಿಐ): 'ಪದಚ್ಯುತ ಪ್ರಧಾನಿ ಶೇಖ್ ಹಸೀನಾ ಅವರನ್ನು ಭಾರತದಿಂದ ಕರೆತರಲು ಮಧ್ಯಂತರ ಸರ್ಕಾರ ಕ್ರಮಕೈಗೊಳ್ಳುತ್ತಿದೆ' ಎಂದು ಗೃಹ ಸಚಿವಾಲಯದ ಸಲಹೆಗಾರ ಲೆಫ್ಟಿನೆಂಟ್ ಜನರಲ್ (ನಿವೃತ್ತ) ಮೊಹಮ್ಮದ್ ಜಹಾಂಗೀರ್ ಅಲಂ ಚೌಧುರಿ ತಿಳಿಸಿದ್ದಾರೆ.

77 ವರ್ಷದ ಶೇಖ್ ಹಸೀನಾ ಪದಚ್ಯುತಿ ಬಳಿಕ ಭಾರತದಲ್ಲಿ ನೆಲಸಿದ್ದಾರೆ. ಶೇಖ್ ಹಸೀನಾ ಮತ್ತು ಅವರ ಸಂಪುಟದ ಇತರರ ವಿರುದ್ಧ ಈಗಾಗಲೇ ಬಾಂಗ್ಲಾದ ಅಂತರರಾಷ್ಟ್ರೀಯ ಅಪರಾಧ ನ್ಯಾಯ ಮಂಡಳಿ (ಐಸಿಟಿ) ಬಂಧನ ವಾರಂಟ್ ಜಾರಿಗೊಳಿಸಿದೆ.

ಬಂಧನ ವಾರಂಟ್ ಜಾರಿ ಆಗಿರುವ ಹಲವರನ್ನು ಕರೆತರಲು ಕಾನೂನುಕ್ರಮ ನಡೆಸಲಾಗಿದೆ.

ಶೇಖ್ ಹಸೀನಾ ವಿರುದ್ಧ ಈಗಾಗಲೇ ರೆಡ್ ನೋಟಿಸ್ ಜಾರಿ ಆಗಿದ್ದು, ಅವರಿಗೆ ಈಗ ಆಶ್ರಯ ನೀಡಿರುವ ರಾಷ್ಟ್ರವು ಅವರನ್ನು ಬಂಧಿಸಲೇ ಬೇಕಾಗುತ್ತದೆ ಎಂದು ತಿಳಿಸಿದರು.

ಗುಂಡಿನ ದಾಳಿ 11 ಮಂದಿ ಸಾವು

ಒರೆಬ್ರೊ (ಸ್ವೀಡನ್): ಸ್ಟಾಕ್‌ಹೋಂನಲ್ಲಿರುವ ವಯಸ್ಕರ ಶಿಕ್ಷಣ ಕೇಂದ್ರದಲ್ಲಿ ಅಪರಿಚಿತ ನಡೆಸಿದ ಗುಂಡಿನ ದಾಳಿಯಲ್ಲಿ 11 ಮಂದಿ ಸತ್ತಿದ್ದು, ಕನಿಷ್ಠ ಐವರು ಗಾಯಗೊಂಡಿದ್ದಾರೆ.

ದಾಳಿಕೋರನ ಗುರುತು, ದಾಳಿಗೆ ಕಾರಣ ಪತ್ತೆಯಾಗಿಲ್ಲ. ಮೃತರು 20 ವರ್ಷ ವಯಸ್ಸಿನ ಕೆಳಗಿನವರು. ಘಟನೆ ಕುರಿತು ತನಿಖೆ ನಡೆಯುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನಿಧನ ವಾರ್ತೆ

ಅಗಾ ಖಾನ್

ಲಿಸ್ಬೋನ್ (ಎಎಫ್‌ಪಿ): ಇಸ್ಮಾಯಿಲಿ ಮುಸ್ಲಿಮರ ನಾಯಕ ಅಗಾ ಖಾನ್ ಅವರು ಮಂಗಳವಾರ ಇಲ್ಲಿ ನಿಧನರಾದರು. ಅವರಿಗೆ 88 ವರ್ಷವಾಗಿತ್ತು.

'ಶೀಘ್ರ ಉತ್ತರಾಧಿಕಾರಿ ಪ್ರಕಟಿಸಲಾಗುವುದು' ಎಂದು ಅವರು ಸ್ಥಾಪಿಸಿದ್ದ ಅಗಾ ಖಾನ್ ಡೆವಲಪ್‌ಮೆಂಟ್ ನೆಟ್‌ವರ್ಕ್ ಸಂಸ್ಥೆ ಹೇಳಿಕೆಯಲ್ಲಿ ತಿಳಿಸಿದೆ.

ಈ ಸಂಸ್ಥೆಯು ಏಷ್ಯಾ ಮತ್ತು ಆಫ್ರಿಕಾದಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ನೆರವು ನೀಡುತ್ತಿದೆ. 96 ಸಾವಿರ ಜನರಿಗೆ ಉದ್ಯೋಗ ನೀಡಿದೆ.

ಸಚಿವ ಎಂ.ಬಿ.ಪಾಟೀಲ ಜತೆ ಒಳ ಒಪ್ಪಂದ ಮಾಡಿಕೊಂಡ ಯತ್ನಾಳ: ಎಂ.ಪಿ.ರೇಣುಕಾಚಾರ್ಯ ಆರೋಪ

‘ಟಿಪ್ಪು ದಿನ ಕಬಾಬ್ ತಿನ್ನುವ ಹಿಂದೂ ಹುಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಜಯಪುರದಲ್ಲಿ ಶಿಕ್ಷಣ ಸಂಸ್ಥೆಗಳು, ಕಲಬುರಗಿಯಲ್ಲಿ ಸಕ್ಕರೆ ಕಾರ್ಖಾನೆ ಹೊಂದಿದ್ದೀರಿ. ಇದಕ್ಕೆ ನಿಮಗೆ ಎಲ್ಲಿಂದ ಹಣ ಬಂತು? ನಿಮ್ಮ ಬಂಡವಾಳ ಎಲ್ಲ ಗೊತ್ತಿದೆ. ಹಿಂದೂ ಹುಲಿ ಎಂದು ಹೇಳಿಕೊಳ್ಳುವ ನೀವು ಜೆಡಿಎಸ್‌ನವರು ಸೇರಿಕೊಂಡು ಟಿಪ್ಪುಸುಲ್ತಾನನ ಜನ್ಮ ದಿನಾಚರಣೆಯಂದು ಬಿರಿಯಾನಿ, ಕಬಾಬ್ ತಿಂದಿದ್ದನ್ನು ಮರೆತು ಬಿಟ್ಟಿರಾ’ ಎಂದು ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಅವರು, ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರಿಗೆ ಛೇಡಿಸಿದರು.

ರೇಣುಕಾಚಾರ್ಯ

ಮಾಜಿ ಸಚಿವ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಮನೆಯಲ್ಲಿ ಬುಧವಾರ ಬಿ.ವೈ.ವಿಜಯೇಂದ್ರ ನಿಷ್ಠರ ಬಣದ ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು ಯತ್ನಾಳ ವಿರುದ್ಧ ಹರಿಹಾಯ್ದರು.

‘ಸಚಿವ ಎಂ.ಬಿ.ಪಾಟೀಲ ಜತೆ ಯತ್ನಾಳ ಒಳ ಒಪ್ಪಂದ ಮಾಡಿಕೊಂಡಿದ್ದಾರೆ. ಯತ್ನಾಳ ಮೂಲತಃ ಬಬಲೇಶ್ವರದವರು. ಆ ಕ್ಷೇತ್ರದಲ್ಲಿ ಏಕೆ ಸ್ಪರ್ಧೆ ಮಾಡುವುದಿಲ್ಲ? ಏಕೆಂದರೆ ಕಾಂಗ್ರೆಸ್ ಜತೆಗಿನ ಒಳ ಒಪ್ಪಂದವೇ ಕಾರಣ. ಅಪ್ಪು ಪಟ್ಟಣಶೆಟ್ಟಿಗೆ ಟಿಕೆಟ್ ಕೊಟ್ಟಿದ್ದರೆ ಯತ್ನಾಳ ಶಾಸಕ ಆಗುತ್ತಿರಲಿಲ್ಲ. ಹಿಂದೆ ಪಕ್ಷದಿಂದ ಉಚ್ಚಾಟನೆಗೊಂಡಿದ್ದಾಗ, ಯಡಿಯೂರಪ್ಪ ಅವರ ಕೈ–ಕಾಲು ಹಿಡಿದು ಪಕ್ಷಕ್ಕೆ ವಾಪಸ್ ಬಂದರು. ಅವರು ನಾಲಗೆ ಬಿಗಿ ಹಿಡಿದು ಮಾತನಾಡಬೇಕು’ ಎಂದರು.

ಯತ್ನಾಳ, ಕುಮಾರ್ ಬಂಗಾರಪ್ಪ, ಜಿ.ಎಂ.ಸಿದ್ದೇಶ್ವರ, ಬಿ.ಪಿ.ಹರೀಶ್ ಅವರನ್ನು ಮುಲಾಜಿಲ್ಲದೇ ಪಕ್ಷದಿಂದ ಉಚ್ಚಾಟಿಸಬೇಕು. ಮೂರು– ನಾಲ್ಕು ಜನ ಸೇರಿಕೊಂಡು ದೆಹಲಿಗೆ ಹೋದರೆ, ಇಡೀ ಪಕ್ಷವೇ ಹೋಗಿದೆ ಎಂಬಂತೆ ಬಿಂಬಿಸುತ್ತಿದ್ದಾರೆ. ಇವರು ಕಾಮಿಡಿ ಪೀಸ್‌ಗಳು ಮತ್ತು ಮಾನಸಿಕ ಅಸ್ವಸ್ಥರು ಎಂದು ಟೀಕಿಸಿದರು.

ದೆಹಲಿಯಲ್ಲಿ ಪಕ್ಷದ ವರಿಷ್ಠರನ್ನು ಭೇಟಿ ಮಾಡಲು ಇವರಿಗೆ ಅವಕಾಶವೇ ಸಿಕ್ಕಿಲ್ಲ. ಆದರೆ, ಭೇಟಿ ಮಾಡಿ ದೂರು ಕೊಟ್ಟಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದಾರೆ. ನಡ್ಡಾ ಅವರನ್ನು ಭೇಟಿ ಮಾಡಿದ್ದರೆ ಫೋಟೊ ಬಿಡುಗಡೆ ಮಾಡಲಿ ಎಂದು ಅವರು ಸವಾಲು ಹಾಕಿದರು.

‘ಮಿಸ್ಟರ್ ಕುಮಾರ್ ಬಂಗಾರಪ್ಪ ನಿಮ್ಮ ತಂದೆ ಬಿಜೆಪಿಗೆ ಬಂದಾಗ ನೀನು ಬಿಜೆಪಿಗೆ ಬರಲಿಲ್ಲ. ಬಿಜೆಪಿಯ ಸೊರಬ ಕಾರ್ಯಕ್ರಮಕ್ಕೂ ಬಂದಿರಲಿಲ್ಲ. ಮೂಲ ಬಿಜೆಪಿ ಕಾರ್ಯಕರ್ತರನ್ನು ಮರೆತ ಕಾರಣಕ್ಕೆ ಕಳೆದ ವಿಧಾನಸಭೆ ಚುನಾವಣೆಯಲ್ಲಿ ಸೋಲಬೇಕಾಯಿತು. ಸೋತ ಮೇಲೂ ಕಾಂಗ್ರೆಸ್ ಸೇರುವ ಪ್ರಯತ್ನ ಮಾಡಿದೆ. ಮಧು ಬಂಗಾರಪ್ಪ ಕಾಂಗ್ರೆಸ್ ಸೇರುವುದಕ್ಕೂ ಅಡ್ಡಗಾಲು ಹಾಕಿದೆ. ಈಗ ನ್ಯಾಷನಲ್ ಲೀಡರ್ ಆಗಲು ಹೊರಟಿದ್ದೀಯಾ’ ಎಂದು ರೇಣುಕಾಚಾರ್ಯ ಏಕವಚನದಲ್ಲಿ ಹೇಳಿದರು.

‘ಬಿ.ಪಿ.ಹರೀಶ್ ಶಾಸಕನಾಗಲು ಯಡಿಯೂರಪ್ಪ ಅವರೇ ಕಾರಣ. ಹರಿಹರದಲ್ಲಿ ನಿನ್ನ ಯೋಗ್ಯತೆ ಏನು ಎಂಬುದು ಗೊತ್ತಿದೆ. ಕಾಂಗ್ರೆಸ್ ಜತೆ ಒಳ ಒಪ್ಪಂದ ಮಾಡಿಕೊಂಡು ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯನ್ನು ಸೋಲಿಸಿದೆ’ ಎಂದರು.

ಸಭೆಯಲ್ಲಿ ಮಾಜಿ ಶಾಸಕ ಸಂಪಂಗಿ, ಕಟ್ಟಾ ಸುಬ್ರಹ್ಮಣ್ಯ ನಾಯ್ಡು, ಎಂ.ಡಿ.ಲಕ್ಷ್ಮಿನಾರಾಯಣ ಮತ್ತು ಇತರರು ಇದ್ದರು.

‘ರಾಜ್ಯಾಧ್ಯಕ್ಷ ಸ್ಥಾನದ ಆಕಾಂಕ್ಷಿಯಲ್ಲ’


ಆರ್‌.ಅಶೋಕ

ಬೆಂಗಳೂರು: ‘ವಿರೋಧಪಕ್ಷದ ನಾಯಕನಾಗಿ ರಾಜ್ಯ ಸರ್ಕಾರದ ಜನವಿರೋಧಿ ನೀತಿಗಳ ವಿರುದ್ಧ ಹೋರಾಟ ಮಾಡುತ್ತಿದ್ದೇನೆಯೇ ಹೊರತು, ರಾಜ್ಯಾಧ್ಯಕ್ಷ ಸ್ಥಾನಕ್ಕೆ ನಾನೆಂದೂ ಅರ್ಜಿ ಹಾಕಿಲ್ಲ, ಆಕಾಂಕ್ಷಿಯೂ ಅಲ್ಲ’ ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದರು.

‘ಹಿರಿಯರು ನೀಡಿದ ಜವಾಬ್ದಾರಿಯನ್ನು ಸರಿಯಾಗಿ ನಿಭಾಯಿಸುತ್ತಿದ್ದೇನೆ. ಅಧ್ಯಕ್ಷನಾಗುವ ಬಗ್ಗೆ ಯೋಚಿಸಿಯೂ ಇಲ್ಲ. ಅಧ್ಯಕ್ಷ ಸ್ಥಾನದ ವಿಚಾರದಲ್ಲಿ ಸಮಸ್ಯೆ ಆಗಿರುವುದು ನೋವು ತಂದಿದೆ. ಎಲ್ಲರೂ ಹೊಂದಾಣಿಕೆ ಮಾಡಿಕೊಂಡು ಮುಂದುವರೆಯಬೇಕಿತ್ತು’ ಎಂದು ಅವರು ಸುದ್ದಿಗಾರರ ಜತೆ ಮಾತನಾಡಿ ತಿಳಿಸಿದರು.

‘ಬಸನಗೌಡ ಪಾಟೀಲ ಯತ್ನಾಳ ಅವರ ತಂಡದ ಕುರಿತು ಪಕ್ಷದ ಹಿರಿಯ ನಾಯಕರೊಂದಿಗೆ ಚರ್ಚಿಸಿದ್ದೇನೆ. ಪಕ್ಷದಲ್ಲಿ ಎಲ್ಲ ಸಮಸ್ಯೆ ನಿವಾರಣೆಯಾಗಲಿ ಎಂದೇ ನಾನು ಬಯಸುತ್ತೇನೆ. ಕರ್ನಾಟಕದಲ್ಲಿ ಮಾತ್ರ ಬದಲಾವಣೆ ಆಗುತ್ತಿಲ್ಲ. ವಿವಿಧ ರಾಜ್ಯ ಘಟಕಗಳ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯುತ್ತಿದೆ. ಎಲ್ಲರ ಅಭಿಪ್ರಾಯ ಪಡೆಯಲಾಗುತ್ತಿದೆ’ ಎಂದರು.

‘ಯಡಿಯೂರಪ್ಪ ಮುಂದಾಳತ್ವ ವಹಿಸಲಿ’

ಬಿ.ಶ್ರೀರಾಮುಲು

ಕೋಲಾರ: ಬಿಜೆಪಿಯಲ್ಲಿ ಗೊಂದಲಗಳು ಇರುವುದು ನಿಜ. ಆ ಎಲ್ಲ ಗೊಂದಲಗಳು ನಿವಾರಣೆಯಾಗಿ ರಾಜ್ಯದಲ್ಲಿ ಮತ್ತೆ ಬಿಜೆಪಿ ಅಧಿಕಾರಕ್ಕೆ ಬರಬೇಕು ಎಂದರೆ ಬಿ.ಎಸ್. ಯಡಿಯೂರಪ್ಪ ಮತ್ತೆ ಪಕ್ಷದ ಮುಂದಾಳತ್ವ ವಹಿಸಿಕೊಳ್ಳಬೇಕು ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ಅಭಿಪ್ರಾಯಪಟ್ಟಿದ್ದಾರೆ.

ತಾಲ್ಲೂಕಿನ ಕೆಂದಟ್ಟಿ ಗ್ರಾಮದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯಡಿಯೂರಪ್ಪ ಅಧ್ಯಕ್ಷರಾಗಿದ್ದಾಗ ಯಾರೂ ತುಟಿ ಪಿಟಿಕ್ ಎನ್ನುತ್ತಿರಲಿಲ್ಲ ಎಂದರು.

‘ಮೊದಲ ಬಾರಿಗೆ ಅಧ್ಯಕ್ಷರಾಗಿರುವ ವಿಜಯೇಂದ್ರ ಅವರಿಗೆ ಅನುಭವದ ಕೊರತೆ ಇದೆ. ಹಾಗಂತ ಅವರನ್ನು ಬದಲಾಯಿಸುವಂತೆ ಒತ್ತಾಯ ಮಾಡುವುದಿಲ್ಲ’ ಎಂದು ಅವರು ಸ್ಪಷ್ಟಪಡಿಸಿದರು.

‘ಆಕಸ್ಮಾತ್ ಹೈಕಮಾಂಡ್ ವಿಜಯೇಂದ್ರ ಬದಲಾಯಿಸಿದರೆ ಬಿಜೆಪಿ ಅಧ್ಯಕ್ಷನಾಗಲು ನಾನು ಸಿದ್ಧ’ ಎಂದರು.

ಬಿವೈವಿ ಪರ ಪೇಮೆಂಟ್ ಸ್ವಾಮೀಜಿಗಳು: ಯತ್ನಾಳ

ಒಂದನೇ ಪುಟದಿಂದ...

‘ಬಹಳಷ್ಟು ಲಿಂಗಾಯತ ನಾಯಕರ ರಾಜಕೀಯ ಜೀವನವನ್ನು ಯಡಿಯೂರಪ್ಪ ಮುಗಿಸಿದರು. ಬಸವರಾಜ ಪಾಟೀಲ ಸೇಡಂ, ಬಿ.ಬಿ.ಶಿವಪ್ಪ, ಜಿ.ಎಂ. ಸಿದ್ದೇಶ್ವರ, ಮಲ್ಲಿಕಾರ್ಜುನಯ್ಯ ಅವರನ್ನು ಮುಗಿಸಿದರು. ನನ್ನನ್ನು ಮುಗಿಸಲು ಸತತ ಪ್ರಯತ್ನ ಮಾಡಿದರು. ಇದೀಗ, ರಮೇಶ ಜಾರಕಿಹೊಳಿ ಅವರಿಗೆ ಬೆದರಿಕೆ ಹಾಕುತ್ತಿದ್ದಾರೆ’ ಎಂದರು.

‘ಹಿಂದೂಗಳ ಹತ್ಯೆಯಾದಾಗ ಯಡಿಯೂರಪ್ಪ ಮೌನವಾಗಿದ್ದರು. ಶಿವಮೊಗ್ಗದಲ್ಲಿ ಔರಂಗಜೇಬನ ಫೋಟೋ ಹಾಕಿದ ಸಂದರ್ಭದಲ್ಲೂ ಹೋರಾಟ ಮಾಡಲಿಲ್ಲ. ಸಚಿವ ಜಮೀರ್ ಅಹ್ಮದ್ ಖಾನ್ ಜತೆಗೆ ಹೊಂದಾಣಿಕೆ ಮಾಡಿಕೊಂಡಿದ್ದಾರೆ. ಭ್ರಷ್ಟಾಚಾರ ಹಾಗೂ ಕುಟುಂಬ ರಾಜಕಾರಣ ಕೊನೆಗಾಣಿಸಲು ನಮ್ಮ ಹೋರಾಟ ನಿರಂತರ’ ಎಂದರು.

‘ಕಾಂಗ್ರೆಸ್ ಕೊಟ್ಟ ಭಿಕ್ಷೆಯಿಂದ ವಿಜಯೇಂದ್ರ ಶಾಸಕರಾಗಿದ್ದಾರೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆಶೀರ್ವಾದದಿಂದ ಶಾಸಕರಾಗಿದ್ದಾರೆ. ಮೊದಲ ಬಾರಿಗೆ ಶಾಸಕರಾಗಿ ರಾಜ್ಯ ಘಟಕದ ಅಧ್ಯಕ್ಷರಾಗಿದ್ದಾರೆ. ಬಿಜೆಪಿ ಸರ್ಕಾರ ಬರಲು ಯಡಿಯೂರಪ್ಪ ಕಾರಣ ಅಲ್ಲ. ರಮೇಶ ಜಾರಕಿಹೊಳಿ, ಸಿ.ಪಿ.ಯೋಗೇಶ್ವರ ಅವರಿಂದಾಗಿ ನಮ್ಮ ಸರ್ಕಾರ ಬಂತು’ ಎಂದು ಅವರು ಹೇಳಿದರು.

ಬಿಜೆಪಿ ಭಿನ್ನರಿಗೆ ಸಿಗದ ವರಿಷ್ಠರು

ಒಂದನೇ ಪುಟದಿಂದ...

‘ಯಡಿಯೂರಪ್ಪ ಬಳಿ ನಾನೇ ಲಿಂಗಾಯತ ನಾಯಕ ಎಂದು ವಿಜಯೇಂದ್ರ ಬಿಂಬಿಸಿಕೊಳ್ಳುತ್ತಿದ್ದಾರೆ. ಪಕ್ಷದ ಅಧ್ಯಕ್ಷ ಸ್ಥಾನದಲ್ಲಿ ಮುಂದುವರಿದರೆ 2028ರಲ್ಲಿ ಮುಖ್ಯಮಂತ್ರಿಯಾಗಬಹುದು ಎಂದೂ ಲೆಕ್ಕಾಚಾರ ಹಾಕಿದ್ದಾರೆ. ಅದಕ್ಕಾಗಿ ಗುಣಾಕಾರ, ಭಾಗಾಕಾರ ನಡೆಸಿ ಪಕ್ಷದ ಹಿರಿಯ ನಾಯಕರನ್ನು ತುಳಿಯುವ ಕೆಲಸ ಮಾಡುತ್ತಿದ್ದಾರೆ. ಇಂತಹ ಪ್ರವೃತ್ತಿಗೆ ಕಡಿವಾಣ ಹಾಕಬೇಕು. ವಿಜಯೇಂದ್ರ ವಿರುದ್ಧ ಲಿಂಗಾಯತ ನಾಯಕರೆಲ್ಲ ಒಟ್ಟಾಗಿ ವರಿಷ್ಠರಿಗೆ ಸ್ಪಷ್ಟ ಸಂದೇಶ ರವಾನಿಸಬೇಕು’ ಎಂಬ ನಿಲುವಿಗೆ ತಟಸ್ಥ–ಭಿನ್ನಮತೀಯ ನಾಯಕರು ಬಂದರು ಎಂದು ಮೂಲಗಳು ತಿಳಿಸಿವೆ.

‘ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರನ್ನು ಮಾಜಿ ಸಚಿವ ಅರವಿಂದ ಲಿಂಬಾವಳಿ, ಪಕ್ಷದ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಬಿ.ಎಲ್. ಸಂತೋಷ್ ಅವರನ್ನು ಕುಮಾರ್ ಬಂಗಾರಪ್ಪ ಅವರು ಭೇಟಿ ಮಾಡಿ ವಿಜಯೇಂದ್ರ ಕಾರ್ಯವೈಖರಿ ಬಗ್ಗೆ ದೂರು ಸಲ್ಲಿಸಿದ್ದಾರೆ. ಲಿಂಗಾಯತ ಸಮುದಾಯದ ನಾಯಕರೆಲ್ಲ ವರಿಷ್ಠರನ್ನು ಭೇಟಿ ಮಾಡಿ ನಿಲುವು ತಿಳಿಸಬೇಕು. ಅದಕ್ಕೂ ಮುನ್ನ, ಲಿಂಗಾಯತ ಸಂಸದರು ಹಾಗೂ ಶಾಸಕರು ಸಭೆ ನಡೆಸಿ ವಿಜಯೇಂದ್ರ ವಿರುದ್ಧದ ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸಬೇಕು ಎಂದು ಒಮ್ಮತಕ್ಕೆ ಬಂದಿದ್ದಾರೆ. ಕೇಂದ್ರ ಸಚಿವ ವಿ.ಸೋಮಣ್ಣ ನಿವಾಸದಲ್ಲಿ ಇದೇ 10ರಂದು ಸಭೆ ನಡೆಸುವ ಕುರಿತು ಚರ್ಚೆಯಾಗಿದೆ’ ಎಂದು ಮೂಲಗಳು ತಿಳಿಸಿವೆ.

‘ನನಗೆ ಹಂಚಿಕೆಯಾಗಿರುವ ಸಂಸದರ ನಿವಾಸಕ್ಕೆ ಇದೇ 10ರಂದು ಸ್ಥಳಾಂತರಗೊಳ್ಳಲಿದ್ದೇನೆ. ಅಂದು ಪೂಜೆ ಇಟ್ಟುಕೊಂಡಿದ್ದೇವೆ. ಬಿ.ವೈ. ರಾಘವೇಂದ್ರ ಸೇರಿದಂತೆ ಎನ್‌ಡಿಎ ಮೈತ್ರಿಕೂಟದ 19 ಸಂಸದರನ್ನು ಆಹ್ವಾನಿಸಿದ್ದೇನೆ. ಇದಕ್ಕೆ ವಿಶೇಷ ಅರ್ಥ ಕಲ್ಪಿಸಬೇಕಿಲ್ಲ. ನಾನು ಯಾವುದೇ ಬಣದಲ್ಲಿ ಗುರುತಿಸಿಕೊಂಡಿಲ್ಲ’ ಎಂದು ವಿ.ಸೋಮಣ್ಣ ಸ್ಪಷ್ಟಪಡಿಸಿದರು.

ಜೆ.ಪಿ.ನಡ್ಡಾ ಅಥವಾ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಿ ವಿಜಯೇಂದ್ರ ವಿರುದ್ಧ ದೂರು ಸಲ್ಲಿಸಬೇಕು ಎಂದು ಭಿನ್ನಮತೀಯ ನಾಯಕರು ಬಹಳ ಪ್ರಯತ್ನ ಪಟ್ಟರು. ಆದರೆ, ಅವರ ಪ್ರಯತ್ನಕ್ಕೆ ಯಶಸ್ಸು ಸಿಗಲಿಲ್ಲ.

‘ಪಕ್ಷದ ವರಿಷ್ಠರು ದೆಹಲಿ ವಿಧಾನಸಭಾ ಚುನಾವಣೆ ಹಾಗೂ ಸಂಸತ್ ಕಲಾಪದಲ್ಲಿ ನಿರತರಾಗಿರುವುದರಿಂದ ಭೇಟಿಗೆ ಕಾಲಾವಕಾಶ ಸಿಕ್ಕಿಲ್ಲ. ಮುಂದಿನ ದಿನಗಳಲ್ಲಿ ವರಿಷ್ಠರನ್ನು ಭೇಟಿ ಮಾಡಲಾಗುವುದು’ ಎಂದು ಭಿನ್ನಮತೀಯ ನಾಯಕರು ತಿಳಿಸಿದರು. ‘ನಮ್ಮ ಕೆಲವು ನಾಯಕರು ಕೇಂದ್ರದ ಕೆಲವು ನಾಯಕರನ್ನು ಮಂಗಳವಾರ ಭೇಟಿ ಮಾಡಿದ್ದಾರೆ. ವರಿಷ್ಠರ ಭೇಟಿಗೆ ಸಮಯ ಕೇಳಿದ್ದೇವೆ. ಸಮಯಾವಕಾಶ ಕೊಟ್ಟ ಕೂಡಲೇ ಭೇಟಿ ಮಾಡುತ್ತೇವೆ’ ಎಂದು ಯತ್ನಾಳ ಮಾಹಿತಿ ನೀಡಿದರು. ವರಿಷ್ಠರ ಭೇಟಿ ಸಾಧ್ಯವಾಗದ ಕಾರಣ ಭಿನ್ನಮತೀಯ ನಾಯಕರು ದೆಹಲಿಯಿಂದ ನಿರ್ಗಮಿಸಿದರು.

‘ಪರಿಶಿಷ್ಟರ ಭೂ ಸಮಸ್ಯೆ ಪರಿಹರಿಸಲು ಆದ್ಯತೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ಜಮೀನು ಪರಭಾರೆ ನಿಷೇಧ- ಪಿಟಿಸಿಎಲ್) ಕಾಯ್ದೆಗೆ ವ್ಯತಿರಿಕ್ತವಾಗಿ ಇರುವ ಅಂಶಗಳನ್ನು ಕಾನೂನಾತ್ಮಕವಾಗಿ ಪರಿಹರಿಸುವುದು ನಮ್ಮ ಗುರಿ’ ಎಂದು ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ತಿಳಿಸಿದರು.

ಪಿಟಿಸಿಎಲ್ ಕಾಯ್ದೆಗೆ ಸಂಬಂಧಿಸಿದಂತೆ ಸಮಾಜ ಕಲ್ಯಾಣ ಸಚಿವ ಮಹದೇವಪ್ಪ ಸಭೆ ನಡೆಸಿದರು. ಕಂದಾಯ ಸಚಿವ ಕೃಷ್ಣ ಬೈರೇಗೌಡ, ಅಧಿಕಾರಿಗಳು ಇದ್ದರು

ಈ ಕಾಯ್ದೆಗೆ ಸಂಬಂಧಿಸಿದಂತೆ ಸಲ್ಲಿಕೆಯಾಗಿದ್ದ ಮೇಲ್ಮನವಿಯಲ್ಲಿ ಸುಪ್ರೀಂ ಕೋರ್ಟ್ 2009ರಲ್ಲಿ ನೀಡಿದ್ದ ಆದೇಶದ ವಿರುದ್ಧ ಪುನರ್ ಪರಿಶೀಲನಾ ಅರ್ಜಿ ದಾಖಲಿಸುವ ಕುರಿತಾಗಿ ಕಂದಾಯ ಇಲಾಖೆ ಸಚಿವ ಕೃಷ್ಣ ಬೈರೇಗೌಡ, ಹಿರಿಯ ಅಧಿಕಾರಿಗಳು ಮತ್ತು ಕಾನೂನು ತಜ್ಞರ ಅವರು ಬುಧವಾರ ಚರ್ಚೆ ನಡೆಸಿದರು.

ಪಿಟಿಸಿಎಲ್ ಕಾಯ್ದೆ ಮತ್ತು ಪರಿಶಿಷ್ಟರ ಭೂಮಿಯ ಮೇಲಿನ ಹಕ್ಕುಗಳ ಕುರಿತ ಹೋರಾಟವು ಸುದೀರ್ಘ ಅವಧಿಯಿಂದ ಇದೆ. ಪರಿಶಿಷ್ಟರು ಭೂಮಿಯ ಹಕ್ಕು ಪಡೆಯುವ ನಿಟ್ಟಿನಲ್ಲಿ ಅನುಸರಿಸಬೇಕಾದ ಕ್ರಮಗಳ ಕುರಿತು ಸಭೆಯಲ್ಲಿ ಸಮಾಲೋಚನೆ ನಡೆಯಿತು.

‘ಭೂಮಿಯ ಹಕ್ಕು ಎಂದರೆ, ಬದುಕಿನ ಮತ್ತು ವೈಯಕ್ತಿಕ ಘನತೆಯ ಸೂಚಕವಾಗಿದ್ದು, ಪರಿಶಿಷ್ಟರಿಗೆ ಭೂಮಿ ನೀಡಲು ಮತ್ತು ಇರುವ ಭೂಮಿಯ ಸುತ್ತ ಉಂಟಾಗಿರುವ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಸರ್ಕಾರವು ದೂರದೃಷ್ಟಿಯ ಪರಿಹಾರ ಕ್ರಮಗಳನ್ನು ಕೈಗೊಳ್ಳಲಿದೆ. ಇದು ಸರ್ಕಾರದ ಬದ್ಧತೆಯೂ ಆಗಿದೆ’ ಎಂದು ಮಹದೇವಪ್ಪ ಹೇಳಿದರು.

‘ಪಿಟಿಸಿಎಲ್ ಕಾಯ್ದೆ ಮತ್ತು ಪರಿಶಿಷ್ಟ ಸಮುದಾಯಗಳಿಗೆ ಭೂಮಿ ಹಂಚಿಕೆ ವಿಷಯಕ್ಕೆ ಸಂಬಂಧಿಸಿದಂತೆ ದಲಿತ ಸಂಘಟನೆಗಳು ಮತ್ತು ಹೋರಾಟಗಾರರ ಜೊತೆ ಸಭೆ ನಡೆಸಲಾಗಿದೆ. ಅವರ ಬೇಡಿಕೆಗಳ ಜೊತೆಗೆ, ಪರಿಶಿಷ್ಟ ಸಮುದಾಯಗಳ ಭೂಮಿಯ ಹಕ್ಕುಗಳಿಗೆ ತೊಂದರೆ ಆಗದಂತೆ ದೂರದೃಷ್ಟಿಯ ನೆಲೆಯಲ್ಲಿ ಸರ್ಕಾರವು ಈ ವಿಷಯವನ್ನು ನಿರ್ವಹಿಸಲಿದೆ. ಪರಿಶಿಷ್ಟರಿಗೆ ಶಾಶ್ವತವಾದ ಪರಿಹಾರಗಳನ್ನು ನೀಡಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು’ ಎಂದೂ ಅವರು ತಿಳಿಸಿದರು.

ಕಾಳ್ಗಿಚ್ಚು ಕೊಟ್ಟೂರು ತಾಲ್ಲೂಕಿನ ನಿಂಬಳಗೆರೆ ಸಮೀಪದ ಅರಣ್ಯದ ಅಂಚಿನಲ್ಲಿ ಮಂಗಳವಾರ ರಾತ್ರಿ ಕಾಳ್ಗಿಚ್ಚು ಕಾಣಿಸಿಕೊಂಡಿದ್ದು, ಅರಣ್ಯ ಇಲಾಖೆ ಸಿಬ್ಬಂದಿ ಬೆಂಕಿ ನಂದಿಸುವಲ್ಲಿ ಯಶಸ್ವಿಯಾದರು ಪ್ರಜಾವಾಣಿ ಚಿತ್ರ

ರಾಜ್ಯದಲ್ಲಿ ಹೆಚ್ಚುತ್ತಿದೆ ಬಿಸಿಲ ಝಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಬೇಸಿಗೆ ಆರಂಭಕ್ಕೂ ಮುನ್ನವೇ ಬಿಸಿಲ ಧಗೆ ದಿನದಿಂದ ದಿನಕ್ಕೆ ಹೆಚ್ಚಲಾರಂಭಿಸಿದ್ದು, ಬಹುತೇಕ ಎಲ್ಲ ಜಿಲ್ಲೆಗಳಲ್ಲಿ ತಾಪಮಾನ 30 ಡಿಗ್ರಿ ಸೆಲ್ಸಿಯಸ್ ದಾಟುತ್ತಿದೆ.

ವಾತಾವರಣದಲ್ಲಿನ ಉಷ್ಣಾಂಶವು ಸಾಮಾನ್ಯಕ್ಕಿಂತ ಹೆಚ್ಚಿದೆ. ಮುಂದಿನ ಒಂದು ವಾರದ ಅವಧಿಯಲ್ಲಿ ಗರಿಷ್ಠ ತಾಪಮಾನವು 2ರಿಂದ 4 ಡಿಗ್ರಿ ಸೆಲ್ಸಿಯಸ್ ಹೆಚ್ಚಳವಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

‘ವಾತಾವರಣದಲ್ಲಿ ತೇವಾಂಶ ಇಲ್ಲದೆ, ಒಣಹವೆ ಇರುವುದರಿಂದ ತಾಪಮಾನ ಏರಿಕೆ ಕಂಡಿದೆ. ಇದೇ ವಾತಾವರಣ ಇನ್ನೂ ಒಂದು ವಾರ ಮುಂದುವರೆಯಲಿದೆ’ ಎಂದು ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಬುಧವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ ಹಿಂದಿನ 24 ಗಂಟೆಗಳ ಅವಧಿಯಲ್ಲಿ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಗರಿಷ್ಠ ಉಷ್ಣಾಂಶ 30 ಡಿಗ್ರಿ ಸೆಲ್ಸಿಯಸ್ ದಾಟಿದೆ. ಕಲಬುರಗಿ ಹಾಗೂ ಹಾವೇರಿಯಲ್ಲಿ 37.4 ಡಿಗ್ರಿ ಸೆಲ್ಸಿಯಸ್ ಗರಿಷ್ಠ ತಾಪಮಾನ ದಾಖಲಾಗಿದೆ. ಬೆಳಗಾವಿ, ಬೀದರ್, ದಾವಣಗೆರೆ, ಧಾರವಾಡ, ಗದಗ, ಯಾದಗಿರಿ, ವಿಜಯಪುರ, ಶಿವಮೊಗ್ಗ ಹಾಗೂ ರಾಯಚೂರು ಜಿಲ್ಲೆಯಲ್ಲೂ ಗರಿಷ್ಠ ಉಷ್ಣಾಂಶ 36 ಡಿಗ್ರಿ ಸೆಲ್ಸಿಯಸ್ ದಾಟಿದೆ.

ಬೆಂಗಳೂರಿನಲ್ಲಿಯೂ ತಾಪಮಾನ ಏರಿಕೆ ಕಂಡಿದ್ದು, 33.4 ಡಿಗ್ರಿ ಸೆಲ್ಸಿಯಸ್ ಗರಿಷ್ಠ ಉಷ್ಣಾಂಶ ದಾಖಲಾಗಿದೆ. ಮುಂದಿನ ಎರಡು ದಿನಗಳು ಗರಿಷ್ಠ ಉಷ್ಣಾಂಶ 33 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ ಉಷ್ಣಾಂಶ 16 ಡಿಗ್ರಿ ಸೆಲ್ಸಿಯಸ್ ಇರುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಎಪಿಎಂಸಿ ಕಾಯ್ದೆ ರದ್ದತಿ ಏಕಿಲ್ಲ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದ ಬಿಜೆಪಿ ಸರ್ಕಾರವು ಜಾರಿಗೆ ತಂದಿದ್ದ ಎಪಿಎಂಸಿ ತಿದ್ದುಪಡಿ ಕಾಯ್ದೆಯನ್ನು ತೆಗೆದುಹಾಕುತ್ತೇವೆ ಎಂದು ಹೇಳಿ ಅಧಿಕಾರಕ್ಕೆ ಬಂದು, ವರ್ಷ ಕಳೆದರೂ ಅದನ್ನು ಅನುಷ್ಠಾನಕ್ಕೆ ತರದೇ ಇರುವುದು ಏಕೆ ಎಂಬುದನ್ನು ಉತ್ತರಿಸಿ’ ಎಂದು ರೈತ ಹೋರಾಟಗಾರರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಬಹಿರಂಗ ಪತ್ರ ಬರೆದಿದ್ದಾರೆ.

ಕೇಂದ್ರ, ರಾಜ್ಯ ಸರ್ಕಾರಗಳ ರೈತ–ಕಾರ್ಮಿಕ ವಿರೋಧಿ ನೀತಿಗಳ ಸಂಯುಕ್ತ ಹೋರಾಟ ಸಮನ್ವಯ ಸಮಿತಿಯಿಂದ ಈ ಪತ್ರ ಬರೆಯಲಾಗಿದೆ. ‘ಪ್ರಜಾವಾಣಿ’ಯಲ್ಲಿ ಈಚೆಗೆ ಪ್ರಕಟವಾಗಿದ್ದ ‘ಹಳೆ ಕಾಯ್ದೆಗೆ ಜೋತುಬಿದ್ದ ಸರ್ಕಾರ’ ವರದಿಯನ್ನು ಪತ್ರದಲ್ಲಿ ಉಲ್ಲೇಖಿಸಲಾಗಿದೆ.

‘ತಾನು ವಿರೋಧ ಪಕ್ಷದಲ್ಲಿದ್ದಾಗ ಕಾಂಗ್ರೆಸ್, ಕೇಂದ್ರ ಸರ್ಕಾರದ ಕೃಷಿ ಕಾಯ್ದೆಗಳನ್ನು ವಿರೋಧಿಸಿತ್ತು. ಅದರ ಅಧಾರದಲ್ಲಿ ಬಿಜೆಪಿ ಸರ್ಕಾರ ರಾಜ್ಯದಲ್ಲಿ ಜಾರಿಗೆ ತಂದಿದ್ದ ಎಪಿಎಂಸಿ ತಿದ್ದುಪಡಿ ಕಾಯ್ದೆಯನ್ನೂ ಖಂಡಿಸಿತ್ತು. ನಾವು ಹೋರಾಡುವಾಗ ಸಿದ್ದರಾಮಯ್ಯ ನಮ್ಮ ಜತೆ ಬಂದು ಕುಳಿತಿದ್ದರು. ಆದರೆ ಅಧಿಕಾರಕ್ಕೆ ಬಂದ ನಂತರ, ತಮ್ಮ ಮಾತನ್ನು ಈಡೇರಿಸಿಲ್ಲ’ ಎಂದಿದೆ.

‘ತಾನು ವಿರೋಧಿಸಿದ್ದ ಅದೇ ಕಾಯ್ದೆಗಳ ಅಡಿಯಲ್ಲಿ ಶಿಫಾರಸು ನೀಡಿ ಎಂದು ಕಾಂಗ್ರೆಸ್ ಸರ್ಕಾರವು ರಾಜ್ಯ ಕೃಷಿ ಬೆಲೆ ಆಯೋಗಕ್ಕೆ ಸೂಚನೆ ನೀಡಿದೆ. ರೈತರ ಆದಾಯ ಹೆಚ್ಚಿಸುವ, ಎಂಎಸ್‌ಪಿಗೆ ಕಾನೂನಿನ ಖಾತರಿ ನೀಡುವ ಒಂದು ಮಾತೂ ಸೂಚನೆಯಲ್ಲಿ ಇಲ್ಲ. ಸರ್ಕಾರದ ಈ ನಡೆಯಿಂದ ರಾಜ್ಯದ ರೈತರಿಗೆ ಅಪಾರ ನೋವಾಗಿದೆ. ಇದಕ್ಕೆಲ್ಲಾ ಸರ್ಕಾರ ಉತ್ತರ ಕೊಡಲೇಬೇಕು’ ಎಂದು ಒತ್ತಾಯಿಸಿದೆ.

ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ, ರೈತ ಸಂಘ ಮತ್ತು ಹಸಿರುಸೇನೆಯ ರಾಜ್ಯಾಧ್ಯಕ್ಷ ಎಚ್.ಆರ್.ಬಸವರಾಜಪ್ಪ, ಪ್ರಾಂತ ರೈತ ಸಂಘದ ಟಿ. ಯಶವಂತ್, ರೈತ ಕೂಲಿ ಸಂಘದ ಎಚ್.ವಿ.ದಿವಾಕರ್, ಭಾರತೀಯ ಕೃಷಿಕ ಸಮಾಜದ ಸಿದಗೌಡ ಮೋದಗಿ, ಕರ್ನಾಟಕ ಜನಶಕ್ತಿಯ ನೂರ್ ಶ್ರೀಧರ್ ಸೇರಿ ಹತ್ತು ಮಂದಿ ಪತ್ರಕ್ಕೆ ಸಹಿ ಮಾಡಿದ್ದಾರೆ.

‘ಪ್ರಧಾನಿ ಸ್ಥಾನಕ್ಕೆ ಗಡ್ಕರಿ; ಬಿಜೆಪಿಯಲ್ಲಿ ಚರ್ಚೆ’

ಹುಬ್ಬಳ್ಳಿ: ‘ದೇಶದ ಅರ್ಥವ್ಯವಸ್ಥೆ ಕುಸಿದಿದೆ, ವಿಶ್ವ ಗುರುವಿನಿಂದ (ಮೋದಿ) ಏನೂ ಆಗುತ್ತಿಲ್ಲ, ಅವರನ್ನು ಬದಲಿಸಬೇಕು, ಗಡ್ಕರಿ ಪ್ರಧಾನಿಯಾಗಬೇಕು ಎನ್ನುವ ಕುರಿತು ಬಿಜೆಪಿಯಲ್ಲಿ ಚರ್ಚೆ ನಡೆಯುತ್ತಿದೆ’ ಎಂದು ಸಚಿವ ಸಂತೋಷ್ ಲಾಡ್ ಹೇಳಿದರು.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಬಿಜೆಪಿಯಲ್ಲಿ ಉಸಿರುಗಟ್ಟುವ ವಾತಾವರಣ ಇದೆ. ಮೋದಿ ವಿರುದ್ಧ ಮಾತನಾಡಲು ಮುಖಂಡರಿಗೆ ಸ್ವಾತಂತ್ರ್ಯ ಇಲ್ಲ’ ಎಂದರು.

31 ಮಂದಿಗೆ ‘ಬಂಜಾರ’ ಪ್ರಶಸ್ತಿ

ಸಣ್ಣರಾಮ

ಪುಟ್ಟಿಬಾಯಿ ಲಕ್ಷ್ಮಣ ನಾಯಕ್

ಕೃಷ್ಣಪ್ಪಾ ಭಿಕ್ಕಪ್ಪಾ ಪವಾರ


ಶಂಕರ್ ಎಚ್. ಲಮಾಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿಯು 2023 ಮತ್ತು 2024ನೇ ಸಾಲಿನ ಪ್ರಶಸ್ತಿಗಳನ್ನು ಪ್ರಕಟಿಸಿದ್ದು, ‘ಶ್ರೀ ಸಂತ ಸೇವಾಲಾಲ್ ಪ್ರಶಸ್ತಿ’ಗೆ ಲೇಖಕಿ ಬಿ.ಟಿ. ಲಲಿತಾ ನಾಯಕ್ ಆಯ್ಕೆಯಾಗಿದ್ದಾರೆ.

ಬಿ.ಟಿ. ಲಲಿತಾ ನಾಯಕ್

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಕಾಡೆಮಿ ಅಧ್ಯಕ್ಷ ಎ.ಆರ್. ಗೋವಿಂದಸ್ವಾಮಿ, ‘ರಾಜ್ಯ ಸರ್ಕಾರವು ಕಳೆದ ವರ್ಷ ‘ಶ್ರೀ ಸಂತ ಸೇವಾಲಾಲ್ ಪ್ರಶಸ್ತಿ’ ಸ್ಥಾಪಿಸಿದೆ. ಈ ಪ್ರಶಸ್ತಿಯು ₹ 1 ಲಕ್ಷ ನಗದು ಒಳಗೊಂಡಿದೆ. ಇದೇ ಮೊದಲ ಬಾರಿ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ. ಬಂಜಾರ ಸಮುದಾಯದಲ್ಲಿ ವಿಶೇಷ ಸಾಧನೆ ಮಾಡಿದ ಹಾಗೂ ಸಾಹಿತ್ಯಕ್ಕೆ ಕೊಡುಗೆ ನೀಡಿರುವ ಬಿ.ಟಿ. ಲಲಿತಾ ನಾಯಕ್ ಅವರನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಇದರಿಂದ ಪ್ರಶಸ್ತಿಯ ಗೌರವವೂ ಹೆಚ್ಚಲಿದೆ. ಎರಡು ವರ್ಷಗಳಿಂದ ಗೌರವ ಪ್ರಶಸ್ತಿಗೆ ತಲಾ ಐವರು ಹಾಗೂ ವಾರ್ಷಿಕ ಪ್ರಶಸ್ತಿಗೆ ತಲಾ ಹತ್ತು ಮಂದಿಯನ್ನು ಆಯ್ಕೆ ಮಾಡಲಾಗಿದೆ’ ಎಂದು ತಿಳಿಸಿದರು.

2023ನೇ ಸಾಲಿನ ಗೌರವ ಪ್ರಶಸ್ತಿಗೆ ಸಾಹಿತಿಗಳಾದ ಕೃಷ್ಣಪ್ಪಾ ಭಿಕ್ಕಪ್ಪಾ ಪವಾರ (ಶಿರಸಿ), ಸಣ್ಣರಾಮ (ಶಿವಮೊಗ್ಗ), ನಾಟಕಕಾರ ಶಂಕರ್ ಎಚ್. ಲಮಾಣಿ (ಬಾಗಲಕೋಟೆ), ವಾಝು ಕಲಾವಿದ ಬಾಬು ಲಚ್ಚು ರಾಠೋಡ (ಬರಟಗಿ) ಹಾಗೂ ಭಜನೆ ಕಲಾವಿದ ರಾಮಚಂದ್ರ ಭಗವಾನ್ ದಾಸ್ (ವಿಜಯನಗರ) ಆಯ್ಕೆಯಾಗಿದ್ದಾರೆ ಎಂದು ಮಾಹಿತಿ ನೀಡಿದರು.

2024ನೇ ಸಾಲಿನ ಗೌರವ ಪ್ರಶಸ್ತಿಗೆ ಜಾನಪದ ವೈದ್ಯೆ ಪುಟ್ಟಿಬಾಯಿ ಲಕ್ಷ್ಮಣ ನಾಯಕ್ (ಚಿತ್ರದುರ್ಗ), ಗಾಯಕ ಮಹದೇವ ದಮಳ ಚವ್ಹಾಣ (ಕಲಬುರ್ಗಿ), ಕಲಾವಿದ ಪಿ. ಲಕ್ಷ್ಮಣ ನಾಯಕ್ (ಕೊಪ್ಪಳ), ನೃತ್ಯ ಕಲಾವಿದೆ ಸೀತವ್ವ ಲಮಾಣಿ (ಧಾರವಾಡ) ಹಾಗೂ ಭಾಷಾ ಜಾಗೃತಿಗೆ ಸಂಬಂಧಿಸಿದಂತೆ ರಾಘವೇಂದ್ರ ನಾಯಕ್ (ದಾವಣಗೆರೆ) ಅವರನ್ನು ಆಯ್ಕೆ ಮಾಡಲಾಗಿದೆ ಎಂದರು.

‘ಗೌರವ ಪ್ರಶಸ್ತಿಯು ತಲಾ ₹ 50 ಸಾವಿರ ನಗದು ಒಳಗೊಂಡಿದ್ದರೆ, ವಾರ್ಷಿಕ ಪ್ರಶಸ್ತಿಯು ತಲಾ ₹ 25 ಸಾವಿರ ನಗದು ಹೊಂದಿದೆ. ಇಲ್ಲಿನ ಬಂಜಾರ ಭವನದಲ್ಲಿ ಮಾರ್ಚ್ ತಿಂಗಳಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಸಲು ನಿರ್ಧರಿಸಿದ್ದೇವೆ’ ಎಂದು ಹೇಳಿದರು.

2023-2024ನೇ ಸಾಲಿನ ವಾರ್ಷಿಕ ಪ್ರಶಸ್ತಿ

ಹೆಸರು	ಕ್ಷೇತ್ರ	ಜಿಲ್ಲೆ
ಗೋವಿಂದ	ಬಂಜಾರ ಭಜನೆ	ಬೀದರ್
ಸೋಮ್ಲವ್ವಾ ಪುಟ್ಟಪ್ಪಾ ಲಮಾಣಿ	ಬಂಜಾರ ಕಲಾವಿದೆ	ಉತ್ತರ ಕನ್ನಡ
ವೆಂಕಟೇಶ್ ನಾಯ್ಕ	ನಗಾರಿ ಕಲಾವಿದ	ಚಿತ್ರದುರ್ಗ
ಕುಬೇರ ನಾಯಕ್ ಎಲ್.	ಗಾಯಕ	ದಾವಣಗೆರೆ
ಸುಮಂಗಲವ್ವ ಪೊ. ಲಂಬಾಣಿ	ಬಂಜಾರ ನೃತ್ಯ ತರಬೇತಿ	ಧಾರವಾಡ
ರಾಜನಾಯ್ಕ	ಬಂಜಾರ ಮದುವೆ ಶಾಸ್ತ್ರಗಳು	ಚಾಮರಾಜನಗರ
ಬಿ.ಎಸ್. ಪುಷ್ಪಾ	ಶೈಕ್ಷಣಿಕ/ಕಸೂತಿ	ವಿಜಯನಗರ
ಸುನೀಲ ಕುಮಾರ ಚವ್ಹಾಣ	ಸಿನಿಮಾ	ಹಾವೇರಿ
ಹನುಮಂತ ನಾಯ್ಕ	ಕಲಾ ಸಂಘಟನೆ- ಪೂಜಾ ಕುಣಿತ	ರಾಮನಗರ
ಆಶಾ ರಾಠೋಡ್	ಬಂಜಾರ ನೃತ್ಯ, ಕಸೂತಿ	ಬೀದರ್
ಎಲ್.ಪಿ. ನಾಯಕ ಕಠಾರಿ	ಶಿಕ್ಷಣ	ಬಳ್ಳಾರಿ
ಭಾಗ್ಯಬಾಯಿ ಕೆ.	ಬಂಜಾರ ನೃತ್ಯ	ರಾಮನಗರ
ಛತ್ರಪ್ಪ ತಂಬೂರಿ	ರಂಗಭೂಮಿ	ಕೊಪ್ಪಳ
ಕಾಂತ ನಾಯಕ್	ಬಂಜಾರ ವಾಝು	ರಾಮನಗರ
ಎಸ್. ಮೀಠ್ಯಾನಾಯ್ಕ	ಗಾಯನ	ಚಿತ್ರದುರ್ಗ
ಸಿ.ಎಚ್. ಉಮೇಶ್ ನಾಯಕ್	ಗಾಯನ	ದಾವಣಗೆರೆ
ಅಶೋಕ ಸೋಮಲು ವಾಲಿಕಾರ	ಬಂಜಾರ ಹಲಗೆ	ವಿಜಯಪುರ
ಎಲ್.ಎಂ. ನಾಗರಾಜು	ಮಾಧ್ಯಮ	ಬೆಂಗಳೂರು
ರಮೇಶ ಮಂಗ್ಲಪ್ಪ ಲಮಾಣಿ	ಗಾಯನ	ಗದಗ
ಜ್ಯೋತಿ ಎನ್.	ನೃತ್ಯ	ವಿಜಯನಗರ

19 ಮಂದಿಗೆ ‘ಜಾನಪದ ಲೋಕ’ ಪ್ರಶಸ್ತಿ


ಡಾ. ಚಕ್ಕೆರೆ ಶಿವಶಂಕರ್

ಅಡಿವೆಪ್ಪ ಸಣ್ಣಬೀರಪ್ಪ ಕುರಿಯವರ

ದೊಡ್ಡ ಕಟುಕಯ್ಯ


ಡಾ. ಕ್ಯಾತನಹಳ್ಳಿ ರಾಮಣ್ಣ

ಬಸಮ್ಮ

ಬೈರನಹಳ್ಳಿ ಶಿವರಾಮು

ಪ್ರಜಾವಾಣಿ ವಾರ್ತೆ

ರಾಮನಗರ: ಜಾನಪದ ವಿದ್ವಾಂಸ ಡಾ. ಚಕ್ಕೆರೆ ಶಿವಶಂಕರ್ ಸೇರಿ 19 ಸಾಧಕರು ಕರ್ನಾಟಕ ಜಾನಪದ ಪರಿಷತ್ತು ನೀಡುವ ವಾರ್ಷಿಕ ಪ್ರಶಸ್ತಿಗೆ ಈ ಬಾರಿ ಭಾಜನರಾಗಿದ್ದಾರೆ.

ಜಾನಪದ ಲೋಕದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಪ್ರಶಸ್ತಿ ಪುರಸ್ಕೃತರ ಹೆಸರು ಪ್ರಕಟಿಸಿದ ಪರಿಷತ್ತಿನ ಅಧ್ಯಕ್ಷ ಪ್ರೊ.ಹಿ.ಚಿ. ಬೋರಲಿಂಗಯ್ಯ, ಪ್ರಶಸ್ತಿ ₹10 ಸಾವಿರದಿಂದ ₹25 ಸಾವಿರದವರೆಗಿನ ನಗದು ಪುರಸ್ಕಾರ ಹಾಗೂ ಫಲಕ ಒಳಗೊಂಡಿದೆ ಎಂದು ಹೇಳಿದರು.

ಫೆ.8 ಮತ್ತು 9ರಂದು ಜಾನಪದ ಲೋಕದಲ್ಲಿ ನಡೆಯುವ ಎರಡು ದಿನಗಳ ಮಹಿಳಾ ಜಾನಪದ ಲೋಕೋತ್ಸವ ಕಾರ್ಯಕ್ರಮ ನಡೆಯಲಿದೆ. ಫೆ. 9ರಂದು ಸಂಜೆ 5.30ಕ್ಕೆ ನಡೆಯುವ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಜರುಗಲಿದೆ. ಆದಿಚುಂಚನಗಿರಿ ಪೀಠಾಧ್ಯಕ್ಷ ಡಾ. ನಿರ್ಮಲಾನಂದನಾಥ ಸ್ವಾಮೀಜಿ ಅವರು ಸಾಧಕರು ಹಾಗೂ ಕಲಾವಿದರಿಗೆ ಪ್ರಶಸ್ತಿ ನೀಡಲಿದ್ದಾರೆ.

ಜಾನಪದ ಲೋಕದ ಕ್ಯುರೇಟರ್ ಡಾ. ರವಿ ಯು.ಎಂ., ಕಾರ್ಯನಿರ್ವಹಣಾಧಿಕಾರಿ ಸರಸವಾಣಿ, ಸಂಶೋಧನಾ ಸಂಚಾಲಕ ಸಂದೀಪ್ ಪತ್ರಿಕಾಗೋಷ್ಠಿಯಲ್ಲಿದ್ದರು.

ಜಾನಪದ ಲೋಕ ಪ್ರಶಸ್ತಿ ಪುರಸ್ಕೃತರು

- **ನಾಡೋಜ ಎಚ್.ಎಲ್. ನಾಗೇಗೌಡ ಜಾನಪದ ಲೋಕಶ್ರೀ ಪ್ರಶಸ್ತಿ:** ಜಾನಪದ ವಿದ್ವಾಂಸ ಡಾ. ಚಕ್ಕೆರೆ ಶಿವಶಂಕರ್, ರಾಮನಗರ ಜಿಲ್ಲೆ
- **ಡಾ. ಜೀ.ಶಂ. ಪರಮಶಿವಯ್ಯ ಜಾನಪದ ಪ್ರಶಸ್ತಿ:** ಜಾನಪದ ವಿದ್ವಾಂಸ ಡಾ. ಕ್ಯಾತನಹಳ್ಳಿ ರಾಮಣ್ಣ, ಮೈಸೂರು ಜಿಲ್ಲೆ
- **ನಾಡೋಜ ಡಾ.ಜಿ. ನಾರಾಯಣ ಜಾನಪದ ಲೋಕ ಪ್ರಶಸ್ತಿ:** ಏಕತಾರಿ ಕಲಾವಿದ ಅಡಿವೆಪ್ಪ ಸಣ್ಣಬೀರಪ್ಪ ಕುರಿಯವರ, ಏಕತಾರಿ ಕಲಾವಿದ, ಹಾವೇರಿ ಜಿಲ್ಲೆ
- **ಲಕ್ಷ್ಮಮ್ಮ ನಾಗೇಗೌಡ ಪ್ರಶಸ್ತಿ:** ಬುರ್ರ‍ಾ ಕಥಾ ಕಲಾವಿದೆ ಬಸಮ್ಮ, ಕಲಬುರಗಿ ಜಿಲ್ಲೆ
- **ದೊಡ್ಡಆಲಹಳ್ಳಿ ಗೌರಮ್ಮ–ಕೆಂಪೇಗೌಡ ಪ್ರಶಸ್ತಿ:** ತಮಟೆ ಕಲಾವಿದ ದೊಡ್ಡ ಕಟುಕಯ್ಯ ಮತ್ತು ಜನಪದ ರಂಗಭೂಮಿ ನಿರ್ದೇಶಕ ಬೈರನಹಳ್ಳಿ ಶಿವರಾಮು, ರಾಮನಗರ ಜಿಲ್ಲೆ
- **ಲೋಕ ಸರಸ್ವತಿ ಗ್ರಂಥ ಪ್ರಶಸ್ತಿ:** ‘ಆನೆಗೊಂದಿ ಪೇಟೆಯೊಳಗೆ’ ಕೃತಿಗಾಗಿ ಲೇಖಕ ಡಾ. ಅಮ್ಮಸಂದ್ರ ಸುರೇಶ್

ದತ್ತಿ ಪ್ರಶಸ್ತಿ ಪುರಸ್ಕೃತರು

- **ನಿಂಬೆವ್ವ ಶಿವಗೊಂಡ ಬಿರಾದಾರ**, ತತ್ವಪದ ಕಲಾವಿದೆ, ವಿಜಯಪುರ ಜಿಲ್ಲೆ
- **ಟಿ. ಯೋಗನರಸಿಂಹಮೂರ್ತಿ**, ತಮಟೆ ಕಲಾವಿದ, ಬೆಂಗಳೂರು ನಗರ ಜಿಲ್ಲೆ
- **ದಳವಾಯಿ ಚಿತ್ತಪ್ಪ**, ಗಣೆ ಕಲಾವಿದ, ಬಳ್ಳಾರಿ ಜಿಲ್ಲೆ
- **ಶಿವರಾಮೇಗೌಡ**, ಗೊರವ ಕುಣಿತ ಕಲಾವಿದ, ಚಾಮರಾಜನಗರ ಜಿಲ್ಲೆ
- **ಶೇಖರ್ ಡಿ. ಶೆಟ್ಟಿಗಾರ್ ಕಿನ್ನಿಗೋಳಿ**, ಯಕ್ಷಗಾನ ಕಲಾವಿದ, ದಕ್ಷಿಣ ಕನ್ನಡ ಜಿಲ್ಲೆ
- **ಡಾ. ತುಕಾರಾಮ್ ಪೂಜಾರಿ**, ಜನಪದ ವಸ್ತು ಸಂಗ್ರಹಾಲಯ ತಜ್ಞ, ದಕ್ಷಿಣ ಕನ್ನಡ ಜಿಲ್ಲೆ
- **ಎಂ.ಕೆ. ರಾಮಯ್ಯ**, ತಂಬೂರಿ ಕಲಾವಿದ, ಬೆಂಗಳೂರು ನಗರ ಜಿಲ್ಲೆ
- **ವೈ. ಚಿನ್ನಸ್ವಾಮಿ**, ಹಗಲುವೇಷ ಕಲಾವಿದ, ಬಳ್ಳಾರಿ ಜಿಲ್ಲೆ
- **ಸೋಬಾನೆ ರಾಮಯ್ಯ**, ಸೋಬಾನೆ ಕಲಾವಿದ, ತುಮಕೂರು ಜಿಲ್ಲೆ
- **ಯೋಗೇಂದ್ರ**, ಅಂಟಿಗೆ-ಪಂಟಿಗೆ ಕಲಾವಿದ, ಶಿವಮೊಗ್ಗ ಜಿಲ್ಲೆ
- **ಎ.ಕೆ. ರಾಮೇಶ್ವರ**, ಜಾನಪದ ವಿದ್ವಾಂಸ, ಕಲಬುರಗಿ ಜಿಲ್ಲೆ
- **ಲಕ್ಷ್ಮಿ ಬುದ್ದುಗೌಡ**, ಹಾಲಕ್ಕಿ ಕಲಾವಿದೆ, ಉತ್ತರ ಕನ್ನಡ ಜಿಲ್ಲೆ

ಕೆಎಂಎಫ್: ಪರಿಷ್ಕೃತ ವೇತನ ಜಾರಿಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಹಾಲು ಮಹಾಮಂಡಳದ(ಕೆಎಂಎಫ್) ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗೆ ಸರ್ಕಾರದ ಆದೇಶದನ್ವಯ 2024ರ ಆಗಸ್ಟ್ 1ರಿಂದ ಅನ್ವಯ ಆಗುವಂತೆ ಪರಿಷ್ಕೃತ ವೇತನ ಶ್ರೇಣಿ ಹಾಗೂ ತುಟ್ಟಿ ಭತ್ಯೆ ಮತ್ತು ಇತರೆ ಭತ್ಯೆಗಳನ್ನು ಮಂಜೂರು ಮಾಡಲು ಕರ್ನಾಟಕ ರಾಜ್ಯ ಸಹಕಾರ ಸಂಘಗಳ ರಿಜಿಸ್ಟ್ರಾರ್ ಆದೇಶಿಸಿದ್ದಾರೆ.

ಕೆಎಂಎಫ್‌ನಲ್ಲಿ 1,275 ಉದ್ಯೋಗಿಗಳು ಕಾರ್ಯನಿರ್ವಹಿಸುತ್ತಿದ್ದು, ವೇತನ ಪರಿಷ್ಕರಣೆಯಿಂದ ₹ 18.36 ಕೋಟಿ ಹೆಚ್ಚುವರಿ ಆರ್ಥಿಕ ಹೊರೆ ಬೀಳಲಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಕೆಎಂಎಫ್‌ನ ವ್ಯವಸ್ಥಾಪಕ ನಿರ್ದೇಶಕರು, ಮಹಾಮಂಡಳದ ಸಿಬ್ಬಂದಿಗೆ ಪರಿಷ್ಕೃತ ವೇತನ ಶ್ರೇಣಿ ಹಾಗೂ ತುಟ್ಟಿಭತ್ಯೆ ಮತ್ತು ಇತರೆ ಭತ್ಯೆಗಳನ್ನು ಮಂಜೂರು ಮಾಡಲು ಅನುಮತಿ ಕೋರಿ, ರಾಜ್ಯ ಸಹಕಾರ ಸಂಘಗಳ ರಿಜಿಸ್ಟ್ರಾರ್ ಅವರಿಗೆ ಮನವಿ ಸಲ್ಲಿಸಿದ್ದರು. ಮನವಿಗೆ ಸ್ಪಂದಿಸಿರುವ ಸಹಕಾರ ಸಂಘಗಳ ರಿಜಿಸ್ಟ್ರಾರ್ ಟಿ.ಎಚ್.ಎಂ. ಕುಮಾರ್ ಅವರು ಕೆಲವು ಷರತ್ತುಗಳೊಂದಿಗೆ ಆದೇಶ ಹೊರಡಿಸಿದ್ದಾರೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಟೀಕೆ

‘ನರೇಗಾ ಕತ್ತು ಹಿಸುಕುತ್ತಿರುವ ಕೇಂದ್ರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗ್ರಾಮೀಣ ಪ್ರದೇಶದ ಜನರಿಗೆ ಉದ್ಯೋಗದ ಖಾತರಿ ನೀಡುವ ಮಹಾತ್ಮ ಗಾಂಧಿ ನರೇಗಾ ಯೋಜನೆಯನ್ನು ಇಲ್ಲವಾಗಿಸಲು ಕೇಂದ್ರ ಸರ್ಕಾರ ಹುನ್ನಾರ ನಡೆಸಿದೆ’ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯ್ ರಾಜ್ ಇಲಾಖೆ ನಗರದಲ್ಲಿ ಬುಧವಾರ ಆಯೋಜಿಸಿದ್ದ ‘ನರೇಗಾ ಹಬ್ಬ’ ಉದ್ಘಾಟಿಸಿ ಅವರು ಮಾತನಾಡಿದರು. ‘ಮನಮೋಹನ ಸಿಂಗ್ ಅವರ ಸರ್ಕಾರವು ನರೇಗಾ ಯೋಜನೆಯನ್ನು ಜಾರಿಗೆ ತಂದಿತ್ತು. ಆದರೆ ಈಗಿನ ಪ್ರಧಾನಿ ನರೇಂದ್ರ ಮೋದಿ ಅವರ ಸರ್ಕಾರವು ಈ ಯೋಜನೆಯ ಕತ್ತುಹಿಸುಕುತ್ತಿದೆ’ ಎಂದು ದೂರಿದರು.

> **2005ರಲ್ಲಿ ನರೇಗಾ ಆರಂಭಿಸಿದಾಗ ನಾನು ಗ್ರಾಮೀಣಾಭಿವೃದ್ಧಿ–ಪಂಚಾಯತ್ ರಾಜ್ ಸಚಿವನಾಗಿದ್ದೆ. 20 ವರ್ಷಗಳಲ್ಲಿ ಬಹಳಷ್ಟು ಕೆಲಸ ಆಗಿದೆ**
> **ಬಸವರಾಜ ಹೊರಟ್ಟಿ** ವಿಧಾನ ಪರಿಷತ್ ಸಭಾಪತಿ

‘ನರೇಗಾ ಹಬ್ಬ’ದ ಅಂಗವಾಗಿ ಬೆಂಗಳೂರಿನ ಬಿ.ಆರ್‌.ಅಂಬೇಡ್ಕರ್ ಭವನದಲ್ಲಿ ಆಯೋಜಿಸಲಾಗಿದ್ದ ವಸ್ತು ಪ್ರದರ್ಶನದಲ್ಲಿ ಗ್ರಾಮೀಣಾಭಿವೃದ್ಧಿಯ ವಿವಿಧ ಮಜಲುಗಳನ್ನು ವಿವರಿಸುವ ಮಾದರಿಯನ್ನು ಬಸವರಾಜ ಹೊರಟ್ಟಿ, ಪ್ರಿಯಾಂಕ್ ಖರ್ಗೆ ವೀಕ್ಷಿಸಿದರು ಪ್ರಜಾವಾಣಿ ಚಿತ್ರ

‘ಕೇಂದ್ರದಲ್ಲಿ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಇದ್ದಾಗ ನರೇಗಾಗೆ ₹1.12 ಲಕ್ಷ ಕೋಟಿ ಅನುದಾನ ಒದಗಿಸಿತ್ತು. ಎನ್‌ಡಿಎ ಸರ್ಕಾರ ಬಂದ ನಂತರ ಅನುದಾನ ಕಡಿತ ಮಾಡುತ್ತಿದೆ. ಹಿಂದಿನ ಬಜೆಟ್‌ನಲ್ಲಿ ಅನುದಾನವನ್ನು ₹86,000 ಕೋಟಿಗೆ ಇಳಿಸಿತ್ತು. ಈಗಿನ ಬಜೆಟ್‌ನಲ್ಲಿ ಒಂದು ರೂಪಾಯಿಯೂ ಹೆಚ್ಚಿಸದೆ, ₹86,000 ಕೋಟಿ ಅನುದಾನವನ್ನೇ ಘೋಷಿಸಿದೆ. ಇದು ಯೋಜನೆಯನ್ನು ಮುಗಿಸುವ ಹುನ್ನಾರದ ಭಾಗ’ ಎಂದರು.

‘ಯೋಜನೆಯಡಿ ಕುಟುಂಬವೊಂದಕ್ಕೆ ವರ್ಷದಲ್ಲಿ 100 ಮಾನವ ದಿನಗಳ ಕೆಲಸ ನೀಡಲಾಗುತ್ತಿದೆ. ಪ್ರತಿ ವರ್ಷವೂ ಈ ಗುರಿಯನ್ನು ಮುಟ್ಟುತ್ತಿದ್ದೇವೆ. ಎಲ್ಲರಿಗೂ ಉದ್ಯೋಗ ಖಾತರಿ ಒದಗಿಸಲು ಮತ್ತು ಸ್ವತ್ತು ಸೃಜಿಸುವ ಉದ್ದೇಶದಿಂದ 150 ಮಾನವ ದಿನಗಳಿಗೆ ಹೆಚ್ಚಿಸುವಂತೆ ಕೇಂದ್ರ ಸರ್ಕಾರಕ್ಕೆ ಹಲವು ಬಾರಿ ಮನವಿ ಸಲ್ಲಿಸಿದ್ದೇವೆ. ಆದರೆ ಅದನ್ನು ಕೇಂದ್ರ ಸರ್ಕಾರ ಕಡೆಗಣಿಸುತ್ತಲೇ ಇದೆ’ ಎಂದರು.

ಶಾಸಕ ರಿಜ್ವಾನ್ ಅರ್ಷದ್, ‘ಮೋದಿ ಮೊದಲ ಬಾರಿ ಪ್ರಧಾನಿ ಆದಾಗ, ಈ ಯೋಜನೆಯನ್ನು ಲೇವಡಿ ಮಾಡಿದ್ದರು. ಆದರೆ 11 ವರ್ಷವಾದರೂ ಯೋಜನೆ ನಿಲ್ಲಿಸಲು ಅವರಿಗೆ ಸಾಧ್ಯವಾಗಿಲ್ಲ. ಕೋವಿಡ್ ಅವಧಿಯಲ್ಲಿ ಕೋಟ್ಯಂತರ ಜನರಿಗೆ ಉದ್ಯೋಗ ನೀಡಿದ್ದು ಇದೇ ಯೋಜನೆ’ ಎಂದರು.

ವಾಪಸಾದ 104 ಭಾರತೀಯರು

ಪಿಟಿಐ/ರಾಯಿಟರ್ಸ್/ಎಎಫ್‌ಪಿ

- 30 ಪಂಜಾಬ್
- 33 ಹರಿಯಾಣ
- 33 ಗುಜರಾತ್
- 3 ಮಹಾರಾಷ್ಟ್ರ
- 3 ಉತ್ತರ ಪ್ರದೇಶ
- 2 ಚಂಡೀಗಢ

19 ಮಹಿಳೆಯರು
13 ಅಪ್ರಾಪ್ತ ವಯಸ್ಸಿನವರು (4 ವರ್ಷದ ಮಗು ಕೂಡ ಇತ್ತು ಎಂದು ಎನ್‌ಡಿಟಿವಿ ವರದಿ ಮಾಡಿದೆ)

ಅಮೃತಸರ/ನವದೆಹಲಿ: ಅಮೆರಿಕದಲ್ಲಿ ಅಕ್ರಮವಾಗಿ ನೆಲಸಿದ್ದ ಭಾರತೀಯರನ್ನು ವಾಪಸು ಕಳುಹಿಸುವ ಪ್ರಕ್ರಿಯೆಯ ಮೊದಲ ಹಂತವಾಗಿ 104 ಭಾರತೀಯರನ್ನು ಹೊತ್ತ ಅಮೆರಿಕ ಸೇನಾ ವಿಮಾನವು ಬುಧವಾರ ಮಧ್ಯಾಹ್ನ 1.55ಕ್ಕೆ ಪಂಜಾಬ್‌ನ ಅಮೃತಸರದ ಶ್ರೀ ಗುರು ರಾಮ್‌ದಾಸ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಂದಿಳಿಯಿತು. 205 ಭಾರತೀಯರು ವಾಪಸಾಗಲಿದ್ದಾರೆ ಎಂದು ಹೇಳಲಾಗಿತ್ತು.

ವಿಮಾನ ನಿಲ್ದಾಣದ ಸುತ್ತ ಬಿಗಿ ಭದ್ರತೆ ಏರ್ಪಡಿಸಲಾಗಿತ್ತು. ದೊಡ್ಡ ಸಂಖ್ಯೆಯಲ್ಲಿ ಪೊಲೀಸರನ್ನು ನಿಯೋಜನೆ ಮಾಡಲಾಗಿತ್ತು. ಅಮೆರಿಕದಿಂದ ವಾಪಸಾದ ಭಾರತೀಯರಿಗಾಗಿಯೇ ಪ್ರತ್ಯೇಕ ವ್ಯವಸ್ಥೆ ಕಲ್ಪಿಸಲಾಗಿತ್ತು. ವಾಪಸಾದ ಭಾರತೀಯರಿಗೆ ಅಪರಾಧ ಹಿನ್ನೆಲೆ ಇದೆಯೇ ಎಂಬುದನ್ನು ಪತ್ತೆ ಮಾಡಲು ವಿಮಾನ ನಿಲ್ದಾಣದ ಒಳಗೆ ವಿವಿಧ ಸಂಸ್ಥೆಗಳು ಪರಿಶೀಲನೆ ನಡೆಸಿದವು.

ಹಲವು ಸ್ತರಗಳ ಪರಿಶೀಲನೆ ಬಳಿಕ ಅಮೆರಿಕದಿಂದ ವಾಪಸಾದವರನ್ನು ಅವರ ಊರುಗಳಿಗೆ ಕಳುಹಿಸಲಾಗುತ್ತದೆ ಎನ್ನಲಾಗಿದೆ. ಆದರೆ, ಈ ಬಗ್ಗೆ ಯಾವುದೇ ಅಧಿಕಾರಿಯು ಅಧಿಕೃತ ಮಾಹಿತಿ ನೀಡಿಲ್ಲ. ವಿಮಾನ ನಿಲ್ದಾಣದಲ್ಲಿ ವಿವಿಧ ರಾಜ್ಯ ಸರ್ಕಾರಗಳು ತಮ್ಮ ರಾಜ್ಯದವರನ್ನು ಕರೆದುಕೊಂಡು ಹೋಗಲು ವ್ಯವಸ್ಥೆ ಮಾಡಿಕೊಂಡಿವೆ. 'ಗುಜರಾತ್ ರಾಜ್ಯದಿಂದಲೇ ಹೆಚ್ಚಿನ ಜನರು ಅಮೆರಿಕಕ್ಕೆ ಅಕ್ರಮವಾಗಿ ಬರುತ್ತಿದ್ದಾರೆ' ಎಂದು ನ್ಯೂಯಾರ್ಕ್ ಟೈಮ್ಸ್ ವರದಿ ಮಾಡಿದೆ.

ಟ್ರಂಪ್–ಮೋದಿ ಭೇಟಿ: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಪ್ರಧಾನಿ ನರೇಂದ್ರ ಮೋದಿ ಇದೇ ತಿಂಗಳಲ್ಲಿ ಭೇಟಿಯಾಗಲಿದ್ದಾರೆ. ಇಬ್ಬರೂ ನಾಯಕರ ಭೇಟಿಗೆ ಕೆಲವು ದಿನಗಳ ಮೊದಲು ಅಮೆರಿಕವು ತನ್ನ ದೇಶದಲ್ಲಿ ಅಕ್ರಮವಾಗಿ ನೆಲಸಿದ್ದ ಭಾರತೀಯರನ್ನು ವಾಪಸು ಕಳುಹಿಸಿದೆ. ಟ್ರಂಪ್ ಹಾಗೂ ಮೋದಿ ಅವರ ಭೇಟಿಯ ವೇಳೆ ಈ ವಿಷಯದ ಕುರಿತು ಚರ್ಚೆ ನಡೆಯಲಿದೆ ಎಂದು ನಿರೀಕ್ಷಿಸಲಾಗಿದೆ.

ವಲಸೆ ನಿಯಮ ಉಲ್ಲಂಘನೆ: ವಾಪಸಾದ ಭಾರತೀಯರು



ಬಂಧನ ಎಂದರೇನು?: ರಸ್ತೆಯಲ್ಲಿ ಉಗುಳುವುದು, ರಸ್ತೆಯಲ್ಲಿ ಕಸ ಬಿಸಾಡುವುದು, ಸಂಚಾರ ನಿಯಮ ಉಲ್ಲಂಘನೆ ಸೇರಿದಂತೆ ಅಮೆರಿಕದ ನಿಯಮಗಳನ್ನು ಉಲ್ಲಂಘಿಸಿದ ವಿದೇಶಿಯರನ್ನು ಅಮೆರಿಕದ ವಲಸೆ ಮತ್ತು ಕಸ್ಟಮ್ಸ್ ನಿಯಮಗಳ ಜಾರಿ ಕಚೇರಿ (ಐಸಿಇ) ಅಧಿಕಾರಿಗಳು ಬಂಧಿಸುತ್ತಾರೆ. ಬಂಧನವಾದ ಬಳಿಕ ಸೂಕ್ತ ದಾಖಲೆಗಳನ್ನು ಪರಿಶೀಲಿಸಲಾಗುತ್ತದೆ. ಬಳಿಕ, ದಾಖಲೆ ಇಲ್ಲದವರನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಲಾಗುತ್ತದೆ. ಬಂಧಿಸುವ ಎಲ್ಲರನ್ನೂ ಬಂಧನ ಕೇಂದ್ರಕ್ಕೆ ಕಳುಹಿಸಲಾಗುವುದಿಲ್ಲ

ವಶಕ್ಕೆ ಪಡೆಯುವುದು ಎಂದರೇನು?: ಸೂಕ್ತ ದಾಖಲೆ ಇಲ್ಲದೆ ಅಮೆರಿಕದಲ್ಲಿ ವಾಸಿಸುವವರನ್ನು ಅಕ್ರಮ ವಲಸಿಗರ ಶಿಬಿರಗಳಲ್ಲಿ ಇಡಲಾಗುತ್ತದೆ. ಪುಟ್ಟ ಮಕ್ಕಳನ್ನು ಈ ಕೇಂದ್ರಗಳಲ್ಲಿ ಇರಿಸಿಕೊಳ್ಳುವುದಿಲ್ಲ. ಜೊತೆಗೆ, ದಾಖಲೆಗಳಿಲ್ಲದೆ ಅಮೆರಿಕದಲ್ಲಿ ವಾಸಿಸುತ್ತಿದ್ದು, ಅಪರಾಧ ಪ್ರಕರಣಗಳಲ್ಲಿ ಜೈಲಿಗೆ ಹೋದವರನ್ನೂ ಇಲ್ಲಿ ಇರಿಸಿಕೊಳ್ಳುವುದಿಲ್ಲ

ವಾಪಸಾತಿ ಎಂದರೇನು?: ಮೂರು ವಿಧಗಳಲ್ಲಿ ವಿದೇಶಿಯರನ್ನು ಅವರ ದೇಶಗಳಿಗೆ ವಾಪಸು ಕಳುಹಿಸಲಾಗುತ್ತದೆ

1 ಐಸಿಇ ಅಧಿಕಾರಿಯು ತನ್ನ ವಿವೇಚನೆ ಬಳಸಿ, ವ್ಯಕ್ತಿಯನ್ನು ವಾಪಸು ಹೋಗುವಂತೆ ಹೇಳುವುದು. ಇಲ್ಲಿ ವ್ಯಕ್ತಿಯ ಮೇಲೆ ಯಾವುದೇ ಕ್ರಮ ಕೈಗೊಳ್ಳುವುದಿಲ್ಲ

2 ತಾನಾಗಿಯೇ ದೇಶ ಬಿಡುತ್ತೇನೆ ಎಂದು ಹೇಳಿದ ವ್ಯಕ್ತಿಗೆ ನ್ಯಾಯಾಲಯದಲ್ಲಿ ಯಾವುದೇ ಶಿಕ್ಷೆ ವಿಧಿಸದೆ ನ್ಯಾಯಾಧೀಶರು ತಮ್ಮ ವಿವೇಚನಾಧಿಕಾರ ಬಳಸಿ, ವಾಪಸು ಕಳುಹಿಸುವುದು

3 ಗಡಿಯಲ್ಲಿಯೇ ವಿದೇಶಿಗರನ್ನು ತಡೆದು, ಯಾವುದೇ ಕ್ರಮ ಕೈಗೊಳ್ಳದೇ ಅಧಿಕಾರಿಗಳು ವಾಪಸು ಕಳುಹಿಸುವುದು

'ವಾಪಸು ಪ್ರಕ್ರಿಯೆ ಆರಂಭ' ಎಂದು ಶ್ವೇತಭವನದ ಮಾಧ್ಯಮ ಕಾರ್ಯದರ್ಶಿ ಕೆರೋಲಿನ್ ಲೆವಿಟ್ 'ಎಕ್ಸ್' ಮಾಡಿದ್ದ ಪೋಸ್ಟ್. ಈ ಚಿತ್ರದಲ್ಲಿ ವಲಸಿಗರ ಕೈ–ಕಾಲುಗಳಿಗೆ ಕೋಳ ತೊಡಿಸಲಾಗಿದೆ. ಆದರೆ, ಇವರು ಭಾರತೀಯರು ಎಂದು ಕೆರೋಲಿನ್ ಉಲ್ಲೇಖಿಸಿರಲಿಲ್ಲ



'ಕೈಗಳಿಗೆ ಕೋಳ: ಬೇಸರ ತರಿಸಿದೆ'

'ಭಾರತೀಯರ ಕೈಗಳಿಗೆ ಕೋಳ ತೊಡಿಸಿರುವ ಚಿತ್ರವು ಬೇಸರ ತರಿಸಿದೆ. ಅವರಿಗೆ ಅವಮಾನ ಮಾಡಲಾಗಿದೆ' ಎಂದು ಕಾಂಗ್ರೆಸ್ ಹೇಳಿದೆ. '2013ರಲ್ಲಿ ಭಾರತೀಯ ರಾಯಭಾರ ಕಚೇರಿಯ ಅಧಿಕಾರಿ ದೇವಯಾನಿ ಖೋಬ್ರಗಡೆ ಅವರನ್ನು ಅಮೆರಿಕವು ಹೀಗೆಯೇ ಅವಮಾನಿಸಿತ್ತು. ಆ ವೇಳೆ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರವು ಅಮೆರಿಕದ ವಿರುದ್ಧ ಕಠಿಣ ಕ್ರಮಗಳನ್ನು ತೆಗೆದುಕೊಂಡಿತ್ತು' ಎಂದು ಕಾಂಗ್ರೆಸ್ ನೆನಪು ಮಾಡಿಕೊಂಡಿದೆ.

ಕಾಂಗ್ರೆಸ್‌ನ ಮಾಧ್ಯಮ ಮತ್ತು ಪ್ರಚಾರ ವಿಭಾಗದ ಮುಖ್ಯಸ್ಥ ಪವನ್ ಖೇರಾ ಅವರು ಈ ಬಗ್ಗೆ ಪೋಸ್ಟ್ ಹಂಚಿಕೊಂಡಿದ್ದಾರೆ. 'ಅಮೆರಿಕದ ಅಧಿಕಾರಿಗಳು ದೇವಯಾನಿ ಅವರಿಗೆ ಕೋಳ ತೊಡಿಸಿ, ಅವರ ಬಟ್ಟೆ ಕಳಚಿ ತಪಾಸಣೆ ನಡೆಸಿದ್ದರು. ಈ ಬಗ್ಗೆ ವಿದೇಶಾಂಗ ಕಾರ್ಯದರ್ಶಿ ಸುಜಾತ ಸಿಂಗ್ ಪ್ರತಿಭಟನೆ ದಾಖಲಿಸಿದ್ದರು' ಎಂದು ನೆನಪು ಮಾಡಿಕೊಂಡಿದ್ದಾರೆ.

'ಅಮೆರಿಕದ ಈ ಕ್ರಮವನ್ನು ಖಂಡಿಸಿ, ಅಮೆರಿಕದ ಸಂಸತ್ತಿನ ನಿಯೋಗವನ್ನು ಭೇಟಿ ಮಾಡಲು ಮೀರಾ ಕುಮಾರ್, ಸುಶೀಲ್ ಕುಮಾರ್ ಶಿಂದೆ, ರಾಹುಲ್ ಗಾಂಧಿ ಅವರು ನಿರಾಕರಿಸಿದ್ದರು. ಅಂದಿನ ಪ್ರಧಾನಿ ಮನಮೋಹನ ಸಿಂಗ್ ಅವರು ಈ ಕ್ರಮವನ್ನು 'ಶೋಚನೀಯ' ಎಂದಿದ್ದರು' ಎಂದರು.

'ಅಮೆರಿಕದ ರಾಯಭಾರಿಗಳಿಗೆ ನೀಡುತ್ತಿದ್ದ ಹಲವು ವಿಶೇಷ ಸವಲತ್ತುಗಳನ್ನೂ ತಡೆಹಿಡಿಯಲಾಗಿತ್ತು. 'ಅಮೆರಿಕನ್ ಎಂಬಸಿ ಸ್ಕೂಲ್' ಮೇಲೆ ಐಟಿ ದಾಳಿ ಮಾಡಲಾಗಿತ್ತು. ಈ ಎಲ್ಲದ ಬಳಿಕ ದೇವಯಾನಿಯವರನ್ನು ನಡೆಸಿಕೊಂಡ ಬಗ್ಗೆ ಅಮೆರಿಕವು ಖೇದ ವ್ಯಕ್ತಪಡಿಸಿತು' ಎಂದರು.

ಸರ್ಕಾರಿ ನೌಕರಿ ನೀಡಿ

ನಾವು ನಮ್ಮ ಜಮೀನನ್ನು ಮಾರಾಟ ಮಾಡಿ, ₹20–25 ಲಕ್ಷ ಸಾಲ ಮಾಡಿ ಮಗನನ್ನು ಅಮೆರಿಕಕ್ಕೆ ಕಳುಹಿಸಿದ್ದೆವು. ಈಗ ಅವನನ್ನು ವಾಪಸು ಕಳುಹಿಸಲಾಗಿದೆ. ನಮ್ಮ ಸಾಲ ತೀರಿಸುವುದಕ್ಕೆ ಭಗವಂತ್ ಮಾನ್ ಸರ್ಕಾರವು ನಮಗೆ ಆರ್ಥಿಕ ನೆರವು ನೀಡಬೇಕು. ನಮ್ಮ ಮಗನಿಗೆ ಸರ್ಕಾರಿ ನೌಕರಿ ನೀಡಬೇಕು

ಅಮೆರಿಕದಿಂದ ವಾಪಸಾದ ಮೊಹಾಲಿ ಜಿಲ್ಲೆಯ ಪ್ರದೀಪ್ ಅವರ ಪೋಷಕರು

ಸುದ್ದಿ 2 ನಿಮಿಷ

18 ಹಿಂದೂಯೇತರ ಸಿಬ್ಬಂದಿ ವಿರುದ್ಧ ಟಿಟಿಡಿ ಶಿಸ್ತುಕ್ರಮ

ಹೈದರಾಬಾದ್: ತಿರುಮಲ ದೇಗುಲದ ಪಾವಿತ್ರ್ಯ ಕಾಪಾಡಲು ಮತ್ತು ಭಕ್ತರ ಭಾವನೆ ಗೌರವಿಸಲು 18 ಹಿಂದೂಯೇತರ ಸಿಬ್ಬಂದಿಗೆ ಟಿಟಿಡಿಯು ದೇಗುಲದ ಯಾವುದೇ ಚಟುವಟಿಕೆಯಲ್ಲಿ ಪಾಲ್ಗೊಳ್ಳದಂತೆ ನಿರ್ಬಂಧ ಹೇರಿ, ಅವರ ಮೇಲೆ ಶಿಸ್ತುಕ್ರಮ ಆರಂಭಿಸಿದೆ.

ತಿರುಮಲ ವೆಂಕಟೇಶ್ವರನ ಪಾವಿತ್ರ್ಯಕ್ಕೆ ಮತ್ತು ಭಕ್ತರ ಭಾವನೆಗಳಿಗೆ ಧಕ್ಕೆ ತಂದಿದ್ದಾರೆಂದು ಹಿಂದೂಯೇತರ ಸಿಬ್ಬಂದಿಗೆ ತಿರುಮಲ ದೇವಸ್ಥಾನದ ಜಾತ್ರೆಗಳು, ಉತ್ಸವಗಳು, ಇತರ ಧಾರ್ಮಿಕ ಚಟುವಟಿಕೆಗಳಲ್ಲಿ ಭಾಗವಹಿಸದಂತೆ ನಿರ್ಬಂಧಿಸಲಾಗಿದೆ.

ಕಳೆದ ನವೆಂಬರ್‌ನಲ್ಲಿ ಟಿಟಿಡಿ ಟ್ರಸ್ಟ್ ಮಂಡಳಿ ಅಂಗೀಕರಿಸಿದ ನಿರ್ಣಯಕ್ಕೆ ಅನುಗುಣವಾಗಿ, ಮಂಡಳಿಯ ಅಧ್ಯಕ್ಷ ಬಿ.ಆರ್. ನಾಯ್ಡು ಅವರ ನಿರ್ದೇಶನದಂತೆ ಫೆ.1ರಂದು ಈ ಬಗ್ಗೆ ತಿಳಿವಳಿಕೆ ಪತ್ರ ನೀಡಿರುವುದು ಬುಧವಾರ ವರದಿಯಾಗಿದೆ.

ಟಿಟಿಡಿ ಕಾರ್ಯನಿರ್ವಾಹಕ ಅಧಿಕಾರಿ ಜೆ. ಶ್ಯಾಮಲ ರಾವ್ ಅವರು ಹೊರಡಿಸಿರುವ ಆದೇಶದಲ್ಲಿ, 18 ಮಂದಿ ನೌಕರರು ಟಿಟಿಡಿ ಆಯೋಜಿಸುವ ಧಾರ್ಮಿಕ ಉತ್ಸವಗಳು ಮತ್ತು ಮೆರವಣಿಗೆಗಳು ಸೇರಿದಂತೆ ಹಿಂದೂ ಮತ್ತು ಹಿಂದೂಯೇತರ ಚಟುವಟಿಕೆಗಳಲ್ಲಿ ಏಕಕಾಲದಲ್ಲಿ ಭಾಗವಹಿಸುತ್ತಿರುವುದು ಕಂಡುಬಂದಿದೆ. ಹೀಗಾಗಿ, ಇವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಲಾಗಿದೆ.

ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ಮೂವರು ಶಿಕ್ಷಕರ ಬಂಧನ

ಚೆನ್ನೈ: ಚೆನ್ನೈನ ಕೃಷ್ಣಗಿರಿ ಜಿಲ್ಲೆಯ ಸರ್ಕಾರಿ ಶಾಲೆಯಲ್ಲಿ 13 ವರ್ಷದ ವಿದ್ಯಾರ್ಥಿನಿಯೊಬ್ಬರಿಗೆ ಮೂವರು ಶಿಕ್ಷಕರು ಶೌಚಾಲಯದಲ್ಲಿ ಲೈಂಗಿಕ ಕಿರುಕುಳ ನೀಡಿದ್ದಾರೆ ಎಂದು ಆರೋಪಿಸಲಾಗಿದೆ.

ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಹೊತ್ತಿರುವ ಮೂವರು ಶಿಕ್ಷಕರನ್ನು ಅಮಾನತುಗೊಳಿಸಿದ್ದು, ಬಳಿಕ ಮೂವರನ್ನು ಬಂಧಿಸಲಾಗಿದೆ.

ಜನವರಿ 2ರಂದು ವಿದ್ಯಾರ್ಥಿನಿಯ ಮೇಲೆ ಲೈಂಗಿಕ ದೌರ್ಜನ್ಯ ನಡೆದಿತ್ತು. ವಿದ್ಯಾರ್ಥಿನಿಯು ಜನವರಿ 5ರಿಂದ ಶಾಲೆಗೆ ಗೈರಾಗಿರುವುದಕ್ಕೆ ಕಾರಣ ತಿಳಿದುಕೊಳ್ಳಲು ಮುಖ್ಯಶಿಕ್ಷಕರು ಅವರ ಮನೆಗೆ ತೆರಳಿದಾಗ ಘಟನೆಯ ಬಗ್ಗೆ ಗೊತ್ತಾಗಿದೆ. ಹೊಟ್ಟೆನೋವಿನ ಕಾರಣಕ್ಕೆ ವಿದ್ಯಾರ್ಥಿನಿಯು ಗೈರಾಗುತ್ತಿರುವುದಾಗಿ ಪೋಷಕರು ಆರಂಭದಲ್ಲಿ ತಿಳಿಸಿದ್ದರು. ಆದರೆ ಮುಖ್ಯಶಿಕ್ಷಕರ ಒತ್ತಾಯದ ಬಳಿಕ ನಡೆದ ಘಟನೆಯನ್ನು ತಿಳಿಸಿದ್ದಾರೆ.

ಈ ಬಗ್ಗೆ ಮುಖ್ಯಶಿಕ್ಷಕರು ಜಿಲ್ಲಾ ಶಿಕ್ಷಣಾಧಿಕಾರಿ ಮತ್ತು ಮಕ್ಕಳ ಸಹಾಯವಾಣಿಗೆ ಮಾಹಿತಿ ನೀಡಿದ್ದಾರೆ. ಅದರ ಅನ್ವಯ ಮೂವರು ಶಿಕ್ಷಕರ ವಿರುದ್ಧ ಬರ್ಗೂರ್ ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎಎಐ ಉದ್ಯೋಗಿಯ ವಜಾ ಕುರಿತ ಪ್ರಕರಣ ವಿಚಾರಣೆ

ಉದ್ಯೋಗದಾತರ ಹೊಣೆ ತಗ್ಗಿಸಿದ 'ಸುಪ್ರೀಂ'

ನವದೆಹಲಿ (ಪಿಟಿಐ): ಶಿಸ್ತು ಕ್ರಮ ಜರುಗಿಸುವುದರ ಭಾಗವಾಗಿ, ತಪ್ಪು ಮಾಡಿರುವ ಉದ್ಯೋಗಿಯನ್ನು ಕೆಲಸದಿಂದ ತೆಗೆಯುವಾಗ ಸರ್ಕಾರಿ ಸ್ವಾಮ್ಯದ ಉದ್ಯೋಗದಾತರು ಆರೋಪವನ್ನು 'ಸಕಾರಣದ ಅನುಮಾನಕ್ಕೆ ಎಡೆಯಿಲ್ಲದಂತೆ ಸಾಬೀತು ಮಾಡುವ' ಮಾನದಂಡಕ್ಕೆ ಬದಲಾಗಿ, 'ಯಾರ ವಾದವು ಸತ್ಯವಾಗಿರುವ ಸಾಧ್ಯತೆ ಹೆಚ್ಚಿದೆ' ಎನ್ನುವುದನ್ನು ಪರಿಶೀಲಿಸುವ ಕೆಲಸ ಮಾಡಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

'ಸಕಾರಣದ ಅನುಮಾನಕ್ಕೆ ಎಡೆಯಿಲ್ಲದಂತೆ ಸಾಬೀತು ಮಾಡುವ' ಮಾನದಂಡವನ್ನು ಕ್ರಿಮಿನಲ್ ಪ್ರಕರಣಗಳ ವಿಚಾರಣೆಯಲ್ಲಿ ಪಾಲಿಸಲಾಗುತ್ತದೆ.

ನ್ಯಾಯಮೂರ್ತಿಗಳಾದ ಜೆ.ಕೆ. ಮಾಹೇಶ್ವರಿ ಮತ್ತು ಸಂದೀಪ್ ಮೆಹ್ತಾ ಅವರು ಇರುವ ವಿಭಾಗೀಯ ಪೀಠವು, ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದ (ಎಎಐ) ಉದ್ಯೋಗಿಯಾಗಿದ್ದ ಪ್ರದೀಪ್ ಕುಮಾರ್ ಬ್ಯಾನರ್ಜಿ ಎನ್ನುವವರ ವಜಾ ಆದೇಶವನ್ನು ರದ್ದುಪಡಿಸಿ 2012ರಲ್ಲಿ ಕಲ್ಕತ್ತ ಹೈಕೋರ್ಟ್ ನೀಡಿದ್ದ ಆದೇಶವನ್ನು ಅಸಿಂಧುಗೊಳಿಸಿದೆ.

ಆದರೆ, ಸಂಬಂಧಿತ ಕ್ರಿಮಿನಲ್ ಪ್ರಕರಣವೊಂದರಲ್ಲಿ ಬ್ಯಾನರ್ಜಿ ಅವರು ದೋಷಮುಕ್ತ ಆಗಿದ್ದರೂ ಅವರನ್ನು ವಜಾಗೊಳಿಸಿದ್ದು ಸರಿ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಕ್ರಿಮಿನಲ್ ಪ್ರಕರಣಗಳಲ್ಲಿ ಆರೋಪಗಳನ್ನು ಸಕಾರಣದ ಅನುಮಾನಕ್ಕೆ ಎಡೆಯಿಲ್ಲದಂತೆ ಸಾಬೀತು ಮಾಡಬೇಕಾಗುತ್ತದೆಯಾದರೂ ಅದಕ್ಕೆ ಸಂಬಂಧಿಸಿದ ಶಿಸ್ತುಕ್ರಮದ ವಿಚಾರಣೆಗಳಲ್ಲಿ ಆ ರೀತಿ ಸಾಬೀತು ಮಾಡಬೇಕಾದ ಅಗತ್ಯವಿಲ್ಲ ಎಂದು ವಿಭಾಗೀಯ ಪೀಠವು ಹೇಳಿದೆ.

ಸುಪ್ರೀಂ ಕೋರ್ಟ್‌ನ ಈ ತೀರ್ಪು ಸರ್ಕಾರಿ ಸ್ವಾಮ್ಯದ ಉದ್ಯೋಗದಾತರಿಗೆ ಹೆಚ್ಚಿನ ಬಲ ತಂದುಕೊಡಲಿದೆ ಎಂದು ವಿಶ್ಲೇಷಿಸಲಾಗಿದೆ.

'ಕ್ರಿಮಿನಲ್ ಪ್ರಕರಣಗಳ ವಿಚಾರಣೆಯಲ್ಲಿ ಪ್ರಾಸಿಕ್ಯೂಷನ್ ತನ್ನ ಆರೋಪವನ್ನು ಸಕಾರಣದ ಅನುಮಾನಗಳಿಗೆ ಎಡೆಯಿಲ್ಲದಂತೆ ಸಾಬೀತು ಮಾಡಬೇಕಾದ ಹೊಣೆ ಹೊತ್ತಿರುತ್ತದೆ ಎನ್ನುವುದು ಒಪ್ಪಿತ ಸಂಗತಿ. ಆದರೆ ಶಿಸ್ತು ಕ್ರಮಕ್ಕೆ ಸಂಬಂಧಿಸಿದ ವಿಚಾರಣೆಗಳಲ್ಲಿ ಇಲಾಖೆಯ ಮೇಲಿನ ಹೊಣೆಯು ಸೀಮಿತವಾಗಿರುತ್ತದೆ, ಎರಡು ವಾದಗಳಲ್ಲಿ ಯಾವ ವಾದವು ಸತ್ಯವಾಗಿರುವ ಸಾಧ್ಯತೆ ಹೆಚ್ಚಿದೆ ಎಂಬುದರ ಆಧಾರದಲ್ಲಿ ಅದು ತನ್ನ ಆರೋಪವನ್ನು ಸಾಬೀತು ಮಾಡಬೇಕಾಗುತ್ತದೆ' ಎಂದು ಪೀಠವು ತೀರ್ಪಿನಲ್ಲಿ ಹೇಳಿದೆ.

'ಎರಡನೆಯ ಬಾರಿಯೂ ಅಂಕಿತ ಹಾಕದಿದ್ದರೆ ವ್ಯವಸ್ಥೆ ವಿಫಲ'

ನವದೆಹಲಿ (ಪಿಟಿಐ): ತಮಿಳುನಾಡು ವಿಧಾನಸಭೆಯು ಅಂಗೀಕಾರ ನೀಡಿರುವ ಮಸೂದೆಗಳಿಗೆ ರಾಜ್ಯಪಾಲ ಆರ್.ಎನ್. ರವಿ ಅವರು ಎರಡನೆಯ ಬಾರಿಯೂ ಅಂಕಿತ ಹಾಕದೆ ಇರುವುದು ದೇಶದಲ್ಲಿ ಪ್ರಜಾತಾಂತ್ರಿಕ ವ್ಯವಸ್ಥೆ ವಿಫಲವಾಗುವುದಕ್ಕೆ ಕಾರಣವಾಗುತ್ತದೆ ಎಂದು ತಮಿಳುನಾಡು ಸರ್ಕಾರವು ಸುಪ್ರೀಂ ಕೋರ್ಟ್‌ಗೆ ವಿವರಿಸಿದೆ.

ವಿಧಾನಸಭೆಯು ಅಂಗೀಕಾರ ನೀಡಿದ ಮಸೂದೆಗಳಿಗೆ ರಾಜ್ಯಪಾಲರ ಅಂಕಿತದ ವಿಚಾರವಾಗಿ ಉಂಟಾಗಿರುವ ಬಿಕ್ಕಟ್ಟಿಗೆ ಸಂಬಂಧಿಸಿದಂತೆ ಸರ್ಕಾರ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದಿವಾಲಾ ಮತ್ತು ಆರ್. ಮಹಾದೇವನ್ ಅವರು ಇರುವ ವಿಭಾಗೀಯ ಪೀಠವು ನಡೆಸುತ್ತಿದೆ.

ಸರ್ಕಾರದ ಪರವಾಗಿ ಮಂಗಳವಾರ ವಾದ ಮಂಡಿಸಿದ್ದ ಹಿರಿಯ ವಕೀಲ ಮುಕುಲ್ ರೋಹಟಗಿ ಅವರು, ವಿಧಾನಸಭೆಯು ಮಸೂದೆಯನ್ನು ಅಂಗೀಕರಿಸಿದಾಗ ರಾಜ್ಯಪಾಲರು ಅದನ್ನು ಪುನರ್ ಪರಿಶೀಲಿಸುವಂತೆ ಮಾತ್ರ ಸೂಚಿಸಬಹುದು ಎಂದು ತಿಳಿಸಿದ್ದರು.

'ಆದರೆ, ಅದೇ ಮಸೂದೆಗೆ ಮತ್ತೊಮ್ಮೆ ಅಂಗೀಕಾರ ನೀಡಿ ರಾಜ್ಯಪಾಲರಿಗೆ ರವಾನಿಸಿದಾಗ, ಅದಕ್ಕೆ ಅಂಕಿತ ಹಾಕದೆ ಬೇರೆ ಆಯ್ಕೆ ರಾಜ್ಯಪಾಲರಿಗೆ ಇಲ್ಲ. ನಮ್ಮ ಸಂವಿಧಾನದ ಚೌಕಟ್ಟಿನಲ್ಲಿ ಹೇಳಿರುವ ಪ್ರಕ್ರಿಯೆ ಇದು. ಎರಡನೆಯ ಬಾರಿ ಮಸೂದೆಯನ್ನು ಕಳುಹಿಸಿದಾಗಲೂ ಅವರು ಅಂಕಿತ ಹಾಕದೆ ಇದ್ದರೆ, ಅದು ನಮ್ಮ ಪ್ರಜಾತಾಂತ್ರಿಕ ವ್ಯವಸ್ಥೆಯ ವೈಫಲ್ಯವಾಗುತ್ತದೆ' ಎಂದು ರೋಹಟಗಿ ವಾದಿಸಿದ್ದರು.

45 ದಿನಗಳಲ್ಲಿ 4 ಲಕ್ಷ ಕೋಳಿಗಳ ಸಾವು

ಅಮರಾವತಿ (ಪಿಟಿಐ): ಕಳೆದ 45 ದಿನಗಳಲ್ಲಿ ಆಂಧ್ರ ಪ್ರದೇಶದ ಗೋದಾವರಿ ಜಿಲ್ಲೆ ಮತ್ತು ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಸುಮಾರು 4 ಲಕ್ಷ ಕೋಳಿಗಳು ಮೃತಪಟ್ಟಿವೆ. ಇದಕ್ಕೆ ಕಾರಣ ಏನು ಎಂದು ಪತ್ತೆ ಹಚ್ಚಲು ಪಶು ಸಂಗೋಪನೆ ಇಲಾಖೆಯು ಸತ್ತ ಕೋಳಿಗಳ ಮಾದರಿಯನ್ನು ಪರೀಕ್ಷೆಗೆ ಕಳುಹಿಸಿದೆ ಎಂದು ಅಧಿಕಾರಿಯೊಬ್ಬರು ಬುಧವಾರ ತಿಳಿಸಿದರು.

ಮತದಾನೋತ್ತರ ಸಮೀಕ್ಷೆಗಳನ್ನು ತಿರಸ್ಕರಿಸಿದ ಎಎಪಿ

ನವದೆಹಲಿ (ಪಿಟಿಐ): ದೆಹಲಿ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಪಕ್ಷಕ್ಕೆ ಅಗತ್ಯ ಬಹುಮತ ಸಿಗುವುದಿಲ್ಲ ಎಂಬುದಾಗಿ ಬಹುತೇಕ ಚುನಾವಣೋತ್ತರ ಸಮೀಕ್ಷೆಗಳು ಹೇಳಿರುವುದನ್ನು ಆಡಳಿತಾರೂಢ ಆಮ್ ಆದ್ಮಿ ಪಕ್ಷ (ಎಎಪಿ) ಬುಧವಾರ ತಿರಸ್ಕರಿಸಿದೆ.

'ಪಕ್ಷ ದಾಖಲಿಸಿರುವ ಸಾಧನೆ ಕುರಿತು ಚುನಾವಣಾ ವಿಶ್ಲೇಷಕರು ಹಿಂದಿನಿಂದಲೂ ತಪ್ಪಾಗಿ ಲೆಕ್ಕಾಚಾರ ಹಾಕುತ್ತಲೇ ಬಂದಿದ್ದಾರೆ' ಎಂದು ಎಎಪಿ ವಕ್ತಾರೆ ರೀನಾ ಗುಪ್ತಾ ಹೇಳಿದ್ದಾರೆ.

'ಮತದಾನೋತ್ತರ ಸಮೀಕ್ಷೆಗಳನ್ನು ಪಕ್ಷ ಗೌರವಿಸುತ್ತದೆ. ದೆಹಲಿ ಜನರು ಬದಲಾವಣೆ ಬಯಸಿದ್ದರು. ಈ ಕುರಿತು ಅವರು ಬಹಳ ಹಿಂದೆಯೇ ನಿಶ್ಚಯಿಸಿದ್ದರು' ಎಂದು ಬಿಜೆಪಿಯ ದೆಹಲಿ ಘಟಕದ ಅಧ್ಯಕ್ಷ ವೀರೇಂದ್ರ ಸಚದೇವ ಹೇಳಿದ್ದಾರೆ.

ದೆಹಲಿ ವಿಧಾನಸಭೆ ಚುನಾವಣೆಯಲ್ಲಿ ಬುಧವಾರ ಮತ ಚಲಾಯಿಸಿದ ರಾಷ್ಟ್ರಪತಿ ದ್ರೌಪದಿ ಮುರ್ಮು, ಸಿಜೆಐ ಸಂಜೀವ್ ಖನ್ನಾ, ಭೂಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ, ಕಾಂಗ್ರೆಸ್, ಎಎಪಿ ಹಾಗೂ ಬಿಜೆಪಿ ನಾಯಕರು ಅಳಿಸಲಾಗದ ಶಾಯಿ ಗುರುತಿರುವ ಬೆರಳು ಪ್ರದರ್ಶಿಸಿದರು — ಪಿಟಿಐ ಚಿತ್ರ

'ತಾತ್ಕಾಲಿಕ ನೇಮಕ ಹೆಚ್ಚಳಕ್ಕೆ ಸರ್ಕಾರದ ನೀತಿ ಕಾರಣ'

• ಶೆಮಿನ್ ಜಾಯ್

ನವದೆಹಲಿ: ಶಿಕ್ಷಣ ಸಂಸ್ಥೆಗಳನ್ನು ನಡೆಸುವ ಹೊಣೆಯಿಂದ ಸರ್ಕಾರಗಳು ಹಿಂದಕ್ಕೆ ಸರಿದಿರುವುದು ಹಾಗೂ ನವ–ಉದಾರೀಕರಣ ನೀತಿಗಳ ಪ್ರಭಾವವು ಜಾಸ್ತಿ ಆಗುತ್ತಿರುವುದು ವಿಶ್ವವಿದ್ಯಾಲಯಗಳಲ್ಲಿ ತಾತ್ಕಾಲಿಕ ಅವಧಿಗೆ ಪ್ರಾಧ್ಯಾಪಕರ ನೇಮಕ ಹೆಚ್ಚಾಗುತ್ತಿರುವುದಕ್ಕೆ ಮುಖ್ಯ ಕಾರಣಗಳು ಎಂದು ಸಂಸತ್ತಿನ ಸಮಿತಿಯೊಂದು ಹೇಳಿದೆ.

ಕಾಯಂ ಉದ್ಯೋಗಗಳ ಕೊರತೆಯ ಕಾರಣದಿಂದಾಗಿ ಈ ಬಗೆಯ ಗುತ್ತಿಗೆ ಕೆಲಸಗಳನ್ನು ಮಾಡಲು ಬಹಳಷ್ಟು ಜನ ಮುಂದಾಗುತ್ತಿದ್ದಾರೆ ಎಂದು ಸಮಿತಿಯು ಹೇಳಿದೆ.

ಭಾರತದ ಉನ್ನತ ಶಿಕ್ಷಣ ಆಯೋಗ ಕರಡು ಮಸೂದೆಯಲ್ಲಿ ಲೋಪಗಳು ಇವೆ ಎಂದು ಹೇಳಿರುವ ಸಮಿತಿಯು, ಈ ಮಸೂದೆಯು ದೇಶದ ಗ್ರಾಮೀಣ ಪ್ರದೇಶಗಳಲ್ಲಿನ ಶಿಕ್ಷಣ ವ್ಯವಸ್ಥೆಯ ಖಾಸಗೀಕರಣಕ್ಕೆ ಪರೋಕ್ಷವಾಗಿ ಇಂಬು ಕೊಡುತ್ತದೆ ಎಂದು ಹೇಳಿದೆ. ಮಾನವಿಕ ವಿಷಯಗಳನ್ನು ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಕೌಶಲ ಅಭಿವೃದ್ಧಿ ಯೋಜನೆಗಳನ್ನು ರೂಪಿಸಬೇಕು ಎಂದು ಶಿಫಾರಸು ಮಾಡಿದೆ.

ಬಹುತೇಕ ವಿಶ್ವವಿದ್ಯಾಲಯಗಳು, ಅದರಲ್ಲೂ ಮುಖ್ಯವಾಗಿ ಕೇಂದ್ರ ಸರ್ಕಾರದ ವಿಶ್ವವಿದ್ಯಾಲಯಗಳಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವವರ ಸಂಖ್ಯೆ ಹೆಚ್ಚಿದೆ. ಕೇಂದ್ರೀಯ ವಿಶ್ವವಿದ್ಯಾಲಯಗಳಲ್ಲಿ ನಾಲ್ಕು ಸಾವಿರ ಬೋಧಕರನ್ನು ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳಲಾಗಿದೆ ಎಂದು ಕಾಂಗ್ರೆಸ್ಸಿನ ದಿಗ್ವಿಜಯ್ ಸಿಂಗ್ ನೇತೃತ್ವದ 'ಶಿಕ್ಷಣ, ಮಹಿಳೆಯರು, ಮಕ್ಕಳು, ಯುವಕರು ಮತ್ತು ಕ್ರೀಡೆ ಕುರಿತ ಸಂಸತ್ತಿನ ಸ್ಥಾಯಿ ಸಮಿತಿ' ಹೇಳಿದೆ.

ಸಮಿತಿಯ ವರದಿಯನ್ನು ಸಂಸತ್ತಿನಲ್ಲಿ ಮಂಗಳವಾರ ಮಂಡಿಸಲಾಗಿದೆ. ಉನ್ನತ ಶಿಕ್ಷಣ ಇಲಾಖೆ ತೆಗೆದುಕೊಂಡಿರುವ ಕ್ರಮಗಳಿಗೆ ಪ್ರತಿಕ್ರಿಯೆಯನ್ನು ದಾಖಲಿಸಿರುವ ಸಮಿತಿಯು, ಗುತ್ತಿಗೆ ಆಧಾರದ ನೇಮಕಗಳು ಉದ್ಯೋಗಕ್ಕೆ ಭದ್ರತೆ ಕಲ್ಪಿಸುವುದಿಲ್ಲ, ವೇತನ ಹೆಚ್ಚಳ ಇರುವುದಿಲ್ಲ, ಸಾಮಾಜಿಕ ಭದ್ರತಾ ಸೌಲಭ್ಯಗಳು ಕಡಿಮೆ ಇರುತ್ತವೆ ಎಂದು ವರದಿಯಲ್ಲಿ ಉಲ್ಲೇಖಿಸಿದೆ.

ಗುತ್ತಿಗೆ ಆಧಾರದಲ್ಲಿ ನೇಮಕ ಆದವರು ಸಂಶೋಧನೆ ಕೈಗೊಳ್ಳಲು ಯುತ್ನಿಸಿದರೆ ಅನುದಾನದ ಕೊರತೆ ಇರುತ್ತದೆ, ಸಾಂಸ್ಥಿಕ ಮಾನ್ಯತೆಯ ಕೊರತೆ ಕೂಡ ಇರುತ್ತದೆ ಎಂದು ವರದಿಯಲ್ಲಿ ಹೇಳಲಾಗಿದೆ. ಇಲಾಖೆಯು ಉದ್ಯೋಗವನ್ನು ಕಾಯಂಗೊಳಿಸುವ ಕೆಲಸಕ್ಕೆ ಮುಂದಾಗಬೇಕು ಎಂದು ಸಮಿತಿ ಶಿಫಾರಸು ಮಾಡಿದೆ.

ಉದ್ಯಮಗಳು ಹಾಗೂ ಕೆಲವು ಸಂಸ್ಥೆಗಳನ್ನು ತೊಡಗಿಸಿಕೊಂಡು ಕೌಶಲ ತರಬೇತಿ ನೀಡುವ ಉಪಕ್ರಮಗಳಲ್ಲಿ ವಾಣಿಜ್ಯ, ವಿಜ್ಞಾನ ಅಥವಾ ತಾಂತ್ರಿಕ ಶಿಕ್ಷಣದ ಹಿನ್ನೆಲೆ ಹೊಂದಿರುವ ವಿದ್ಯಾರ್ಥಿಗಳಿಗೆ ಮಾತ್ರ ಗಮನ ನೀಡುವ ಪ್ರವೃತ್ತಿ ಸರಿಯಲ್ಲ ಎಂದು ವರದಿ ಬೊಟ್ಟುಮಾಡಿದೆ. ಮಾನವಿಕ ಮತ್ತು ಅದಕ್ಕೆ ಸಂಬಂಧಿಸಿದ ಶೈಕ್ಷಣಿಕ ಹಿನ್ನೆಲೆಯ ವಿದ್ಯಾರ್ಥಿಗಳಿಗೂ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಶಿಫಾರಸು ಮಾಡಿದೆ.

ಒಗ್ಗಟ್ಟಿನಿಂದ ಇದ್ದರೆ ಹಿಂದೂ ಸಮಾಜದ ಏಳಿಗೆ: ಭಾಗವತ್

ಪಟ್ಟಣಂತಿಟ್ಟ (ಪಿಟಿಐ): ಹಿಂದೂ ಸಮಾಜವು ಒಗ್ಗಟ್ಟಿನಿಂದ ಇದ್ದರೆ ಮಾತ್ರ ಏಳಿಗೆ ಕಾಣಬಹುದು ಎಂದು ಹೇಳಿರುವ ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಸರಸಂಘಚಾಲಕ ಮೋಹನ್ ಭಾಗವತ್ ಅವರು, ಹಿಂದೂಗಳು ಜಾತಿ, ಭಾಷೆ, ಪ್ರದೇಶ ಯಾವುದೇ ಇದ್ದರೂ ಅವರೆಲ್ಲರನ್ನೂ ಒಂದಾಗಿ ಕಾಣಬೇಕು ಎಂದು ಕರೆ ನೀಡಿದ್ದಾರೆ.

ಹಿಂದೂ ಏಕತಾ ಸಮ್ಮೇಳನದಲ್ಲಿ ಮಾತನಾಡಿದ ಅವರು, ಒಗ್ಗಟ್ಟು ಹೊಂದಿರುವ ಸಮಾಜವು ಏಳಿಗೆ ಕಾಣುತ್ತದೆ, ಒಗ್ಗಟ್ಟು ಇಲ್ಲದ ಸಮಾಜವು ಕುಸಿಯುತ್ತದೆ ಎಂದು ಹೇಳಿದ್ದಾರೆ.

ಮೋಹನ್ ಭಾಗವತ್

ಹಿಂದೂ ಧರ್ಮದಲ್ಲಿ ಯಾರೂ ಮೇಲಲ್ಲ, ಯಾರೂ ಕೀಳಲ್ಲ; ಜಾತಿಯು ಇಲ್ಲಿ ಮುಖ್ಯವಲ್ಲ; ಇಲ್ಲಿ 'ಅಸ್ಪೃಶ್ಯತೆ ಇಲ್ಲ' ಎಂದು ಭಾಗವತ್ ಹೇಳಿದ್ದಾರೆ.

ಪರಿಸರ ಸಂರಕ್ಷಣೆಗೆ ನೀತಿಗಳಲ್ಲಿ ಅಗತ್ಯ ಬದಲಾವಣೆ ತರುವುದಕ್ಕೆ ಸಮಯ ಬೇಕಾಗಬಹುದು. ಆದರೆ ಜನರು ನೀರನ್ನು ಉಳಿಸುವ, ಸಸಿಗಳನ್ನು ನೆಡುವ, ಪ್ಲಾಸ್ಟಿಕ್ ಬಳಕೆಯನ್ನು ಕೈಬಿಡುವ ಕೆಲಸ ಮಾಡಬಹುದು ಎಂದಿದ್ದಾರೆ.

ಸ್ವಾತಂತ್ರ್ಯ ಹೋರಾಟಗಾರ ಜಗಲಾಲ್ ಚೌಧರಿ ಜಯಂತಿ ಸಮಾರಂಭ

ಸಂವಿಧಾನದ ಮೇಲೆ ಜಂಟಿ ದಾಳಿ: ರಾಹುಲ್

ಪಟ್ನಾ (ಪಿಟಿಐ): 'ಸಂವಿಧಾನವು ಬಿಜೆಪಿ-ಆರ್‌ಎಸ್‌ಎಸ್‌ನ ಜಂಟಿ ದಾಳಿಗೆ ಒಳಗಾಗಿದೆ. ಬಿ.ಆರ್. ಅಂಬೇಡ್ಕರ್ ಅವರಂತಹ ದಲಿತ ಮಹನೀಯರಿಗೆ ತೋರಿಕೆಯ ಗೌರವ ಕೊಡುವ ಮೂಲಕ ಜನರನ್ನು ಮೋಸಗೊಳಿಸಲು ಪ್ರಯತ್ನಿಸುತ್ತಿವೆ' ಎಂದು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಬುಧವಾರ ಆರೋಪಿಸಿದರು.

ಸ್ವಾತಂತ್ರ್ಯ ಹೋರಾಟಗಾರ ಮತ್ತು ದಲಿತ ನಾಯಕ ಜಗಲಾಲ್ ಚೌಧರಿ ಅವರ ಜನ್ಮ ಜಯಂತಿ ಸಮಾರಂಭದಲ್ಲಿ ಮಾತನಾಡಿದ ಅವರು, ದಲಿತರು ಮತ್ತು ದುರ್ಬಲರ ಹಕ್ಕುಗಳನ್ನು ಖಾತರಿಪಡಿಸುವ ಸಂವಿಧಾನಕ್ಕೆ ಬಿಜೆಪಿ ಮತ್ತು ಆರ್‌ಎಸ್‌ಎಸ್ ವಿರುದ್ಧವಾಗಿವೆ ಎಂದರು.

ಪಾಕೆಟ್ ಗಾತ್ರದ ಸಂವಿಧಾನದ ಪ್ರತಿಯನ್ನು ಸಭಿಕರತ್ತ ತೋರಿಸುತ್ತ, 'ಇದು ಜಾರಿಯಲ್ಲಿರುವವರೆಗೆ, ದಲಿತರು ಮತ್ತು ಸಮಾಜದ ಇತರ ವಂಚಿತ ವರ್ಗಗಳು ಉತ್ತಮ ಜೀವನವನ್ನು ಆಶಿಸಬಹುದು. ಬಿಜೆಪಿ-ಆರ್‌ಎಸ್‌ಎಸ್‌ಗೆ ಇದು ಗೊತ್ತಿದೆ. ಹಾಗಾಗಿಯೇ ಅವರು ಸಂವಿಧಾನದ ಮೇಲೆ ದಾಳಿ ಮಾಡುತ್ತಿದ್ದಾರೆ' ಎಂದು ಆರೋಪಿಸಿದರು.

'ಪ್ರಧಾನಿ ಮೋದಿಯವರು ಸಂವಿಧಾನ ಮತ್ತು ಅಂಬೇಡ್ಕರ್ ಪ್ರತಿಮೆ ಮುಂದೆ ನಮಸ್ಕರಿಸುವುದನ್ನು ನೀವು ಕಂಡಿರಬಹುದು. ಆರ್‌ಎಸ್‌ಎಸ್‌ನ ನಾಯಕರು ಇಂದು ಅಂಬೇಡ್ಕರ್ ಗುಣಗಾನ ಮಾಡುವುದನ್ನು ಕಾಣಬಹುದು. ಆದರೆ, ಇವರೆಲ್ಲರೂ ಅಂಬೇಡ್ಕರ್ ಪ್ರತಿಪಾದಿಸಿದ ಆದರ್ಶಗಳಿಗೆ ವಿರುದ್ಧವಾದ ಕೆಲಸ ಮಾಡುತ್ತಿದ್ದಾರೆ' ಎಂದು ದೂರಿದರು.

'ವಂಚಿತ ವರ್ಗಗಳಿಗೆ ಪ್ರಾತಿನಿಧ್ಯ ನೀಡಲಾಗುತ್ತಿದೆ ಎಂದು ಮೋದಿ ಹೇಳುತ್ತಾರೆ. ಆದರೆ, ಅವರು ಶಾಸಕರು ಮತ್ತು ಸಂಸದರಿಂದ ಎಲ್ಲಾ ಅಧಿಕಾರವನ್ನು ಕಸಿದುಕೊಂಡಿದ್ದಾರೆ. ಅವರ ಸಚಿವರು ಸಹ ಆರ್‌ಎಸ್‌ಎಸ್ ಶಿಫಾರಸಿನ ಮೇರೆಗೆ ನೇಮಕಗೊಂಡ ವಿಶೇಷ ಕರ್ತವ್ಯಾಧಿಕಾರಿ ಜೊತೆ ಕಾರ್ಯನಿರ್ವಹಿಸಬೇಕಿದೆ' ಎಂದು ಆರೋಪ ಮಾಡಿದರು.

'ದಲಿತರು, ಬುಡಕಟ್ಟು ಸಮುದಾಯ ಹಾಗೂ ಇತರೆ ಹಿಂದುಳಿದ ವರ್ಗದವರಿಗೆ (ಒಬಿಸಿ) ರಾಜಕೀಯ ಪ್ರಾತಿನಿಧ್ಯವಷ್ಟೇ ಸಾಕಾಗುವುದಿಲ್ಲ. ಎಲ್ಲ ಕ್ಷೇತ್ರಗಳಲ್ಲಿ ಇವರ ಪ್ರಾತಿನಿಧ್ಯವನ್ನು ಖಾತ್ರಿಪಡಿಸುವ ಅಗತ್ಯವಿದೆ. ದಲಿತರು, ಆದಿವಾಸಿಗಳು ಮತ್ತು ಹಿಂದುಳಿದವರು ಅಧಿಕಾರಶಾಹಿ ಮತ್ತು ಖಾಸಗಿ ವಲಯದಲ್ಲಿ ಕೇವಲ ಕಾಲಾಳುಗಳಾಗುವುದಲ್ಲ, ನಾಯಕರಾಗುವ ದಿನವನ್ನು ನಾನು ನೋಡಲು ಬಯಸುತ್ತೇನೆ' ಎಂದು ರಾಹುಲ್ ಹೇಳಿದರು.

ಕಾಂಗ್ರೆಸ್ ನಾಯಕ ಹೇಳಿದ್ದು...

- ಮಾಧ್ಯಮಗಳಲ್ಲಿ ದಲಿತರ ಸಂಖ್ಯೆ ಅತ್ಯಲ್ಪವಾಗಿರುವುದರಿಂದ ಅವರ ಸಮಸ್ಯೆಗಳು ಪ್ರಮುಖವಾಗಿ ಪ್ರಸ್ತಾಪವಾಗುತ್ತಿಲ್ಲ; ದೇಶದ ಸಿರಿವಂತರ ಪಟ್ಟಿಯಲ್ಲಿ ದಲಿತರಿಲ್ಲ; ಶಿಕ್ಷಣ ಸಂಸ್ಥೆಗಳಲ್ಲಿ ದಲಿತರು ಪ್ರಶ್ನೆ ಪತ್ರಿಕೆಗಳನ್ನು ರೂಪಿಸುವುದನ್ನು ನಾವು ನೋಡುವ ಹಂತಕ್ಕೆ ಇನ್ನೂ ತಲುಪಿಲ್ಲ
- ಕಪ್ಪು ವರ್ಣೀಯರು ವ್ಯವಸ್ಥೆಯಲ್ಲಿ ದನಿಎತ್ತಿದ ಮೇಲೆ ಅಮೆರಿಕದಲ್ಲಿ ಬದಲಾವಣೆ ಉಂಟಾಯಿತು
- ಜಾತಿ ಗಣತಿಯೇ ಸಮಾಜದ ನಿಜವಾದ ಎಕ್ಸ್-ರೇ. ಇದನ್ನು ಮೋದಿ ಸರ್ಕಾರ ತಪ್ಪಿಸಲು ಬಯಸುತ್ತದೆ. ಆದರೆ ನಾವು ಇದಕ್ಕೆ ಅವಕಾಶ ನೀಡದಿರಲು ನಿರ್ಧರಿಸಿದ್ದೇವೆ
- ದುರ್ಬಲ ವರ್ಗದವರ ಪರವಾಗಿ ನನ್ನ ಹೋರಾಟವನ್ನು ಮುಂದುವರಿಸುತ್ತೇನೆ
- ತೆಲಂಗಾಣದಲ್ಲಿ ತಮ್ಮ ಪಕ್ಷದ ಸರ್ಕಾರ ಕೈಗೊಂಡಿರುವ ರೀತಿಯಲ್ಲಿ, ಬಿಜೆಪಿ ನೇತೃತ್ವದ ಎನ್‌ಡಿಎ ಆಡಳಿತವಿರುವ ಬಿಹಾರದಲ್ಲಿ ಜಾತಿ ಸಮೀಕ್ಷೆ ನಡೆದಿಲ್ಲ
- ದೇಶದಲ್ಲಿ ಸಾರ್ವಜನಿಕ ಆರೋಗ್ಯ ಜಾಲವು ಅಂಬಾನಿ, ಅದಾನಿ ಮತ್ತು ಅವರ ಒಡೆತನದ ಖಾಸಗಿ ಆಸ್ಪತ್ರೆಗಳಿಗೆ ದಾರಿ ಮಾಡಿಕೊಡುತ್ತಿದೆ



ಭಾರತ–ಇಂಗ್ಲೆಂಡ್ ಏಕದಿನ ಸರಣಿ: ರೋಹಿತ್–ಬಟ್ಲರ್ ಪಡೆ ಮುಖಾಮುಖಿ

ಚಾಂಪಿಯನ್ಸ್ 'ಪರೀಕ್ಷೆ'ಗೆ ಸಿದ್ಧತೆ ಶುರು

ನಾಗಪುರ (ಪಿಟಿಐ): ಇನ್ನೆರಡು ವಾರ ಕಳೆದರೆ ಐಸಿಸಿ ಚಾಂಪಿಯನ್ಸ್ ಟ್ರೋಫಿ ಶುರುವಾಗಲಿದೆ. ಅದಕ್ಕಾಗಿ ತಂಡಗಳು ಭರದ ಸಿದ್ಧತೆ ಆರಂಭಿಸಿವೆ.

ಗುರುವಾರ ಶುರುವಾಗುವ ಮೂರು ಪಂದ್ಯಗಳ ಏಕದಿನ ಕ್ರಿಕೆಟ್ ಸರಣಿ ಕೂಡ ಭಾರತ ಮತ್ತು ಇಂಗ್ಲೆಂಡ್ ತಂಡಗಳಿಗೆ ಪೂರ್ವಾಭ್ಯಾಸ ವೇದಿಕೆಯಾಗಿದೆ. ಚಾಂಪಿಯನ್ಸ್ ಟ್ರೋಫಿ ಟೂರ್ನಿಗೆ ಈಗಾಗಲೇ ರೋಹಿತ್ ಶರ್ಮಾ ನಾಯಕತ್ವದ ತಂಡವನ್ನು ಆಯ್ಕೆ ಮಾಡಲಾಗಿದೆ. ಆದರೆ ಕೊನೆಯ ಹಂತದ ಬದಲಾವಣೆ ಮಾಡಲು ಫೆಬ್ರುವರಿ 12 ಅಂತಿಮ ದಿನವಾಗಿದೆ. ಆ ಕಾರಣಕ್ಕೂ ಈ ಸರಣಿ ಕುತೂಹಲ ಮೂಡಿಸಿದೆ.

ಕೆಂಪು ಚೆಂಡಿನ ಕ್ರಿಕೆಟ್ ಮಾದರಿಯಲ್ಲಿ ಅನುಭವಿಗಳಾದ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಅವರಿಬ್ಬರೂ ವಿಫಲರಾಗಿದ್ದಾರೆ. ರಣಜಿ ಟ್ರೋಫಿ ಪಂದ್ಯಗಳಲ್ಲಿಯೂ ಲಯ ಕಂಡುಕೊಳ್ಳಲಿಲ್ಲ. ಆದ್ದರಿಂದ ಅವರು ಕೂಡ ಈ ಸರಣಿಯಲ್ಲಿ ಪರೀಕ್ಷೆಗೊಳಗಾಗಲಿದ್ದಾರೆ. 2023ರ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಕೊಹ್ಲಿ 765 ಮತ್ತು ರೋಹಿತ್ 597 ರನ್ ಗಳಿಸಿದ್ದರು.

ಆ ಟೂರ್ನಿಯಲ್ಲಿ ಭಾರತ ಫೈನಲ್‌ನಲ್ಲಿ ಸೋತಿತ್ತು. ಅಲ್ಲಿಂದ ಇಲ್ಲಿಯವರೆಗೆ ವಿರಾಟ್ ಮತ್ತು ರೋಹಿತ್ ಅವರು ಶ್ರೀಲಂಕಾ ಎದುರಿನ ಏಕದಿನ ಸರಣಿಯಲ್ಲಿ ಆಡಿದ್ದಾರೆ. ಅದರಲ್ಲಿ ರೋಹಿತ್ ಎರಡು ಅರ್ಧಶತಕ ಗಳಿಸಿದ್ದರು. ವಿರಾಟ್ ವೈಫಲ್ಯ ಅನುಭವಿಸಿದ್ದರು.

ಚಾಂಪಿಯನ್ಸ್ ಟ್ರೋಫಿ ಟೂರ್ನಿಗಿಂತ ಮುಂಚೆ ಭಾರತಕ್ಕೆ ಪೂರ್ವಾಭ್ಯಾಸಕ್ಕಾಗಿ ಸಿಗುವ ಏಕೈಕ ಸರಣಿ ಇಂಗ್ಲೆಂಡ್ ಎದುರಿನದ್ದು. ಫೆಬ್ರುವರಿ 19ರಿಂದ ಆರಂಭವಾಗಲಿದೆ. ಪಾಕಿಸ್ತಾನ ಮತ್ತು ದುಬೈನಲ್ಲಿ ಪಂದ್ಯಗಳು ನಡೆಯಲಿವೆ. ಹೋದವರ್ಷ ಭಾರತ ತಂಡವು ಟಿ20 ವಿಶ್ವಕಪ್ ಗೆದ್ದ ನಂತರ ಇಬ್ಬರೂ ತಾರಾ ಆಟಗಾರರಾದ ವಿರಾಟ್ ಮತ್ತು ರೋಹಿತ್ ಚುಟುಕು ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ್ದರು.

ಇದಲ್ಲದೇ ಕೆ.ಎಲ್. ರಾಹುಲ್ ಮತ್ತು ರಿಷಭ್ ಪಂತ್ ಅವರಲ್ಲಿ ಯಾರು 11ರ ಬಳಗದಲ್ಲಿ ಸ್ಥಾನ ಪಡೆಯುವರು ಎಂಬ ಕುತೂಹಲವೂ ಇದೆ. ರೋಹಿತ್ ಮತ್ತು ಉಪನಾಯಕ ಶುಭಮನ್ ಗಿಲ್ ಇನಿಂಗ್ಸ್ ಆರಂಭಿಸುವ ಸಾಧ್ಯತೆ ಇದೆ. ನಂತರದ ಕ್ರಮಾಂಕದಲ್ಲಿ ವಿರಾಟ್, ಶ್ರೇಯಸ್ ಅಯ್ಯರ್, ಹಾರ್ದಿಕ್ ಪಾಂಡ್ಯ ಮತ್ತು ಐದನೇ ಕ್ರಮಾಂಕದಲ್ಲಿ ವಿಕೆಟ್ ಕೀಪರ್–ಬ್ಯಾಟರ್ ಕಣಕ್ಕಿಳಿಯುವ ಸಾಧ್ಯತೆ ಹೆಚ್ಚು.

2023ರ ವಿಶ್ವಕಪ್ ಟೂರ್ನಿಯಲ್ಲಿ ರಾಹುಲ್ ವಿಕೆಟ್‌ಕೀಪಿಂಗ್ ನಿಭಾಯಿಸಿದ್ದರು. ಆಗ ಒಟ್ಟು 452 ರನ್ ಕೂಡ ಗಳಿಸಿದ್ದರು. ಮಧ್ಯಮ ಕ್ರಮಾಂಕದಲ್ಲಿ ಅವರು ಸ್ಥಿರತೆ ಪ್ರದರ್ಶಿಸಿದ್ದರು. ಇನ್ನೊಂದೆಡೆ ರಿಷಭ್ ಅವರಿಗೆ ಅವಕಾಶ ಕೊಡುವುದರಿಂದ ಮಧ್ಯ ಕ್ರಮಾಂಕದಲ್ಲಿ ಎಡಗೈ ಬ್ಯಾಟರ್ ಲಭಿಸುತ್ತಾರೆ. ಇದು ತಂಡಕ್ಕೆ ಹೆಚ್ಚು ಅನುಕೂಲವಾಗಬಹುದು ಎಂಬ ಅಭಿಪ್ರಾಯವೂ ಇದೆ.

ಗಾಯದಿಂದ ಚೇತರಿಸಿಕೊಂಡು ತಂಡಕ್ಕೆ ಮರಳಿರುವ ವೇಗಿ ಮೊಹಮ್ಮದ್ ಶಮಿ ಹಾಗೂ ಸ್ಪಿನ್ನರ್ ಕುಲದೀಪ್ ಯಾದವ್ ಅವರಿಗೂ ಈ ಸರಣಿ ಪರೀಕ್ಷಾ ಕಣವಾಗಿದೆ. ಈಚೆಗೆ ಅವರು ಇಂಗ್ಲೆಂಡ್ ಎದುರಿನ ಟಿ20 ಸರಣಿಯಲ್ಲಿ ಎರಡು ಪಂದ್ಯಗಳನ್ನು ಆಡಿದ್ದರು. ಕುಲದೀಪ್ ಅವರು ಹೋದ ವರ್ಷ ನ್ಯೂಜಿಲೆಂಡ್ ಎದುರಿನ ಟೆಸ್ಟ್ ಸರಣಿಯ ಮೊದಲ ಪಂದ್ಯದಲ್ಲಿ ಆಡಿದ್ದರು. ಅದರ ನಂತರ ಈಗಲೇ ಅವರು ಕಣಕ್ಕೆ ಇಳಿಯುತ್ತಿದ್ದಾರೆ. ಈ ಸರಣಿಯಲ್ಲಿ ಬೂಮ್ರಾ ಲಭ್ಯರಿಲ್ಲ. ವಿಶ್ವಕಪ್ ನಂತರ ರವೀಂದ್ರ ಜಡೇಜ ಏಕದಿನ ಮಾದರಿಯಲ್ಲಿ ಆಡಿಲ್ಲ. ಆದ್ದರಿಂದ ಅಕ್ಷರ್ ಪಟೇಲ್ ಮತ್ತು ವಾಷಿಂಗ್ಟನ್ ಸುಂದರ್ ಅವರಿಗೇ ಅವಕಾಶ ಸಿಗುವ ಸಾಧ್ಯತೆ ಹೆಚ್ಚು.

ಇಂಗ್ಲೆಂಡ್ ತಂಡದಲ್ಲಿ ನಾಯಕ ಜೋಸ್ ಬಟ್ಲರ್ ಲಯಕ್ಕೆ ಮರಳಿದರೆ ದೊಡ್ಡ ಬಲ ಬಂದಂತಾಗುತ್ತದೆ. ಹ್ಯಾರಿ ಬ್ರೂಕ್, ಬೆನ್ ಡಕೆಟ್, ಫೀಲಿಪ್ ಸಾಲ್ಟ್ ಉತ್ತಮ ಲಯದಲ್ಲಿದ್ದಾರೆ. ಜೋ ರೂಟ್ ಕೂಡ ತಂಡಕ್ಕೆ ಮರಳಿದ್ದಾರೆ. ಇದರಿಂದಾಗಿ ಬ್ಯಾಟಿಂಗ್ ಉತ್ತಮವಾಗಿದೆ. ವೇಗಿ ಜೋಫ್ರಾ ಆರ್ಚರ್ ಮತ್ತು ಸ್ಪಿನ್ನರ್ ಆದಿಲ್ ರಶೀದ್ ಅವರಿರುವ ಬೌಲಿಂಗ್ ಬಳಗವು ಆತಿಥೇಯ ಬ್ಯಾಟರ್‌ಗಳಿಗೆ ಸವಾಲೊಡ್ಡಲು ಸಿದ್ಧವಾಗಿದೆ.

ತಂಡಗಳು

ಭಾರತ: ರೋಹಿತ್ ಶರ್ಮಾ (ನಾಯಕ), ಶುಭಮನ್ ಗಿಲ್ (ಉಪನಾಯಕ), ಯಶಸ್ವಿ ಜೈಸ್ವಾಲ್, ವಿರಾಟ್ ಕೊಹ್ಲಿ, ಶ್ರೇಯಸ್ ಅಯ್ಯರ್, ಕೆ.ಎಲ್. ರಾಹುಲ್, ರಿಷಭ್ ಪಂತ್ (ಇಬ್ಬರು ವಿಕೆಟ್‌ಕೀಪರ್), ಹಾರ್ದಿಕ್ ಪಾಂಡ್ಯ, ರವೀಂದ್ರ ಜಡೇಜ, ವಾಷಿಂಗ್ಟನ್ ಸುಂದರ್, ಅಕ್ಷರ್ ಪಟೇಲ್, ಕುಲದೀಪ್ ಯಾದವ್, ಹರ್ಷಿತ್ ರಾಣಾ, ಮೊಹಮ್ಮದ್ ಶಮಿ, ಅರ್ಷದೀಪ್ ಸಿಂಗ್, ವರುಣ ಚಕ್ರವರ್ತಿ.

ಇಂಗ್ಲೆಂಡ್: ಜೋಸ್ ಬಟ್ಲರ್ (ನಾಯಕ), ಹ್ಯಾರಿ ಬ್ರೂಕ್, ಬೆನ್ ಡಕೆಟ್, ಜೋ ರೂಟ್, ಫೀಲಿಪ್ ಸಾಲ್ಟ್, ಜೇಮಿ ಸ್ಮಿತ್, ಜೇಕಬ್ ಬೆಥೆಲ್, ಬ್ರೈಡನ್ ಕೇರ್ಸ್, ಲಿಯಾಮ್ ಲಿವಿಂಗ್‌ಸ್ಟೋನ್, ಜೇಮಿ ಓವರ್ಟನ್, ಜೋಫ್ರಾ ಆರ್ಚರ್, ಗಸ್ ಅಟ್ಕಿನ್ಸನ್, ಸಕೀಬ್ ಮೆಹಮೂದ್, ಆದಿಲ್ ರಶೀದ್, ಮಾರ್ಕ್ ವುಡ್. ಪಂದ್ಯ ಆರಂಭ: ಮಧ್ಯಾಹ್ನ 1.30

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ನಾಗಪುರದ ವಿಸಿಎ ಕ್ರೀಡಾಂಗಣದಲ್ಲಿ ಬುಧವಾರ ಅಭ್ಯಾಸ ನಡೆಸಿದ ಭಾರತ ತಂಡದ ಆಟಗಾರರಾದ ವಿರಾಟ್ ಕೊಹ್ಲಿ, ಅರ್ಷದೀಪ್ ಸಿಂಗ್, ಶುಭಮನ್ ಗಿಲ್ ಹಾಗೂ ರೋಹಿತ್ ಶರ್ಮಾ–ಪಿಟಿಐ ಚಿತ್ರ

ಬಲಾಬಲ

ಒಟ್ಟು ಪಂದ್ಯಗಳು 107

ಭಾರತದ ಜಯ	58
ಇಂಗ್ಲೆಂಡ್ ಜಯ	44
ಟೈ	2
ಫಲಿತಾಂಶವಿಲ್ಲ	3

ರಾಷ್ಟ್ರೀಯ ಕ್ರೀಡೆಗಳ ಶೂಟಿಂಗ್‌ನಲ್ಲಿ ಮಹಿಳೆಯರ 10 ಮೀ. ಏರ್ ಪಿಸ್ತೂಲ್ ವಿಭಾಗದಲ್ಲಿ ಚಿನ್ನ ಗೆದ್ದ ಹರಿಯಾಣದ ಸುರುಚಿ (ಮಧ್ಯದಲ್ಲಿ), ಬೆಳ್ಳಿ ಗೆದ್ದ ಪಲಕ್ (ಬಲಗಡೆ) ಮತ್ತು ಕಂಚಿನ ಪದಕ ಗೆದ್ದ ಪುಣೆಯ ಸಿಮ್ರನ್‌ಪ್ರೀತ್ ಕೌರ್ ಬ್ರಾರ್. ಪಿಟಿಐ ಚಿತ್ರ

ಸಿಂಗಲ್ ಸ್ಕಲ್ಸ್ ಚಿನ್ನ ಗೆದ್ದ ಪನ್ವಾರ್

ರೋಯಿಂಗ್‌ನಲ್ಲಿ ಸರ್ವಿಸಸ್, ಮಧ್ಯಪ್ರದೇಶಕ್ಕೆ ತಲಾ 5 ಚಿನ್ನ

ತೆಹ್ರಿ (ಉತ್ತರಾಖಂಡ), (ಪಿಟಿಐ): ಹಾಂಗ್‌ಝೌ ಏಷ್ಯನ್ ಗೇಮ್ಸ್‌ನಲ್ಲಿ ಸ್ವಲ್ಪದರಲ್ಲೇ ಕಂಚಿನ ಪದಕ ಕಳೆದುಕೊಂಡ ಪ್ಯಾರಿಸ್ ಒಲಿಂಪಿಯನ್ ಬಲರಾಜ್ ಪನ್ವಾರ್ ಅವರು ರಾಷ್ಟ್ರೀಯ ಕ್ರೀಡೆಗಳ ರೋಯಿಂಗ್ (ಹುಟ್ಟು ದೋಣಿ) ಸ್ಪರ್ಧೆಯ ಪುರುಷರ ಸಿಂಗಲ್ ಸ್ಕಲ್ಸ್ ವಿಭಾಗದಲ್ಲಿ ಬುಧವಾರ ಚಿನ್ನದ ಪದಕ ಗೆದ್ದುಕೊಂಡರು. ಆ ಮೂಲಕ ದೇಶದ ಅಗ್ರಮಾನ್ಯ ರೋವರ್ ತಾವೆಂಬ ಖ್ಯಾತಿ ಉಳಿಸಿಕೊಂಡರು.

ತೆಹ್ರಿಯ ವಾಟರ್ ಸ್ಪೋರ್ಟ್ಸ್ ಕಾಂಪ್ಲೆಕ್ಸ್‌ನಲ್ಲಿ ನಡೆಯುತ್ತಿರುವ ರೋಯಿಂಗ್ ಸ್ಪರ್ಧೆಗಳಲ್ಲಿ ಸರ್ವಿಸಸ್ ಮತ್ತು ಮಧ್ಯಪ್ರದೇಶ ಪ್ರಾಬಲ್ಯ ಸಾಧಿಸಿ ತಲಾ ಐದು ಚಿನ್ನಗಳನ್ನು ಬಾಚಿಕೊಂಡವು.

ಕ್ರೀಡೆಗಳ ಅರ್ಧ ಭಾಗ ಮುಗಿದಿದ್ದು ಕರ್ನಾಟಕ ಪದಕ ಪಟ್ಟಿಯಲ್ಲಿ ಅಗ್ರಸ್ಥಾನ ಉಳಿಸಿಕೊಂಡಿದೆ. ಕರ್ನಾಟಕ 28 ಚಿನ್ನ ಗೆದ್ದುಕೊಂಡರೆ, ಸರ್ವಿಸಸ್ 27 ಚಿನ್ನ ಗೆದ್ದುಕೊಂಡು ಎರಡನೇ ಸ್ಥಾನದಲ್ಲಿದೆ. ಮಧ್ಯಪ್ರದೇಶ ರೋಯಿಂಗ್‌ನಲ್ಲಿ ಗೆದ್ದ ಚಿನ್ನಗಳ ಬಲದಿಂದ ಮೂರನೇ ಸ್ಥಾನಕ್ಕೆ ಏರಿತು.

ಸರ್ವಿಸಸ್ ತಂಡವನ್ನು ಪ್ರತಿನಿಧಿಸುತ್ತಿರುವ ಹರಿಯಾಣದ ಬಲರಾಜ್ ಪನ್ವಾರ್ ಅವರು 2 ಕಿ.ಮೀ. ದೂರವನ್ನು 7ನಿ.26.28 ಸೆ.ಗಳಲ್ಲಿ ಕ್ರಮಿಸಿ ಮೊದಲಿಗರಾದರು. ಆತಿಥೇಯ ಉತ್ತರಾಖಂಡದ ನವದೀಪ್ ಸಿಂಗ್ (7:41.17) ಮತ್ತು ಮಹಾರಾಷ್ಟ್ರದ ಗುರುಪ್ರತಾಪ್ ಸಿಂಗ್ (8:04.41) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗಳನ್ನು ತಮ್ಮದಾಗಿಸಿಕೊಂಡರು. ಭೂಸೇನೆಯಲ್ಲಿ ರೋವರ್ ಆಗಿರುವ 25 ವರ್ಷ ವಯಸ್ಸಿನ ಪನ್ವಾರ್ ಅವರು ಎರಡು ಬಾರಿಯ ರಾಷ್ಟ್ರೀಯ ಚಾಂಪಿಯನ್ ಕೂಡ.

ಶೂಟಿಂಗ್: ಹರಿಯಾಣದ ಸುರುಚಿ ಅವರು ಡೆಹ್ರಾಡೂನ್‌ನ ತ್ರಿಶೂಲ್ ಶೂಟಿಂಗ್ ರೇಂಜ್‌ನಲ್ಲಿ ನಡೆಯುತ್ತಿರುವ ಶೂಟಿಂಗ್ ಸ್ಪರ್ಧೆಗಳ ಮಹಿಳೆಯರ 10 ಮೀ. ಏರ್ ಪಿಸ್ತೂಲ್ ವಿಭಾಗದಲ್ಲಿ 245.7ರ ಅತ್ಯುತ್ತಮ ಸ್ಕೋರ್‌ನೊಡನೆ ಚಿನ್ನ ಗೆದ್ದರು. ಅದೇ ರಾಜ್ಯದ ಪಲಕ್ (243.6) ಬೆಳ್ಳಿ ಮತ್ತು ಪಂಜಾಬ್‌ನ ಸಿಮ್ರನ್‌ಪ್ರೀತ್ ಕೌರ್ ಬ್ರಾರ್ (218.8) ಕಂಚು ಗೆದ್ದರು.

ಪದಕ ಪಟ್ಟಿ

ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಕರ್ನಾಟಕ	28	11	15	54
ಸರ್ವಿಸಸ್	27	10	9	46
ಮಧ್ಯಪ್ರದೇಶ	17	7	10	34
ಮಹಾರಾಷ್ಟ್ರ	16	35	31	82
ಹರಿಯಾಣ	12	19	20	51

ಪದಕ ಕ್ರೀಡೆಗಳಾದ ಯೋಗ, ಮಲ್ಲಕಂಬ

ಡೆಹ್ರಾಡೂನ್ (ಪಿಟಿಐ): ಹಾಲಿ ರಾಷ್ಟ್ರೀಯ ಕ್ರೀಡೆಗಳಲ್ಲಿ ಪ್ರದರ್ಶನ ಕ್ರೀಡೆಯಾಗಿದ್ದ ಯೋಗಾಸನ ಮತ್ತು ಮಲ್ಲಕಂಬ ಕ್ರೀಡೆಗಳು ಈಗ ಪದಕ ಕ್ರೀಡೆಗಳಾಗಿ ಬದಲಾಗಿವೆ. ಆಯೋಜಕರ ವಿನಂತಿಯ ಮೇರೆಗೆ ಅವುಗಳನ್ನು ಪದಕ ಕ್ರೀಡೆಗಳಾಗಿ ಪರಿವರ್ತಿಸಲಾಗಿದೆ ಎಂದು ಭಾರತ ಒಲಿಂಪಿಕ್ ಸಂಸ್ಥೆಯ (ಐಒಎ) ಮೂಲವೊಂದು ಬುಧವಾರ ದೃಢಪಡಿಸಿದೆ.

38ನೇ ರಾಷ್ಟ್ರೀಯ ಕ್ರೀಡೆಗಳಲ್ಲಿ 32 ಪದಕ ಕ್ರೀಡೆಗಳ ಜೊತೆ ನಾಲ್ಕು ಪ್ರದರ್ಶನ ಕ್ರೀಡೆಗಳು ಇರುವುದಾಗಿ ಡಿಸೆಂಬರ್‌ನಲ್ಲಿ ಐಒಎ ತಿಳಿಸಿತ್ತು. ಯೋಗಾಸನ, ಮಲ್ಲಕಂಬ, ಕಳರಿಪಯಟ್ಟು ಮತ್ತು ರ್‍ಯಾಫ್ಟಿಂಗ್ ಪ್ರದರ್ಶನ ಕ್ರೀಡೆಗಳ ಪಟ್ಟಿಯಲ್ಲಿದ್ದವು.

ಬುಧವಾರ ಪ್ರಕಟವಾದ ನಿರ್ಧಾರದಿಂದ ಕಳರಿಪಯಟ್ಟು, ರ್‍ಯಾಫ್ಟಿಂಗ್ ಮಾತ್ರ ಈಗ ಪ್ರದರ್ಶನ ಕ್ರೀಡೆಗಳಾಗಿ ಉಳಿದಿದ್ದು, ಪದಕ ಕ್ರೀಡೆಗಳ ಸಂಖ್ಯೆ 34ಕ್ಕೆ ಏರಿತು.

ಟೆನಿಸ್: ಸೆಮಿಫೈನಲ್‌ಗೆ ಕರ್ನಾಟಕ ತಂಡ

ಬೆಂಗಳೂರು: ಹಾಲಿ ಚಾಂಪಿಯನ್ ಕರ್ನಾಟಕ, ಡೆಹ್ರಾಡೂನ್‌ನಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಕ್ರೀಡೆಗಳ ಟೆನಿಸ್ ಸ್ಪರ್ಧೆಯಲ್ಲಿ ಬುಧವಾರ ತೆಲಂಗಾಣ ತಂಡವನ್ನು 2–0 ಯಿಂದ ಸೋಲಿಸಿ ಸೆಮಿಫೈನಲ್ ತಲುಪಿತು.

ಕರ್ನಾಟಕ ಸೆಮಿಫೈನಲ್‌ನಲ್ಲಿ ಸರ್ವಿಸಸ್ ಕ್ರೀಡಾ ನಿಯಂತ್ರಣ ಮಂಡಳಿ ತಂಡವನ್ನು ಎದುರಿಸಲಿದೆ. ಸರ್ವಿಸಸ್ ಇನ್ನೊಂದು ಪಂದ್ಯದಲ್ಲಿ 2–0 ಯಿಂದ ಆತಿಥೇಯ ಉತ್ತರಾಖಂಡ ತಂಡವನ್ನು ಮಣಿಸಿತು.

ಮೊದಲ ಬಾರಿ ಈ ಕ್ರೀಡೆಗಳಲ್ಲಿ ಆಡುತ್ತಿರುವ 29 ವರ್ಷ ವಯಸ್ಸಿನ ನಿಕಿ ಕಲಿಯಂಡ ಪೂಣಚ್ಚ 6–3, 6–3 ರಿಂದ ಆದಿತ್ಯ ಪ್ರಧಾನ್ ವಿರುದ್ಧ ಜಯಗಳಿಸಿದರು. ರಾಜ್ಯದ ಅಗ್ರ ಆಟಗಾರ ಎಸ್.ಡಿ.ಪ್ರಜ್ವಲ್ ದೇವ್ ಎರಡನೇ ಪಂದ್ಯದಲ್ಲಿ 6–3, 6–4 ರಿಂದ ತೀರ್ಥ ಶಶಾಂಕ್ ಅವರನ್ನು ಮಣಿಸಿದರು.

ಸಂಕ್ಷಿಪ್ತ ಸುದ್ದಿ

ಕೊನೆಯ ಸಲ ಟೆಸ್ಟ್ ಆಡಲಿರುವ ಕರುಣಾರತ್ನೆ

ಗಾಲೆ (ಶ್ರೀಲಂಕಾ), (ಎಎಫ್‌ಪಿ): ಶ್ರೀಲಂಕಾ ತಂಡದ ಮಾಜಿ ನಾಯಕ ದಿಮುತ್ ಕರುಣಾರತ್ನೆ ಅವರು ಗುರುವಾರ ನೂರನೇ ಟೆಸ್ಟ್ ಪಂದ್ಯದಲ್ಲಿ ಕಣಕ್ಕಿಳಿಯಲಿದ್ದು, ಆಸ್ಟ್ರೇಲಿಯಾ ವಿರುದ್ಧ ನಡೆಯಲಿರುವ ಈ ಮೈಲಿಗಲ್ಲಿನ ಪಂದ್ಯ ತಮ್ಮ ಪಾಲಿಗೆ ಕೊನೆಯದಾಗಲಿದೆ ಎಂದು ಪ್ರಕಟಿಸಿದ್ದಾರೆ.

ದಿಮುತ್

36 ವರ್ಷ ವಯಸ್ಸಿನ ಕರುಣಾರತ್ನೆ ಒಂದು ದಶಕಕ್ಕೂ ಹೆಚ್ಚು ಅವಧಿಯಿಂದ ಲಂಕಾ ತಂಡದ ಅಗ್ರ ಕ್ರಮಾಂಕದಲ್ಲಿ ಆಡಿದ್ದರು. ಆದರೆ ಕಳೆದ 25 ಇನಿಂಗ್ಸ್‌ಗಳಿಂದ ಅವರೂ ಒಂದು ಶತಕ ಬಾರಿಸಿಲ್ಲ.

ಎರಡು ಟೆಸ್ಟ್‌ಗಳ ಸರಣಿಯ ಮೊದಲ ಪಂದ್ಯವನ್ನು ಆಸ್ಟ್ರೇಲಿಯಾ ಇನಿಂಗ್ಸ್ ಮತ್ತು 242 ರನ್‌ಗಳಿಂದ ಗೆದ್ದುಕೊಂಡಿತ್ತು.

'ಒಂದಾದರೂ ಟೆಸ್ಟ್ ಪಂದ್ಯ ಆಡಬೇಕೆಂಬುದು ನನ್ನ ಬಾಲ್ಯದ ಕನಸಾಗಿತ್ತು' ಎಂದು ಕರುಣಾರತ್ನೆ ಪಂದ್ಯದ ಮುನ್ನಾದಿನವಾದ ಬುಧವಾರ ಮಾಧ್ಯಮಗೋಷ್ಠಿಯಲ್ಲಿ ತಿಳಿಸಿದರು. ನಿವೃತ್ತಿ ನಿರ್ಧಾರ ನನಗೆ ಸಮಾಧಾನ ಮೂಡಿಸಿದೆ ಎಂದೂ ಹೇಳಿದರು. 99 ಟೆಸ್ಟ್ ಪಂದ್ಯಗಳಲ್ಲಿ ಅವರು 7,172 ರನ್ ಗಳಿಸಿದ್ದಾರೆ.

ಬೂಮ್ರಾ ಗೈರಾದರೆ ಭಾರತ ಜಯದ ಸಾಧ್ಯತೆ ಕ್ಷೀಣ: ಶಾಸ್ತ್ರಿ

ದುಬೈ (ಪಿಟಿಐ): ಆಸ್ಟ್ರೇಲಿಯಾದಲ್ಲಿ ಈಚೆಗೆ ನಡೆದ ಬಾರ್ಡರ್–ಗಾವಸ್ಕರ್ ಟೆಸ್ಟ್ ಸರಣಿಯ ಐದನೇ ಪಂದ್ಯದಲ್ಲಿ ಬೆನ್ನುನೋವಿನಿಂದ ಬಳಲಿದ್ದ ವೇಗಿ ಜಸ್‌ಪ್ರೀತ್ ಬೂಮ್ರಾ ಅವರು ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಆಡುವುದು ಖಚಿತವಾಗಿಲ್ಲ. ಭಾರತದ ಪಾಳೆಯದಲ್ಲಿ ಇದು ಆತಂಕಕ್ಕೆ ಕಾರಣವಾಗಿದೆ.

'ಬೂಮ್ರಾ ಒಂದೊಮ್ಮೆ ಫಿಟ್ ಆಗದೇ ಹೋದರೆ, ಚಾಂಪಿಯನ್ಸ್ ಟ್ರೋಫಿಯಲ್ಲಿ ಭಾರತದ ಜಯದ ಸಾಧ್ಯತೆಯು ಶೇ 30ರಷ್ಟು ಕ್ಷೀಣವಾಗಲಿದೆ' ಎಂದು ವೀಕ್ಷಕ ವಿವರಣೆಗಾರ ರವಿಶಾಸ್ತ್ರಿ ಹೇಳಿದ್ದಾರೆ.'ಬೂಮ್ರಾ ಪೂರ್ಣ ಫಿಟ್ ಆಗಿ ಆಡಲು ಇಳಿದರೆ, ಡೆತ್ ಓವರ್‌ಗಳಲ್ಲಿ ಭಾರತಕ್ಕೆ ಯಶಸ್ಸು ಸಿಗುವುದು ಖಚಿತ. ಏಕದಿನ ಕ್ರಿಕೆಟ್ ಮಾದರಿಯೇ ವಿಭಿನ್ನ. ಆದ್ದರಿಂದ ಬೂಮ್ರಾ ಅವರ ಉಪಸ್ಥಿತಿ ಮುಖ್ಯವಾಗಲಿದೆ' ಎಂದು ಶಾಸ್ತ್ರಿ ಅವರು ಐಸಿಸಿ ರಿವ್ಯೂನಲ್ಲಿ ಹೇಳಿದ್ದಾರೆ.

ಬೂಮ್ರಾ ಅವರು 2024ರಲ್ಲಿ ಐಸಿಸಿ ವರ್ಷದ ಆಟಗಾರ 'ಸರ್ ಗ್ಯಾರ್‌ಫೀಲ್ಡ್ ಪ್ರಶಸ್ತಿ' ಗೆದ್ದಿದ್ದಾರೆ. 2024ರ ಟಿ20 ವಿಶ್ವಕಪ್ ಜಯದಲ್ಲಿಯೂ ಅವರ ಆಟ ಪ್ರಮುಖವಾಗಿತ್ತು. 'ಈ ಅವಧಿಯು ಬೂಮ್ರಾ ಅವರ ವೃತ್ತಿಜೀವನದಲ್ಲಿ ಬಹುಮುಖ್ಯ ಘಟ್ಟವಾಗಿದೆ. ಅವರು ಬಹಳ ಅಮೂಲ್ಯವಾದ ಬೌಲರ್ ಆಗಿದ್ದಾರೆ. ಅವರ ಮೇಲೆ ಅಪಾರ ನಿರೀಕ್ಷೆಗಳು ಇವೆ ನ ಎಂದೂ ರವಿ ಹೇಳಿದರು.

ಎರಡನೇ ಸ್ಥಾನಕ್ಕೆ ಜಿಗಿದ ಅಭಿಷೇಕ್ ಶರ್ಮಾ

ಐಸಿಸಿ ಟಿ20 ರ‍್ಯಾಂಕಿಂಗ್ ಪ್ರಕಟ

ದುಬೈ (ಪಿಟಿಐ): ಲಯದಲ್ಲಿರುವ ಭಾರತದ ಆರಂಭ ಆಟಗಾರ ಅಭಿಷೇಕ್ ಶರ್ಮಾ ಅವರು ಐಸಿಸಿ ಪುರುಷರ ಟಿ20 ರ‍್ಯಾಂಕಿಂಗ್‌ನ ಬ್ಯಾಟರ್‌ಗಳ ವಿಭಾಗದಲ್ಲಿ 38 ಸ್ಥಾನಗಳಷ್ಟು ಬಡ್ತಿ ಪಡೆದು ಎರಡನೇ ಸ್ಥಾನಕ್ಕೆ ಜಿಗಿದಿದ್ದಾರೆ. ಬುಧವಾರ ಪ್ರಕಟವಾದ ಪಟ್ಟಿಯ ಪ್ರಕಾರ ತಂಡದ ಸಹ ಆಟಗಾರ ತಿಲಕ್ ವರ್ಮಾ ಒಂದು ಸ್ಥಾನ ಇಳಿದು ಮೂರನೇ ಸ್ಥಾನದಲ್ಲಿದ್ದಾರೆ.

ಅಭಿಷೇಕ್

ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಇಂಗ್ಲೆಂಡ್ ವಿರುದ್ಧ ನಡೆದ ಟಿ20 ಸರಣಿಯ ಐದನೇ ಹಾಗೂ ಅಂತಿಮ ಪಂದ್ಯದಲ್ಲಿ ಅವರು ಮಿಂಚಿನ ಶತಕ (54 ಎಸೆತಗಳಲ್ಲಿ 135) ಸಿಡಿಸಿದ್ದರು. ಅಗ್ರಸ್ಥಾನದಲ್ಲಿರುವ ಆಸ್ಟ್ರೇಲಿಯಾದ ತಾರೆ ಟ್ರಾವಿಸ್ ಹೆಡ್ ಅವರು ಶರ್ಮಾ ಅವರಿಗಿಂತ 26 ಪಾಯಿಂಟ್ ಮುಂದೆಯಿದ್ದಾರೆ.

ಟಿ20 ತಂಡದ ನಾಯಕ ಸೂರ್ಯಕುಮಾರ್ ಯಾದವ್ ಐದನೇ ಸ್ಥಾನದಲ್ಲಿದ್ದಾರೆ.

ಬೌಲರ್‌ಗಳ ವಿಭಾಗದಲ್ಲಿ ಸ್ಪಿನ್ನರ್ ವರುಣ್ ಚಕ್ರವರ್ತಿ ಅವರು ಮೂರು ಸ್ಥಾನಗಳಷ್ಟು ಬಡ್ತಿ ಪಡೆದು ಇಂಗ್ಲೆಂಡ್‌ನ ಸ್ಪಿನ್ನರ್ ಅದಿಲ್ ರಶೀದ್ ಅವರೊಂದಿಗೆ ಜಂಟಿಯಾಗಿ ಎರಡನೇ ಸ್ಥಾನದಲ್ಲಿದ್ದಾರೆ. ವರುಣ್ ಟಿ20 ಸರಣಿಯಲ್ಲಿ 'ಸರಣಿಯ ಸರ್ವೋತ್ತಮ' ಗೌರವಕ್ಕೆ ಪಾತ್ರರಾಗಿದ್ದಾರೆ.

ಭಾರತ ತಂಡದ ಇನ್ನೊಬ್ಬ ಸ್ಪಿನ್ನರ್ ರವಿ ಬಿಷ್ಣೋಯಿ ನಾಲ್ಕು ಸ್ಥಾನ ಬಡ್ತಿ ಪಡೆದಿದ್ದು ಆರನೇ ಸ್ಥಾನಕ್ಕೇರಿದ್ದಾರೆ. ಎಡಗೈ ವೇಗಿ ಅರ್ಷದೀಪ್ ಸಿಂಗ್ ಸಹ ಅಗ್ರ 10ರಲ್ಲಿದ್ದು ಒಂಬತ್ತನೇ ಸ್ಥಾನಕ್ಕೇರಿದ್ದಾರೆ.

ವೆಸ್ಟ್ ಇಂಡೀಸ್‌ನ ಸ್ಪಿನ್ನರ್ ಅಕೀಲ್ ಹುಸೇನ್ ಮರಳಿ ಅಗ್ರಸ್ಥಾನಕ್ಕೇರಿದ್ದಾರೆ. ವಾರದ ಹಿಂದೆ ಅದಿಲ್ ರಶೀದ್ ಅಗ್ರಸ್ಥಾನದಲ್ಲಿದ್ದರು.

ಬದಲಾಗದ ಜೈಸ್ವಾಲ್ ಸ್ಥಾನ: ಟೆಸ್ಟ್ ಬ್ಯಾಟರ್‌ಗಳ ಪಟ್ಟಿಯಲ್ಲಿ ಯಶಸ್ವಿ ಜೈಸ್ವಾಲ್ ನಾಲ್ಕನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ. ಇಂಗ್ಲೆಂಡ್‌ನ ಜೋ ರೂಟ್, ಹ್ಯಾರಿ ಬ್ರೂಕ್ ಮತ್ತು ನ್ಯೂಜಿಲೆಂಡ್‌ನ ಕೇನ್ ವಿಲಿಯಮ್ಸನ್ ಕ್ರಮವಾಗಿ ಮೊದಲ ಮೂರು ಸ್ಥಾನಗಳಲ್ಲಿ ಇದ್ದಾರೆ.

ಇತ್ತೀಚೆಗಷ್ಟೇ ಐಸಿಸಿ ವರ್ಷದ ಕ್ರಿಕೆಟಿಗ ಮತ್ತು ವರ್ಷದ ಟೆಸ್ಟ್ ಆಟಗಾರ ಗೌರವಕ್ಕೆ ಪಾತ್ರರಾದ ಜಸ್‌ಪ್ರೀತ್‌ಬೂಮ್ರಾ ಅವರು ಟೆಸ್ಟ್ ಬೌಲರ್ ಗಳ ವಿಭಾಗದಲ್ಲಿ ಅಗ್ರಸ್ಥಾನ ಕಾಪಾಡಿಕೊಂಡಿದ್ದಾರೆ. ಎಡಗೈ ಸ್ಪಿನ್ನರ್ ರವೀಂದ್ರ ಜಡೇಜ (ಒಂಬತ್ತನೇ ಸ್ಥಾನ) ಅಗ್ರ 10ರಲ್ಲಿರುವ ಭಾರತದ ಮತ್ತೊಬ್ಬ ಆಟಗಾರ.

ದಕ್ಷಿಣ ಆಫ್ರಿಕಾದ ವೇಗಿ ಕಗಿಸೊ ರಬಾಡ, ಆಸ್ಟ್ರೇಲಿಯಾದ ನಾಯಕ ಪ್ಯಾಟ್ ಕಮಿನ್ಸ್ ಮತ್ತು ಜೋಶ್ ಹ್ಯಾಜಲ್‌ವುಡ್ ಮತ್ತು ಪಾಕಿಸ್ತಾನದ ನೊಮಾನ್ ಅಲಿ ಅವರು ಕ್ರಮವಾಗಿ ಎರಡರಿಂದ ಐದವರೆಗಿನ ಸ್ಥಾನ ಪಡೆದಿದ್ದಾರೆ. ಆಸ್ಟ್ರೇಲಿಯಾದ ಹಿರಿಯ ಸ್ಪಿನ್ನರ್ ನೇಥನ್ ಲಯನ್ ಅವರು ಎರಡು ಸ್ಥಾನ ಬಡ್ತಿ ಪಡೆದು ಆರನೇ ಸ್ಥಾನದಲ್ಲಿ ನೆಲಸಿದ್ದಾರೆ.

ಚಾಂಪಿಯನ್ಸ್ ಟ್ರೋಫಿ: ಹಿಂದೆ ಸರಿದ ನಿತಿನ್ ಮೆನೋನ್

ದುಬೈ (ಪಿಟಿಐ): ಐಸಿಸಿ ಅಂಪೈರ್‌ಗಳ ಎಲೀಟ್ ಪ್ಯಾನೆಲ್‌ನಲ್ಲಿ ಭಾರತದ ಏಕೈಕ ಪ್ರತಿನಿಧಿಯಾಗಿರುವ ನಿತಿನ್ ಮೆನೋನ್ ಅವರು ಪಾಕಿಸ್ತಾನದಲ್ಲಿ ಈ ತಿಂಗಳ 19ರಿಂದ ನಡೆಯುವ ಚಾಂಪಿಯನ್ಸ್ ಟ್ರೋಫಿ ಟೂರ್ನಿಯಿಂದ ಹಿಂದೆ ಸರಿದಿದ್ದಾರೆ. ಅವರು ವೈಯಕ್ತಿಕ ಕಾರಣ ನೀಡಿದ್ದಾರೆ.

ಈ ಟೂರ್ನಿಯಲ್ಲಿ ಕಾರ್ಯ ನಿರ್ವಹಿಸುವ 15 ಅಧಿಕಾರಿಗಳ ಪಟ್ಟಿಯನ್ನು ಐಸಿಸಿ ಬುಧವಾರ ಬಿಡುಗಡೆ ಮಾಡಿದೆ. ಇದರಲ್ಲಿ ಮೂವರು ಮ್ಯಾಚ್ ರೆಫ್ರಿಗಳು ಒಳಗೊಂಡಿದ್ದಾರೆ.

ಎಂಟು ತಂಡಗಳು ಭಾಗವಹಿಸುವ ಈ ಟೂರ್ನಿಯ ಉದ್ಘಾಟನಾ ಪಂದ್ಯ ಇದೇ 19ರಂದು ಕರಾಚಿಯಲ್ಲಿ ನಡೆಯಲಿದೆ. ಮಾರ್ಚ್ 9ರಂದು ಫೈನಲ್ ಪಂದ್ಯ ನಡೆಯಲಿದೆ. ಪಾಕಿಸ್ತಾನದಲ್ಲಿ ಪಂದ್ಯಗಳು ಮೂರು ಕಡೆ– ಕರಾಚಿ, ಲಾಹೋರ್ ಮತ್ತು ರಾವಲ್ಪಿಂಡಿಯಲ್ಲಿ ನಡೆಯಲಿದೆ.

ಭದ್ರತೆಯ ಕಾರಣಗಳಿಂದ ಭಾರತ ತನ್ನ ಪಂದ್ಯಗಳನ್ನು ದುಬೈನಲ್ಲಿ ಆಡಲಿದೆ. ಭಾರತ ತನ್ನ ಮೊದಲ ಪಂದ್ಯವನ್ನು ಫೆ. 20ರಂದು ಬಾಂಗ್ಲಾದೇಶ ವಿರುದ್ಧ ಆಡಲಿದೆ.

'ನಿತಿನ್ ಅವರೂ ಟ್ರೋಫಿಯಲ್ಲಿ ಕಾರ್ಯನಿರ್ವಹಿಸುವ ಅಂಪೈರ್‌ಗಳ ಪಟ್ಟಿಯಲ್ಲಿದ್ದರು. ಆದರೆ ವೈಯಕ್ತಿಕ ಕಾರಣಗಳಿಂದ ಪಾಕಿಸ್ತಾನಕ್ಕೆ ಪ್ರಯಾಣಿಸದಿರಲು ನಿರ್ಧರಿಸಿದರು' ಎಂದು ಬಿಸಿಸಿಐ ಮೂಲವೊಂದು ಪಿಟಿಐಗೆ ತಿಳಿಸಿದೆ.

ಅಂಪೈರ್‌ಗಳ ಪಟ್ಟಿಯಲ್ಲಿರುವ ರಿಚರ್ಡ್ ಕೆಟಲ್‌ಬರೊ ಮತ್ತು ರಿಚರ್ಡ್ ಇಲಿಂಗ್ ವರ್ತ್ ಅವರು ಅಹ್ಮದಾಬಾದಿನಲ್ಲಿ ನಡೆದ 2023ರ ಏಕದಿನ ವಿಶ್ವಕಪ್ ಫೈನಲ್‌ನಲ್ಲಿ ಫೀಲ್ಡ್ ಅಂಪೈರ್ ಆಗಿ ಕಾರ್ಯನಿರ್ವಹಿಸಿದ್ದರು.

12 ಮಂದಿ ಅಂಪೈರ್‌ಗಳು: ಕುಮಾರ ಧರ್ಮಸೇನ, ಕ್ರಿಸ್ ಗಫಾನಿ, ಮೈಕೆಲ್ ಗಾಫ್, ಆಡ್ರಿಯಾನ್ ಹೋಲ್ಡ್‌ಸ್ಟಾಕ್, ರಿಚರ್ಡ್ ಇಲಿಂಗ್‌ವರ್ತ್, ರಿಚರ್ಡ್ ಕೆಟಲ್‌ಬರೊ, ಎಹ್ಸಾನ್ ರಝಾ, ಪಾಲ್ ರೈಫೆಲ್, ಶರ್ಫುದ್ದೌಲಾ ಇಬ್ನ ಶಹೀದ್, ರಾಡ್ ಟಕ್ಕರ್, ಅಲೆಕ್ಸ್ ವಾರ್ಫ್ ಮತ್ತು ಜೋಯೆಲ್ ವಿಲ್ಸನ್.

ಮ್ಯಾಚ್ ರೆಫ್ರಿಗಳು: ಡೇವಿಡ್ ಬೂನ್ (ಆಸ್ಟ್ರೇಲಿಯಾ), ರಂಜನ್ ಮದುಗಲೆ (ಶ್ರೀಲಂಕಾ) ಮತ್ತು ಆ್ಯಂಡ್ರೂ ಪೈಕ್ರಾಫ್ಟ್ (ಜಿಂಬಾಬ್ವೆ).

ರಾಹುಲ್ ಕೀಪಿಂಗ್ ಮಾಡಲಿ: ಸಂಜಯ್

ಬೆಂಗಳೂರು: ಏಕದಿನ ಕ್ರಿಕೆಟ್ ಸರಣಿಯಲ್ಲಿ ವಿಕೆಟ್ ಕೀಪಿಂಗ್ ಹೊಣೆಯನ್ನು ಕೆ.ಎಲ್. ರಾಹುಲ್ ಅವರಿಗೆ ವಹಿಸುವುದು ಸೂಕ್ತ. 2023ರ ವಿಶ್ವಕಪ್ ಟೂರ್ನಿಯಲ್ಲಿ ಅವರು ಕೀಪಿಂಗ್ ಕಾರ್ಯವನ್ನು ಸಮರ್ಥವಾಗಿ ನಿಭಾಯಿಸಿದ್ದರು ಎಂದು ಕ್ರಿಕೆಟ್ ವೀಕ್ಷಕ ವಿವರಣೆಗಾರ ಸಂಜಯ್ ಬಾಂಗರ್ ಅಭಿಪ್ರಾಯಪಟ್ಟಿದ್ದಾರೆ.

'ರಿಷಭ್ ಪಂತ್ ಅವರು ನಿಸ್ಸಂದೇಹವಾಗಿ ಅದ್ಭುತ ಪ್ರತಿಭಾವಂತ ಆಟಗಾರ. ಆದರೆ ಸದ್ಯದ ಪರಿಸ್ಥಿತಿಯಲ್ಲಿ ರಾಹುಲ್ ಮೂಲಕ ಕೀಪಿಂಗ್ ಪ್ರಯೋಗ ಆರಂಭಿಸುವುದು ಒಳಿತು. ಅಲ್ಲದೇ ಅವರು ಮಧ್ಯ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಿ ತಂಡಕ್ಕೆ ಆಸರೆಯಾಗಿರುವುದನ್ನು ಇಲ್ಲಿ ಪರಿಗಣಿಸಬೇಕು' ಎಂದು ಸ್ಟಾರ್ ಸ್ಪೋರ್ಟ್ಸ್ ರೌಂಡ್ ಟೇಬಲ್ ಕಾರ್ಯಕ್ರಮದಲ್ಲಿ ಸಂಜಯ್ ಹೇಳಿದರು.

'ವೇಗಿ ಜಸ್‌ಪ್ರೀತ್ ಬೂಮ್ರಾ ಅವರ ಅನುಪಸ್ಥಿತಿಯಲ್ಲಿ ಉಳಿದ ಬೌಲರ್‌ಗಳ ಹೊಣೆ ಹೆಚ್ಚುತ್ತದೆ. ಮಧ್ಯದ ಓವರ್‌ಗಳಲ್ಲಿ ಸ್ಪಿನ್ನರ್ ಕುಲದೀಪ್ ಡಪರಿಣಾಕಾರಿಯಾಗಿದ್ದರೆ' ಎಂದರು.

ಬೆಂಗಳೂರು ಬಾಯ್ಸ್‌ಗೆ ಗೆಲುವು

ಬೆಂಗಳೂರು: ಬೆಂಗಳೂರು ಬಾಯ್ಸ್ ಎಫ್‌ಸಿ ತಂಡ ಸಿ ಡಿವಿಷನ್ ಲೀಗ್ ಫುಟ್‌ಬಾಲ್ ಚಾಂಪಿಯನ್‌ಶಿಪ್‌ನಲ್ಲಿ ಗುರುವಾರ ಕ್ವೀನ್ಸ್ ಸ್ಟಾರ್ ಎಫ್‌ಸಿ ವಿರುದ್ಧ 3–0 ಗೋಲುಗಳಿಂದ ಗೆದ್ದುಕೊಂಡಿತು.

ಅಶೋಕ ನಗರದ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಬೆಂಗಳೂರು ಬಾಯ್ಸ್ ತಂಡದ ಆರ್. ಲಿಂಗು (6ನೇ ಮತ್ತು 59ನೇ) ಮತ್ತು ಆಸ್‌ಪಿಯುಸ್ (39ನೇ ನಿ.) ಗೋಲುಗಳನ್ನು ಹೊಡೆದರು.

ಇನ್ನೊಂದು ಪಂದ್ಯದಲ್ಲಿ ಸನ್‌ರೈಸ್ ಎಫ್‌ಸಿ 4–0 ಗೋಲುಗಳಿಂದ ಎಕ್ಸಲ್‌ಸಿಯರ್ಸ್ ಎಫ್‌ಸಿ ತಂಡವನ್ನು ಮಣಿಸಿತು. ಸನ್‌ರೈಸರ್ಸ್ ತಂಡದ ಜುಬಿಹುಲ್ಲಾ (28ನೇ ನಿ., 36ನೇ), ಅನೂಪ್ ಥೆರೆಸಾ ರಾಜ್ (30ನೇ ನಿ.) ಮತ್ತು ಮನವ್ ಕಪೂರ್ (52ನೇ ನಿ.) ಗೋಲು ಬಾರಿಸಿದರು.

ಟೆನಿಸ್‌ಗೆ ಹಲೆಪ್ ವಿದಾಯ

ಬುಕಾರೆಸ್ಟ್ (ರುಮೇನಿಯಾ), (ಎಪಿ): ಎರಡು ಬಾರಿಯ ಗ್ರ್ಯಾನ್‌ಸ್ಲಾಮ್ ಚಾಂಪಿಯನ್ ಸಿಮೊನಾ ಹಲೆಪ್ ಅವರು ಟೆನಿಸ್‌ಗೆ ವಿದಾಯ ಹೇಳಿದ್ದಾರೆ. ತವರಿನಲ್ಲಿ ಮಂಗಳವಾರ ಟ್ರಾನ್ಸಿಲ್ವನಿಯ ಓಪನ್ ಟೂರ್ನಿಯ ಮೊದಲ ಸುತ್ತಿನಲ್ಲೇ ಹೊರಬಿದ್ದ ನಂತರ ಈ ನಿರ್ಧಾರಕ್ಕೆ ಬಂದಿದ್ದಾರೆ.

33 ವರ್ಷ ವಯಸ್ಸಿನ ಹಲೆಪ್, ಉದ್ದೀಪನ ಮದ್ದು ಸೇವನೆ ಕಾರಣ 2022ರಲ್ಲಿ ನಾಲ್ಕು ವರ್ಷಗಳ ನಿಷೇಧಕ್ಕೆ ಒಳಗಾಗಿದ್ದರು. ಆದರೆ ಕ್ರೀಡಾ ನ್ಯಾಯಾಲಯಕ್ಕೆ ಮೊರೆಹೋದ ನಂತರ ಈ ಅವಧಿಯನ್ನು 9 ತಿಂಗಳಿಗೆ ಇಳಿಸಲಾಗಿತ್ತು. ಪುನರಾಗಮನದ ನಂತರ ಅವರನ್ನು ಗಾಯದ ಸಮಸ್ಯೆ ಪದೇ ಪದೇ ಕಾಡಿತು.

2017ರಲ್ಲಿ ಅವರು ಮೊದಲ ಬಾರಿ ಡಬ್ಲ್ಯುಟಿಎ ರ‍್ಯಾಂಕಿಂಗ್‌ನಲ್ಲಿ ವಿಶ್ವ ಕ್ರಮಾಂಕದಲ್ಲಿ ಅಗ್ರಸ್ಥಾನಕ್ಕೆ ಏರಿದ್ದರು. ಪ್ರಸ್ತುತ 870ನೇ ಸ್ಥಾನದಲ್ಲಿದ್ದಾರೆ. 2019ರಲ್ಲಿ ವಿಂಬಲ್ಡನ್ ಫೈನಲ್‌ನಲ್ಲಿ ಸೆರೆನಾ ವಿಲಿಯಮ್ಸ್ ಅವರನ್ನು ಮಣಿಸಿದ್ದರು. 2018ರಲ್ಲಿ ಫ್ರೆಂಚ್ ಓಪನ್ ಫೈನಲ್‌ನಲ್ಲಿ ಸ್ಲೋನ್ ಸ್ಟೀಫನ್ಸ್ ಅವರನ್ನು ಮಣಿಸಿ ಚಾಂಪಿಯನ್ ಆಗಿದ್ದರು.

ಮೂರು ಬಾರಿ ಗ್ರ್ಯಾನ್‌ಸ್ಲಾಮ್ ಟೂರ್ನಿಗಳಲ್ಲಿ ರುಮೇನಿಯಾದ ಆಟಗಾರ್ತಿ ರನ್ನರ್ ಅಪ್ ಆಗಿದ್ದರು. 2018ರಲ್ಲಿ ಆಸ್ಟ್ರೇಲಿಯನ್ ಓಪನ್, 2014 ಮತ್ತು 2017ರಲ್ಲಿ ಫ್ರೆಂಚ್ ಓಪನ್ ಟೂರ್ನಿಯಲ್ಲಿ ಫೈನಲ್ ಆಡಿದ್ದರು.

ಕೊನೆಯ ಬಾರಿ ಅವರು ಗ್ರ್ಯಾನ್‌ಸ್ಲಾಮ್ ಟೂರ್ನಿಯಲ್ಲಿ ಕಾಣಿಸಿಕೊಂಡಿದ್ದು 2022ರ ಅಮೆರಿಕ ಓಪನ್‌ನಲ್ಲಿ. ಆ ಬಾರಿ ಮೊದಲ ಸುತ್ತಿನಲ್ಲಿ ಡೇರಿಯಾ ಸ್ನಿಗುರ್ (ಉಕ್ರೇನ್) ಅವರಿಗೆ ಮೂರು ಸೆಟ್‌ಗಳ ಸೆಣಸಾಟದಲ್ಲಿ ಮಣಿದಿದ್ದರು. ನಂತರ ಅವರು ನಿಷೇಧಿತ ಮದ್ದು ರೊಕ್ಸಾಡುಸ್ಟಾಟ್ ಸೇವನೆ ದೃಢಪಟ್ಟ ಕಾರಣ ನಿಷೇಧ ಶಿಕ್ಷೆಗೆ ಒಳಗಾಗಿದ್ದರು.

ಕ್ರಿಕೆಟ್: 'ಡಬಲ್ ವಿಶ್ವ ಚಾಂಪಿಯನ್ ಕೋಚ್' ನೂಷಿನ್ ಮನದ ಮಾತು: ನಾಯಕಿ ನಿಕಿಗೆ ಶ್ಲಾಘನೆ

ಮೊದಲನೆಯದು ಕನಸು, ಎರಡನೆಯದು ವಿಶೇಷ..

• ಗಿರೀಶ ದೊಡ್ಡಮನಿ

ಬೆಂಗಳೂರು: 'ಚೊಚ್ಚಲ ವಿಶ್ವಕಪ್ ಜಯಿಸಿದಾಗ ಕನಸು ನನಸಾದ ಸಂತಸ. ಈಗ ಎರಡನೇಯದನ್ನು ಜಯಿಸಿದ್ದು ವಿಶೇಷ ಹಾಗೂ ಎರಡೂ ವಿಶ್ವಕಪ್ ಜಯಿಸಿದ್ದು ನಮ್ಮ ಸಹಜ ಸಾಮರ್ಥ್ಯದಿಂದ ಎಂಬುದನ್ನು ಸಾಬೀತು ಮಾಡಲು ಮೂರನೇ ಪ್ರಶಸ್ತಿ ಗೆಲ್ಲಬೇಕು'–

ಮಲೇಷ್ಯಾದಲ್ಲಿ ಈಚೆಗೆ 19 ವರ್ಷದೊಳಗಿನವರ ಟಿ20 ವಿಶ್ವಕಪ್ ಜಯಿಸಿದ ಭಾರತ ಯುವ ತಂಡದ ಮುಖ್ಯ ಕೋಚ್ ನೂಷಿನ್ ಅಲ್ ಖಾದೀರ್ ಅವರ ನುಡಿಗಳಿವು. 'ಡಬಲ್ ವಿಶ್ವ ಚಾಂಪಿಯನ್ ಕೋಚ್' ನೂಷಿನ್ ಅವರು ಕರ್ನಾಟಕದವರು. ಪುರುಷರ ಕ್ರಿಕೆಟ್ ವಿಭಾಗದಲ್ಲಿ ಜೂನಿಯರ್ ಮತ್ತು ಯೂತ್ ವಿಭಾಗದಲ್ಲಿ ಕೋಚ್ ಆಗಿದ್ದ ರಾಹುಲ್ ದ್ರಾವಿಡ್ ಅವರಂತೆಯೇ ನೂಷಿನ್ ಕೂಡ ಮಹಿಳಾ ಕ್ರಿಕೆಟ್‌ನಲ್ಲಿ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ

2023ರಲ್ಲಿ ಶಫಾಲಿ ವರ್ಮಾ ನಾಯಕತ್ವದ ತಂಡವು 19 ವರ್ಷದೊಳಗಿನವರ ಚೊಚ್ಚಲ ಟಿ20 ವಿಶ್ವಕಪ್ ಜಯಿಸಿತ್ತು. ಈಗ ಕರ್ನಾಟಕದ ನಿಕಿ ಪ್ರಸಾದ್ ಅವರ ನಾಯಕತ್ವದಲ್ಲಿ ಮತ್ತೆ ಕಿರೀಟ ಧರಿಸಿದೆ. ಎರಡೂ ಸಲವೂ ನೂಷಿನ್ ಮುಖ್ಯ ಕೋಚ್ ಆಗಿದ್ದರು. ಅವರು ತಮ್ಮ ಅನುಭವವನ್ನು 'ಪ್ರಜಾವಾಣಿ'ಯೊಂದಿಗೆ ಅವರು ಹಂಚಿಕೊಂಡಿದ್ದಾರೆ.

ಪ್ರಜಾವಾಣಿ ಸಂದರ್ಶನ

• ಎರಡು ವಿಶ್ವಕಪ್ ಗೆಲುವುಗಳಲ್ಲಿ ಏನು ವ್ಯತ್ಯಾಸ ಗುರುತಿಸುತ್ತೀರಿ?

– ಚೊಚ್ಚಲ ಟ್ರೋಫಿ ಗೆದ್ದು ಇತಿಹಾಸ ರಚಿಸುವ ಕನಸಿತ್ತು. ಅದು ಈಡೇರಿತು. ಈ ಬಾರಿಯದ್ದು ವಿಶೇಷ. ಹೋದ ಸಲ ಭಾರತ ಸೀನಿಯರ್ ತಂಡದಲ್ಲಿ ಆಡಿದ್ದ ಶಫಾಲಿ ವರ್ಮಾ ಮತ್ತು ರಿಚಾ ಘೋಷ್ ಅವರು ಟೂರ್ನಿಗೆ ಎರಡು ದಿನ ಬಾಕಿಯಿದ್ದಾಗ ಬಂದು ಸೇರಿಕೊಂಡಿದ್ದರು. ಆದರೆ ಈ ಸಲ ಅನುಭವಿಗಳ ಸಾಂಗತ್ಯ ಇರಲಿಲ್ಲ. ಪ್ರತಿಭಾನ್ವಿತ ಆಟಗಾರ್ತಿಯರು ಅಜೇಯವಾಗಿ ತಂಡವನ್ನು ಪ್ರಶಸ್ತಿಯತ್ತ ಮುನ್ನಡೆಸಿದರು. ಕಳೆದ ಏಳೆಂಟು ತಿಂಗಳುಗಳಲ್ಲಿ ಅಟಗಾರ್ತಿಯರು ಬಹಳ ಪರಿಶ್ರಮಪಟ್ಟಿದ್ದಾರೆ. ಅದರಲ್ಲೂ ಗೋಂಗಡಿ ತ್ರಿಷಾ ಅವರ ಆಟ ಪ್ರಬುದ್ಧವಾಗಿತ್ತು. ಶಫಾಲಿ ಅವರ ಸ್ಥಾನವನ್ನು ಸಮರ್ಥವಾಗಿ ತುಂಬಿದರು. ಹೋದ ಸಲವೂ ಆಡಿದ್ದ ಅವರ ಅನುಭವ ಇಲ್ಲಿ ಉಪಯೋಗವಾಯಿತು. ಟಿ20 ಬ್ಯಾಟಿಂಗ್ ಗೆ ಹೊಸ ಆಯಾಮ ನೀಡಿದರು.

• ಈ ಗೆಲುವುಗಳು ಭಾರತದ ಮಹಿಳಾ ಕ್ರಿಕೆಟ್ ಬೆಳವಣಿಗೆಗೆ ಹೇಗೆ ನೆರವಾಗಬಲ್ಲವು?

– ಭಾರತ ಮಹಿಳಾ ಕ್ರಿಕೆಟ್‌ಗೆ ಈ ಗೆಲುವುಗಳು ಅಪಾರ ಶಕ್ತಿ ತುಂಬಲಿವೆ. ಇವರೇ ಮುಂದೆ ಸೀನಿಯರ್ ತಂಡದ ಆಟಗಾರ್ತಿಯರಾಗುತ್ತದೆ. ಕೌಶಲ, ಗಟ್ಟಿ ಮನೋದಾರ್ಢ್ಯ ಮತ್ತು ಅಪಾರ ಪ್ರತಿಭೆಗಳಿರುವ ಆಟಗಾರ್ತಿಯರಾಗಿರುತ್ತಾರೆ.

• ನಿಕಿ ಪ್ರಸಾದ್ ಅವರ ನಾಯಕತ್ವದ ಕುರಿತು ಏನು ಹೇಳುವಿರಿ?

–ಅವರು ಮುಂಚೂಣಿ ನಾಯಕಿ. ಇಷ್ಟು ಕಡಿಮೆ ವಯಸ್ಸಿನಲ್ಲಿಯೇ ಅಪಾರ ನಾಯಕತ್ವ ಗುಣ ಹೊಂದಿದ್ದಾರೆ. ತಂಡದಲ್ಲಿ ಯಾರಿಗೆ ಯಾವ ರೀತಿಯ ಸಾಮರ್ಥ್ಯ ಇದೆ ಎಂಬುದನ್ನು ಗುರುತಿಸಿ ಹೊಣೆ ನೀಡಿದ್ದರು. ಶಾಂತಚಿತ್ತ ಹಾಗೂ ಲವಲವಿಕೆಯಿಂದ ಸಹ ಆಟಗಾರ್ತಿಯರಿಗೆ ಸ್ಫೂರ್ತಿ ತುಂಬಿ ಮುನ್ನಡೆಸಿದರು. ಉತ್ತಮ ಭವಿಷ್ಯ ಇದೆ ಅವರಿಗೆ.

ಭಾರತ 19 ವರ್ಷದೊಳಗಿನವರ ಮಹಿಳಾ ತಂಡದ ಮುಖ್ಯ ಕೋಚ್ ನೂಷಿನ್ ಅಲ್ ಖಾದೀರ್ ಅವರು ವಿಶ್ವಕಪ್‌ನೊಂದಿಗೆ–ಟ್ವಿಟರ್ ಚಿತ್ರ

• ಈ ಗೆಲುವುಗಳಲ್ಲಿ ನೆರವು ಸಿಬ್ಬಂದಿಯ ಪಾತ್ರವೇನು?

– ಇಡೀ ಟೂರ್ನಿಯಲ್ಲಿ ಒಬ್ಬ ಆಟಗಾರ್ತಿಯೂ ಗಾಯಗೊಳ್ಳದೇ ಆಡಿದ್ದು ನೆರವು ಸಿಬ್ಬಂದಿಯ ಕಾರ್ಯತತ್ಪರತೆಗೆ ಉತ್ತಮ ನಿದರ್ಶನ. ಫಿಸಿಯೊ, ಟ್ರೇನರ್ ಮತ್ತಿತರರು ಕಳೆದ ಎಂಟು ತಿಂಗಳುಗಳಿಂದ ತಂಡವನ್ನು ನಿರ್ವಹಿಸಿದ್ದಾರೆ. ಯಶಸ್ಸಿನಲ್ಲಿ ನೆರವು ಸಿಬ್ಬಂದಿಯದ್ದೇ ಸಿಂಹಪಾಲಿದೆ. ಮಲೇಷ್ಯಾದಲ್ಲಿ ನಮಗೆ ಹವಾಗುಣದ್ದೇ ದೊಡ್ಡ ಸವಾಲಿತ್ತು. ಆರಂಭಿಕ ಪಂದ್ಯಗಳ ಸಂದರ್ಭದಲ್ಲಿ ಮಳೆ ಇತ್ತು. ಸೂಪರ್ ಸಿಕ್ಸ್ ಹಾಗೂ ನಂತರ ಸ್ಥಿತಿ ಸುಧಾರಿಸಿತು. ಈ ಬದಲಾವಣೆಗಳಿಗೆ ತ್ವರಿತವಾಗಿ ಹೊಂದಿಕೊಳ್ಳುವಲ್ಲಿ ತಂಡ ಯಶಸ್ವಿಯಾಯಿತು. ಇದರಲ್ಲಿ ನೆರವು ಸಿಬ್ಬಂದಿಯ ಪಾತ್ರವಿತ್ತು.

• ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ಟೂರ್ನಿಯು ಹೆಣ್ಣುಮಕ್ಕಳ ಕ್ರಿಕೆಟ್‌ಗೆ ಉತ್ತೇಜನಕಾರಿಯೇ?

– ಹೌದು; ಡಬ್ಲ್ಯುಪಿಎಲ್ ಆರಂಭವಾಗಿದ್ದು ಒಳ್ಳೆಯ ಬೆಳವಣಿಗೆ. ಇಲ್ಲಿಯ ಆಟಗಾರ್ತಿಯರಿಗೆ ವಿದೇಶಿ ಆಟಗಾರ್ತಿಯರೊಂದಿಗೆ ಒಡನಾಡಲು ಸಾಧ್ಯವಾಗುತ್ತದೆ. ಅವರ ಆಟ, ವ್ಯಕ್ತಿತ್ವ ಹಾಗೂ ಕಾರ್ಯಶೈಲಿಯನ್ನು ಸಮೀಪದಿಂದ ಗಮನಿಸುವ ಅವಕಾಶ ಸಿಗುತ್ತದೆ. ಇದು ಆಟಗಾರ್ತಿಯರಲ್ಲಿ ಆತ್ಮವಿಶ್ವಾಸ ಬೆಳೆಸುತ್ತದೆ. ಜಿ. ಕಮಲಿನಿ ಅವರು ಈಚೆಗೆ ನಡೆದ ಹರಾಜು ಪ್ರಕ್ರಿಯೆಯಲ್ಲಿ ಮುಂಬೈ ಇಂಡಿಯನ್ಸ್ ತಂಡಕ್ಕೆ ₹ 1.6 ಕೋಟಿ ಪಡೆದು ಸೇರ್ಪಡೆಗೊಂಡರು. ಅಲ್ಲಿ ಆಲ್‌ರೌಂಡರ್ ನ್ಯಾಟ್ ಸೀವರ್ ಅವರೊಂದಿಗೆ ಆಡುವುದು ಕಮಲಿನಿಯಂತಹ ಜೂನಿಯರ್ ಆಟಗಾರ್ತಿಯರಿಗೆ ಉತ್ತಮ ಅನುಭವವಾಗಲಿದೆ.

ಮೈಸೂರು ರೇಸ್

'ಫಾಲ್ಕನ್ ಫ್ಯೂರಿ' ಗೆಲ್ಲುವ ನಿರೀಕ್ಷೆ

ಏರ್ ಫೋರ್ಸ್ ಟ್ರೋಫಿ ಗುರುವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಫಾಲ್ಕನ್ ಫ್ಯೂರಿ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಕ್ಲೈಡ್ ಸ್ಟಾರ್ 3, ಅರಿಗಾಟೊ 6, ಫೆಸ್ಟಿವ್ ಸ್ಟಾರ್ 8
2ನೇ ರೇಸ್: ಕೊಯೊಟೆ ಗರ್ಲ್ 5, ಸರ್ವೋತ್ತಮ್ 4, ಪೆಟ್ಟೀಸ್ ಚಾಯ್ಸ್ 7
3ನೇ ರೇಸ್: ಫ್ಯಾಸನಿಸ್ಟ 2, ದಿ ಗೋಲ್ಡನ್ ಕಪ್ 4, ವಿಜಯ ಸ್ಟಾರ್ 5
4ನೇ ರೇಸ್: ಟು ಹಾಟ್ ಟು ಟಚ್ 2, ಡ್ರಿಸಾನ 3, ಆರಾಧನ 7
5ನೇ ರೇಸ್: ಸ್ಟ್ರೀಟ್ ಸೆನ್ಸ್ 7, ಫ್ಲೈಯಿಂಗ್ ಫಾಲ್ಕನ್ 4, ಇನ್‌ಎಫಬಲ್ 8
6ನೇ ರೇಸ್: ಫಾಲ್ಕನ್ ಫ್ಯೂರಿ 2, ನ್ಯಾಚುರಲ್ ಲುಕ್ 6, ಕಾಸ್ಮಿಕ್ ಟಚ್ 1
7ನೇ ರೇಸ್: ವಿಜಯ ಫಾಲ್ಕನ್ 7, ದಿ ಪ್ರೊಟೆಕ್ಟರ್ 1, ದಿ ಫ್ಲೈಯಿಂಗ್ ಫೀಟ್ 3
8ನೇ ರೇಸ್: ಮಿರಾಕ್ಯುಲಸ್ ಗರ್ಲ್ 4, ಗ್ರೇಸ್ 3, ಡಬೀಟ್ 6

ಉತ್ತಮ ಬೆಟ್: ಟು ಹಾಟ್ ಟು ಟಚ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
4,5,6,7,8	1,2,3	3,4,5	6,7,8

Your true AI companion has arrived

Retail price of S25 Ultra (512GB)	₹ 141999#
Exchange value of old device	₹ 71000~
Additional upgrade bonus	₹ 9000^
Memory upgrade benefit	₹ 12000~~
Effective price (1 unit)	**₹ 49999***

Also get

Free memory upgrade 256GB to 512GB

₹ 18000 off on Galaxy Watch Ultra**

₹ 7000^^ off on Galaxy Buds3 Pro

HDFC BANK | BAJAJ FINSERV | IDFC FIRST Bank | TVS CREDIT | HDB FINANCIAL SERVICES REIMAGINING OPPORTUNITIES | Samsung Finance+™

Pre-order now

Offer valid till Feb 06, 2025

samsung.com

Scan to meet your true AI companion

Or WhatsApp "S25" to 9870 494949 to pre-order at Samsung Exclusive Store

Please dispose of e-waste and plastic waste responsibly. Customers can WhatsApp on 180057267864 for information on e-waste/plastic waste.

Image simulated. Samsung account login may be required for certain AI features. Actual UX/UI may differ. Samsung promotes responsible use of Artificial Intelligence (AI) features. *T&C apply. Offer price shown for 1 unit of Galaxy S25 Ultra 12GB | 512GB inclusive of exchange value of old device, additional upgrade bonus and memory upgrade benefit as detailed further below. Final pricing subject to dealer discretion. #Retail price of 1 unit of Galaxy S25 Ultra 12GB | 512GB. Price inclusive of taxes. ~Approximate value on exchange of 1 unit of Galaxy S24 Ultra 12GB | 512GB. Exchange value varies basis model & condition of old device. Exchange at the sole discretion of dealer. ^Additional upgrade bonus as per Samsung Upgrade program, provided by brand/dealer at their sole discretion upon exchange of select devices. ~~Value of memory upgrade benefit from 256GB to 512GB. Pre-order customers of S25 Ultra 256GB are eligible to benefits of memory upgrade from 256GB to 512GB worth ₹ 12000. **Discount amount of ₹ 18000 applicable only when purchasing 1 unit of Galaxy Watch Ultra together with 1 unit of any variant of Galaxy S25 Ultra. ^^Discount amount of ₹ 7000 applicable only when purchasing 1 unit of Galaxy Buds3 Pro together with 1 unit of any variant of Galaxy S25 Ultra. Offers may be revised or withdrawn without prior notice. All third party logos/brands are trademarks/registered trademarks of the respective brand/company.

Cheil-24666/24